ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮಕರ ಸಂಕ್ರಮಣದ ಶುಭಾಶಯಗಳು

ಮಕರ ಸಂಕ್ರಮಣದ ಈ ಶುಭ ಸಂದರ್ಭದಲ್ಲಿ ವಿಶ್ವವಾಣಿ ಪತ್ರಿಕೆಯು 11ನೇ ವರ್ಷಕ್ಕೆ ಪದಾರ್ಪಣೆ ಮಾಡಿದ್ದು, ನಮ್ಮೆಲ್ಲ ಓದುಗರಿಗೆ, ಪತ್ರಿಕಾ ಏಜೆಂಟರಿಗೆ, ಜಾಹೀರಾತುದಾರರಿಗೆ ಮಕರ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

ವಿಶ್ವವಾಣಿ 11ನೇ ವಾರ್ಷಿಕೋತ್ಸವದ ಶುಭಾಶಯಗಳು

ದಾರಿದೀಪೋಕ್ತಿ

ನಿಮ್ಮ ಹಣೆಬರಹವನ್ನು ಬರೆಯುವ ಶಕ್ತಿ ಬೇರೆಯವರ ಕೈಲಿಲ್ಲ, ಅದು ನಿಮ್ಮ ಶ್ರಮ ಮತ್ತು ಸಂಕಲ್ಪದ ಮೇಲಿದೆ. ಗೆಲುವು ಸಿಗುವವರೆಗೂ ಓಟ ನಿಲ್ಲಿಸಬೇಡಿ. ಏಕೆಂದರೆ ವಿಶ್ರಾಂತಿ ಪಡೆಯುವವನಿಗಿಂತ ಗುರಿ ತಲುಪುವವನೇ ಇತಿಹಾಸ ಸೃಷ್ಟಿಸುತ್ತಾನೆ.

ವಕ್ರತುಂಡೋಕ್ತಿ

ಅರ್ಧ ಗಂಟೆ ಕೆಲಸದ ಬಗ್ಗೆ ಮಾತನಾಡುವುದು ಮತ್ತು ಉಳಿದ ಎರಡು ಗಂಟೆ ಯಾರು ಯಾರ ಕಡೆಯವರು ಎಂದು ಲೆಕ್ಕ ಹಾಕುವುದಕ್ಕೆ ಆಫೀಸ್ ಮೀಟಿಂಗ್ ಎನ್ನಬಹುದು.

ಪತ್ರಿಕೋದ್ಯಮಕ್ಕೆ ವಿಶ್ವವಾಣಿ ಸಮೂಹದಿಂದ ಹೊಸ ಭಾಷ್ಯ

ನಾಡೋಜ ಪಾಟೀಲ ಪುಟ್ಟಪ್ಪನವರಿಂದ ಆರಂಭಗೊಂಡು, ಹುಬ್ಬಳ್ಳಿ-ಧಾರವಾಡಕ್ಕೆ ಸೀಮಿತವಾಗಿದ್ದ ವಿಶ್ವವಾಣಿಗೆ 65ರ ಹರೆಯ. ಈ ಐತಿಹಾಸಿಕ ಪತ್ರಿಕೆಯನ್ನು ಪಾಪು ಅವರು ವಿಶ್ವೇಶ್ವರ ಭಟ್ಟರ ಕೈಗಿಟ್ಟು ಇಂದಿಗೆ 10 ವರ್ಷ ತುಂಬಿ 11ನೇ ವರ್ಷ. ಈ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಶುಭ ಆಶಯ ನುಡಿ.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಪತ್ರಕರ್ತನ ದೂರದೃಷ್ಟಿ ಕೇವಲ ಪತ್ರಿಕೆಗಷ್ಟೆ ಸೀಮಿತವಲ್ಲ. ಆ ದೂರದೃಷ್ಟಿಯ ದೂರ ಹೇಗಿರಬೇಕೆಂದರೆ ಪತ್ರಿಕೋದ್ಯಮಕ್ಕೆ ಹೊಸದೊಂದು ಭಾಷ್ಯವನ್ನೇ ಬರೆಯಬೇಕು. ಹಾಗೆ ಬರೆದು ತೋರಿಸಿದವರು 'ವಿಶ್ವವಾಣಿ' ಪತ್ರಿಕೆಯ ಮಾಲೀಕರು ಮತ್ತು ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್.

ಇವರ ಕೂಸು 'ವಿಶ್ವವಾಣಿ' ಹತ್ತು ವರ್ಷ ತುಂಬಿ ಹನ್ನೊಂದಕ್ಕೆ ಕಾಲಿಟ್ಟಿರುವುದೇ ಇದಕ್ಕೆ ಸಾಕ್ಷಿ. ಅವರು ನನ್ನಂತೆ ಕುಗ್ರಾಮದಿಂದ ಬಂದವರು. ಉತ್ತರ ಕನ್ನಡದ ಕುಗ್ರಾಮದ ಕನಸು ಕಂಗಳ ಹುಡುಗ ಅವಸರದ ಅಕ್ಷರ ಲೋಕದಲ್ಲಿ ತನ್ನದೇ ಛಾಪು ಮೂಡಿಸಿ, ಅಸಾಧ್ಯ ಸಾಧ್ಯತೆಗಳನ್ನು ಒರೆಗೆ ಹಚ್ಚಿ ಸಾಧ್ಯ ಮಾಡಿ ತೋರಿಸಿದ್ದಾರೆ.

ಕರ್ನಾಟಕದ ಮಾಧ್ಯಮ ಕ್ಷೇತ್ರದಲ್ಲಿ ವಿಶ್ವೇಶ್ವರ ಭಟ್ ಅವರಿಗೆ ತಮ್ಮದೇ ಆದ ವಿಶಿಷ್ಟ ಸ್ಥಾನವಿದೆ. ಅವರ ರೀತಿಯಲ್ಲೇ ಇವರ ಸಂಪಾದಕತ್ವದ 'ವಿಶ್ವವಾಣಿ' ಸಮೂಹದ ಪತ್ರಿಕೆಗಳು ತನ್ನದೇ ಆದ ವೈಶಿಷ್ಟ್ಯ ಉಳಿಸಿಕೊಂಡಿವೆ. ಕಳೆದ ವಾರವಷ್ಟೆ ಮಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಶ್ವೇಶ್ವರ ಭಟ್ ಅವರ ಪತ್ರಿಕಾ ಸಾಹಸವನ್ನು ಮೆಚ್ಚಿ ಮಾತನಾಡಿದ್ದೆ. ಇವರ ಸಂಪಾದಕತ್ವದ 'ಪ್ರವಾಸಿ ಪ್ರಪಂಚ' ಪತ್ರಿಕೆ ಬಹುಬೇಗ ಜನಪ್ರಿಯಗೊಂಡು, ಹೊಸ ಹೆಜ್ಜೆ ಗುರುತನ್ನು ಮೂಡಿಸುತ್ತಿರುವುದನ್ನು ನಾನು ಉಲ್ಲೇಖಿಸಿದ್ದೆ. ಪ್ರವಾಸೋದ್ಯಮ ಕ್ಷೇತ್ರದ ಪ್ರಚಾರ ದೃಷ್ಟಿಯಿಂದ ಈ ಪತ್ರಿಕೆ ಮಹತ್ತರ ಕೊಡುಗೆ ನೀಡಲಿದೆ. ಇಂಥ ಪ್ರಯೋಗ ಕನ್ನಡದಲ್ಲಿ ಮಾತ್ರ ಅಲ್ಲ, ಭಾರತೀಯ ಪತ್ರಿಕೋದ್ಯಮದಲ್ಲೇ ಮೊದಲನೆಯದು ಎಂದು ಕೇಳಿದ್ದೇನೆ.

ವಿವಿಧ ಮಠಾಧೀಶರು, ಹಿರಿಯ ನಾಯಕರು ಸೇರಿದಂತೆ ಗಣ್ಯಾತಿಗಣ್ಯರಿಂದ 2016 ಜ.15ರಂದು ಮರುಲೋಕಾರ್ಪಣೆಗೊಂಡಿದ್ದ ವಿಶ್ವವಾಣಿ.

ಯಾವುದೇ ಕ್ಷೇತ್ರ ಆದರೂ Update ಆಗುವುದು ಬಹಳ ಮುಖ್ಯ. ಈ ವಿಚಾರದಲ್ಲಿ ವಿಶ್ವೇಶ್ವರ ಭಟ್ ಅವರು ನಿಸ್ಸೀಮರು. 1958ರಲ್ಲಿ ಹುಬ್ಬಳ್ಳಿಯಲ್ಲಿ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಪ್ರಾರಂಭಿಸಿದ ವಿಶ್ವವಾಣಿ ಅರ್ಧ ಶತಮಾನ ಪೂರೈಸಿದರೆ, 2016ರಲ್ಲಿ ಪತ್ರಕರ್ತ ವಿಶ್ವೇಶ್ವರ ಭಟ್ ಅವರ ಸಾರಥ್ಯದಲ್ಲಿ ದಶಕ ಪೂರೈಸಿ, ಎರಡನೇ ದಶಕಕ್ಕೆ ದಾಪುಗಾಲಿಟ್ಟಿದೆ.

'ವಿಶ್ವವಾಣಿ'ಯ ಅತಿ ದೊಡ್ಡ ಶಕ್ತಿಯೆಂದರೆ ಅದರ ಅಂಕಣಗಳು. ಎರಡು ಪೂರ್ಣ ಪುಟಗಳಲ್ಲಿ ಪ್ರಕಟವಾಗುವ ಲೇಖನ, ಅಂಕಣಗಳು ಓದುಗರಿಗೆ ಸಮೃದ್ಧ ಓದನ್ನು ನೀಡುವುದು ಅತಿಶಯೋಕ್ತಿಯೇನಲ್ಲ. ವಿಶ್ವೇಶ್ವರ ಭಟ್ ಅವರ 'ನೂರೆಂಟು ವಿಶ್ವ', 'ಸಂಪಾದಕರ ಸದ್ಯಶೋಧನೆ', 'ಇದೇ ಅಂತರಂಗ ಸುದ್ದಿ', 'ಆಸ್ಕ್ ದಿ ಎಡಿಟರ್' ಮತ್ತು 'ಭಟ್ಟರ್ ಸ್ಕಾಚ್' ಅಂಕಣಗಳು ಬಹಳ ಜನಪ್ರಿಯ ಆಗಿವೆ. ರಾಜಕೀಯ, ಸಾಹಿತ್ಯ, ವಿಜ್ಞಾನ, ಆರೋಗ್ಯ ಮತ್ತು ಪ್ರಚಲಿತ ವಿದ್ಯಮಾನಗಳ ಜತೆಗೆ ವಿಶ್ವದ ಪ್ರವಾಸಿ ತಾಣಗಳನ್ನು ಅವುಗಳ ಸಾಂಸ್ಕೃತಿಕ ಮತ್ತು ಭೌಗೋಳಿಕ ಮಹತ್ವದ ಕುರಿತು ವಿಶ್ವೇಶ್ವರ ಭಟ್ ವಿಶ್ಲೇಷಣಾತ್ಮಕವಾಗಿ ಬರೆಯುತ್ತಾರೆ.

ಅಚ್ಚುಕಟ್ಟಾಗಿ ಬದುಕುವುದು, ರಸವತ್ತಾಗಿ ಬರೆಯುವುದು ಸಣ್ಣ ಮಾತಲ್ಲ. ದೇಶಗಳನ್ನು ಸುತ್ತುತ್ತಲೇ ಅದಕ್ಕೆ ಪೈಪೋಟಿ ಕೊಡುವಂತೆ ಪುಸ್ತಕಗಳನ್ನು ಓದುತ್ತಾ, ಓದುವ ಪುಸ್ತಕಗಳಿಗೂ ಪೈಪೋಟಿ ಕೊಡುವಂತೆ ಬರೆಯುತ್ತಾ ಬದುಕನ್ನು ಆಸ್ವಾದಿಸುವುದು. ಇದರ ಜತೆಗೆ ತಾನು ಅಂದುಕೊಂಡಂತೆ ಪತ್ರಿಕೆಯನ್ನು ತರುವುದು ದೊಡ್ಡ ಸಂಗತಿಯಾಗಿ ಕಾಣುತ್ತದೆ.

ನನಗೂ ಭಟ್ಟರಿಗೂ ವೈಚಾರಿಕವಾಗಿ ಭಿನ್ನಾಭಿಪ್ರಾಯಗಳಿವೆ. ಹಾಗೆ ಭಿನ್ನಾಭಿಪ್ರಾಯಗಳಿದ್ದಾಗಲೂ ಪರಸ್ಪರ ಒಪ್ಪಿಕೊಳ್ಳುವ ವಿಚಾರವಿದೆಯಲ್ಲ, ಅದು ಮನುಷ್ಯ ಲೋಕದಲ್ಲಿ ಇರಬಹುದಾದ ಆರ್ದ್ರತೆ. ನಮ್ಮ ದೇಶದ ಹೆಮ್ಮೆ ಸಂವಿಧಾನದ ಆಶಯವೂ ಇದೇ ಅಲ್ಲವೇ?

ಭಟ್ಟರು ಬರೀ ಲೇಖಕ ಅಷ್ಟೆ ಅಲ್ಲ, ಉದ್ಯಮದ ಒಳತಳಗಳನ್ನು ಬಹಳ ಚೆನ್ನಾಗಿ ಅರಿತಿರುವ ಸೂಕ್ಷ್ಮಗ್ರಾಹಿ. ಅವರು ಸಂಪಾದಕರಷ್ಟೇ ಅಲ್ಲ. ನೇತೃತ್ವ ವಹಿಸುವ, ಅಪಾರ ಶಿಷ್ಯವೃಂದವನ್ನು ಹೊಂದಿರುವ ಮತ್ತು ಆ ಶಿಷ್ಯವೃಂದ ಅಪಾರ ಪ್ರತಿಭಾವಂತರೂ ಆಗಿರುವುದು ವಿಶೇಷ. ಈ ಕಾರಣಕ್ಕೆ ಅವರು ಸಂಪಾದಕನ ಜತೆಗೆ ನಾಯಕನೂ ಹೌದು. ಅವರ ಶಿಷ್ಯ ಬಳಗವೇ ಅವರ ಶಕ್ತಿ. ವ್ಯವಹಾರ ಕೌಶಲ, ಸೃಜನಶೀಲತೆ ಎರಡನ್ನೂ ಮೇಳೈಸಿಕೊಂಡಿರುವ ಭಟ್ಟರ ಬರಹಗಳಲ್ಲಿ ವೈವಿಧ್ಯಮಯ ವಿಷಯಗಳಿರುತ್ತವೆ. ಅವರ ಬರಹಗಳಲ್ಲಿ ಸಕಾರಾತ್ಮಕ ಸಂಗತಿಗಳಿರುತ್ತವೆ. ನೂರಕ್ಕೂ ಹೆಚ್ಚು ದೇಶಗಳಲ್ಲಿ ಪ್ರವಾಸ ಮಾಡಿರುವ ಭಟ್ಟರು, ತಮ್ಮ ವಿಶಾಲ ಅನುಭವದ ಹಿನ್ನೆಲೆಯಲ್ಲಿ ಬರೆಯುತ್ತಾರೆ. ಅವರ ಬರಹಗಳಲ್ಲಿರುವ ಹಲವು ಒಳ್ಳೆಯ ಗುಣಗಳನ್ನು ಇಷ್ಟಪಡುತ್ತೇನೆ.

ಪ್ರಜಾಪ್ರಭುತ್ವದ ಆಶಯಗಳನ್ನು ಇನ್ನಷ್ಟು ಬಲಪಡಿಸುತ್ತಾ, ವಿಶ್ವವಾಣಿ ಪತ್ರಿಕೆ ಇನ್ನಷ್ಟು ಸಮೃದ್ಧವಾಗಿ ಬೆಳೆಯಲಿ. ಅದರ ಫಲ ಕನ್ನಡಿಗರಿಗೆ ಸಿಗಲಿ ಎಂದು ಈ ಶುಭ ಸಂದರ್ಭದಲ್ಲಿ ಹಾರೈಸುತ್ತೇನೆ.

ಸೊಂಪಾದ ಪುಟಗಳು

ನಿಮ್ಮ ಬಲಗೈ ಸದಾ ನನ್ನ ತಲೆ ಮೇಲಿರಲಿ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6



ಖಗೋಳ-ಭೂಗೋಳ ಬೆಸೆದ ಶ್ರೀನಿವಾಸ

ಕಾಡುದಾರಿ
ಹರೀಶ್ ಕೇರ 7

ಬೃಹತ್ ಸೈಬರ್ ಕ್ರೈಂ ಜಾಲ ಪತ್ತೆ

ಬೆಂಗಳೂರು: ಹೂಡಿಕೆ ಹೆಸರಿನಲ್ಲಿ ವಂಚಿಸುತ್ತಿದ್ದ ಬೃಹತ್ ಜಾಲವೊಂದನ್ನು ಬೆಂಗಳೂರಿನ ಹುಳಿಮಾವು ಠಾಣೆ ಪೊಲೀಸರು ಬಯಲಿಗೆಳೆದಿದ್ದಾರೆ. ಬೆಂಗಳೂರು, ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಜಾರ್ಖಂಡ್ ಸೇರಿ ವಿವಿಧ ರಾಜ್ಯಗಳಲ್ಲಿದ್ದ 11 ಆರೋಪಿಗಳನ್ನು ಬಂಧಿಸಲಾಗಿದೆ. ಬೆಂಗಳೂರಿನ ವ್ಯಕ್ತಿಯೊಬ್ಬರಿಗೆ ಆರೋಪಿಗಳು ವಂಚಿಸಿದ್ದ 94 ಲಕ್ಷ ರು. ಸೇರಿ ವಿವಿಧ ಖಾತೆಗಳಲ್ಲಿದ್ದ 240 ಕೋಟಿ ರುಪಾಯಿ ಫ್ರೀಜ್ ಮಾಡಲಾಗಿದೆ. ನೂರಾರು ಜನರಿಗೆ ವಂಚಿಸಿದ್ದ ಆರೋಪಿಗಳ ವಿರುದ್ಧ ದೇಶದ ವಿವಿಧೆಡೆ ಹಾಗೂ ರಾಷ್ಟ್ರೀಯ ಸೈಬರ್ ಕ್ರೈಂ ಸಹಾಯವಾಣಿಯಲ್ಲಿ ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸರು ತಿಳಿಸಿದ್ದಾರೆ.

530 ಗ್ರಾಂ ಚಿನ್ನ ಸೇರಿ ಬೆಲೆ ಬಾಳುವ ವಸ್ತು ಜಪ್ತಿ: ಆರೋಪಿಗಳು ಸುಮಾರು 9 ಸಾವಿರ ಮ್ಯೂಲ್ ಅಕೌಂಟ್‌ಗಳನ್ನು ಬಳಸಿರುವುದು ಪತ್ತೆಯಾಗಿದ್ದು, ಬಂಧಿತರಿಂದ ಒಟ್ಟು 58 ಮೊಬೈಲ್, 242 ಡೆಬಿಟ್ ಕಾರ್ಡ್‌ಗಳು, 7 ಲ್ಯಾಪ್ಟಾಪ್‌ಗಳು, 530 ಗ್ರಾಂ ಚಿನ್ನ, 4.89 ಲಕ್ಷ ನಗದು, 21 ಬ್ಯಾಂಕ್ ಪಾಸ್‌ಬುಕ್‌ಗಳು, 33 ಚೆಕ್ ಬುಕ್‌ಗಳು, 9 ಐಷಾರಾಮಿ ವಾಚುಗಳು, 1 ಆನ್‌ಲೈನ್ ಡಿಜಿಟಲ್ ಪೇಮೆಂಟ್ ರಿಂಗ್, 1 ಕ್ರಿಪ್ಟೊ ಕರೆನ್ಸಿ ಲೆಡ್ಜರ್ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

'ಸಂ-ಕ್ರಾಂತಿ'-'ಕಗ್ಗಂಟಾದ ಸೂತ್ರ'



ಮನರೇಗಾ ಹೆಸರು, ಸ್ವರೂಪ ಬದಲಾವಣೆಯ ಚರ್ಚೆಗಾಗಿ 1 ವಾರ ವಿಧಾನಮಂಡಲ ಕಲಾಪ

22ರಿಂದ ವಿಶೇಷ ಅಧಿವೇಶನ ನಿಗದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ (ಮನರೇಗಾ) ಯೋಜನೆ ಸ್ವರೂಪ, ಹೆಸರು ಬದಲಾವಣೆ ಮಾಡಿರುವುದನ್ನು ವಿರೋಧಿಸಿ ನಿರ್ಣಯ ಕೈಗೊಳ್ಳಲು ರಾಜ್ಯ ವಿಧಾನಮಂಡಲ ವಿಶೇಷ ಅಧಿವೇಶನ ಕರೆಯಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟದ ತುರ್ತು ಸಭೆಯಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳಲಾಗಿದೆ. ಮನರೇಗಾ ಯೋಜನೆಯ ಸ್ವರೂಪ ಹಾಗೂ ಹೆಸರನ್ನು ಕೇಂದ್ರ ಸರಕಾರ ಬದಲಾವಣೆ ಮಾಡಿದೆ. ಇದರ ಬಗ್ಗೆ ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆಸಲಾಗಿದೆ. ಜತೆಗೆ ವಿಶೇಷ ಒಂದು ವಾರಗಳ ಕಾಲ ವಿಧಾನಮಂಡಲ ವಿಶೇಷ ಅಧಿವೇಶನ ಕರೆಯಲು ತೀರ್ಮಾನಿಸಲಾಗಿದೆ.

ಸಭೆಯ ನಂತರ ಕಾನೂನು ಸಚಿವ ಎಚ್.ಕೆ.ಪಾಟೀಲ್ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ್ದು, ಸಚಿವ ಸಂಪುಟದಲ್ಲಿ ಮೂರು ಮುಖ್ಯ ನಿರ್ಣಯ ಕೈಗೊಳ್ಳಲಾಗಿದೆ. ವಿಧಾನಸಭೆ ಹಾಗೂ ವಿಧಾನ ಪರಿಷತ್ ಅಧಿವೇಶನವನ್ನು ಜ.22 ರಂದು ಕರೆಯಲು ತೀರ್ಮಾನಿಸಲಾಗಿದೆ. ಅಂದು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲು ರಾಜ್ಯಪಾಲರನ್ನು ಆಹ್ವಾನಿಸಲು ಸಚಿವ ಸಂಪುಟ ತೀರ್ಮಾನಿಸಿದೆ. ರಾಜ್ಯಪಾಲರು ಮಾಡಲಿರುವ ಭಾಷಣ ಅನುಮೋದಿಸಲು ಸಚಿವ ಸಂಪುಟವು ಮುಖ್ಯಮಂತ್ರಿಗಳಿಗೆ ಅಧಿಕಾರ ನೀಡಿದೆ ಎಂದರು.

ವಿಬಿ ಜಿ ರಾಮ್ ಜಿ ನೂತನ ಕಾಯಿದೆಯು ಸಮಾಜದ ಮೇಲೆ ಬೀರಿರುವ ಸಾಮಾಜಿಕ ಹಾಗೂ ಆರ್ಥಿಕ ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಹಾಗೂ ಜಾಗೃತಿ ಮೂಡಿಸಲು ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ವಿಶೇಷ ಚರ್ಚೆ ನಡೆಸಲಾಗುವುದು ಎಂದರು.

→ 4

ರಾಜಕೀಯವಾಗಿ ಕೆಲವರು ಕಾಯಿದೆಯನ್ನು ವಿಬಿಜಿ ರಾಮ್ ಜಿ ಎನ್ನುತ್ತಾರೆ. ಇದರಲ್ಲಿ ರಾಮ್ ಎಲ್ಲಿಂದ ಬರುತ್ತದೆ? ಬರೆಯುವಾಗ, ಹೇಳುವಾಗ ತಪ್ಪು ಏಕೆ ಮಾಡುತ್ತಾರೆ? ಭಾವನಾತ್ಮಕ ಅಂಶದಡಿ ಆಶ್ರಯ ಪಡೆಯುತ್ತಿರುವುದು ದುರದೃಷ್ಟಕರ ಸಂಗತಿ. ಜನರ ಕೆಲಸದ ಹಕ್ಕನ್ನು ಕಿತ್ತುಕೊಂಡು, ಪಂಚಾಯತಿಗಳಿಗಿದ್ದ ನಿರ್ಣಯದ ಅಧಿಕಾರ ಕಸಿದುಕೊಂಡು, ನೀಡಲಾಗಿದ್ದ ಅಧಿಕಾರ ಸಂಪೂರ್ಣವಾಗಿ ಕಿತ್ತುಕೊಂಡು ಕೇಂದ್ರದಲ್ಲಿ ಅಧಿಕಾರವಿಟ್ಟು ಕೊಳ್ಳುವುದು ಅಧಿಕಾರ ವಿಕೇಂದ್ರೀಕರಣದ ಪರಿಕಲ್ಪನೆಗೆ ಕೊಡಲಿ ಏಟು.

ಎಚ್.ಕೆ.ಪಾಟೀಲ್ ಕಾನೂನು ಸಚಿವ

ದುರುದ್ದೇಶದ ಅಧಿವೇಶನ

ವಿಶೇಷ ಅಧಿವೇಶನ ನಡೆಸಲು ರಾಜ್ಯ ಸರಕಾರ ನಿರ್ಧರಿಸಿರುವ ಬಗ್ಗೆ ಪ್ರತಿಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, ರಾಮ್ ಜಿ ಯೋಜನೆ ಕುರಿತು ಚರ್ಚೆ ಮಾಡುವ ದುರುದ್ದೇಶದಿಂದ ಅಧಿವೇಶನ ನಡೆಸುವ ನಿರ್ಣಯವನ್ನು ರಾಜ್ಯ ಸರಕಾರ ತೆಗೆದುಕೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾನೂನು ಹಾಗೂ ಕಾನೂನು ಸುವ್ಯವಸ್ಥೆ, ಡ್ರಗ್ಸ್ ಕಡಿವಾಣ, ಅಕ್ರಮ ಬಾಂಗ್ಲಾ ನಿವಾಸಿಗಳ ಪ್ರವೇಶ, ಮಹಿಳೆಯರ ಮೇಲಿನ ಕುರಿತು ಚರ್ಚೆಗೆ ಕರೆದಿದ್ದರೆ ರಾಜ್ಯ ಸರಕಾರದ ಮಾನ ಮರ್ಯಾದೆ ಉಳಿಯುತ್ತಿತ್ತು. ಬಾಯಿಗೆ ಬಂದಂತೆ ಮಾತನಾಡುವುದಕ್ಕೆ ಅಧಿವೇಶನ ಕರೆಯುತ್ತಾರೆ ಅಷ್ಟೇ. ಮಿತಿ ಮೀರಿದ ಡ್ರಗ್ಸ್ ಕುರಿತು ಚರ್ಚೆಗೆ ಅಧಿವೇಶನ ಕರೆಯಬೇಕು, ಕಾಸರಗೋಡಿನಲ್ಲಿ ಕನ್ನಡದ ಬಗ್ಗೆ ಮಾತಾಡಲು ಕೊಡಿ, ವಿಬಿ ಜಿ ರಾಮ್ ಜಿ ಬಗ್ಗೆ ಹೋಗಿ ಕೇಂದ್ರದಲ್ಲಿ ಮಾತಾಡಲಿ ಎಂದಿದ್ದಾರೆ.

ಮಿಲಿಟರಿ ಕಾರ್ಯಾಚರಣೆ ಸೂಚನೆ ನೀಡಿದ ಟ್ರಂಪ್ ಪ್ರತಿದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ ಇರಾನ್

ಇರಾನ್ ಪ್ರತಿಭಟನೆಗೆ ಟ್ರಂಪ್ ಪ್ರಚೋದನೆ

ವಾಷಿಂಗ್ಟನ್: ಅಗತ್ಯ ವಸ್ತುಗಳ ಬೆಲೆ ತೀವ್ರ ಏರಿಕೆ, ಅರಾಜಕತೆ ವಿರೋಧಿಸಿ ಇರಾನ್‌ನಲ್ಲಿ ನಡೆಯುತ್ತಿರುವ ಭಾರಿ ಪ್ರತಿಭಟನೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಚೋದನೆ ನೀಡಿದ್ದು, 'ನಿಮ್ಮ ಬೆಂಬಲಕ್ಕೆ ನಾವಿದ್ದೇವೆ. ಪ್ರತಿಭಟನೆ ಮುಂದುವರಿಸಿ' ಎಂದು ಅಭಯ ನೀಡಿದ್ದಾರೆ.

ತಮ್ಮ ಸಾಮಾಜಿಕ ಮಾಧ್ಯಮ ವೇದಿಕೆ ಟ್ರುತ್‌ನಲ್ಲಿ ಪೋಸ್ಟ್‌ವೊಂದನ್ನು ಹಂಚಿಕೊಂಡಿರುವ ಅವರು 'ಇರಾನ್‌ನ ದೇಶಪ್ರೇಮಿಗಳೇ ಪ್ರತಿಭಟನೆ ಮುಂದುವರಿಸಿ. ನಿಮ್ಮ ಸಂಸ್ಥೆಗಳನ್ನು ವಶಕ್ಕೆ ಪಡೆಯಿರಿ. ಹತ್ಯೆಕೋರರು ಮತ್ತು ಕಿರುಕುಳ ನೀಡುವವರ ಹೆಸರುಗಳನ್ನು ನೆನಪಿಟ್ಟುಕೊಳ್ಳಿ. ಅವರು ತಮ್ಮ ಕೃತ್ಯಕ್ಕಾಗಿ ದೊಡ್ಡ ಬೆಲೆ ತೆರಬೇಕಾಗುತ್ತದೆ. ಪ್ರತಿಭಟನಾಕಾರರ ಅಪ್ರಜ್ಞಾಪೂರ್ವಕ ಹತ್ಯೆಗಳು ನಿಲ್ಲುವವರೆಗೂ ಇರಾನ್ ಅಧಿಕಾರಿಗಳ ಜತೆಗಿನ ಎಲ್ಲ ಸಭೆಗಳನ್ನು ರದ್ದು ಮಾಡಿದ್ದೇನೆ. ನಿಮ್ಮ ನೆರವು ಹಾದಿಯಲ್ಲಿದೆ' ಎಂದೂ ತಿಳಿಸಿದ್ದಾರೆ.

2,500ಕ್ಕೂ ಅಧಿಕ ಮಂದಿ ಸಾವು: ಇರಾನ್ ದೇಶವ್ಯಾಪಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಈವರೆಗೆ 2,500ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಅಲ್ಲದೆ 18 ಸಾವಿರಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆ ಎಂದು ಅಮೆರಿಕದ ಮಾನವ ಹಕ್ಕುಗಳ ಕಾರ್ಯಕರ್ತರ ಸುದ್ದಿ ಸಂಸ್ಥೆ ಹೇಳಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆಯ ಹೊರತಾಗಿಯೂ ಬಂಧನಕ್ಕೊಳಗಾದವರ ತ್ವರಿತ ವಿಚಾರಣೆಗೆ ಒಳಪಡಿಸಿ ಗಲ್ಲು ಶಿಕ್ಷೆ ವಿಧಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಇರಾನ್ ನ್ಯಾಯಾಂಗದ ಮುಖ್ಯಸ್ಥರು ಸೂಚನೆ ನೀಡಿದ್ದಾರೆ. ಇದರಿಂದಾಗಿ ಇರಾನ್ ಮೇಲೆ ಅಮೆರಿಕ ದಾಳಿ ನಡೆಸಬಹುದೇ ಎಂಬ ಆತಂಕ ಮಡುಗಟ್ಟಿದೆ. ಒಂದು ವೇಳೆ ದಾಳಿ ನಡೆಸಿದರೆ ಪ್ರತಿದಾಳಿ ನಡೆಸುವುದಾಗಿ ಇರಾನ್ ಎಚ್ಚರಿಸಿದೆ.

ಟೆಹರಾನ್‌ನಲ್ಲಿ ಪ್ರತಿಭಟನಾಕಾರರು ಬೀದಿಗಿಳಿದು ಪ್ರತಿಭಟಿಸುತ್ತಿರುವುದು.

ಇರಾನ್ ಬಿಟ್ಟು ತೆರಳುವಂತೆ ಭಾರತೀಯರಿಗೆ ಸೂಚನೆ

ದೆಹಲಿ: ಇರಾನ್‌ನಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ನಾಗರಿಕರು ದೇಶ ಬಿಟ್ಟು ತೆರಳುವಂತೆ ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಬುಧವಾರ ಸಲಹೆ ನೀಡಿದೆ. ಇರಾನ್‌ನಲ್ಲಿರುವ ಭಾರತೀಯರಿಗೆ ಈ ಲಿಂಕ್‌ನಲ್ಲಿ (https://www.meaers.com/request/home) ತಮ್ಮ ಹೆಸರನ್ನು ನೋಂದಾಯಿಸಲು ಸೂಚಿಸಲಾಗಿದೆ. ಇರಾನ್‌ನಲ್ಲಿ ಇಂಟರ್‌ನೆಟ್ ಕಡಿದುಕೊಂಡಿರುವ ಹಿನ್ನೆಲೆಯಲ್ಲಿ ಹೆಸರು ನೋಂದಾಯಿಸಲು ಸಾಧ್ಯವಾಗದಿದ್ದರೆ ಅವರ ಪರವಾಗಿ ಭಾರತದಲ್ಲಿರುವ ಅವರ ಕುಟುಂಬದ ಸದಸ್ಯರು ಹೆಸರು ನೋಂದಾಯಿಸುವಂತೆ ವಿನಂತಿಸಲಾಗಿದೆ.

ತುರ್ತು ಸಹಾಯವಾಣಿ
+989128109115; +989128109109
+989128109102; +989932179359
ಇಮೇಲ್: cons.tehranomsa.gov.in

ನಾಯಿ ಕಡಿತದಿಂದ ಮೃತಪಟ್ಟ ಬಾಲಕಿ

ಬಾಗಲಕೋಟೆ: ನಾಯಿ ಕಡಿತದಿಂದ ತೀವ್ರವಾಗಿ ಗಾಯಗೊಂಡಿದ್ದ ಬಾಲಕಿ ಮೃತಪಟ್ಟಿದ್ದಾಳೆ.

ನವನಗರದ ಸೆಕ್ಟರ್ ಸಂಖ್ಯೆ 15ರ ನಿವಾಸಿ ಅಲ್ಫೈನಾ ಲೋಕಾಪುರ (10) ಮೃತ ಬಾಲಕಿ. ಬಾಲಕಿ ಮನೆ ಬಳಿ ಆಟವಾಡುತ್ತಿದ್ದಾಗ ಡಿ.27ರಂದು ಆಕೆಯ ಮೇಲೆ ಬೀದಿನಾಯಿ ದಾಳಿ ಮಾಡಿತ್ತು. ಬಾಲಕಿಯ ಕಣ್ಣು, ಮೂಗು, ಮುಖದ ಮೇಲೆ ಗಂಭೀರ ಗಾಯಗಳಾಗಿದ್ದವು. ಬಾಲಕಿಯನ್ನು ತಕ್ಷಣ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಜ.14ರಂದು ಬೆಳಗ್ಗೆ ಮೃತಪಟ್ಟಿದ್ದಾಳೆ. ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ 25,096 ನಾಯಿ ಕಡಿತ ಪ್ರಕರಣಗಳು ವರದಿಯಾಗಿದ್ದು, 6 ಜನ ಮೃತಪಟ್ಟಿದ್ದಾರೆ. ಇತ್ತೀಚೆಗೆ ಜಿಲ್ಲೆಯ ಇಳಕಲ್ಲ ನಗರದಲ್ಲಿ ಹುಚ್ಚುನಾಯಿಯೊಂದು 23 ಜನರನ್ನು ಕಚ್ಚಿ ಗಾಯಗೊಳಿಸಿತ್ತು.

ಕೇಂದ್ರ ಸಚಿವ ಎಲ್.ಮುರುಗನ್ ಮನೆಗೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು ಗೋಮಾತೆಗೆ ಎಳ್ಳು ಬೆಲ್ಲ ತಿನಿಸುವ ಮೂಲಕ ಪೊಂಗಲ್ ಆಚರಣೆಯಲ್ಲಿ ಭಾಗಿಯಾಗಿದರು.

ನಾಗೇಂದ್ರಗೆ ನಿರೀಕ್ಷಣಾ ಜಾಮೀನು

ಬೆಂಗಳೂರು: ವಾಲ್ಮೀಕಿ ಹಗರಣದಲ್ಲಿ ಮಾಜಿ ಸಚಿವ ಬಿ.ನಾಗೇಂದ್ರಗೆ ಬಿಗ್ ರಿಲೀಫ್ ಸಿಕ್ಕಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರೀಕ್ಷಣಾ ಜಾಮೀನು

ಮಂಜೂರು ಮಾಡಿ ಆದೇಶ ಹೊರಡಿಸಿದೆ. ಮಹರ್ಷಿ ವಾಲ್ಮೀಕಿ ಬಹುಕೋಟಿ ಹಗರಣ ಪ್ರಕರಣದಲ್ಲಿ ಸಿಬಿಐ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದ ಬಳಿಕ ಬಂಧನ ಭೀತಿಯಲ್ಲಿದ್ದ ನಾಗೇಂದ್ರ ನಿರೀಕ್ಷಣಾ ಜಾಮೀನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಮಂಗಳವಾರ (ಜ.13) ವಿಚಾರಣೆ ನಡೆಸಿದ್ದ ಕೋರ್ಟ್ ವಾದ-ಪ್ರತಿವಾದ ಆಲಿಸಿ, ಬುಧವಾರಕ್ಕೆ (ಜ.14) ಆದೇಶ ಕಾಯ್ದಿರಿಸಿತ್ತು. ಅದರಂತೆ ಇದೀಗ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ದೆಹಲಿಯತ್ತ ಡಿಸಿಎಂ ಡಿಕೆಶಿ

ಬೆಂಗಳೂರು: 'ಪ್ರಯತ್ನ ವಿಫಲವಾದರೂ, ಪ್ರಾರ್ಥನೆ ವಿಫಲವಾಗುವುದಿಲ್ಲ' ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆ ತೀವ್ರ ಚರ್ಚೆಯಾಗುತ್ತಿರುವ

ಹೊಸ್ತಿಲಿನಲ್ಲಿಯೇ ಡಿಕೆಶಿ ದೆಹಲಿ ಪ್ರಯಾಣ ನಿಗದಿಯಾಗಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಈ ಹಿಂದೆ 19ಕ್ಕೆ ದೆಹಲಿಗೆ ಡಿಕೆ ತೆರಳಲಿದ್ದಾರೆ ಎನ್ನಲಾಗಿತ್ತು. ಆದರೀಗ ಶುಕ್ರವಾರ ದೆಹಲಿಗೆ ತೆರಳುವುದಾಗಿ ಅಧಿಕೃತವಾಗಿ ಡಿ.ಕೆ. ಶಿವಕುಮಾರ್ ಹೇಳಿದ್ದರೆ, ಆಪ್ತರ ಪ್ರಕಾರ ಗುರುವಾರ ರಾತ್ರಿಯೇ ದೆಹಲಿಗೆ ಪ್ರಯಾಣಿಸಲಿದ್ದಾರೆ. ದೆಹಲಿಯ ಭೇಟಿಯ ಉದ್ದೇಶ ಹೇಳದಿದ್ದರೂ, ಮೈಸೂರಿನಲ್ಲಿ ರಾಹುಲ್ ಗಾಂಧಿ ಅವರ 'ಭರವಸೆ'ಯ ಹಿನ್ನೆಲೆಯಲ್ಲಿ ಈ ಭೇಟಿ ಕುತೂಹಲಕ್ಕೆ ಕಾರಣವಾಗಿದೆ.

ಕ್ರೇನ್ ಬಿದ್ದು 22 ಮಂದಿ ಸಾವು

ಕೌಲಾಲಂಪುರ: ಥಾಯ್ಲೆಂಡ್ ರಾಜಧಾನಿ ಬ್ಯಾಂಕಾಕ್‌ನಿಂದ ಚಲಿಸುತ್ತಿದ್ದ ರೈಲಿನ ಮೇಲೆ ಕ್ರೇನ್ ಉರುಳಿಬಿದ್ದ ಪರಿಣಾಮ ಕನಿಷ್ಠ 22 ಮಂದಿ ಮೃತಪಟ್ಟಿದ್ದು,



35ಕ್ಕೂ ಅಧಿಕ ಜನರು ಗಾಯಗೊಂಡಿದ್ದಾರೆ. ಬ್ಯಾಂಕಾಕ್‌ನಿಂದ ಈಶಾನ್ಯಕ್ಕೆ 230 ಕಿ.ಮೀ. ದೂರದಲ್ಲಿರುವ ನಖೋನ್ ರಚ್ಚಾಸಿಮಾ ಪ್ರಾಂತ್ಯದ ಸಿಖಿಯೊ ಜಿಲ್ಲೆಯಲ್ಲಿ ಈ ಅವಘಡ ಸಂಭವಿಸಿದೆ. ಹೈಸ್ಪೀಡ್ ರೈಲು ಯೋಜನೆ ನಿಮಿತ್ತ ಕೆಲಸ ಮಾಡುತ್ತಿದ್ದ ವೇಳೆ ಕ್ರೇನ್ ದಿಢೀರ್ ಆಗಿ ಪಕ್ಕದಲ್ಲಿ ಹಾದು ಹೋಗುತ್ತಿದ್ದ ರೈಲಿನ ಮೇಲೆ ಉರುಳಿಬಿದ್ದಿದೆ. ಇದಾದ ಕೆಲವೇ ಹೊತ್ತಿನಲ್ಲಿ ರೈಲಿನ ಕೆಲವು ಬೋಗಿಗಳು ಹಳಿ ತಪ್ಪಿದ್ದು, ಬೆಂಕಿ ಕಾಣಿಸಿಕೊಂಡಿದೆ ಎಂದು ಸ್ಥಳೀಯರೊಬ್ಬರು ತಿಳಿಸಿದ್ದಾರೆ.

ಶಬರಿಮಲೆಯಲ್ಲಿ ಮಕರಜ್ಯೋತಿ ಕಣ್ತುಂಬಿಕೊಂಡ ಅಯ್ಯಪ್ಪ ಭಕ್ತರು

ಶಬರಿಮಲೆ: ಇಲ್ಲಿನ ಅಯ್ಯಪ್ಪ ದೇಗುಲಕ್ಕೆ ವಿವಿಧ ರಾಜ್ಯಗಳಿಂದ ಬಂದಿದ್ದ ಸಾವಿರಾರು ಭಕ್ತರು ಬುಧವಾರ ಸಂಜೆ 6.43ಕ್ಕೆ ಮಕರಜ್ಯೋತಿಯನ್ನು ಕಣ್ತುಂಬಿಕೊಂಡರು.



ಇರುಮುಡಿ ಹೊತ್ತಿದ್ದ ಭಕ್ತರು ದೇವಾಲಯದ ಆವರಣ ಮತ್ತು ಇತರೆಡೆಗಳಲ್ಲಿ ಮಕರಜ್ಯೋತಿ ದರ್ಶನಕ್ಕಾಗಿ ಮಧ್ಯಾಹ್ನದಿಂದಲೇ ಕಾದು ನಿಂತಿದ್ದರು. ದೇಗುಲದಿಂದ 8 ಕಿ.ಮೀ. ದೂರದಲ್ಲಿರುವ ಪೊನ್ನಂಬಲಮೇಡು ಬೆಟ್ಟದ ಕಾಡಿನೊಳಗಿನಿಂದ ಮಕರ ಜ್ಯೋತಿ ಕಾಣಿಸಿಕೊಂಡಾಗ ಪುಳಕಿತರಾದರು. ಜ್ಯೋತಿಯನ್ನು ವೀಕ್ಷಿಸಲು ಶಬರಿಮಲೆ ಮತ್ತು ಸುತ್ತಲಿನ ವಿವಿಧ ವೀಕ್ಷಣಾ ಸ್ಥಳಗಳಲ್ಲಿ ಸಾವಿರಾರು ಭಕ್ತರು ನೆರೆದಿದ್ದರು. ಪತ್ತನಂತಿಟ್ಟದ ಪಂದಳಂ ಅರಮನೆಯಿಂದ ಮೆರವಣಿಗೆ ಮೂಲಕ ತರಲಾದ ತಿರುವಾಭರಣದಿಂದ (ಪವಿತ್ರ ಆಭರಣಗಳು) ಅಯ್ಯಪ್ಪ ದೇವರ ಮೂರ್ತಿಯನ್ನು ಅಲಂಕರಿಸಲಾಗಿತ್ತು. ದೇಗುಲ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಪೊಲೀಸರು ಬಂದೋಬಸ್ತ್ ಏರ್ಪಡಿಸಿದ್ದರು. ಕಳೆದ ಎರಡು ತಿಂಗಳಿಂದ ನಡೆದ ವಾರ್ಷಿಕ ಯಾತ್ರೆಯು ಮಕರವಿಳಕ್ಕು ಉತ್ಸವದೊಂದಿಗೆ ಕೊನೆಗೊಂಡಿತು.

ವಿರಾಮ
ಪ್ರತಿ ಭಾನುವಾರ

ವಂಚಕರ ಖಾತೆಯಲ್ಲಿದ್ದ 240 ಕೋಟಿ ಹಣ ಫ್ರೀಜ್ | 11 ಆರೋಪಿಗಳ ಸೆರೆ

ಬೃಹತ್ ಸೈಬರ್ ಕ್ರೈಂ ಜಾಲ ಪತ್ತೆ

ಬೆಂಗಳೂರು: ಹೂಡಿಕೆ ಹೆಸರಿನಲ್ಲಿ ವಂಚಿಸುತ್ತಿದ್ದ ಬೃಹತ್ ಜಾಲವೊಂದನ್ನು ನಗರದ ಹುಳಿಮಾವು ಠಾಣೆ ಪೊಲೀಸರು ಬಯಲಿಗೆಳೆದಿದ್ದಾರೆ. ಬೆಂಗಳೂರು, ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಜಾರ್ಖಂಡ್ ಸೇರಿದಂತೆ ವಿವಿಧ ರಾಜ್ಯಗಳಲ್ಲಿದ್ದ ಹನ್ನೊಂದು ಆರೋಪಿಗಳನ್ನು ಬಂಧಿಸಲಾಗಿದೆ.

ಬೆಂಗಳೂರಿನ ವ್ಯಕ್ತಿಯೊಬ್ಬರಿಗೆ ಆರೋಪಿಗಳು ವಂಚಿಸಿದ್ದ 94 ಲಕ್ಷ ರು. ಹಣ ಹಿಂಪಡೆಯಲಾಗಿದ್ದು, ವಿವಿಧ ಖಾತೆಗಳಲ್ಲಿದ್ದ 240 ಕೋಟಿ ರೂಪಾಯಿ ಹಣವನ್ನು ಫ್ರೀಜ್ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೆಹಲಿಯ ಓಲ್ಡ್ ರಾಜೇಂದ್ರ ನಗರದಲ್ಲಿ ಕಾಲ್‌ಸೆಂಟರ್ ನಡೆಸುತ್ತಿದ್ದ ಆರೋಪಿಗಳು, ಜನರಿಗೆ ಕರೆ ಮಾಡಿ ಹೂಡಿಕೆ ಯೋಜನೆಗಳ ಬಗ್ಗೆ ಅವರನ್ನು ಆಕರ್ಷಿಸುತ್ತಿದ್ದರು. ನಂತರ ತಮ್ಮದೇ ಅನಧಿಕೃತ ಆ್ಯಪ್ ಇನ್‌ಸ್ಟಾಲ್ ಮಾಡಿಸಿ ಅದರ ಮೂಲಕ ಹೂಡಿಕೆ ಮಾಡಿಸುತ್ತಿದ್ದರು. ಹಣ ಹೂಡಿಕೆ ಮಾಡಿದವರಿಗೆ ಆರಂಭದಲ್ಲಿ ಅಲ್ಪ ಪ್ರಮಾಣದಲ್ಲಿ ಲಾಭಾಂಶ ನೀಡುವ ಮೂಲಕ ನಂಬಿಕೆ ಗಳಿಸುತ್ತಿದ್ದರು. ಆದರೆ, ಹೆಚ್ಚು ಹಣ ಹೂಡಿಕೆ ಮಾಡಿದ ಬಳಿಕ ವಾಪಸ್ ಪಡೆಯುವ ಅವಕಾಶ ನೀಡುತ್ತಿರಲಿಲ್ಲ. ಇದೇ ರೀತಿ ನೂರಾರು ಜನರಿಗೆ ವಂಚಿಸಿದ್ದ ಆರೋಪಿಗಳ ವಿರುದ್ಧ ದೇಶದ ವಿವಿಧೆಡೆ ಹಾಗೂ ರಾಷ್ಟ್ರೀಯ ಸೈಬರ್ ಕ್ರೈಂ ಸಹಾಯವಾಣಿಯಲ್ಲಿ ಪ್ರಕರಣಗಳು ದಾಖಲಾಗಿದ್ದವು. ಇದೇ ವೇಳೆ, ಬೆಂಗಳೂರಿನ ವ್ಯಕ್ತಿಯೊಬ್ಬರಿಗೆ 3.20 ಕೋಟಿ ರು. ವಂಚಿಸಿದ್ದ ಆರೋಪಿಗಳ ವಿರುದ್ಧ ಹುಳಿಮಾವು ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ವಂಚನೆ ಪ್ರಕರಣದ ತನಿಖೆ ಕೈಗೊಂಡ ಪೊಲೀಸರು ಆರಂಭದಲ್ಲಿ ಹಣ ವರ್ಗಾವಣೆಯಾಗಿದ್ದ ಖಾತೆಗಳ ಮಾಲೀಕರಾದ ಮಹಮ್ಮದ್ ಹುಜೈಫಾ ಮತ್ತು ಆತನ ತಾಯಿ ಸಭಾ ಎಂಬಾಕೆಯನ್ನು ಬಂಧಿಸಿದ್ದರು. ಪ್ರಮುಖ ಆರೋಪಿಗಳ ಸೂಚನೆಯಂತೆ 'ಮ್ಯೂಲ್ ಅಕೌಂಟ್' ತೆರೆದುಕೊಟ್ಟಿರುವುದಾಗಿ ಬಂಧಿತರು ಬಾಯ್ಬಿಟ್ಟಿದ್ದರು. ನಂತರ ಹಣ ವರ್ಗಾವಣೆಯಾಗಿದ್ದ ಖಾತೆಗಳ ವಿವರಗಳನ್ನು ಆಧರಿಸಿ ದೆಹಲಿ ಸೇರಿದಂತೆ ವಿವಿಧೆಡೆ 11 ಆರೋಪಿಗಳನ್ನು ಬಂಧಿಸಿದ್ದರು.

ಸೈಬರ್ ಅಪರಾಧಿಗಳಿಂದ ಪೊಲೀಸರು ವಶಕ್ಕೆ ಪಡೆದ ವಸ್ತುಗಳು.

530 ಗ್ರಾಂ ಚಿನ್ನ ಸೇರಿ ಬೆಲೆಬಾಳುವ ವಸ್ತು ಜಪ್ತಿ

ಆರೋಪಿಗಳು ಸುಮಾರು 9 ಸಾವಿರ ಮ್ಯೂಲ್ ಅಕೌಂಟ್‌ಗಳನ್ನು ಬಳಸಿರುವುದು ಪತ್ತೆಯಾಗಿದ್ದು, ಬಂಧಿತರಿಂದ ಒಟ್ಟು 58 ಮೊಬೈಲ್ ಫೋನ್‌ಗಳು, 242 ಡೆಬಿಟ್ ಕಾರ್ಡ್‌ಗಳು, 7 ಲ್ಯಾಪ್ಟಾಪ್‌ಗಳು, 530 ಗ್ರಾಂ ಚಿನ್ನ, 4.89 ಲಕ್ಷ ನಗದು, 21 ಬ್ಯಾಂಕ್ ಪಾಸ್‌ಬುಕ್‌ಗಳು, 33 ಚೆಕ್ ಬುಕ್‌ಗಳು, 9 ಐಷಾರಾಮಿ ವಾಚುಗಳು, 1 ಆನ್‌ಲೈನ್ ಡಿಜಿಟಲ್ ಪೇಮೆಂಟ್ ರಿಂಗ್, 1 ಕ್ರಿಪ್ಟೊ ಕರೆನ್ಸಿ ಲೆಡ್ಜರ್ ವಶಪಡಿಸಿಕೊಳ್ಳಲಾಗಿದೆ. ಪ್ರಕರಣದ ಪ್ರಮುಖ ಆರೋಪಿ ದುಬೈನಲ್ಲಿದ್ದು, ಆತನ ಪತ್ತೆಗಾಗಿ ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

4 ಕೋಟಿ ರು. ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಮಂಗಳೂರು ಸಿಸಿಬಿ ಪೊಲೀಸರು ಡ್ರಗ್ ಪ್ರಕರಣದಲ್ಲಿ ಉಗಾಂಡ ಮೂಲದ ಮಹಿಳೆಯನ್ನು ಬಂಧಿಸಿ ಆಕೆ ಬಳಿ ಇದ್ದ 4 ಕೋಟಿ ರು. ಮೌಲ್ಯದ ಎಂಡಿಎಂಎ ಜಪ್ತಿ ಮಾಡಿರುವ ಘಟನೆ ಬೆನ್ನಲ್ಲೇ ಸಿಸಿಬಿ ಮಾದಕದ್ರವ್ಯ ನಿಗ್ರಹ ದಳ ಪೊಲೀಸರು ಕೂಡ ಭರ್ಜರಿ ಕಾರ್ಯಾಚರಣೆ ನಡೆಸಿದ್ದಾರೆ. ಡ್ರಗ್ ಡಿಲೀಂಗ್‌ನಲ್ಲಿ ತೊಡಗಿದ್ದ ಓರ್ವ ವಿದೇಶಿ ಪ್ರಜೆ ಸೇರಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಬಂಧಿತರಿಂದ 1 ಕೋಟಿ ಮೌಲ್ಯದ 101 ಗ್ರಾಂ ಕೊಕೇನ್ ಮತ್ತು 481 ಗ್ರಾಂ ಹೈಡ್ರೋ ಗಾಂಜಾ ಜಪ್ತಿ ಮಾಡಲಾಗಿದೆ. ಬೇಗೂರು ವ್ಯಾಪ್ತಿಯಲ್ಲಿ ವಾಸವಿದ್ದ ಆಕಾಶ್ ಮತ್ತು ಉಚೆ ನಡುರಿ ಬಂಧಿತರಾಗಿದ್ದು, ಪರಿಚಯಸ್ಥರು, ವಿದ್ಯಾರ್ಥಿಗಳು ಮತ್ತು ಐಟಿಬಿಟಿ ಉದ್ಯೋಗಿಗಳಿಗೆ ಹೆಚ್ಚಿನ ಬೆಲೆಗೆ ಇವರು ಡ್ರಗ್ ಮಾರಾಟ ಮಾಡುತ್ತಿದ್ದರು. ಇನ್ನೊಂದು ಪ್ರಕರಣದಲ್ಲಿ ಆನೆ ದಂತದಿಂದ ಮಾಡಿದ ವಿಗ್ರಹ ಮಾರಾಟ ಜಾಲ ಪತ್ತೆ ಮಾಡಿರುವ ಜಿಗಣಿ ಪೊಲೀಸರು, ಇಬ್ಬರನ್ನು ಬಂಧಿಸಿದ್ದಾರೆ. ಮೊಹಮ್ಮದ್ ಶಬೀರ್ ಅಹಮದ್(50), ನರೇಂದ್ರ ಶರ್ಮಾ(45) ಬಂಧಿತರು. 20 ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ವಿಗ್ರಹಗಳನ್ನು ಕೊಪ್ಪ ಗೇಟ್ ಸಮೀಪ ಮಾರಾಟ ಮಾಡಲು ಆರೋಪಿಗಳು ಬಂದಿರುವ ಖಚಿತ ಮಾಹಿತಿ ಮೇರೆ ಜಿಗಣಿ ಪೊಲೀಸರು ದಾಳಿ ನಡೆಸಿದ್ದರು. ವಿಗ್ರಹ ಸಮೇತವಾಗಿ ಆರೋಪಿಗಳನ್ನು ಬಂಧಿಸಲಾಗಿದ್ದು, ಬೈಕ್‌ನ ಕೂಡ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಹದೇವಪುರ ವಿಧಾನಸಭಾ ಕ್ಷೇತ್ರದ ದೊಡ್ಡಗುಬ್ಬಿಯ ಲೀಜಾಸ್ ಹೋಮ್ ಆಶ್ರಮಕ್ಕೆ ಶಾಸಕಿ ಮಂಜುಳಾ ಲಿಂಬಾವಳಿ ಭೇಟಿ ನೀಡಿ, ಸಂಕ್ರಾಂತಿ ಪ್ರಯುಕ್ತ ಸಿಹಿ ವಿತರಿಸಿ ಆಶ್ರಮದಲ್ಲಿರುವವರ ಯೋಗಕ್ಷೇಮ ವಿಚಾರಿಸಿದರು. ಈ ವೇಳೆ ದೊಡ್ಡಗುಬ್ಬಿ ಪಂಚಾಯಿತಿ ಅಧ್ಯಕ್ಷೆ ಮಾಲಾ ಮಾರುತಿಕುಮಾರ್, ಉಪಾಧ್ಯಕ್ಷೆ ಅಂಬಿಕಾ ಮಂಜುನಾಥ್, ಮಾಜಿ ಅಧ್ಯಕ್ಷ ಮಾರುತಿಕುಮಾರ್, ಮುಖಂಡರಾದ ಮೋಹನ್ ರೆಡ್ಡಿ, ಬೈರತಿ ರಮೇಶ್, ದೇವರಾಜ್ ಮತ್ತಿತರರಿದ್ದರು.

PUBLIC NOTICE

This is to bring to the notice of the general public that our clients **MR. PRATHAP ANNADORAI** S/o Mr. Annadorai and **MRS. USHA P** W/o. Mr. Prathap Annadorai are intending to purchase the schedule property from **MRS. L. ANANDHI** W/o. Mr. S Lakshman Reddy ; person/s objecting for the proposed purchase or are having any right, title, interest or any type of claim over the scheduled property is hereby called upon to file their objections/claims what so ever along with documentary proof on or before **7 days** from the date of publication of this notice with the under mentioned advocate failing which; our clients shall proceed and complete the sale transaction with the above stated person.

SCHEDULE PROPERTY

All that piece and parcel of the Residential Property bearing vacant **Site No.152**, formed in Property Nos.138 and 70, Katha No.138/70/152, Situated at **Yerappanahalli Village, Bidarahalli Hobli, Bangalore East Taluk, Bangalore,** Measuring East to West **43 Feet,** North to South **30 Feet,** totally Measuring **1290 Square Feet** and bounded on the:
East by : Road, West by : Private Property, North by : Site No.153, South by : Site No.151

C.K.V.K. LAW ASSOCIATES
Mr. VENKATESH CHANDRAN M.A., L.L.B.
Advocates & Legal Consultants Bangalore-43
M : 9845846428, 9108784843
E- Mail: rvlaw.76@gmail.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ. ಲೋಹಿತ್ ಕೆಂಚಯ್ಯ ನಂಜಮ್ಮ ಅವರು ಇಲ್ಲಿ ಕೆಳಗೆ ಸೂಚಿಸಲಾದ ಸ್ಥಿರ ಆಸ್ತಿಯ ಮಾಲೀಕರು ಮತ್ತು ಅವರು ದಿನಾಂಕ 23/12/1996 ರಂದು ದಾಖಲೆ ಸಂಖ್ಯೆ 3673 /1996–97 ರ ಪುಸ್ತಕ–1, ಸಂಪುಟ 2873, ಪುಟಗಳು 25–26 ರ ಮೂಲ ಮಾರಾಟ ಪತ್ರವನ್ನು ಕಳೆದುಕೊಂಡಿದ್ದಾರೆ ಮತ್ತು ಶ್ರೀ.ಕಾಮಯ್ಯ ಅವರು ಶ್ರೀ.ನಾಗರಾಜು ಅವರ ಪರವಾಗಿ ಕನಕಪುರದ ಉಪ–ನೋಂದಣಿಧಿಕಾರಿ ಕಚೇರಿಯಲ್ಲಿ ನೋಂದಾಯಿಸಿರುವ ಮಾರಾಟ ಪತ್ರವನ್ನು ಕಳೆದುಕೊಂಡಿದ್ದಾರೆ ಮತ್ತು ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ತಾಲೂಕಿನ ರಾಮನಗರ ಜಿಲ್ಲೆ, ಪ್ರಸ್ತುತ ನಾಗರಸಭಾ–ಕನಕಪುರದ ಮಿತಿಯೊಳಗೆ ಬರುತ್ತದೆ, ಇ–ಸ್ವಾತು ಹೊಂದಿರುವ ಆಸ್ತಿ ಸಂಖ್ಯೆ.1669644954, ಆಸ್ತಿ ಸಂಖ್ಯೆ.720/49/26, ಸರ್ವೆ ಸಂಖ್ಯೆ.49/26 ರಲ್ಲಿ ರಚಿಸಲಾಗಿರುವ ಸ್ವತ್ತಿನ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 9.144018ಮೀ. ಮತ್ತು ಉತ್ತರದಿಂದ ದಕ್ಷಿಣಕ್ಕೆ 12.192024 ಮೀ. ಒಟ್ಟು 111.4841 ಚದರ ಮೀಟರ್ (0.014 ಗುಂಟೆ) ಈ ಸ್ವತ್ತಿಗೆ ಚಕ್ಕುಬಂದಿ:–ಪೂರ್ವಕ್ಕೆ : ಮಹಾದೇವ ಅವರ ಆಸ್ತಿ, ಪಶ್ಚಿಮಕ್ಕೆ : ನಾಗರಾಜು ಅವರ ಆಸ್ತಿ, ಉತ್ತರಕ್ಕೆ : ಕೆಂಪರಾಯ ಅವರ ಆಸ್ತಿ, ದಕ್ಷಿಣಕ್ಕೆ : ರಸ್ತೆ

ಎನ್. ಜಗದೀಶ್ ಕುಮಾರ್, ವಕೀಲರು,
ನಂ.30/ 1, 2ನೇ ಮಹಡಿ, 7ನೇ ಕ್ರಾಸ್, ಎನ್.ಆರ್. ಕಾಲೋನಿ ಬಸ್ ನಿಲ್ದಾಣದ ಹತ್ತಿರ,
ಹೋಟೆಲ್ ದ್ವಾರಕಾ ಎದುರು, ಬೆಂಗಳೂರು–560019.,

ದಾಖಲೆ ಕಳೆದುಹೋದ ಬಗ್ಗೆ ಸೂಚನೆ

ಈ ಮಾಹಿತಿಯನ್ನು ಕಕ್ಷೀದಾರರಾದ ಶ್ರೀ ಬಿ.ಎಲ್. ಗಿರಿಜಾ ಶಂಕರ್ ಅವರ ಪರವಾಗಿ ನೀಡಲಾಗಿದೆ. ಡೆವಲಪರ್ ಉದ್ಯಮಿ ಬಿ.ಎಲ್ ಗಿರಿಜಾ ಶಂಕರ್ ಆದ ನಾನು, ನನಗೆ ಹಾಗೂ ನನ್ನ ಪತ್ನಿ ಶ್ರೀಮತಿ ಎಂ.ಆರ್ ಸೌಮ್ಯ ಸೇರಿದ ಕೆಲವು ಸ್ವತ್ತಿನ ದಾಖಲೆಗಳನ್ನು ನನ್ನ ಮ್ಯಾನೇಜರ್ ಆದ ಶ್ರೀ ಮಹೇಶ್ ಕುಮಾರ್ ಅವರಿಗೆ ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿನ ಕಚೇರಿಯಲ್ಲಿ ಇಟ್ಟುಕೊಳ್ಳುವಂತೆ ನೀಡಲಾಗಿತ್ತು, ದುರದೃಷ್ಟವಶಾತ್ ಅವರು ಕಛೇರಿ ಸ್ಥಳಾಂತರಿಸುವಾಗ ಚಿಕ್ಕಬಳ್ಳಾಪುರ ಜಿಲ್ಲೆ, ಮಾಜಿ ಗೌರಿಬಿದನೂರು ಹಾಲಿ ಮಂಚೇನಹಳ್ಳಿ ತಾಲ್ಲೂಕು, ಹೋಬಳಿ, ಹಳೇಹಳ್ಳಿ, ಅಲಾಸ್ ತಿಮ್ಮನಹಳ್ಳಿ, ಗುಯ್ಯಲಹಳ್ಳಿಗೆ ಸೇರಿದ ದಾಖಲೆ (original Sale deeds, GPA, Agreements)ಗಳನ್ನು ಕಳೆದುಕೊಂಡಿದ್ದಾರೆ. ದಾಖಲೆಗಳು ಕಂಡುಬಂದಲ್ಲಿ, ದಯವಿಟ್ಟು ಅವುಗಳನ್ನು ಇಲ್ಲಿಗೆ ಹಿಂತಿರುಗಿಸಿ: #133, ಡಿ. ದೇವರಾಜ ಅರಸು ರಸ್ತೆ, ಮೈಸೂರು – 570001. ಸಂಪರ್ಕಿಸಿ: 7019423506

ದಾಲೆಗಳ ಮಾಹಿತಿ ಇಂತಿವೆ
Sy No – 277, 02 Acer, Halehalli Village, GBD – 03752 / 2007-08 Dated – 01.03.2008
Sy No – 283, 03 Acer, 30 Guntas Halehalli Village, GBD – 00456 / 2007-08 Dated: 21-05-2007
Sy No – 286, 02 Acer, Halehalli Village, GBD -03753 - 2007-08, Dated: 01-05-2008
Sy No – 291, 03 Acer, 08 Guntas, Hale Halli Village, GBD 01275/2007-08 Dated: 26-07-2007
Sy No – 303, 01 Acer, 34 Guntas, Hale Halli Village, GBD-01291/2007-08 Dated: 27-07-2007
Sy No – 93/2A1, 03 Acer, 20 Guntas, Halehalli Village, GBD -00392/2007-08 Dated: 15-05-2007
Sy No – 99/2, 03 Acer, Halehalli Village, GBD - 01671/2008-09, Dated: 10-10-2008
Sy No – 127/4, 02 Acer, 28 Guntas, Halehalli Village, GBD - 01236/2007-08, Dated: 21-07-2007
Sy No – 138/1 04 Acer, 07 Guntas, Halehalli Village, GBD - 00599/2008-09, Dated: 10-06-2008
Sy No – 284 03 Acer, 33 Guntas, Halehalli Village, GBD - 01236/2007-08, Dated: 21-07-2007
Sy No – 298 01 Acer, 38 Guntas, Halehalli Village, GBD - 00028/2008-09, Dated: 04-07-2008
Sy No – 307 02 Acer, Halehalli Village, GBD - 00391/2007-08, Dated: 15-05-2007
Sy No – 135/2, 03 Acer, 20 Guntas, Halehalli Village, GBD - 00027/2008-09, Dated: 04-07-2008
Sy No – 125, 04 Acer, 20 Guntas, Guyyalahalli Village, 00023/2008-09, Dated: 10-06-2008
Sy No – 95/2, 03 Acer, Halehalli Village, GBD - 00301/2008-09, Dated: 30-08-2008
Sy No – 38/9, 01 Acer 25 Guntas, Allasthimmanahalli Village, AGREEMENT on Dated: 04-07-2007
Sy No – 38/11, 04 Acer, Allasthimmanahalli Village, AGREEMENT on Dated: 04-07-2007
Sy No – 38/22, 01 Acer, 30 Guntas, Allasthimmanahalli Village, AGREEMENT on Dated: 04-07-2007
Sy No – 38/25, 02 Acer, 15 Guntas, Allasthimmanahalli Village, AGREEMENT on Dated: 04-07-2007
Sy No – 59, 02 Acer, Allasthimmanahalli Village, AGREEMENT on Dated: 04-07-2007
Sy No – 133/10, 02 Acer,10 Guntas, Halehalli Village, GBD - 00739/2007-08 AGREEMENT on Dated: 08-06-2007
Sy No – 249/1, 01 Acer, 22 Guntas, Halehalli Village, AGREEMENT on Dated: 06-07-2007
Sy No – 300, 03 Acer, Halehalli Village, AGREEMENT GBD - 00635/2007-08 AGREEMENT on Dated: 02-06-2007

–/ ವಕೀಲರು
ಕೆ..ಎಲ್. ಲಕ್ಷ್ಮೀನಾರಾಯಣ್ ಮೈಸೂರು,
ಮೊ: 9448150499

PUBLIC NOTICE

DOCUMENTS LOST

This is to inform the general public that, my client **G M Manoharlal Mehta,** R/at No 113/B, Magadi Road, Bangalore have lost the pertained below mentioned Original Documents while transit.

LIST OF DOCUMENTS LOST

1. Document No. 3083/1946-47 registered at the sub-registrar Bangalore North Taluk, dated 13-11-1946.
2. Document No. 1311/1955-56 registered at the sub-registrar Bangalore North Taluk, dated 16-11-1950.
3. Document No.5390/1960-61 registered at the sub-registrar Bangalore City South, dated 22-03-1961.
4. Document No. 1654/1961-62 registered at the sub-registrar Bangalore City South, dated 03-07-1961.
5. Document No. 2309/1961-62, registered at the sub-registrar Bangalore City South, dated 10-08-1961.
6. Document No.3469/1966-67, registered at the sub-registrar Bangalore City South, dated 30-07-1966.
7. Document No. 1849/1961-62, registered at the sub-registrar Bangalore City South, dated 15-07-1961.

The Documents pertain to my Client's property situated at **K.P. Agrahara Magadi Road, bearing No 7, 7th 'E' Cross, K.P. Agrahara, Magadi Road, Bangalore** while being carried for official/legal purposes. The documents include the original title deed and connected property papers. Despite careful search and enquiry, the documents could not be traced. In this regard my client have lodge a Police complaint before Bangalore City Crime Branch dated 16.12.2025, vide Lost report No.1960598/2025. If anyone find the above said original documents please return the same to the my client address or below mentioned address.

KRISHNAPPA.M.V, Advocate
No.36, MKS, Arcade, LG-5, Ballary Main Road, New Airport Road, Ganganagar,
Bengaluru- 560 032. Mobile: 9844918098
Place: Bangalore Date: 15.01.2026

ಕೆನರಾ ಬ್ಯಾಂಕ್ Canara Bank
Syndicate Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001
ದೂ: 080–25310066, ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 05.02.2026 (ಬೆಳಿಗ್ಗೆ 10.00 ರಿಂದ 10.30 ರವರೆಗೆ),** [ಮಾರಾಟ ಮುಗಿಯುವವರೆಗೆ ತಲಾ 5 ನಿಮಿಷಗಳ ಅವಧಿಯನ್ನು ಅನಿಯಮಿತವಾಗಿ ವಿಸ್ತರಿಸಲಾಗಿದೆ.] ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ.1,37,80,170.68/– (ರೂಪಾಯಿ ಒಂದು ಕೋಟಿ ಮೂವತ್ತೇಳು ಲಕ್ಷದ ಎಂಭತ್ತು ಸಾವಿರದ ಒಂದುನೂರ ಎಪ್ಪತ್ತು ಮತ್ತು ಅರವತ್ತೆಂಟು ಪೈಸೆ ಮಾತ್ರ) ಜೊತೆಗೆ ದಿನಾಂಕ: 13.01.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: (1) **ಶ್ರೀ ಡಿ ಆರ್ ಎ ಕೃಷ್ಣ** ಬಿನ್ ಡಿ ರಘುನಾಥ್, # 233, 10ನೇ ಬಿ ಮೇನ್, ಹೊರಮಾವು ಹತ್ತಿರ, ರಿಂಗ್ ರೋಡ್ ಸಿಗ್ನಲ್, ಕಲ್ಯಾಣ್ ನಗರ, ದೊಡ್ಡ ಬಾಣಸವಾಡಿ, ಬೆಂಗಳೂರು ಉತ್ತರ–560043. (2) **ಶ್ರೀಮತಿ ಲಕ್ಷ್ಮಿ ಡಿ ಕೆ** ಕೋಂ ಡಿ ಆರ್ ಎ ಕೃಷ್ಣ, # 233, 10ನೇ ಮೇನ್, ಕಲ್ಯಾಣ ನಗರ, ದೊಡ್ಡ ಬಾಣಸವಾಡಿ, ಬೆಂಗಳೂರು ಉತ್ತರ–560043. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 04.02.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು.

(₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಫ್ಲಾಟ್ ನಂ.302, 2ನೇ ಮಹಡಿಯು, **"DEVI GRAND VIEW"** ಎಂದು ಕರೆಯಲ್ಪಡುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಕಟ್ಟಡದಲ್ಲಿದ್ದು, ವಿಸ್ತೀರ್ಣ 1500 ಚದರ ಅಡಿ. ಜೊತೆಗೆ ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿದೆ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳ ಜೊತೆಗೆ 279.00 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ಒಳಗೊಂಡಿದೆ. ಈ ಆಸ್ತಿಯು ಜೆ ಪಿ ನಗರ, 7ನೇ ಫೇಸ್, ಪುಟ್ಟೇನಹಳ್ಳಿ ವಾರ್ಡ್ – 187, ಸಾರಕ್ಕಿಕೆರೆ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು. ಪೂರ್ವಕ್ಕೆ : ಖಾಸಗಿ ಆಸ್ತಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಿವೇಶನ ನಂ.19, ದಕ್ಷಿಣಕ್ಕೆ : ಖಾಸಗಿ ಆಸ್ತಿ. **Coordinates of the described property: 12.53568 N 77.34585 E**	₹. 53.00	₹. 5.30	₹. 1.00	23.01.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು** (ಮೊಬೈಲ್ ಸಂಖ್ಯೆ: **9439058121 ಮತ್ತು 9483544116**) ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 14.01.2026
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

बैंक ऑफ़ Bank of Baroda
ROSAR
ಪ್ರಾದೇಶಿಕ ಕಚೇರಿ, ಬೆಂಗಳೂರು ಉತ್ತರ
ನಂ.41/2, 4ನೇ ಮಹಡಿ, ವಿಜಯ ಟವರ್ಸ್, ಟ್ರಿನಿಟಿ ಸರ್ಕಲ್, ಎಂ ಜಿ ರಸ್ತೆ, ಬೆಂಗಳೂರು, ಕರ್ನಾಟಕ–560001.
ದೂರವಾಣಿ ಸಂಖ್ಯೆ: 080–25011567, ಇ–ಮೇಲ್: sarben@bankofbaroda.com, Web: www.bankofbaroda.com

ಸಂಕ್ಷಿಪ್ತ ವಾಹನದ ಇ–ಹರಾಜು ಸೂಚನೆ

ಚಲನಶೀಲ ಆಸ್ತಿಗಳು/ವಾಹನಗಳ ಮಾರಾಟಕ್ಕಾಗಿ ಇ–ಹರಾಜಿಗಾಗಿ ಸಾರ್ವಜನಿಕ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ/ ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ"** ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮಿನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ. ಸಂ	ಸಾಲಗಾರ/ ಜಾಮೀನುದಾರರ ಹೆಸರು ಮತ್ತು ವಿಳಾಸ ಸಾಲದ ಖಾತೆ ಸಂಖ್ಯೆ, ಒಟ್ಟು ಮೊತ್ತ	ವಾಹನ ಮೇಕ್ ಮತ್ತು ಮಾದರಿ ಆರ್‌ಟಿಒ ನೋಂದಣೆ ನಂ./ಎಂಜಿನ್ ನಂ./ಚಾಸಿಸ್ ನಂ.	1 ಮೀಸಲು ಬೆಲೆ, 2. ಇ.ಎಂ.ಡಿ 3. ಕನಿಷ್ಠ ಇನ್ಕ್ರಿಮೆಂಟ್ ಮೌಲ್ಯ	1. ಇ–ಹರಾಜಿನ ದಿನಾಂಕ ಇ–ಹರಾಜಿನ ಪ್ರಾರಂಭದ ಸಮಯದಿಂದ ಕೊನೆಯ ಸಮಯ 2. ಬಿಡ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ. 3.ವಾಹನ / ಚರಾಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1	ಸಿ ಗಂಗಾಧರ್ ಸಂಖ್ಯೆ 5 ಎಲ್ಲುಮಾಡ ಲೇಔಟ್, ರಾಮಚಂದ್ರ ಪುರಂ, ಜಾಲಹಳ್ಳಿ, ಬೆಂಗಳೂರು 560013 89590600003610 ರೂ 23,74,670.04	2021/ TATA ULTRA 1918 T 5L BSVI TEMP REG NO. T0422KA7311X/ MAT790213N7B03949/ 5LNGDICR21BXX504565	1.ರೂ.10,12,000 2.ರೂ.1,01,200 3.ರೂ.10,000.00	1. Date of e-Auction 17-02-2026 Time of E-auction - Start Time 02:00 PM to End Time 06:00 PM. 2. Last date and time of submission of Bid. 17-02-2026, 02:00 PM. FROM 3. FROM 16-01-2026 Time: With prior permission from authorised officer (All vehicles are at Bhiwadi, Rajasthan)
2	ಸುರೇಶ್ ಎಂ ನಂ 5 ಎಲ್ಲುಮಾಡ ಲೇಔಟ್, ನಳಂದ ಥಿಯೇಟರ್ ಹತ್ತಿರ, ರಾಮಚಂದ್ರ ಪುರಂ, ಜಾಲಹಳ್ಳಿ ಬೆಂಗಳೂರು–560013 89590600003605 ರೂ 26,04,679.84	2021/ TATA ULTRA 1918 T 5L BSVI TEMP REG NO. T0222KA33002/MAT790213M7K17147/5LNGDICR21KYX 520358	1.ರೂ.10,12,000 2.ರೂ.1,01,200 3.ರೂ.10,000.00	
3	ವಸಂತ್.ಎಸ್ ಸಂಖ್ಯೆ 63 ಸಿ ಲೇನ್, ಅಂಜನಪ್ಪ ಗಾರ್ಡನ್, ಮೈಸೂರು ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018 89590600003432 ರೂ 25,27,911.61	2021/ TATA ULTRA 1918 T 5L BSVI TEMP REG NO/ MAT790213M7J16050/5LNGDICR21JYX518867.	1.ರೂ.10,12,000 2.ರೂ.1,01,200 3.ರೂ.10,000.00	
4	ರವೀಂದ್ರ ಎ ನಂ.43, 2ನೇ ಮಹಡಿ, 4ನೇ ಕ್ರಾಸ್, ನಂದಿನಿ ಥಿಯೇಟರ್ ಹತ್ತಿರ, ಹೂವಿನ ಉದ್ಯಾನ, ಮೈಸೂರು ರಸ್ತೆ, ಬೆಂಗಳೂರು 560018 89590600003713 ರೂ 26,14,558.78	2021/ TATA ULTRA 1918 T 5L BSVI TEMP REG NO/ MAT790213N7C07240/5JNGDICR21CXX508514.	1.ರೂ.10,12,000 2.ರೂ.1,01,200 3.ರೂ.10,000.00	
5	ವೆಂಕಟೇಶ್ ಸಂಖ್ಯೆ 38/3, ಮುನೇಶ್ವರ ಬ್ಲಾಕ್, 1 ನೇ ಮುಖ್ಯ ರಸ್ತೆ, ನಾಗಶೆಟ್ಟಿಹಳ್ಳಿ, ಬೆಂಗಳೂರು–560094 89590600003714 ರೂ 26,36,830.49	2021/ TATA ULTRA 1918 T 5L BSVI TEMP REG NO. T0422KA7309X/ MAT790213N7C07711/5LNGDICR21CXY507693.	1.ರೂ.10,12,000 2.ರೂ.1,01,200 3.ರೂ.10,000.00	
6	ಲೋಕನಾಥ್ ಸಿ ಸಂಖ್ಯೆ 8, ಕ್ವೀನ್ಸ್ ರಸ್ತೆ, ರಾಜೀವ್ ಗಾಂಧಿ ಕಾಲೋನಿ, ಪಶುವೈದ್ಯಕೀಯ ಆಸ್ಪತ್ರೆ ಹತ್ತಿರ, ಶಿವಾಜಿನಗರ, ಬೆಂಗಳೂರು 560051 89590600003519 ರೂ 25,26,857.43	2021/ TATA ULTRA 1918 T 5L BSVI TEMP REG NO/ MAT790213M7J16044/ 5LNGDICR21JYX519196.	1.ರೂ.10,12,000 2.ರೂ.1,01,200 3.ರೂ.10,000.00	

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು **https://baanknet.com** ವೆಬ್‌ಸೈಟ್ ಲಿಂಕ್‌ಗಳನ್ನು ನೋಡಿ/ಭೇಟಿ ನೀಡಿ. ನಿರೀಕ್ಷಿತ ಬಿಡ್‌ದಾರರು **ಶ್ರೀ ಪ್ರಬೀಷ್ ಎನ್ ಕೆ** ಟೆಲಿಫೋನ್ ನಂ.**08025584066** ದೂರವಾಣಿ ಸಂಖ್ಯೆ **8866556911** ನಲ್ಲಿ ಸಂಪರ್ಕಿಸಬಹುದು.

ದಿನಾಂಕ : 14.01.2026
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿಗಳು ಬ್ಯಾಂಕ್ ಆಫ್ ಬರೋಡ

ಇಂದಿನಿಂದ ಚನ್ನವೀರಯ್ಯಪಾಳ್ಯದಲ್ಲಿ ಕಡಲೆಕಾಯಿ ಪರಿಷೆ

ಬೆಂಗಳೂರು: ಬಸವೇಶ್ವರಸ್ವಾಮಿ ರಥೋತ್ಸವ, ಕಡಲೆಕಾಯಿ ಪರಿಷೆ ಸಂಭ್ರಮ ಹಾಗೂ ಅರ್ಚಕ ದಂಪತಿಗಳ ಸನ್ಮಾನ ಕಾರ್ಯಕ್ರಮ ಜ.15 ರಂದು ನಗರದ ವರಹಾ ಸಂದ್ರದ ಚನ್ನ ವೀರಯ್ಯಪಾಳ್ಯದ ಬಸವೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಬಿಜೆಪಿ ರಾಜ್ಯರೈತ ಮೋರ್ಚಾದ ಉಪಾಧ್ಯಕ್ಷ ಎಂ.ರುದ್ರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾವಿರಾರು ವರ್ಷಗಳ ಹಿಂದೆ ಚೋಳರ ಕಾಲದಲ್ಲಿ ನಿರ್ಮಿತವಾಗಿದ್ದ ಈ ದೇವಾಲಯ ಅತ್ಯಂತ ವಿಶೇಷವಾಗಿದ್ದು, ಕಳೆದ 19 ವರ್ಷಗಳಿಂದ ನಿರಂತರವಾಗಿ ಉಚಿತ ದಾಸೋಹ, ಕಡಲೆಕಾಯಿ, ಕಬ್ಬು, ಗಿಣ್ಣು ನೀಡಲಾಗುತ್ತಿರುವುದು ವಿಶೇಷ ಮೆರಗು ನೀಡಿದೆ. ಈ ವೇಳೆ ಕಾರ್ಯಕ್ರಮದಲ್ಲಿ ಕನಕಪುರದ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿ, ಕಾಗಿನೆಲೆ ಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಕೆಂಗೇರಿಯ ವಿಶ್ವ ಒಕ್ಕಲಿಗ ಸಂಸ್ಥಾನದ ನಿಶ್ಚಲಾನಂದ ಸ್ವಾಮೀಜಿ, ಕನಕಪುರದ ಮರಳೆಗವಿಮಠದ ಡಾ. ಮುಮ್ಮಡಿ ಶಿವರುದ್ರ ಸ್ವಾಮೀಜಿ, ಚಿತ್ರದುರ್ಗ ಯಾದವ ಸಂಸ್ಥಾನದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ, ಕೆಂಗೇರಿ ಉಪನಗರದ ಸಚ್ಚಿದಾನಂದ ಸ್ವಾಮೀಜಿ, ಶ್ರೀರಂಗಪಟ್ಟಣದ ಬೇಬಿಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಕನ್ನಲ್ಲಿ ಮಠದ ಪಟ್ಟದ ರೇಣುಕ ಶಿವಾಚಾರ್ಯ ಸ್ವಾಮೀಜಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ರಾಘವೇಂದ್ರ, ಯಡಿಯೂರಪ್ಪ, ಮಾಜಿ ಶಾಸಕ ಅಶೋಕ್ ಖೇಣಿ, ಶಾಸಕ ಟಿ.ಎನ್. ಜವರಾಯಿ ಗೌಡ, ನಟ ದುನಿಯಾ ವಿಜಯ್, ತಿಬ್ಬಾದೇವಿ ಟೆಂಟ್ ಹೌಸ್‌ನ ಡಿ. ಶಿವಲಿಂಗೆಗೌಡ್ರು ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯಮಟ್ಟದ ದೇಹದಾರ್ಢ್ಯ ಪ್ರದರ್ಶನ, ಕುಸ್ತಿ ಪಂದ್ಯಾವಳಿ, 65 ವರ್ಷ ಮೇಲ್ಪಟ್ಟ ರೈತಾಪಿ ವರ್ಗದ ದಂಪತಿಗಳಿಗೆ ಷಷ್ಠಿ ಸನ್ಮಾನ, ರೈತರಿಗೆ ಉಚಿತ ಟ್ರ್ಯಾಕ್ಟರ್ ವಿತರಣೆ ಸೇರಿದಂತೆ ಇನ್ನಿತರ ಸಾಮಾಜಿಕ ಕಾರ್ಯಗಳನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಐ ತಂತ್ರಜ್ಞಾನದಿಂದ ರೈತರ ಭವಿಷ್ಯ ಉಜ್ವಲ: ಹೊರಟ್ಟಿ

ಬೆಂಗಳೂರು: ದೇಶದ ಬೆನ್ನೆಲುಬಾದ ನಮ್ಮ ರೈತರು ಹಿಂದಿಗಿಂತ ಈಗ ಸುಧಾರಣೆಯಾಗಿದ್ದಾರೆ. ಹೊಸ ಎಐ ತಂತ್ರಜ್ಞಾನ ರೈತರಿಗೆ ವರದಾನವಾಗಲಿ, ರೈತರ ಭವಿಷ್ಯ ಉಜ್ವಲವಾಗಲು ಎಐ ಸಹಕಾರಿಯಾಗಬೇಕು ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟಿದ್ದಾರೆ.

ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ರವಿಶಂಕರ್ ಅವರು ಬರೆದಿರುವ ಫಾರ್ಮಾಸಿ ಕ್ಷೇತ್ರದ ಕಾರ್ಯನಿರ್ವಹಣಾ ವ್ಯವಸ್ಥೆ ಹಾಗೂ ಎಐ ಮತ್ತು ಕ್ವಾಂಟಮ್ ಸಂಯೋಜನೆ ಮತ್ತು ಅದರ ಸ್ಪರ್ಧಾತ್ಮಕ ಲಾಭಗಳ ಕುರಿತಾದ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, ನಮ್ಮಲ್ಲಿ ಕೂಲಿ ಕಾರ್ಮಿಕರು ಲಭ್ಯವಿಲ್ಲದ ಈ ಕಾಲದಲ್ಲಿ ರೈತರಿಗೆ ಈ ಹೊಸ ತಂತ್ರಜ್ಞಾನದಿಂದ ಅನುಕೂಲವಾಗಲಿದೆ. ರೈತರ ಕುರಿತು ರಾಜ್ಯದ ಜನತೆಗೆ ಮಾಹಿತಿ ನೀಡಬೇಕು ಎನ್ನುವ ಉದ್ದೇಶದಿಂದ ಫಾರ್ಮಾಸಿ ಕ್ಷೇತ್ರದ ಕಾರ್ಯನಿರ್ವಹಣಾ ವ್ಯವಸ್ಥೆ ಹಾಗೂ ಎಐ ಮತ್ತು ಕ್ವಾಂಟಮ್ ಸಂಯೋಜನೆ ಮತ್ತು ಅದರ ಸ್ಪರ್ಧಾತ್ಮಕ ಲಾಭಗಳ ಕುರಿತ ಪುಸ್ತಕಗಳ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಲೇಖಕರಾದ ಡಾ.ರವಿಶಂಕರ್ ಅವರು ಮಾತನಾಡಿ, ಎಐ–ಚಾಲಿತ ಫಾರ್ಮಾ ಅನುವಂಶದಿಂದ ಮಾರುಕಟ್ಟೆಗೆ ಎಂಬ ಪುಸ್ತಕವು ಕೃತಕ ಬುದ್ಧಿಮತ್ತೆ ಔಷಧಶಾಸ್ತ್ರ, ಮೌಲ್ಯ ಸರಪಳಿಯನ್ನು ಹೇಗೆ ಪುನರ್‌ಗಟ್ಟುತ್ತದೆ ಎಂಬುದರ ಸಂಪೂರ್ಣ ಮಾಹಿತಿಯನ್ನು ನೀಡುತ್ತದೆ ಎಂದರು. ಲಕ್ಷ್ಯ ಗುರುತಿಸುವಿಕೆ ಮತ್ತು ಸೃಜನಾತ್ಮಕ ರಸಾಯನಶಾಸ್ತ್ರದಿಂದ ಪ್ರಿಕ್ಲಿನಿಕಲ್ ಮತ್ತು ಕ್ಲಿನಿಕಲ್ ಅಭಿವೃದ್ಧಿ, ಉತ್ಪಾದನೆ, ಸರಬರಾಜು ಸರಪಳಿ ಮತ್ತು ವಾಣಿಜ್ಯ ಕಾರ್ಯಗತಗೊಳಿಸುವಿಕೆ ಕುರಿತು ಏಳು ಭಾಗಗಳು ಮತ್ತು 24 ಅಧ್ಯಾಯಗಳಲ್ಲಿ ರಚಿಸಲಾಗಿದೆ. ಡೇಟಾ ಮೂಲಾಧಾರಗಳು, ಫೌಂಡೇಷನ್ ಮಾದರಿಗಳು, ಮಲ್ಟಿಮೋಡಲ್ ಮತ್ತು ಏಜೆಂಟಿಕ್ ಎಐ, ನಿಯಂತ್ರಣಶಾಸ್ತ್ರ, ನೈತಿಕತೆ ಮತ್ತು ಹೊಸ ಕಾರ್ಯನಿರ್ವಹಣಾ ಮಾದರಿಗಳನ್ನು ಒಟ್ಟಾರೆಯಾಗಿ ಫಾರ್ಮಾಸಿ ಕ್ಷೇತ್ರದ ಎಐ ಕಾರ್ಯನಿರ್ವಹಣಾ ವ್ಯವಸ್ಥೆಯಲ್ಲಿ ವಿವರಿಸಲಾಗಿದೆ.

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಬೆಳ್ಳಿಪ್ರಕಾಶ್ ಅವರು, ಅಪೆಕ್ಸ್ ಬ್ಯಾಂಕ್‌ನ ನಿರ್ದೇಶಕರ ಸ್ಥಾನಕ್ಕೆ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ತಮ್ಮ ನಾಮಪತ್ರವನ್ನು ಸಲ್ಲಿಸಿದರು.

ಕರ್ನಾಟಕ ಬ್ಯಾಂಕ್‌ನ ತಂತ್ರಜ್ಞಾನ ಅಳವಡಿಕೆ ಮತ್ತು ಡಿಜಿಟಲ್ ನಾವೀನ್ಯತೆಯಲ್ಲಿ ಶ್ರೇಷ್ಠತೆಯನ್ನು ಗುರುತಿಸಿ ಭಾರತೀಯ ಬ್ಯಾಂಕುಗಳ ಸಂಘವು ಅತ್ಯುತ್ತಮ 'ಫಿನ್ಟೆಕ್ ಮತ್ತು ಡಿಪಿಐ ಅಳವಡಿಕೆ' ವಿಭಾಗದಲ್ಲಿ ಪ್ರಶಸ್ತಿ ನೀಡಲಾಯಿತು. ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ರಾಘವೇಂದ್ರ ಸೇರಿದಂತೆ ಬ್ಯಾಂಕಿನ ಅಧಿಕಾರಿಗಳಿದ್ದರು.

ಸೆಂಟ್ ಫ್ಲವರ್ಸ್ ಇಂಗ್ಲೀಷ್ ಸ್ಕೂಲ್‌ನ ಶಾಲಾ ವಾರ್ಷಿಕೋತ್ಸವದಲ್ಲಿ ಡಾ.ಜಿ.ಆರ್.ಕೃಷ್ಣಪ್ಪ

ಸಣ್ಣ ಬದಲಾವಣೆ ಮೂಲಕ ಅಗಾಧ ಸುಧಾರಣೆ ಸಾಧ್ಯ

ಬೆಂಗಳೂರು: ಇಂದಿನ ಕಾಲಘಟ್ಟದಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಪ್ರಮುಖ ಜವಾಬ್ದಾರಿಯಾಗಿದೆ. ಜೀವನದಲ್ಲಿ ಒಂದೇ ಬಾರಿಗೆ ದೊಡ್ಡ ಬದಲಾವಣೆ ಆಗಬೇಕು ಎಂದು ನಿರೀಕ್ಷಿಸಬಾರದು. ಪ್ರತೀ ದಿನ ಸಣ್ಣ ಸಣ್ಣ ಬದಲಾವಣೆ ಮೂಲಕ ಅಗಾಧ ಸುಧಾರಣೆ ಮಾಡಬಹುದು ಎಂದು ಸೆಂಟ್ ಫ್ಲವರ್ಸ್ ಇಂಗ್ಲೀಷ್ ಸ್ಕೂಲ್‌ನ ಸಂಸ್ಥಾಪಕ ಅಧ್ಯಕ್ಷ ಡಾ.ಜಿ.ಆರ್.ಕೃಷ್ಣಪ್ಪ ತಿಳಿಸಿದರು.

ನಗರದ ಚಂದ್ರಾ ಲೇಔಟ್, ವಿಜಯನಗರದಲ್ಲಿರುವ ಸೆಂಟ್ ಫ್ಲವರ್ಸ್ ಇಂಗ್ಲೀಷ್ ಸ್ಕೂಲ್‌ನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಂ.ಕೃಷ್ಣಪ್ಪ ಮಾತನಾಡಿ, ಈ ಶಾಲೆಯ ಮೇಲೆ ನನಗೆ ಬಹಳ ವಿಶ್ವಾಸವಿದೆ. ಪ್ರತೀ ವರ್ಷವೂ ರಾಂಕ್ ಗಳಿಸುತ್ತದೆ. ಬಡ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುತ್ತಿರುವುದು ಸಂತೋಷಕರವಾದದ್ದು. ಸೋಲು ಎಂಬುದು ಅಂತಿಮವಲ್ಲ, ಅದು ಗೆಲುವಿನ ಹಾದಿಯಲ್ಲಿ ಸಿಗುವ ಒಂದು ಪಾಠವಷ್ಟೆ. ನಿಮ್ಮ ಗುರಿಯತ್ತ ಸಾಗುವ ಹಾದಿಯಲ್ಲಿ ಅಡೆತಡೆಗಳು ಎದುರಾದಾಗ ಧೃತಿಗೆಡಬೇಡಿ. ಕತ್ತಲೆ ಹೆಚ್ಚಾದಷ್ಟು ಸೂರ್ಯೋದಯ ಹತ್ತಿರವಿದೆ ಎಂಬುದನ್ನು ಈ ಕ್ಷೇತ್ರದ ನಾಗರೀಕರು ಹಾಗೂ ವಿದ್ಯಾರ್ಥಿಗಳು ಅರ್ಥ ಮಾಡಿಕೊಂಡು ಜೀವನ ನಡೆಸಬೇಕು ಎಂದರು.

ವ್ಯವಸ್ಥಾಪಕ ನಿರ್ದೇಶಕರಾದ ದರ್ಶನ್ ಕೃಷ್ಣ ಮಾತನಾಡಿ, ಸೋಲು ಮತ್ತು ಸವಾಲುಗಳು ಬದುಕಿನ ಅಂತ್ಯವಲ್ಲ. ಅವು ನಿಮ್ಮೊಳಗಿನ ಶಕ್ತಿಯನ್ನು ಪರೀಕ್ಷಿಸುವ ಮೈಲಿಗಲ್ಲುಗಳು ಮಾತ್ರ. ನೀವು ಹಾಕುವ ಪ್ರತಿ ಹೆಜ್ಜೆಯೂ ಆತ್ಮವಿಶ್ವಾಸದಿಂದ ಕೂಡಿದ್ದರೆ ಮರುಭೂಮಿಯಂತೆ ಬದುಕಿನಲ್ಲೂ ಯಶಸ್ಸಿನ ನಂದನವನವನ್ನು ಸೃಷ್ಟಿಸಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲರು, ಶಿಕ್ಷಕ, ಶಿಕ್ಷಕಿಯರು, ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ನಂತರ ಮಕ್ಕಳು ವೇಷಭೂಷಣಗಳೊಂದಿಗೆ ನರ್ತಿಸಿ ಪ್ರೇಕ್ಷಕರನ್ನು ರಂಜಿಸಿದರು.

ಸೆಂಟ್ ಫ್ಲವರ್ಸ್ ಇಂಗ್ಲೀಷ್ ಸ್ಕೂಲ್‌ನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದ್ದರು.

ಸೋಂಪುರ ಪರಿಷೆಯಲ್ಲಿ ಲಕ್ಷಾಂತರ ಮಂದಿಯ ಭಕ್ತೋತ್ಸವ

ಬೆಂಗಳೂರಿನ ಬಸವನಗುಡಿಯಲ್ಲಿ ನಡೆಯುವ ಕಡಲೆಕಾಯಿ ಪರಿಷೆ ಎಲ್ಲರಿಗೂ ಗೊತ್ತು. ಅಷ್ಟೇ ದೊಡ್ಡಮಟ್ಟದಲ್ಲಿ, ಸಂಭ್ರಮದಲ್ಲಿ ನಡೆಯುವ ಇನ್ನೊಂದು ಪರಿಷೆಯೂ ಇದೆ. ಅದು ಸತತ 19 ವರ್ಷಗಳಿಂದ ನಡೆಯುತ್ತಿರುವ ಸೋಂಪುರ ಕಡಲೆಕಾಯಿ ಪರಿಷೆ. ಇದನ್ನು ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವ ಎಂದೂ ಕರೆಯಲಾಗುತ್ತದೆ. ಇದರಲ್ಲಿ ಲಕ್ಷಾಂತರ ಭಕ್ತರು ಪಾಲ್ಗೊಂಡು ಕಾರ್ಯಕ್ರಮವನ್ನು ಕಳೆಗಟ್ಟಿಸುತ್ತಾರೆ. ಜ.15ರಂದು ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ಈ ಬಾರಿಯೂ ಅದ್ದೂರಿ ಜಾತ್ರೆ ನಡೆಯಲಿದೆ, ಅದಕ್ಕೆ ಎಲ್ಲ ರೀತಿಯ ಸಿದ್ಧತೆಗಳೂ ಆಗಿವೆ. ಈ ಹಿನ್ನೆಲೆಯಲ್ಲಿ ಜಾತ್ರೆಯ ಇಣುಕು ನೋಟ ಇಲ್ಲಿದೆ.

19 ವರ್ಷದ ಹಿಂದೆ ಶುರುವಾಯ್ತು

ಸಂಕ್ರಾಂತಿ ಹಬ್ಬ ಸಮೀಪಿಸುತ್ತಿದ್ದಂತೆ ಬೆಂಗಳೂರು ದಕ್ಷಿಣ-ತಾಲೂಕು ಕೆಂಗೇರಿಯ ಸೋಂಪುರದಲ್ಲಿ ಬರುವ (ನೈಸ್ ಕಾರಿಡಾರ್ -ಸಮೀಪ) ಚನ್ನವೀರಯ್ಯನಪಾಳ್ಯ, ವರಾಹಸಂದ್ರದ ರೂಪವೇ ಬದಲಾಗುತ್ತದೆ. ಹಳ್ಳಿ ಸೊಗಡು ಕಂಡುಬರುತ್ತದೆ. ಮೂಟೆಗಟ್ಟಲೆ ಕಡಲೆಕಾಯಿ, ಕಬ್ಬಿನಜೊಲ್ಲೆಗಳು ರಾಶಿ ಬೀಳುತ್ತವೆ. ಹೊಸಕೆರೆಹಳ್ಳಿ ಪಿಇಎಸ್ ಕಾಲೇಜು ನೈಸ್ ರಸ್ತೆಯ ಟೋಲ್‌ನಿಂದ ಹಿಡಿದು ಕೆಂಗೇರಿಯ ನೈಸ್ ರಸ್ತೆ ಟೋಲ್‌ವರೆಗೆ ಜನಜಾತ್ರೆಯಾಗಿರುತ್ತದೆ. 19 ವರ್ಷದ ಹಿಂದೆ ಆರಂಭವಾದ ಈ ಜಾತ್ರೆಯಲ್ಲಿ ಆಗ ಬರೀ ಎರಡೂವರೆ ಸಾವಿರ ಭಕ್ತರು ಪಾಲ್ಗೊಂಡಿದ್ದರು. ಈಗ ಲಕ್ಷಾಂತರ ಭಕ್ತರು ನೆರೆಯುತ್ತಾರೆ. ರಾಮನಗರ, ಆನೇಕಲ್, ಬೆಂಗಳೂರು ಗ್ರಾಮಾಂತರ ಸೇರಿ ನೆರೆಹೊರೆಯ ಜಿಲ್ಲೆಯ ಸಾವಿರಾರು ಭಕ್ತ ರು ಪಾಲ್ಗೊಳ್ಳುತ್ತಾರೆ.

ಬೆಳಗ್ಗೆ 11.45ಕ್ಕೆ ಬಸವೇಶ್ವರ ರಥೋತ್ಸವ ಆರಂಭ

ಪ್ರತಿವರ್ಷದಂತೆ ಜ.15, ಸಂಕ್ರಾಂತಿ ಹಬ್ಬದಂದು ಕಡಲೆಕಾಯಿ ಪರಿಷೆ ನಡೆಯಲಿದ್ದು, ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ. ಈಗಾಗಲೇ ಸೋಂಪುರ ನೈಸ್ ರಸ್ತೆಯುದ್ದಕ್ಕೂ ಗ್ರಾಮೀಣ ಸೊಗಡು ಆವರಿಸಿಕೊಳ್ಳುತ್ತದೆ. ಈ ಬಾರಿಯೂ ಚನ್ನವೀರಯ್ಯನಪಾಳ್ಯ, ಸೋಂಪುರ ಹಾಗೂ ವರಾಹಸಂದ್ರಗಳ ಗ್ರಾಮಸ್ಥರು ಸಿದ್ಧವಾಗಿ ನಿಂತಿದ್ದಾರೆ. ಸಂಕ್ರಾಂತಿಯಂದು ಬೆಳಗ್ಗೆ 11.45ಕ್ಕೆ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವಕ್ಕೆ ಚಾಲನೆ ದೊರೆಯಲಿದೆ. ಬಸವಣ್ಣ ದೇವರಿಗೆ ಗಿಣ್ಣು ಪ್ರಸಾದವನ್ನು ನಿವೇದಿಸಿ ಪೂಜೆ ಸಲ್ಲಿಸಲಾಗುತ್ತದೆ. 2.50ರ ಸುಮಾರಿಗೆ ದೇಗುಲಗಳಲ್ಲಿ ಪೂಜೆ ಸಲ್ಲಿಸುವ ಅರ್ಚಕ ದಂಪತಿಗಳನ್ನು ಸನ್ಮಾನಿಸಲಾಗುತ್ತದೆ.

ಬೃಹತ್ ವೇದಿಕೆಯಲ್ಲಿ ಮನರಂಜನಾ ಕಾರ್ಯಕ್ರಮಗಳು ನಡೆಯಲಿವೆ. ಸಿನಿಮಾ ನಟ ದುನಿಯಾ ವಿಜಯ್, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪಾಲ್ಗೊಳ್ಳಲಿದ್ದಾರೆ. ಬಿಗ್‌ಬಾಸ್ ಖ್ಯಾತಿಯ ಹನುಮಂತು, ಖ್ಯಾತ ಗಾಯಕಿ ಶಿವಾನಿ ಅವರಿಂದ ಗೀತಗಾಯನ ಕಾರ್ಯಕ್ರಮವಿದೆ, ಕಾಮಿಡಿ ಕಿಲಾಡಿ ಕಲಾವಿದರು ಹಾಸ್ಯ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

2006ರಲ್ಲಿ ಜೀರ್ಣೋದ್ಧಾರ: ಎಂ.ರುದ್ರೇಶ್ ಅವರ ಕುಟುಂಬದವರಿಗೆ ಸೇರಿದ ಜಮೀನಿನಲ್ಲಿ ನೈಸ್ ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನದ ವೇಳೆ ದೇವಸ್ಥಾನ ತೆರವುಗೊಳಿಸಬೇಕಾದ ಸಂದರ್ಭ ಎದುರಾಗಿತ್ತು. ಸುಮಾರು 5 ಗುಂಟೆ ವ್ಯಾಪ್ತಿಯಲ್ಲಿ ದೇವಸ್ಥಾನವಿತ್ತು. ಈ ವೇಳೆ ರುದ್ರೇಶ್ ಮತ್ತು ಅವರ ಸ್ನೇಹಿತರು ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಕೊಡುವಂತೆ ನೈಸ್ ರಸ್ತೆಯ ಮುಖ್ಯಸ್ಥ ಅಶೋಕ್ ಖೇಣಿಗೆ ಮನವಿ ಮಾಡಿದ್ದರು. ಇದನ್ನು ಒಪ್ಪಿ ಖೇಣಿಯವರು ಜೀರ್ಣೋದ್ಧಾರ ನಡೆಸಿಕೊಟ್ಟಿದ್ದರು. ಜೀರ್ಣೋದ್ಧಾರದ ವೇಳೆ ಬಸವೇಶ್ವರ ಮೂಲಮೂರ್ತಿಯನ್ನು ತೆಗೆದು ಮತ್ತೆ ಪ್ರತಿಷ್ಠಾಪಿಸುವವರೆಗಿನ ಪ್ರತಿ ಹಂತದಲ್ಲೂ ಸ್ಥಳೀಯ ದಲಿತ ಮುಖಂಡ ಕೃಷ್ಣಪ್ಪ ಹಾಗೂ ಇನ್ನಿತರ ಸಮುದಾಯದವರು ಭಾಗಿಯಾಗಿದ್ದರು. ಶ್ರೀ ಶಿವಕುಮಾರ ಸ್ವಾಮೀಜಿ, ಪೇಜಾವರ ಶ್ರೀಗಳು, ಆದಿಚುಂಚನಗಿರಿ ಶ್ರೀಗಳು ಸೇರಿ 108 ಮಠಾಧೀಶರ ಸಾನ್ನಿಧ್ಯದಲ್ಲಿ ಪ್ರತಿಷ್ಠಾಪನೆ ಕಾರ್ಯಕ್ರಮ ನೆರವೇರಿತು.

ಚೋಳರ ಕಾಲದಲ್ಲಿ ನಿರ್ಮಾಣವಾಗಿತ್ತು ಎಂಬ ಪ್ರತೀತಿಯುಳ್ಳ ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನವನ್ನು 20 ವರ್ಷಗಳ ಹಿಂದೆ ಅಂದರೆ, 2006ರಲ್ಲಿ ಜೀರ್ಣೋದ್ಧಾರ ಮಾಡಲಾಯಿತು. 2007ರಲ್ಲಿ ಮೊದಲ ಬಾರಿಗೆ ಕಡಲೆಕಾಯಿ ಪರಿಷೆ, ಶ್ರೀ ಬಸವೇಶ್ವರ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆಯಿತು. ಅಂದಿನಿಂದ ಸತತ 19 ವರ್ಷಗಳ ಕಾಲ ಅದ್ದೂರಿಯಾಗಿಯೇ ಜಾತ್ರೆ ನಡೆದುಕೊಂಡು ಬಂದಿದೆ. ಈ ಬಾರಿ ದೇಗುಲಗಳಲ್ಲಿ ಪೂಜೆ ಸಲ್ಲಿಸುವ ಅರ್ಚಕ ದಂಪತಿಗಳನ್ನು ಸನ್ಮಾನಿಸಲಾಗುತ್ತಿದೆ. ಈಗಾಗಲೇ 500ಕ್ಕೂ ಹೆಚ್ಚು ದಂಪತಿಗಳು ನೋಂದಣಿಯಾಗಿದ್ದು ಇದು ಸಾವಿರ ಮುಟ್ಟಬಹುದು ಎಂದು ಅಂದಾಜಿಸಲಾಗಿದೆ. ಅಂಥ ಮಕ್ಕಳಿಗೆ ವಾಕಿಂಗ್ ಸ್ಟಿಕ್, ಕನ್ನಡಕ ಸೇರಿ ಹಲವು ಸೌಲಭ್ಯಗಳುಳ್ಳ ಕಿಟ್ ವಿತರಣೆ, ರೈತ ದಂಪತಿಗಳಿಗೆ ಸನ್ಮಾನ, ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮಗಳು ಜಾತ್ರೆಯ ವಿಶೇಷ. ಬಸವನಗುಡಿಯ ಕಡಲೆಕಾಯಿ ಪರಿಷೆಯೇ ಸೋಂಪುರ ಕಡಲೆಕಾಯಿ ಪರಿಷೆಗೆ ಪ್ರೇರಣೆ ಎಂಬುದು ಎಂ.ರುದ್ರೇಶ್ ಅವರ ಹೇಳಿಕೆ.

> ಏನೇ ಅಡೆತಡೆಗಳು ಎದುರಾದರೂ 20 ವರ್ಷಗಳಿಂದ ಸೋಂಪುರ ಕಡಲೆಕಾಯಿ ಪರಿಷೆಯನ್ನು ರುದ್ರೇಶ್ ನಡೆಸಿಕೊಂಡು ಬರುತ್ತಿದ್ದಾರೆ. ಸ್ಥಳೀಯನಾಗಿ ಉತ್ತಮ ಬಾಂಧವ್ಯ ಹೊಂದಿದ್ದಾರೆ. ನನ್ನ ಸ್ವಂತ ತಮ್ಮನಂತಿರುವ ರುದ್ರೇಶ್ ಅವರಿಗೆ ಆ ದೇವರು ಮತ್ತಷ್ಟು ಶಕ್ತಿ ನೀಡಲಿ, ಎಲ್ಲ ರಂಗದಲ್ಲೂ ಮುಂಚೂಣಿಯಲ್ಲಿರಲಿ ಎಂದು ಆಶಿಸುತ್ತೇನೆ.
>
> -ಬಿ.ಕೃಷ್ಣಪ್ಪ, ತಾಪಂ ಮಾಜಿ ಅಧ್ಯಕ್ಷ ಕೆಂಗೇರಿ

ಹಲವು ಹುದ್ದೆ ನಿಭಾಯಿಸಿ ಯಶಸ್ವಿಯಾದ ರುದ್ರೇಶ್

ಕ್ಷೇತ್ರ ಪ್ರವೇಶಿಸಿದ ಎಂ.ರುದ್ರೇಶ್ ಹಲವು ಸ್ಥಾನಗಳನ್ನು ಸಮರ್ಥವಾಗಿ ನಿಭಾಯಿಸಿ ರಾಜಕೀಯ ವಲಯದಲ್ಲಿ ಸಾಕಷ್ಟು ಮೆಚ್ಚುಗೆ ಗಳಿಸಿದ್ದಾರೆ. ಮಾಜಿ ಸಚಿವ ರಾಮಚಂದ್ರೇಗೌಡ ಅವರ ಮಾರ್ಗದರ್ಶನದಲ್ಲಿ ಮೊದಲ ಬಾರಿಗೆ ರಾಜಕೀಯ ರಂಗ ಪ್ರವೇಶಿಸಿದರು. ಮೊದಲ ಬಾರಿಗೆ ಹೆಮ್ಮಿಗೆಪುರ ಸ್ಥಾನೀಯ ಸಮಿತಿ ಪ್ರಧಾನ ಕಾರ್ಯದರ್ಶಿಯಾದರು. ರಾಮಮಂದಿರ ರಥಯಾತ್ರೆ ವೇಳೆ ರಥಯಾತ್ರೆ ಕಮಿಟಿ ಸದಸ್ಯರಾಗಿದ್ದರು. ಕೆಂಗೇರಿ ಹೋಬಳಿ ಬಿಜೆಪಿ ಯುವಮೋರ್ಚಾ ಅಧ್ಯಕ್ಷ, ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರ ಬಿಜೆಪಿ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿ, ಉತ್ತರಹಳ್ಳಿ ಬಿಜೆಪಿ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲೆ ಬಿಜೆಪಿ ಕಾರ್ಯದರ್ಶಿ ಸೇರಿ ಅನೇಕ ಸ್ಥಾನಗಳನ್ನು ನಿಭಾಯಿಸಿದರು. ರಾಮನಗರ ಬಿಜೆಪಿ ಜಿಲ್ಲಾಧ್ಯಕ್ಷ, ರಾಜ್ಯ ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ, ಕಂಠೀರವ ಸ್ಟುಡಿಯೋ ಅಧ್ಯಕ್ಷ, ಕೆಆರ್‌ಐಡಿಎಲ್‌ನ ಅಧ್ಯಕ್ಷರಾಗಿ ಅನೇಕ ಸ್ಥಾನಗಳನ್ನು ನಿರ್ವಹಿಸಿದ ಇವರು ಪ್ರಸ್ತುತ ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡರಾಗಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಿದ್ಧಗಂಗಾಮಠದ ಶ್ರೀ ಶಿವಕುಮಾರ ಸ್ವಾಮಿಗಳ ಹುಟ್ಟೂರಾದ ವೀರಾಪುರದಲ್ಲಿ ಶ್ರೀಗಳ 111 ಅಡಿ ಎತ್ತರದ ಪ್ರತಿಮೆ ನಿರ್ಮಿಸಲು ಎಂ.ರುದ್ರೇಶ್ ಅವರಿಗೆ ಜವಾಬ್ದಾರಿ ವಹಿಸಿದ್ದಾರೆ. ಇದನ್ನು ಅಷ್ಟೇ ಶ್ರದ್ಧೆಯಿಂದ ರುದ್ರೇಶ್ ನಿರ್ವಹಿಸುತ್ತಿದ್ದಾರೆ.

> ರೈತಪರ ಕಾಳಜಿ ಹೊಂದಿದ್ದಾರೆ. ನಾಡಿನ ಸಂಸ್ಕೃತಿ, ಸಂಪ್ರದಾಯದ ಬಗ್ಗೆ ಒಲವು ಇಟ್ಟುಕೊಂಡಿದ್ದಾರೆ. ರುದ್ರೇಶ್ ಅವರು ಸೋಂಪುರ ಕಡಲೆಕಾಯಿ ಪರಿಷೆ ಮೂಲಕ ಈ ಭಾಗದ ಭಕ್ತಾದಿಗಳ ಜನಮಾನಸದಲ್ಲಿ ಗೌರವದ ಸ್ಥಾನ ಗಳಿಸಿದ್ದಾರೆ. ಹಿರಿಯ ರೈತ ದಂಪತಿಗಳಿಗೆ ಷಷ್ಠಿಪೂರ್ತಿ ಕಾರ್ಯಕ್ರಮ ನಡೆಸಿದ್ದು ಇವರಿಗೆ ರೈತಾಪಿ ಜನರ ಮೇಲಿನ ಕಾಳಜಿಯನ್ನು ತೋರಿಸುತ್ತದೆ. ವಿಶೇಷವಾಗಿ ಯಶವಂತಪುರ ಕ್ಷೇತ್ರದ ಬಗ್ಗೆ ಕಾಳಜಿ ಹೊಂದಿರುವ ಇವರ ಮುಂದಿನ ಪಯಣ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.
>
> -ಟಿ.ಎನ್.ಜವರಾಯಿಗೌಡ, ಎಂಎಲ್‌ಸಿ, ಜೆಡಿಎಸ್

> ನಾನು ದಲಿತ ಸಮುದಾಯದವನಾದರೂ ಯಾವುದೇ ಜಾತಿ ಧರ್ಮದ ತರತಮವಿಲ್ಲದೇ ನನ್ನನ್ನು ನಡೆಸಿಕೊಂಡಿದ್ದಾರೆ. ಬಸವಣ್ಣ ಮೂಲವಿಗ್ರಹವನ್ನು ಮರುಪ್ರತಿಷ್ಠಾಪಿಸುವ ಪ್ರತಿ ಹಂತದಲ್ಲೂ ನಾನೂ ಪಾಲ್ಗೊಂಡಿದ್ದು ಜೀವನದ ಪ್ರಮುಖ ಘಟ್ಟ. ಸ್ವಂತ ಸಹೋದರನಂತೆ ಅವರೊಡನೆ ನನ್ನನ್ನೂ ಕರೆದುಕೊಂಡು ಹೋಗುತ್ತಿರುವುದು ನನಗೆ ಬಹಳ ಆನಂದದ ವಿಚಾರ.
>
> - ವಿ.ಕೃಷ್ಣಪ್ಪ, ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ, ವರಾಹಸಂದ್ರ

> ಸೋಂಪುರ ಕಡಲೆಕಾಯಿ ಪರಿಷೆ ನಡೆಸುವುದು ಸುಲಭದ ಮಾತಲ್ಲ. ಎಂ.ರುದ್ರೇಶ್ ಅವರ ಸಾರಥ್ಯದಲ್ಲಿ ಮಲ್ಲಿಗೆ ಹೂ ಎತ್ತಿದಂತೆ ಉತ್ಸವ ಯಾವುದೇ ಅಡೆತಡೆಗಳಿಲ್ಲದೆ ನಡೆದುಕೊಂಡು ಬಂದಿದೆ. ನಮ್ಮ ನಾಡಿನ ಸಂಸ್ಕೃತಿ ಸಂಪ್ರದಾಯವನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಪ್ರಯತ್ನವಾಗಿ ಈ ಸೋಂಪುರ ಜಾತ್ರೆ ಆಯೋಜಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ.
>
> -ವೀಣಾ ನಾಗರಾಜ್, ಮಾಜಿ ಕಾರ್ಪೋರೇಟರ್ ಹೆಮ್ಮಿಗೆಪುರ

ಬೆವಿಕಂ BESCOM

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಬೆಸ್ಕಾಂ ನಿಗಮ ಕಚೇರಿ, ಕೆ.ಆರ್. ಸರ್ಕಲ್, ಬೆಂಗಳೂರು - 560001 | https://bescom.karnataka.gov.in

ಅನುಸರಿಸಬೇಕಾದವು (Do's) :

- ಯಾವಾಗಲೂ ಐ.ಎಸ್.ಐ ಅಂಗೀಕೃತ ಗುಣಮಟ್ಟದ ಸಾಮಗ್ರಿಗಳನ್ನೇ ಉಪಯೋಗಿಸಿ
- ಪ್ಲಗ್ ಸಾಕೆಟ್ ಮಕ್ಕಳ ಕೈಗೆ ಎಟುಕದಂತೆ ಅಳವಡಿಸಿರಿ
- ಸರ್ಕಾರದಿಂದ ಅಂಗೀಕೃತ ಲೈಸನ್ಸ್ ಪಡೆದ ವಿದ್ಯುತ್ ಗುತ್ತಿಗೆದಾರರಿಂದ ಮಾತ್ರ ವೈರಿಂಗ್ ಕೆಲಸವನ್ನು ನಿರ್ವಹಿಸಿಕೊಳ್ಳಿರಿ
- ಸರಿಯಾದ ಸಾಮರ್ಥ್ಯದ ಫ್ಯೂಸ್ ವೈರ್‌ಗಳನ್ನು ಉಪಯೋಗಿಸಿ
- ವಿದ್ಯುತ್ ಉಪಕರಣದ ಸಮೀಪ ಬೆಂಕಿ ಕಂಡರೆ, ಕೂಡಲೇ ವಿದ್ಯುತ್ ಸರಬರಾಜು ಸ್ವಿಚ್ ಅನ್ನು ಆಫ್ ಮಾಡಿರಿ
- ನಿಮ್ಮ ವಿದ್ಯುತ್ ಸಂಪರ್ಕಕ್ಕೆ ಸೂಕ್ತ ಗ್ರೌಂಡಿಂಗ್ ವ್ಯವಸ್ಥೆ ಮಾಡಲಾಗಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ
- ವಿದ್ಯುತ್ ಉಪಕರಣಗಳನ್ನು ನಿಯಮಿತವಾಗಿ ಪರೀಕ್ಷಿಸಿಕೊಳ್ಳಿ
- ಯಾವಾಗಲೂ 3 ಪಿನ್‌ಗಳ ಪ್ಲಗ್/ಸಾಕೆಟ್‌ಗಳನ್ನು ಬಳಸಿ ಹಾಗೂ 3ನೇ ಪಿನ್ ಅರ್ಥಿಂಗ್ ಮಾಡಿಸಿ

ಮಾಡಬಾರದವುಗಳು (Don'ts) :

- ಪ್ರಾಣಿಗಳನ್ನು ವಿದ್ಯುತ್ ಕಂಬಗಳಿಗೆ ಮತ್ತು ಗೈ ಸೆಟ್‌ಗಳಿಗೆ ಕಟ್ಟಬಾರದು
- ಬಟ್ಟೆಗಳನ್ನು ಒಣಗಿಸಲು ಗೈ ತಂತಿಗಳನ್ನು ಬಳಸಬಾರದು
- ತಂತಿ ಬೇಲಿಗಳಿಗೆ ಅಕ್ರಮವಾಗಿ ವಿದ್ಯುತ್ ಹಾಯಿಸಬಾರದು
- ವಿದ್ಯುತ್ ಕಂಬಗಳನ್ನು ಹತ್ತಬಾರದು
- ತೇವವಾದ ಕೈಗಳಿಂದ ವಿದ್ಯುತ್ ಉಪಕರಣ / ಸ್ವಿಚ್‌ಗಳನ್ನು ಮುಟ್ಟಬಾರದು
- ವಿದ್ಯುತ್ ಮಾರ್ಗಗಳು ಹಾಯ್ದುಹೋಗಿರುವ ಕೆಳಭಾಗದಲ್ಲಿ ಉದ್ದನೆಯ ಲೋಹದ ಕೊಳವೆಗಳನ್ನು ತೆಗೆದುಕೊಂಡು ಹೋಗಬಾರದು
- ವಿದ್ಯುತ್ ತಂತಿಗಳು ಹಾಯ್ದು ಹೋಗಿರುವ / ಕೈಗೆಟಕುವ ಅಂತರದಲ್ಲಿರುವ ಸ್ಥಳಗಳಲ್ಲಿ ಮಕ್ಕಳು ಗಾಳಿಪಟ ಹಾರಿಸುವುದು ಮತ್ತು ಇನ್ನಿತರ ಆಟಗಳನ್ನು ಆಡಬಾರದು
- ಬ್ಯಾನರ್ / ಇತರೆ ಪ್ರಚಾರದ ವಸ್ತುಗಳನ್ನು ವಿದ್ಯುತ್ ಕಂಬಗಳಿಗೆ ಕಟ್ಟಬಾರದು

ವಿದ್ಯುತ್ ಬಿಲ್‌ನ ಉಳಿತಾಯಕ್ಕೆ ಅನುಸರಿಸಬೇಕಾದ ಕ್ರಮಗಳು :

- ಬಿಇಇಯಿಂದ ದೃಢೀಕೃತಗೊಂಡ 5 ಸ್ಟಾರ್ ರೇಟೆಡ್ ವಿದ್ಯುತ್ ಉಪಕರಣಗಳನ್ನು ಬಳಸುವುದರಿಂದ ವಿದ್ಯುತ್ ಬಿಲ್‌ನಲ್ಲಿ ಉಳಿತಾಯವಾಗುತ್ತದೆ
- ಅವಶ್ಯಕತೆ ಇರದಿದ್ದಾಗ ವಿದ್ಯುತ್ ದೀಪಗಳನ್ನು ಹಾಗೂ ಇತರೆ ಯಂತ್ರೋಪಕರಣಗಳನ್ನು ಆಫ್ ಮಾಡಿ
- ಕಡಿಮೆ ಬಟ್ಟೆಗಳನ್ನು ಒಗೆಯಲು ವಾಷಿಂಗ್ ಮೆಷಿನ್‌ನನ್ನು ಬಳಸದಿರಿ
- ಬಳಸದಿರುವ ಸಮಯದಲ್ಲಿ ಟಿ.ವಿ, ರೆಡಿಯೋ, ಆಡಿಯೋ ಯಂತ್ರಗಳನ್ನು ಸ್ವಿಚ್ ಆಫ್ ಮಾಡಿರಿ, ಐಡಲ್ ಮೋಡ್‌ನಲ್ಲಿ ಇಡಬೇಡಿ
- ಸೂರ್ಯನ ಬೆಳಕು ಉಚಿತ ಹಾಗೂ ಹಗಲಿನಲ್ಲಿ ಅದರ ಗರಿಷ್ಠ ಬಳಕೆ ಮಾಡಿ
- ವಿದ್ಯುತ್ ಉಪಕರಣಗಳನ್ನು ಖರೀದಿಸುವಾಗ ಬಿಇಇ ಪ್ರಮಾಣಿತ ಸ್ಟಾರ್ ರೇಟೆಡ್ ಉಪಕರಣಗಳನ್ನೇ ಖರೀದಿಸಿರಿ

ವಿದ್ಯುತ್ ಸಂಬಂಧಿತ ಅಪಾಯಕರ ಸ್ಥಳ ಕಂಡುಬಂದಲ್ಲಿ ಹಾಗೂ ವಿದ್ಯುತ್ ಸಂಬಂಧಿತ ಅವಘಡಗಳು ಸಂಭವಿಸಿದ್ದಲ್ಲಿ ಕೂಡಲೇ ಸಮೀಪದ ಬೆಸ್ಕಾಂ ಕಚೇರಿಗೆ ತಿಳಿಸಿ ಅಥವಾ ಬೆಸ್ಕಾಂನ 24x7 ಸಹಾಯವಾಣಿ **1912**ಕ್ಕೆ ಕರೆಮಾಡಿ

bescom.karnataka.gov.in | namma_bescom | bescomblr | @NammaBESCOM

ಸ್ವಂತ ಮನೆ ಹೊಂದುವುದು ಇದೀಗ ಅತೀ ಸುಲಭ, ಅತೀ ಸರಳ

ಕೆಬಿಎಲ್ ಹೋಮ್ ಲೋನ್

ROI @7.30%*

ಡಿಜಿಟಲ್ ಬ್ಯಾಂಕಿಂಗ್ ಪ್ರಯೋಜನವನ್ನು ಆನಂದಿಸಿ

ಅತ್ಯಾಕರ್ಷಕ ಬಡ್ಡಿದರಗಳು | ಕ್ಷಿಪ್ರ ಮಂಜೂರಾತಿ | ಅತ್ಯಂತ ಸರಳ ಪ್ರಕ್ರಿಯೆ

* ಷರತ್ತುಗಳು ಅನ್ವಯವಾಗುತ್ತವೆ

ಸುಂದರ ಕಾರಿನ ಸುಮಧುರ ಕನಸನ್ನು ನನಸಾಗಿಸಲು ತಡವೇಕೆ?

ಕೆಬಿಎಲ್ ಎಕ್ಸ್‌ಪ್ರೆಸ್ ಕಾರ್ ಲೋನ್

ROI @7.90%*

ಡಿಜಿಟಲ್ ಬ್ಯಾಂಕಿಂಗ್ ಪ್ರಯೋಜನವನ್ನು ಆನಂದಿಸಿ

ಅತ್ಯಾಕರ್ಷಕ ಬಡ್ಡಿದರಗಳು | ಕ್ಷಿಪ್ರ ಮಂಜೂರಾತಿ | ಅತ್ಯಂತ ಸರಳ ಪ್ರಕ್ರಿಯೆ

* ಷರತ್ತುಗಳು ಅನ್ವಯವಾಗುತ್ತವೆ

Follow us on : / KarnatakaBank

ಹೆಚ್ಚಿನ ವಿವರಗಳಿಗಾಗಿ ನಿಮ್ಮ ಹತ್ತಿರದ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಿ ಅಥವಾ ಟೋಲ್ ಫ್ರೀ ಸಂಖ್ಯೆ **1800 425 1444**ಗೆ ಕರೆ ಮಾಡಿ

ಸಾರ್ವಜನಿಕ ಜಾಗೃತಿಯ ಸಂದೇಶ

ಇಂಟರ್‌ನೆಟ್ ಬ್ಯಾಂಕಿಂಗ್‌ಗೆ ಸಂಬಂಧಪಟ್ಟ ಯೂಸರ್ ಐಡಿ / ಪಾಸ್‌ವರ್ಡ್ ಅಥವಾ ನಿಮ್ಮ ಕ್ರೆಡಿಟ್ / ಡೆಬಿಟ್ ಕಾರ್ಡ್ ನಂ. / ಸಿವಿವಿ / ಒಟಿಪಿಗಳನ್ನು ಯಾರಾದರೂ ದೂರವಾಣಿ ಅಥವಾ ಇ-ಮೇಲ್ ಮೂಲಕ ಕೇಳಿದರೆ ಅವರೊಂದಿಗೆ ಹಂಚಿಕೊಳ್ಳಬೇಡಿ.

ಕರ್ಣಾಟಕ ಬ್ಯಾಂಕ್
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 | CIN: L85110KA1924PLC001128 | ಇಮೇಲ್: info@ktkbank.com | ವೆಬ್‌ಸೈಟ್: www.karnatakabank.bank.in

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿ ಸಮುದಾಯ ನಿರ್ಮಾಣದತ್ತ

3ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಕಾಮಗಾರಿಯ ಹೆಸರು: ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸೂರ್ಯನಗರ 3ನೇ ಹಂತದ ಬ್ಲಾಕ್–5ರ ರಸ್ತೆಗಳ ದುರಸ್ಥಿ ಮತ್ತು ಅಭಿವೃದ್ಧಿ ಕಾಮಗಾರಿ. **Work Indent No:**KHB/2025-26/OW/WORK_INDENT 690 & IFT No.136/2025-26 Date: 13.01.2026. ಟೆಂಡರ್‌ಗಿಟ್ಟ ಮೊತ್ತ: ರೂ. 1,93,12,929/–

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 27.01.2026 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511 / 080–22100077 Website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ಡಿಐಪಿಆರ್/ಸಿಪಿ/5036/ಸಿಸಿಎಲ್/2025–26

ರವಿಶಂಕರ್ ಗುರೂಜಿ ವಿರುದ್ಧ ಸದ್ಯಕ್ಕಿಲ್ಲ ಕ್ರಮ

ಬೆಂಗಳೂರು: ಉತ್ತರಹಳ್ಳಿ ಹೋಬಳಿಯ ಕಗ್ಗಲೀಪುರ ಗ್ರಾಮದಲ್ಲಿ ಸರಕಾರಿ ಜಮೀನು, ಕೆರೆ ಒತ್ತುವರಿ ಮಾಡಿದ ಆರೋಪ ಪ್ರಕರಣಕ್ಕೆ ಬಂಧಿಸಿದಂತೆ ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ಗುರೂಜಿ ಅವರ ವಿರುದ್ಧ ಜನವರಿ 21ರವರೆಗೆ ಯಾವುದೇ ಕ್ರಮ ಕೈಗೊಳ್ಳದಂತೆ ಬೆಂಗಳೂರು ಮೆಟ್ರೊಪಾಲಿಟನ್ ಟಾಸ್ಕ್‌ಫೋರ್ಸ್‌ಗೆ (ಬಿಎಂಟಿಎಫ್) ಹೈಕೋರ್ಟ್ ನಿರ್ದೇಶಿಸಿದೆ. ಒತ್ತುವರಿ ಆರೋಪ ಸಂಬಂಧ ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್‌ಫೋರ್ಸ್ (ಬಿಎಂಟಿಎಫ್) ತಮ್ಮ ವಿರುದ್ಧ ದಾಖಲಿಸಿರುವ ಪ್ರಕರಣ ರದ್ದುಪಡಿಸುವಂತೆ ಕೋರಿ ಶ್ರೀ ರವಿಶಂಕರ್ ಸಲ್ಲಿಸಿರುವ ಅರ್ಜಿಯನ್ನು ನ್ಯಾ. ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ರವಿಶಂಕರ್ ಗುರೂಜಿ ಪರ ವಕೀಲ ಪಿ. ಪ್ರಸನ್ನಕುಮಾರ್ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ್ದ ವಿಭಾಗೀಯ ಪೀಠ ನೀಡಿದ ಆದೇಶದ ಆಧಾರದಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಜ. 21ಕ್ಕೆ ವಿಚಾರಣೆ ಮುಂದೂಡಲಾಯಿತು.

ಗಾಳಿಪಟ ದಾರ ಕುತ್ತಿಗೆಗೆ ಸಿಲುಕಿ ಸಾವು

ಬೀದರ್: ಬೈಕ್ ಮೇಲೆ ತೆರಳುವ ವೇಳೆ ಗಾಳಿಪಟ ಹಾರಿಸುವ ಮಾಂಜಾ ದಾರ ಕುತ್ತಿಗೆ ಸೀಳಿ ವ್ಯಕ್ತಿಯೊಬ್ಬರು ಸ್ಥಳದಲ್ಲೇ ಮೃತಪಟ್ಟ ಘಟನೆ ಚಿಟಗುಪ್ಪ ತಾಲೂಕಿನ ತಾಳಮಡಗಿ ಗ್ರಾಮದ ಸೇತುವೆ ಸಮೀಪ ನಡೆದಿದೆ.

ಬಂಬುಳಗಿ ಗ್ರಾಮದ ಸಂಜು ಕುಮಾರ ಗುಂಡಪ್ಪ (48) ಮೃತರು. ಹುಮನಾಬಾದ್ ಪಟ್ಟಣದ ವಸತಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಗಳನ್ನು ಸಂಕ್ರಾಂತಿ ಹಬ್ಬದ ಪ್ರಯುಕ್ತ ಕರೆಯಲು ಬೈಕ್ ಮೇಲೆ ತೆರಳುತ್ತಿದ್ದ ವೇಳೆ ಮಾಂಜಾ ದಾರ ಕುತ್ತಿಗೆಗೆ ತಗುಲಿ ಕುತ್ತಿಗೆ ಕೊಯ್ದುಕೊಂಡಿದೆ. ಬೈಕ್ ಮೇಲಿಂದ ಕೆಳಗೆ ಬಿದ್ದು ಸಂಜಕುಮಾರ್ ರಕ್ತದ ಮಡುವಿನಲ್ಲಿ ಕೊನೆಯುಸಿರೆಳೆದಿದ್ದಾರೆ ಎನ್ನಲಾಗಿದೆ. ಸಂಕ್ರಾಂತಿ ಆಚರಣೆ ವೇಳೆ ಚಿಟಗುಪ್ಪ ತಾಲೂಕಿನಲ್ಲಿ ಗಾಳಿಪಟಗಳನ್ನು ಹಾರಿಸುವ ಸಂಪ್ರದಾಯ ಇದೆ. ಅದನ್ನು ಮನಗಂಡು ಚಿಟಗುಪ್ಪ ತಹಸೀಲ್ದಾರ್ ಮಂಜುನಾಥ ಪಾಂಚಾಳ ಅವರು ತಾಲೂಕಿನಾದ್ಯಂತ ಗಾಳಿಪಟ ಹಾರಿಸುವ ವೈರ್ ಮಾಂಜಾ (ದಾರ) ಮಾರಾಟ ನಿಷೇಧಿಸಲಾಗಿದೆ. ಮಾಂಜಾ ದರ ಬಳಕೆ ಆಗಿದ್ದು, ಈ ಬಗ್ಗೆ ತನಿಖೆ ನಡೆದಿದೆ.

ಆಡಳಿತ ಪಕ್ಷ ಎದುರಿಸಲು ಬಿ.ವೈ ವಿಜಯೇಂದ್ರ ವಿಫಲ

ವಿಜಯಪುರ: ಈಗ ಯಡಿಯೂರಪ್ಪ ಜನಪ್ರಿಯತೆ ಉಳಿದಿಲ್ಲ. ಮಗನ ಹಿತಾಸಕ್ತಿಗಾಗಿ ಬಿಜೆಪಿ ಪಕ್ಷ ಬಲಿ ಕೊಡುವ ಕೆಲಸ ಮಾಡುತ್ತಿದ್ದಾರೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಯಡಿಯೂರಪ್ಪ ವಿರುದ್ಧ ವಾಗ್ದಾಳಿ ಮುಂದುವರೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿ.ವೈ.ವಿಜಯೇಂದ್ರ ಎಲ್ಲದರಲ್ಲೂ ಸಂಪೂರ್ಣ ವಿಫಲವಾಗಿದ್ದಾನೆ. ಕಳೆದ ಬೆಳಗಾವಿ ಅಧಿವೇಶನದಲ್ಲಿ ವಿಜಯೇಂದ್ರ ಸರಿಯಾಗಿ ಮಾತನಾಡಲಿಲ್ಲ, ಸದನದಲ್ಲಿ ಸರಕಾರದ ವಿರುದ್ಧ ಮಾತನಾಡಲಿಲ್ಲ. ಬದಲಾಗಿ ಕಾಟಾಚಾರದಂತೆ ಭಾಗಿಯಾಗಿದ್ದರು. ವಿಜಯೇಂದ್ರನಿಂದ ಪಕ್ಷ ಸಂಘಟನೆ ಸಾಧ್ಯವಿಲ್ಲ, ಹಿರಿಯರು ಯಾರೂ ವಿಜಯೇಂದ್ರನ್ನು ಒಪ್ಪಿಕೊಂಡಿಲ್ಲ ಎಂದರು. ಇಂಥದ್ದರಲ್ಲಿ ಏನಾದರೂ ಮಾಡಿ ವಿಜಯೇಂದ್ರನನ್ನು ಸಿಎಂ ಮಾಡಲು ಯಡಿಯೂರಪ್ಪ ಹೊರಟಿದ್ದಾರೆ. ಧೃತರಾಷ್ಟ್ರ ಕೌರವರ ನಾಶಕ್ಕೆ ಕಾರಣವಾದನೋ ಹಾಗೇ ಯಡಿಯೂರಪ್ಪ ವಿಜಯಯೇಂದ್ರಗಾಗಿ ರಾಜ್ಯದಲ್ಲಿ ಬಿಜೆಪಿ ನಾಶ ಮಾಡುತ್ತಿದ್ದಾರೆ ಎಂದು ಅಸಮಾಧಾನ ಹೊರ ಹಾಕಿದರು. ಅಖಿಲ ಭಾರತ ವೀರಶೈವ ಮಹಾಸಭೆ ಅಧ್ಯಕ್ಷರಾಗಿ ಬಿ.ಎಸ್. ಯಡಿಯೂರಪ್ಪ ಅವರ ಆಯ್ಕೆ ಬೇಡ. ಮಠಾಧೀಶರೊಬ್ಬರು ಈ ಮಹಾಸಭೆಗೆ ಅಧ್ಯಕ್ಷರಾಗಬೇಕು. ಶ್ಯಾಮನೂರು ಶಿವಶಂಕರಪ್ಪ ಅವರು ವಯಸ್ಸಾಗಿದ್ದರೂ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದರು. ಆದರೆ ಯಡಿಯೂರಪ್ಪರನ್ನು ಶಾಮನೂರು ಜತೆಗೆ ಹೋಲಿಕೆ ಮಾಡಲು ಆಗುವುದಿಲ್ಲ ಎಂದರು.

22ರಿಂದ ವಿಶೇಷ ಅಧಿವೇಶನ ನಿಗದಿ

← ಮೊದಲಪುಟದಿಂದ

ನೂತನ ಕಾಯಿದೆ ಕುರಿತು ನಿರ್ಣಯ ಕೈಗೊಳ್ಳಲು ಸಚಿವ ಸಂಪುಟ ನಿರ್ಣಯಿಸಿದೆ. ಜಂಟಿ ಸದನ 22ರಂದು ಗುರುವಾರ ಬೆಳಗ್ಗೆ 11.00 ಗಂಟೆಗೆ ಕರೆಯಲು ತೀರ್ಮಾನಿಸಲಾಗಿದ್ದು, 31 ರವರಿಗೆ ಜಂಟಿ ಅಧಿವೇಶನ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ಜನಹಿತ, ರಾಜ್ಯದ ಹಿತ ಕಾಪಾಡಲು ಸೂಕ್ತವಾದ ಹೆಜ್ಜೆ: ಜನಹಿತ, ರಾಜ್ಯದ ಹಿತ ಕಾಪಾಡಲು ಸೂಕ್ತವಾದ ಹೆಜ್ಜೆಯನ್ನು ರಾಜ್ಯ ಸರಕಾರ ಇಡಲಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ನಮ್ಮ ರಾಜ್ಯದ ಜನರ ಹಕ್ಕನ್ನು ಕಿತ್ತುಕೊಳ್ಳಲು ಮುಂದಾದರೆ ಸರಕಾರ ಸುಮ್ಮನೆ ಕುಳಿತಿರಲು ಸಾಧ್ಯವಿಲ್ಲ. ಸರಕಾರ ಅಧಿವೇಶನ ಕರೆಯದೇ ಬಿಡಲು ಸಾಧ್ಯವಿಲ್ಲ. ಅರಿವು ಹಾಗೂ ಜಾಗೃತಿ ಮೂಡಿ ಸಲು ಹಾಗೂ ಕೇಂದ್ರ ಸರಕಾರದ ಮೇಲೆ ಮನರೇಗಾ ಕಾಯಿದೆಯ ಮರುಸ್ಥಾಪನೆಗಾಗಿ ಒತ್ತಡ ತರಲು ಪ್ರಯತ್ನ ಮಾಡಲಾಗುತ್ತಿದೆ ಎಂದರು.

ವಿಬಿಜಿ ರಾಮ್ ಜಿ ಕಾಯಿದೆ ಸಂಬಂಧ ಆರೇಳು ರಾಜ್ಯಗಳು ತಮ್ಮ ಸ್ಪಷ್ಟ ನಿಲುವು ಹಾಗೂ ಅಸಮಾಧಾನ ಹೊರಹಾಕಿವೆ. ಪಂಜಾಬ್, ತಮಿಳುನಾಡು ಸರಕಾರ ಧ್ವನಿ ಎತ್ತಿವೆ. ಮನರೇಗಾ ಕಾಯಿದೆಯಡಿ ಕೇವಲ ಕೆಲಸ ಕೊಡುವುದು ಮಾತ್ರವಲ್ಲ, ಕೆಲಸ ಕೊಡದೇ ಹೋಗಿದ್ದರೆ, ಫಲಾನುಭವಿ ಉದ್ಯೋಗ ಭತ್ಯೆಯನ್ನು ಕೇಳಬಹುದಾಗಿತ್ತು. ಪಂಚಾಯತಿಗಳಿಗೆ ಕೆಲಸಗಳ ಬಗ್ಗೆ ತೀರ್ಮಾನಿಸುವ ಹಕ್ಕು ಇತ್ತು. ಹೊಸ ಕಾಯಿದೆಯಡಿ ಪಂಚಾಯತಿಗಳಿಗೆ ಅಧಿಕಾರ ವಿಲ್ಲ. ಪಂಚಾಯತಿಗಳ ವ್ಯಾಪ್ತಿಗೂ ಬರುವುದಿಲ್ಲ. ಕೇಂದ್ರ ಸರಕಾರವೇ ಎಲ್ಲಿ ಕಾಮಗಾರಿ ನಡೆಯಬೇಕೆಂದು ನಿರ್ಧರಿಸಲಿದೆ. ಗ್ರಾಮೀಣ ಆಸ್ತಿಯನ್ನು ಸೃಷ್ಟಿಸಲೆಂದು ಬಳಸಲಾಗುತ್ತಿದ್ದ ಕಾರ್ಮಿಕರನ್ನು ರಸ್ತೆ, ಟನಲ್ ನಿರ್ಮಾಣಕ್ಕೆ ಗುತ್ತಿಗೆದಾರರ ಬಳಿ ಕೆಲಸ ಮಾಡಬೇಕು ಎಂದರು.

ಒತ್ತಡ ಹೇರಲು ನಿರ್ಣಯ: ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಲು ನಿರ್ಣಯ ಕೈಗೊಳ್ಳಲಾಗಿದೆ. ಈ ಕಾರಣದಿಂದ ಜನರನ್ನು ಜಾಗೃತಗೊಳಿಸಿ, ವಿಶೇಷ ಚರ್ಚೆ ಮಾಡಲು ಅಧಿವೇಶನ ಕರೆಯಲಾಗುತ್ತಿದೆ. ಇದಲ್ಲದೆ ಜನರ ನ್ಯಾಯಾಲಯಕ್ಕೆ ಮಾತ್ರವಲ್ಲದೆ ಕಾನೂನಿನ ನ್ಯಾಯಾಲಯದ ಮೊರೆ ಹೋಗಲು ನಿರ್ಣಯಿಸಲಾಗಿದೆ. ಜನರಿಗೆ ಅನ್ಯಾಯ ಮಾಡುವ ಕಾನೂನನ್ನು ರಾಜ್ಯ ಬಿಜೆಪಿ ಒಪ್ಪಬಾರದಿತ್ತು. ಇಂಥ ಕರಾಳ ಕಾನೂನು ರೂಪಿಸಿದಾಗ ಜನರ ಹಿತ ಕಾಪಾಡಬೇಕೆಂಬ ಉದ್ದೇಶವಿದ್ದರೆ, ಕಾಯಿದೆಯ ಅನಾನುಕೂಲತೆಗಳನ್ನು ಕೇಂದ್ರ ಸರಕಾರಕ್ಕೆ ತಿಳಿಸಬೇಕಿತ್ತು. ಜನರಿಗೆ ಅನ್ಯಾಯ ಮಾಡುವ ಈ ಕಾನೂನನ್ನು ಅವರು ಒಪ್ಪಬಾರದಿತ್ತು ಎಂದು ಸಚಿವ ಎಚ್.ಕೆ.ಪಾಟೀಲ್ ಹೇಳಿದರು.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.

ದೂರವಾಣಿ:0816–2281105 Email:eemitmk@gmail.com

ಐ.ಎಫ್.ಟಿ ಸಂಖ್ಯೆ18/2025–26 KW-1, KW-2 & KW-3 (ದ್ವಿ ಲಕೋಟೆ)

ದಿನಾಂಕ: 13.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 13.01.2026

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2025–26ನೇ ಸಾಲಿನ ಲೆಕ್ಕ ಶೀರ್ಷಿಕೆ: 4702–ವಿಶೇಷ ಘಟಕ ಯೋಜನೆ, 4702–ಗಿರಿಜನ ಉಪಯೋಜನೆ, 4702–ಅಣೆಕಟ್ಟು ಮತ್ತು ಪಿಕಪ್– ಪ್ರಧಾನ ಕಾಮಗಾರಿಗಳು ಮತ್ತು PMKSY-HKKP-SMI ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆ.ಪಿ.ಪಿ ಪೋರ್ಟ್‌ಲ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 18/2025–26, ದಿ: 13–01–2026 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:

1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 14–01–2026 ರಂದು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2. ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ: 17–01–2026 ಬೆಳ್ಳಗ್ಗೆ 11.30 ಗಂಟೆಯವರೆಗೆ ಸ್ವೀಕರಿಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನ ಮೂಲಕ ದಿನಾಂಕ: 21–01–2026 ಸಾಯಂಕಾಲ 5.00ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು ದಿನಾಂಕ: 22–01–2026 ಸಾಯಂಕಾಲ 5.05 ಗಂಟೆಗೆ ತೆರೆಯಲಾಗುವುದು. 5. ಆರ್ಥಿಕ ಬಿಡ್ಡನ್ನು ದಿನಾಂಕ: 23–01–2026 ಸಾಯಂಕಾಲ 5.10 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.

DIPR/TUM/412/KSMCA/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL

(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂ: ಮುಇಂ(ವಿ)/ಪ್ರ(ಕಾ)ವ/ಕಾ.ಇಂ(ಸಿ)–3/ಕಿ.ಇಂ(ಸಿ)/2025–26/9107–09 ದಿನಾಂಕ: 14.01.2026

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿ ವತಿಯಿಂದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1. ಅಕ್ಕುರುಮೋಳೆ ಯಲ್ಲಿರುವ 66/11ಕೆವಿ ಉಪ–ಕೇಂದ್ರದಲ್ಲಿ ನಿಯಂತ್ರಣ ಕೊಠಡಿ ಕಟ್ಟಡದ ವಿಸ್ತರಣೆ ಕಾಮಗಾರಿ. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 20,00,000.00, **ಪ್ರವರ್ಗ:** Others.

2. ಕೋಡಿಹಳ್ಳಿಯಲ್ಲಿರುವ 66/11ಕೆವಿ ಉಪ–ಕೇಂದ್ರದಲ್ಲಿ ಅಸ್ತಿತ್ವದಲ್ಲಿರುವ ನಿಯಂತ್ರಣ ಕೊಠಡಿ ಕಟ್ಟಡದ ವಿಸ್ತರಣೆ ಕಾಮಗಾರಿ. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 20,00,000.00, **ಪ್ರವರ್ಗ:** Others.

3. ಹೊನ್ನಿಗನಹಳ್ಳಿಯಲ್ಲಿರುವ 66/11ಕೆವಿ ಉಪ–ಕೇಂದ್ರದಲ್ಲಿ ಅಸ್ತಿತ್ವದಲ್ಲಿರುವ ನಿಯಂತ್ರಣ ಕೊಠಡಿ ಕಟ್ಟಡದ ವಿಸ್ತರಣೆ ಕಾಮಗಾರಿ. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 15,00,000.00, **ಪ್ರವರ್ಗ:** CAT-I.

4. ರಂಗನದೊಡ್ಡಿಯಲ್ಲಿರುವ 66/11ಕೆವಿ ಉಪ–ಕೇಂದ್ರದಲ್ಲಿ ಅಸ್ತಿತ್ವದಲ್ಲಿರುವ ನಿಯಂತ್ರಣ ಕೊಠಡಿ ಕಟ್ಟಡದ ವಿಸ್ತರಣೆ ಕಾಮಗಾರಿ. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 13,68,000.00, **ಪ್ರವರ್ಗ:** CAT-II(A).

5. ಕನಕಪುರದಲ್ಲಿರುವ 66/11ಕೆವಿ ಉಪ–ಕೇಂದ್ರ ಆವರಣದಲ್ಲಿ ಪಾರಂಪರಿಕ ಕಟ್ಟಡದ ಮುಂದೆ ವಾಹನ ನಿಲ್ದಾಣದ ಶೆಲ್ಟರ್ ನಿರ್ಮಾಣ ಮತ್ತು ಇತರ ಸಂಬಂಧಿತ ಕೆಲಸಗಳ ಕಾಮಗಾರಿ. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 8,00,000.00, **ಪ್ರವರ್ಗ:** Others.

6. ಚಂದಾಪುರದಲ್ಲಿರುವ 66/11ಕೆವಿ ಉಪ–ಕೇಂದ್ರದ ಆವರಣದಲ್ಲಿ ಎಲ್‌ಎಂ ಕ್ವಾರ್ಟಸ್‌ನಿಂದ ಮುಖ್ಯ ರಸ್ತೆಯವರೆಗೂ ತೆರೆದ ಚರಂಡಿ ನಿರ್ಮಾಣ ಮತ್ತು ಇತರ ಸಂಬಂಧಿತ ಕಾಮಗಾರಿಗಳು. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 15,00,000.00, **ಪ್ರವರ್ಗ:** Others.

7. ಅತ್ತಿಬೆಲೆಯಲ್ಲಿರುವ 66/11ಕೆವಿ ಸಬ್–ಸ್ಟೇಷನ್ ಆವರಣದಲ್ಲಿನ ಹಿಂಭಾಗದ ಗೇಟ್‌ನಿಂದ ಸಿಆರ್‌ಬಿಗೆ ಆರ್‌ಸಿಸಿ ಸಂಪರ್ಕ ರಸ್ತೆಯನ್ನು ಒದಗಿಸುವುದು ಮತ್ತು ಕಾಂಪೌಂಡ್ ಗೋಡೆಯ ಮೇಲೆ ಬೇಲಿ ಹಾಕುವ ಕಾಮಗಾರಿ. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 13,00,000.00, **ಪ್ರವರ್ಗ:** Others.

8. ಯಾರಂಡನಹಳ್ಳಿಯಲ್ಲಿರುವ 220/66/11ಕೆ.ವಿ. ಸ್ವೀಕರಣಾ ಕೇಂದ್ರದಲ್ಲಿ ಅಸ್ತಿತ್ವದಲ್ಲಿರುವ ರಸ್ತೆಯಿಂದ ಸ್ಟೋರ್ ರೂಮ್ ಕಟ್ಟಡದ ವರೆಗೂ ಸಂಪರ್ಕ ರಸ್ತೆಯನ್ನು ಒದಗಿಸುವ ಕಾಮಗಾರಿ. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 10,00,000.00, **ಪ್ರವರ್ಗ:** Others.

9. ಚಂದ್ರಪ್ಪ ವೃತ್ತದಲ್ಲಿರುವ 66/11ಕೆವಿ ಉಪ–ಕೇಂದ್ರದ ಆವರಣದ ಉತ್ತರ ಭಾಗದಲ್ಲಿ ಜೆಲ್ಲಿ ಹರಡುವಿಕೆಯೊಂದಿಗೆ ಹೊಸದಾಗಿ ನಿರ್ಮಿಸಲಾದ ಡಿಪಿ ರಚನೆಗಳವರೆಗೆ ಚೈನ್ ಲಿಂಕ್ ಬೇಲಿಯನ್ನು ವಿಸ್ತರಿಸುವುದು ಮತ್ತು ಇತರ ಸಂಬಂಧಿತ ಕೆಲಸಗಳ ಕಾಮಗಾರಿ. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 20,00,000.00, **ಪ್ರವರ್ಗ:** SC.

10. ಹುಲಿಕಟ್ಟೆ (ಅಗಲಕೋಟೆ)ಯಲ್ಲಿರುವ 66/11ಕೆ.ವಿ. ಉಪ–ಕೇಂದ್ರ ಆವರಣದ ಹಿಂಭಾಗದಲ್ಲಿ ಕಾಂಪೌಂಡ್ ಗೋಡೆಯ ಉಳಿದ ಭಾಗದ ನಿರ್ಮಾಣ ಕಾಮಗಾರಿ. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 15,00,000.00, **ಪ್ರವರ್ಗ:** Others.

11. ದಾಬಸ್ ಪೇಟೆಯಲ್ಲಿರುವ 220/66/11ಕೆವಿ ಉಪ–ಕೇಂದ್ರದಲ್ಲಿ ಆರ್‌ಸಿಸಿ ಪ್ಲಾಟ್‌ಫಾರ್ಮ್ ನಿರ್ಮಾಣ ಕಾಮಗಾರಿ. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 9,52,000.00, **ಪ್ರವರ್ಗ:** ST.

12. ಕೊಡಿಗೇಹಳ್ಳಿಯಲ್ಲಿರುವ 66/11ಕೆವಿ ಉಪಕೇಂದ್ರ ಆವರಣದಲ್ಲಿ ಸಂಪ್‌ಟ್ಯಾಂಕ್, ಪೈಪ್‌ಲೈನ್ ಮತ್ತು ಇತರ ಸಂಬಂಧಿತ ಕೆಲಸಗಳನ್ನು ಒದಗಿಸುವ ಕಾಮಗಾರಿ. **ಅಂದಾಜು ವೆಚ್ಚ (ಜಿ.ಎಸ್.ಟಿ ಸಹಿತ) ರೂ.ಗಳಲ್ಲಿ:** 6,00,000.00, **ಪ್ರವರ್ಗ:** CAT-II(A).

ಸದರಿ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ಗೆ ಹೈಪರ್‌ಲಿಂಕ್ **"E Procurement KPTCL"** ನಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ:16.01.2026** ರಂದು ಅಥವಾ ತದ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು.

ಸಹಿ/– ಮುಖ್ಯ ಇಂಜಿನಿಯರ್(ವಿ),
ಪ್ರಸರಣ (ಕಾರ್ಯಾಚರಣೆ) ವಲಯ, ಕವಿಪ್ರನಿನಿ, ಆನಂದ್‌ರಾವ್ ವೃತ್ತ, ಬೆಂಗಳೂರು–560009.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಎತ್ತಿನಹೊಳೆ ಯೋಜನಾ ವಿಭಾಗ, ನಂ. 4, ಮಧುಗಿರಿ,
ತುಮಕೂರು ಜಿಲ್ಲೆ – 572 132, ದೂರವಾಣಿ : 08137–282112
ಇ–ಮೇಲ್ : eeyetmadhugiri4@gmail.com

ಸಂಖ್ಯೆ : ಕಾ.ಇಂ./ವಿ.ಜ.ನಿ.ನಿ./ಎ.ಹೊ.ಯೋ./ಮ/ವಿ.04/ಟೆ.ಅ.–10/2025–26
ದಿನಾಂಕ : 12–01–2026

ಟೆಂಡರ್ ಪ್ರಕಟಣೆ

(ಕೆ.ಪಿ.ಪಿ. ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನಲ್ಲಿ **ಮಧುಗಿರಿ ವಿಭಾಗ ವ್ಯಾಪ್ತಿಯಲ್ಲಿ** **Construction of Protection Wall to the Farmer Lands in SY. No. 56 and 54 of Kammanakote Village, Kasaba Hobli, Madhugiri Taluk, (IND No. - 434) (Call-2) ಕಾಮಗಾರಿಯ ರೂ. 148.41 ಲಕ್ಷಗಳಿಗೆ** ಟೆಂಡರ್ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಗಳಿಗೆ Percentage Tender ಮೂಲಕ ಅರ್ಹ ಬಿಡ್‌ದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ **http://www.kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ : 14–01–2026 ರಿಂದ 21–01–2026 ರ ಸಂಜೆ 5.30 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.**

ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ. ಮೊತ್ತ, ಗುತ್ತಿಗೆದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು http://www.kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ : 19–01–2026 ರ ಸಂಜೆ 3.00 ಗಂಟೆಯವರೆಗೆ ಸಂಪರ್ಕಿಸಬಹುದು, ಹಾಗೂ ಸ್ವೀಕೃತ ಟೆಂಡರ್‌ಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ದಿನಾಂಕ : 23–01–2026 ರ ಬೆಳಿಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ವಿ.ಜ.ನಿ.ನಿ., ಎತ್ತಿನಹೊಳೆ ಯೋಜನಾ ವಿಭಾಗ. ನಂ. 04. ಮಧುಗಿರಿರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಕೆಳ ಸಹಿದಾರರು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ, 04
ವಿ.ಜ.ನಿ.ನಿ, ಮಧುಗಿರಿ.

ಡಿಐಪಿಆರ್/ತುಮಕೂರು/68/ಮಣಿಪಾಲ್/2025–26

ಕರ್ನಾಟಕ ಸರ್ಕಾರ

ಪಟ್ಟಣ ಪಂಚಾಯತ ಕಾರ್ಯಾಲಯ, ನಾಲತವಾಡ

ಕ್ರ.ಸಂ:ಪ.ಪಂ.ನಾ/ಎಸ್.ಎಫ್.ಸಿ/ವಿಶೇಷ/2025–26 ದಿನಾಂಕ:14.01.2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಯಾವತ್ತು ಗುತ್ತಿಗೆದಾರರಿಂದ 2024–25 ನೇ ಸಾಲಿನ ಎಸ್. ಎಫ್. ಸಿ ವಿಶೇಷ ಅನುದಾನದಡಿ ಪಟ್ಟಣದ ಅಭಿವೃದ್ಧಿ ಕುರಿತು. ಇ–ಪ್ರೋಕ್ಯೂರಮೆಂಟ್ ಮುಖಾಂತರ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ. ಡಬ್ಲ್ಯೂ –4 ರ ನಿಬಂಧನೆಗೆ ಒಳಪಟ್ಟು ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಕಾರಣ ಇಚ್ಛೆಯುಳ್ಳ ಅರ್ಹದರ್ಜೆಯ ಗುತ್ತಿಗೆದಾರರು ತಮ್ಮ ಟೆಂಡರಗಳನ್ನು ಇ– ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸಬುದಾಗಿದೆ.ಕಾಮಗಾರಿ ಕುರಿತು ಹೆಚ್ಚಿನ ಮಾಹಿತಿಗಾಗಿ ಆನಲೈನ್ ಮೂಲಕ ವೆಬ್ ಸೈಟ್ (https://kppp.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಪಟ್ಟಣ ಪಂಚಾಯತ ಕಾರ್ಯಾಲಯದ ತಾಂತ್ರಿಕ ವಿಭಾಗದಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಇಂಡೆಂಟ್ ನಂ: **DMA/2025-26/BR/WORK_INDENT46883** 01. ಆನ್‌ಲೈನ್ ಮೂಲಕ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 27.01.2026 ಸಾಯಂಕಾಲ 5.00ಗಂಟೆಗೆ. 02. ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ :28.01.2026 ಸಾಯಂಕಾಲ 5.00 ಗಂಟೆಗೆ. 03.ಆರ್ಥಿಕ ದಾಖಲಾತಿಗಳನ್ನು ತೆರೆಯುವ ದಿನಾಂಕ : 29.01.2026 ಅಪರಾಹ್ನ 12.00 ಗಂಟೆಗೆ. 04. ಈ ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವದು. .

ಸಹಿ/–	ಸಹಿ/–	ಸಹಿ/–
ಮುಖ್ಯಾಧಿಕಾರಿಗಳು	ಉಪಾಧ್ಯಕ್ಷರು	ಅಧ್ಯಕ್ಷರು
ಪಟ್ಟಣ ಪಂಚಾಯತ	ಪಟ್ಟಣ ಪಂಚಾಯತ	ಪಟ್ಟಣ ಪಂಚಾಯತ
ನಾಲತವಾಡ	ನಾಲತವಾಡ	ನಾಲತವಾಡ

ವಾಸಾಸಂಇ/ವಿಜಯಪುರ/621/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಾಗಲಕೋಟೆ.

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ: 126, ನವನಗರ, ಬಾಗಲಕೋಟೆ
ದೂರವಾಣಿ: 08354-235042 ಇ–ಮೇಲ್: bgkeezpe@yahoo.com ಫ್ಯಾಕ್ಸ್: 08354-235043

ಸಂ: ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–3/ಸಿ.ಎಮ್.ಐ.ಡಿ.ಪಿ/ಟೆಂಡರ್/2025–26/4970
ದಿನಾಂಕ: 09–01–2026

ಅಲ್ಪಾವಧಿ ಇ-ಪ್ರೋಕ್ಯೂರ್‌ಮೆಂಟ್ ಏಕ & ಲಕೋಟೆ ಟೆಂಡರ್ ಪ್ರಕಟಣೆ ಕೆ.ಡಬ್ಲ್ಯೂ-1, 2 & 3 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಸಿ.ಎಮ್.ಐ.ಡಿ.ಪಿ) ಅಭಿವೃದ್ಧಿ ಕಾಮಗಾರಿಗಳಿಗೆ ಯೋಜನೆ ಅಡಿಯಲ್ಲಿ **ಜಮಖಂಡಿ, ಬಾದಾಮಿ ಹಾಗೂ ಬೀಳಗಿ ವಿಧಾನಸಭಾ ಕ್ಷೇತ್ರಕ್ಕೆ ಹಂಚಿಕೆಯಾದ ರೂ. 50,00 ಕೋಟಿ ಮೊತ್ತದ ಹಾಗೂ (ಜಮಖಂಡಿ ವಿಧಾನಸಭಾ ಕ್ಷೇತ್ರಕ್ಕೆ ರೂ. 25.00 ಕೋಟಿ)** ಯೋಜನೆ ಅಡಿ ಆಯ್ಕೆಯಾದ ಬಾಗಲಕೋಟೆ ಜಿಲ್ಲೆ ಬಾದಾಮಿ, ಬೀಳಗಿ ಹಾಗೂ ಜಮಖಂಡಿ ವಿಧಾನಸಭಾ ಮತಕ್ಷೇತ್ರದ ಗ್ರಾಮೀಣ ರಸ್ತೆ, ಸೇತುವ ಕಾಮಗಾರಿಗಳಿಗೆ **Standard Tender Document KW-1, 2 & 3** ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಏಕ & ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಇಂಡೆಂಟ್ ನಂ: 22475, 22524, 22515, 22520, 22768, 22511, 22509, 22516 ಪ್ರವರ್ಗ–2 (ಎ) ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 22472, 22474, 22476, 22623

ಪ್ರವರ್ಗ–1 ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 22521

ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ 22473, 22512, 22508 ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ **(ರೂ.20.00 ದಿಂದ 100.00 ಲಕ್ಷಗಳ ಮಿತಿಗೊಳಪಟ್ಟು)**, ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ ಮತ್ತು ಸಮಯ: 28.01.2026 ರ ಸಾಯಂಕಾಲ 5.30 ಗಂಟೆವರೆಗೆ.**

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ ಮತ್ತು ಸಮಯ: 30.01.2026 ರಂದು ಮುಂಜಾನೆ 11.00 ಗಂಟೆಯ ನಂತರ.**

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ ಅನುಮೋದನೆ ನಂತರ.

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ

ವಾ.ಸಾ.ಇ./ಬಾಗಲಕೋಟ/511/2025–26/ದೇಶಪಾಂಡೆಪಬ್ಲಿಸಿಟಿ

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ,

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು–570001, ದೂರವಾಣಿ ಸಂಖ್ಯೆ: +91-0821-2520512 (Off), 2520803 (Fax),
Email- mmcrimysore@yahoo.com, website: www.mmcri.karnataka.gov.in

ಸಂಖ್ಯೆ : ಉಪಕರಣ/19/2025–26 ದಿನಾಂಕ: 13.01.2026

ಟೆಂಡರ್ ಅಧಿಸೂಚನೆ

ವಿಷಯ: ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಕೆ.ಆರ್. ಆಸ್ಪತ್ರೆಯ ರೇಡಿಯೋಥೆರಪಿ ವಿಭಾಗಕ್ಕೆ ಅವಶ್ಯವಿರುವ Secondary Standard Dosimeter ಉಪಕರಣವನ್ನು ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಕೆ.ಆರ್ ಆಸ್ಪತ್ರೆಯ ರೇಡಿಯೋಥೆರಪಿ ವಿಭಾಗಕ್ಕೆ ಅವಶ್ಯವಿರುವ Secondary Standard Dosimeter ಉಪಕರಣವನ್ನು ಸರಬರಾಜು ಮಾಡಲು ವಿದ್ಯುನ್ಮಾನ ವೇದಿಕೆ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://kppp.karnataka.gov.in** ಮೂಲಕ **ದಿನಾಂಕ: 14.01.2026** ರಿಂದ ಪಡೆಯಬಹುದಾಗಿದ್ದು, **ದಿನಾಂಕ: 13.02.2026** ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್
ಮೈಸೂರು ವೈದ್ಯಕೀಯ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಮೈಸೂರು

ವಾಸಾಸಂಇ/ಮೈಸೂರು/ಶಿರಡಿ ಸಾಯಿ/1514/2025–26

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಪರೀಕ್ಷಾ ವಿಭಾಗ, ಜ್ಞಾನ ಗಂಗಾ, ಕಲಬುರಗಿ–585 106, ಕರ್ನಾಟಕ, ಭಾರತ
ದೂ. ಸಂ.: 08472-263203 ಫ್ಯಾಕ್ಸ್: 08472-263207, ಇ–ಮೇಲ್: regegug@rediffmail.com

ಸಂಖ್ಯೆ ಗುವಿಕ/ಪರೀಕ್ಷಾ–ಉಗ್ರಾಣ/166C/ಉತ್ತರ ಪತ್ರಿಕೆ/2025–26/1978 ದಿನಾಂಕ: 14.01.2026

ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ)

1) ಕೆಲಸದ ಹೆಸರು: **ವಿವಿಧ ಉತ್ತರ ಪತ್ರಿಕೆಗಳ ಮುದ್ರಣ ಹಾಗೂ ಸರಬರಾಜು ಕುರಿತು,** 2) ಅಂತರಜಾಲ ತಾಣದ ವಿಳಾಸ http://www.eproc.karnataka.gov.in, 3) ಟೆಂಡರ ಪ್ರಕಟಣೆ ದಿನಾಂಕ: 12.01.2026, 4) ಇ.ಎಂ.ಡಿ. ಮೊತ್ತ 1.45.000/–, 5) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 10.02.2026 11.30 AM, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 12.02.2026 11.30 AM, 8) ಹಣಕಾಸು ಬಿಡ್ ತೆರೆಯುವ ದಿನಾಂಕ : 13.02.2026 11.30 AM, 9) ಮಾಹಿತಿ ಹಾಗೂ ಸಂಪರ್ಕದ ವಿಳಾಸ : ಕುಲಸಚಿವರು (ಮೌಲ್ಯಮಾಪನ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ Mobile Number:- 9380569141, 10) ಅವಧಿ: 3 ವರ್ಷ, 11) ಅಂದಾಜು ಮೊತ್ತ: 95.00,000. 12) ಬಿಡ್ಡಗಳ ತೆರೆಯುವ ಸ್ಥಳ : ಕುಲಸಚಿವರು (ಮೌಲ್ಯಮಾಪನ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಸಹಿ/– ಕುಲಸಚಿವರು (ಮೌಲ್ಯಮಾಪನ)
ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/977/ಕೆ.ಎಸ್.ಎಂ.ಸಿ.&ಎ/2025–26

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಮಂಡ್ಯ– 571401
(Autonomous Medical Institution, Government of Karnataka)
Fax & Phone No: 08232-231001, 222086, E-mail: mimsmandya@gmail.com),
Website: www.mimsmandya.org

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ (ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹಾಗೂ ಬೋಧಕ ಆಸ್ಪತ್ರೆಗೆ ಅವಶ್ಯವಿರುವ CCTV Camera ಗಳನ್ನು ಪಡೆಯಲು ಉತ್ಪಾದಕರು/ನೊಂದಾಯಿಸಲ್ಪಟ್ಟ ಅರ್ಹ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್ ಅಂದಾಜು ಮೊತ್ತ ರೂ.ಗಳಲ್ಲಿ	ಇಎಂಡಿ ಮೊತ್ತ ರೂ.
1	No. MIMS/Sup/CCTV Camera/e-Tender/19/2025–26 Date: 12.01.2026	ಮಿಮ್ಸ್ ಸಂಸ್ಥೆಯ ಹಾಗೂ ಬೋಧಕ ಆಸ್ಪತ್ರೆಗೆ ಅವಶ್ಯವಿರುವ CCTV Camera ಗಳನ್ನು ಸರಬರಾಜು ಪಡೆಯಲು ಇ–ಟೆಂಡರ್ ಆಹ್ವಾನಿಸುವ ಬಗ್ಗೆ.	ರೂ.15.00 ಲಕ್ಷಗಳು (ರೂ.ಹದಿನೈದು ಲಕ್ಷಗಳು ಮಾತ್ರ)	2.5%

ಟೆಂಡರ್‌ನ್ನು ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಂದಿಗೆ ಸಲ್ಲಿಸುವುದು ಇತರೆ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ **http.//kppp.karnataka.gov.in** ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ

ವಾಸಾಸಂಇ/ಮಂಡ್ಯ/ಶಿರಡಿಸಾಯಿ/712/2025–26

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ

No.EE/MID/VJP/AE-4/4702/TND/2025-26/3851 Date:13.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ “ಇ–ಪ್ರೋಕ್ಯುರಮೆಂಟ್” ಮುಖಾಂತರ ಟೆಂಡರ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು :– 1)ವಿಜಯಪುರ ಜಿಲ್ಲೆ, ಮುದ್ದೇಬಿಹಾಳ ತಾಲ್ಲೂಕಿನ ಲಿಂಗದಹಳ್ಳಿ–ಹಂದ್ರಾಳ ಗ್ರಾಮದ ಮಧ್ಯ ಹರಿಯುವ ಹಳ್ಳಕ್ಕೆ ಬಿ.ಸಿ.ಬಿ. ನಿರ್ಮಾಣ ಹಾಗೂ ಜಂಬಲದಿನ್ನಿ ಗ್ರಾಮದ ಹತ್ತಿರ ಹರಿಯುವ ಹಳ್ಳಕ್ಕೆ ಸೈಟ್–1 & 2 ಬಂದಾರ ನಿರ್ಮಾಣ ಕಾಮಗಾರಿ, **ಟೆಂಡರಿಗಿಟ್ಟ ಮೊತ್ತ ರೂ.795.72ಲಕ್ಷ,** ಇ.ಎಂ.ಡಿ. ಮೊತ್ತ **ರೂ.11,94,000–00, 2)**ವಿಜಯಪುರ ಜಿಲ್ಲೆ, ಮುದ್ದೇಬಿಹಾಳ ತಾಲ್ಲೂಕಿನ ಗಾಳಪುಜಿ ಗ್ರಾಮದ ಹತ್ತಿರ ಹರಿಯುವ ಹಳ್ಳಕ್ಕೆ ಬಿ.ಸಿ.ಬಿ. ನಿರ್ಮಾಣ ಹಾಗೂ ಆಲೂರ–ಹುನಕುಂಟಿ ಮಧ್ಯ ಇರುವ ಹಳ್ಳಕ್ಕೆ ಬಿ.ಸಿ.ಬಿ. ನಿರ್ಮಾಣ ಕಾಮಗಾರಿ, **ಟೆಂಡರಿಗಿಟ್ಟ ಮೊತ್ತ ರೂ.799.70ಲಕ್ಷ,** ಇ.ಎಂ.ಡಿ. ಮೊತ್ತ **ರೂ.12,00,000–00, 3)** Construction of Bandhara(Site-1) across nala near Chabanur village in Talikoti taluka of Vijayapur District, **ಟೆಂಡರಿಗಿಟ್ಟ ಮೊತ್ತ ರೂ.185.81ಲಕ್ಷ,** ಇ.ಎಂ.ಡಿ. ಮೊತ್ತ **ರೂ.2,79,000–00, ಮೇಲಿನ ಕ್ರಮ ಸಂಖ್ಯೆ: 1 ಮತ್ತು 2 ರ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು(11) ತಿಂಗಳುಗಳು ಹಾಗೂ ಕ್ರಮ ಸಂಖ್ಯೆ: 3 ರ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಸಹಿತ ಒಂಭತ್ತು(9) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ “ಇ–ಪ್ರೋಕ್ಯುರಮೆಂಟ್” ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ:**13.01.2026** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) “ಇ–ಪ್ರೋಕ್ಯುರಮೆಂಟ್” ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ:**23.01.2026** ರ 17–30 ಘಂಟೆವರೆಗೆ ಸ್ವೀಕರಿಸಲಾಗುವದು. ದಿನಾಂಕ:**19.01.2026** ರಂದು ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ–ಬಿಡ್ ಸಭೆಯನ್ನು ಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ:**22.01.2026** ರ 17–30 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ ಅಥವಾ “ಇ–ಪ್ರೋಕ್ಯುರಮೆಂಟ್” ಹೆಲ್ಪ ಡೆಸ್ಕನಿಂದ(ಫೋನಃ–080–25501216 ಮತ್ತು 080–25501227) ಪಡೆಯಬಹುದು ಹಾಗೂ ಟೆಂಡರಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ. ಮತ್ತು ಅಂ.ಅ. ಇಲಾಖೆ, ವಿಭಾಗ ವಿಜಯಪುರ

ವಾಸಾಸಂಇ/ವಿಜಯಪುರ/616/ಕೆಎಸ್‌ಎಂಸಿಎ/2025–26

ನಾಡಿನ ಜನತೆಗೆ
ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು

ಅಭಿನಂದನೆಗಳು

ಕರ್ನಾಟಕ ರಾಜ್ಯ ಹೋಟೆಲುಗಳ ಸಂಘ (ರಿ) ಬೆಂಗಳೂರು

ಗೌರವಾಧ್ಯಕ್ಷರಾಗಿ ಆಯ್ಕೆಯಾಗಿರುವ **ಶ್ರೀ ಎಂ. ರಾಜೇಂದ್ರರವರಿಗೆ**

ಹೃತ್ಪೂರ್ವಕ ಅಭಿನಂದನೆಗಳು

8 ವರ್ಷ ಮೈಸೂರು ಹೋಟೆಲ್ ಮಾಲಿಕರ ಸಂಘದ ಅಧ್ಯಕ್ಷರಾಗಿ ಮತ್ತು 4 ವರ್ಷ ಕರ್ನಾಟಕ ರಾಜ್ಯ ಹೋಟೆಲ್ ಗಳ ಸಂಘದ ಅಧ್ಯಕ್ಷರಾಗಿ, 75 ವರ್ಷ ತುಂಬಿದ ರಾಜ್ಯ ಸಂಘವನ್ನು 30 ಜಿಲ್ಲೆಗಳ ಪ್ರವಾಸಮಾಡಿ ಎಲ್ಲಾ ಜಿಲ್ಲಾ ಸಂಘಗಳ ಅಧ್ಯಕ್ಷರು ಪದಾದಿಕಾರಿಗಳನ್ನು ಹುರಿದುಂಬಿಸಿ ಅತ್ಯಂತ ಎತ್ತರಕ್ಕೆ ಕೊಂಡ್ಯೆದ, ಸಂಘದ ಇತಿಹಾಸದಲ್ಲೆ ಮೈಲಿಗಲ್ಲಾಗುವಂತೆ ಆತಿಥ್ಯರತ್ನ ಮತ್ತು ಹುಬ್ಬಳ್ಳಿಯಲ್ಲಿ ನಡೆದ 16ನೇ ರಾಜ್ಯ ಸಮ್ಮೇಳನಕ್ಕೆ ಮುಖ್ಯಮಂತ್ರಿಗಳು ಮತ್ತು ಮಾಜಿ ಮುಖ್ಯಮಂತ್ರಿಗಳನ್ನು ಕರೆಸಿ ಸಮ್ಮೇಳನವನ್ನು ಅದ್ದೂರಿಯಾಗಿ ಯಶಸ್ವಿಯಾಗಿ ನಡೆಸಿಕೊಟ್ಟಂತಹ ಹಾಗೂ ಹಲವಾರು ಇಲಾಖೆಗಳಲ್ಲಿ ಸಮಸ್ಯೆಗಳನ್ನು ಇತ್ಯರ್ಥ ಪಡಿಸಿದ ರಾಜ್ಯ ಸಂಘಕ್ಕೆ ಹೆಚ್ಚು ಶಕ್ತಿ ಗೌರವ ತಂದುಕೊಟ್ಟಂತಹ

ಶ್ರೀ ಎಂ. ರಾಜೇಂದ್ರರವರನ್ನು

ಪುನಃ ಗೌರವಾಧ್ಯಕ್ಷರಾಗಿ ಆಯ್ಕೆ ಮಾಡಿರುವುದಕ್ಕೆ ಹೃದಯಪೂರ್ವಕ ಅಭಿನಂದನೆಗಳು

ಶುಭಾಶಯ ಕೋರುವವರು



ಶ್ರೀ ಕೆ. ಶ್ಯಾಮರಾಜು
ಅಧ್ಯಕ್ಷರು, ದಕ್ಷಿಣ ಭಾರತ ಹೋಟೆಲ್‌ಗಳ ಸಂಘ

ಶ್ರೀ ಜಿ.ಕೆ. ಶೆಟ್ಟಿ
ಅಧ್ಯಕ್ಷರು, ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘ

ಶ್ರೀ ಸಿ. ನಾರಾಯಣಗೌಡ
ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ

ಶ್ರೀ ರವಿ ಶಾಸ್ತ್ರಿ
ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘ

ಶ್ರೀ ಪ್ರಕಾಶ್ ಶೆಟ್ಟಿ ಕೆ.
ನಿಕಟಪೂರ್ವ ಅಧ್ಯಕ್ಷರು, ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘ

ಶ್ರೀ ಬಿ. ಚಂದ್ರಶೇಖರ್ ಹೆಬ್ಬಾರ್
ಗೌರವ ಅಧ್ಯಕ್ಷರು, ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘ

ವಿಶ್ವವಾಣಿ

ಸಂಪಾದಕೀಯ

ಇರಾನ್ ಬಿಕ್ಕಟ್ಟಿಂದ ಅಮೆರಿಕಕ್ಕೇನು ಲಾಭ?

ಇರಾನ್‌ನಲ್ಲಿ ಅಲ್ಲಿನ ಆರ್ಥಿಕ ದುಸ್ಥಿತಿಯ ವಿರುದ್ಧ ಶುರುವಾದ ಆಕ್ರೋಶ, ಮೌಲ್ವಿಗಳೇ ದೇಶ ಬಿಟ್ಟು ತೊಲಗಿ ಎನ್ನುವ ದನಿಯಾಗಿ ಬದಲಾಗಿದೆ. ಬುಧವಾರ ಬೆಳಗ್ಗೆ ಹೊತ್ತಿಗೆ ಸಾವಿನ ಸಂಖ್ಯೆ 2571 ದಾಟಿದೆ ಎಂದು ವರದಿಗಳಾಗಿವೆ. ಈ ಪ್ರತಿಭಟನೆಗೆ ಅಮೆರಿಕದ ನೇರ ಬೆಂಬಲವಿದೆ ಎನ್ನುವುದು ಜಗಜ್ಜಾಹೀರಾಗಿದೆ. ಸ್ವತಃ ಟ್ರಂಪ್ ಹೋರಾಟ ನಿಲ್ಲಿಸಬೇಡಿ ಎಂದು ಜನರಿಗೆ ಕರೆ ನೀಡಿದ್ದಾರೆ. ಇರಾನ್‌ನಲ್ಲಿ ಧಾರ್ಮಿಕ ನಾಯಕ ಆಯತೊಲ್ಲಾ ಖಮೇನಿಯೇ ಸರ್ವೋಚ್ಚ ನಾಯಕ. ಉಳಿದೆಲ್ಲ ಸರಕಾರಿ ಸ್ಥಾನಗಳೆಲ್ಲ ಹೆಸರಿಗಷ್ಟೇ. ಮತಾಂಧತೆಯನ್ನು ಇಷ್ಟಪಡುವ ವ್ಯಕ್ತಿಗಳಿಗೆ ಅಲ್ಲಿನ ಪರಿಸ್ಥಿತಿ ಒಗ್ಗಬಹುದೇನೋ. ಆದರೆ ಖಮೇನಿಯ ನಾಯಕತ್ವ ಸ್ವಾತಂತ್ರ್ಯಪ್ರಿಯ ಧಾರ್ಮಿಕ ಮನಸ್ಸುಗಳಿಗೆ ಬಹಳ ಕಷ್ಟಕರವಾಗಿ ಪರಿಣಮಿಸಿದೆ. ನನಗೆ ಧರ್ಮ ಬೇಕು, ದೇವರು ಬೇಕು, ಅದರ ಸಂಪ್ರದಾಯದ ಚೌಕಟ್ಟುಗಳು, ಕರ್ಮಠತನ ಬೇಡ ಎನ್ನುವವರಿಗೆ ಬದುಕು ದುಸ್ತರವಾಗಿದೆ. ಇಂತಹ ಹೊತ್ತಿನಲ್ಲಿ ಅಮೆರಿಕ ಇರಾನ್‌ನಲ್ಲಿ ಪ್ರತಿಭಟನೆಗೆ ಕುಮ್ಮಕ್ಕು ನೀಡುತ್ತಿರುವುದು ಈ ಸ್ವಾತಂತ್ರ್ಯಪ್ರಿಯ ಮನಸ್ಸುಗಳಿಗೆ ಸಂತಸವನ್ನು ಒದಗಿಸಿದೆ. ಆದರೆ ಅಮೆರಿಕ ಯಾವುದನ್ನೂ ತನ್ನ ಹಿತಾಸಕ್ತಿ ಇಲ್ಲದೇ ಮಾಡುವುದಿಲ್ಲ ಎನ್ನುವುದು ಬಹುತೇಕರಿಗೆ ಗೊತ್ತಿರುವ ಸತ್ಯ. ಇದುವರೆಗೆ ಇರಾನ್ ಅಮೆರಿಕಕ್ಕೆ ತಲೆಕೆಡಿಸಿಕೊಳ್ಳದೇ ಎಲ್ಲ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದೆ. ಇದು ಹಿಂದಿನಿಂದಲೂ ಅಮೆರಿಕಕ್ಕೆ ಬಿಸಿತುಪ್ಪವೇ ಆಗಿದೆ. ಅಮೆರಿಕ ಎಲ್ಲ ರೀತಿಯ ಆರ್ಥಿಕ ನಿರ್ಬಂಧ ಹೇರಿ, ಬದುಕೇ ದುಸ್ತರವಾದರೂ ಇರಾನ್ ನಾಯಕರು ಅಮೆರಿಕಕ್ಕೆ ತಲೆಕೆಡಿಸಿಕೊಂಡಿಲ್ಲ. ಇಂತಹ ಹೊತ್ತಿನಲ್ಲಿ ಅಮೆರಿಕ ಇರಾನ್ ಮೇಲೆ ತೆಗೆದುಕೊಳ್ಳುವ ಯಾವುದೇ ಕ್ರಮವನ್ನು ಇರಾನ್ ಜನತೆಯ ಹಿತಕ್ಕಾಗಿ ಎಂದು ಪರಿಗಣಿಸಲು ಸಾಧ್ಯವೇ ಇಲ್ಲ. ಆದರೆ ಇದರಿಂದ ಪರೋಕ್ಷವಾಗಿ ಅಲ್ಲಿ ಸ್ವಾತಂತ್ರ್ಯಪ್ರಿಯರಿಗೆ ನೆರವಾಗಲಿದೆ ಎಂದು ಮಾತ್ರ ಹೇಳಬಹುದು.

ಸೊಂಪಾದಕೀಯ

ಗುಂಡಿ ಅಗೆತ

ನಮ್ಮ ಸಮಾಜದಲ್ಲಿ ಜಾತಿ ಅನ್ನೋದು ಕೆಲವು ಜನರಿಗೆ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬುದರ ಬಗ್ಗೆ ಹೊಸದಾಗಿ ಏನೂ ಹೇಳಬೇಕಾಗಿಲ್ಲ. ಆದರೆ, ಪ್ರಾಣ ಬಿಟ್ಟೇವು, ಜಾತಿ ಬಿಡೆವು ಅನ್ನೋ ಕೆಲವರು, ಸಾವಿನ ವಿಷಯದಲ್ಲೂ ಸಣ್ಣತನ ತೋರಿರುವ ಇತ್ತೀಚಿನ ಎರಡು ಉದಾ ಹರಣೆಗಳನ್ನು ನೋಡಿದಾಗ ಮತ್ತೆ ಮತ್ತೆ ಜಾತಿ ಭೂತ, ಮೂಢನಂಬಿಕೆಗಳ ಭೂತ ನೆನಪಾಗೋದು ಸಹಜ. ಊರೊಂದರಲ್ಲಿ ಹೆಂಗಸೊಬ್ಬರು ಸತ್ತಾಗ, ಆಕೆಯ ಹೆಣ್ಣುಮಕ್ಕಳು ಬೇರೆ ಜಾತಿಯವರನ್ನು ಮದುವೆ ಆಗಿದ್ದಾರೆ ಅನ್ನೋ ಕಾರಣಕ್ಕೆ ಸಂಬಂಧಿಕರು ಯಾರೂ ತಿರುಗಿ ನೋಡಲಿಲ್ಲವಂತೆ. ಕೊನೆಗೆ, ಗ್ರಾಮಸ್ಥರೇ ಮುಂದೆ ನಿಂತು ಅಂತಿಮ ಕಾರ್ಯ ಮಾಡಿದ್ದಾರೆ. ಹಾಗಾಗಿ ನಿಜವಾದ ಸಂಬಂಧಿಕರು ಯಾರು ಅನ್ನೋ ಪ್ರಶ್ನೆ ಇಂಥ ಸಂದರ್ಭದಲ್ಲಿ ಸಹಜ. ಅದಕ್ಕೆ ಉತ್ತರವೂ ಸುಲಭ. ಇನ್ನೊಂದು ಅಮಾನವೀಯ ಘಟನೆಯಲ್ಲಿ ಜನ ತಮ್ಮ ಮೂಢನಂಬಿಕೆಗಳನ್ನು ಯಾವ ಲೆವೆಲ್ಲಿಗೆ ಬೇಕಾದ್ರೂ ತಗೊಂಡ್ ಹೋಗ್ತಾರೆ ಅನ್ನೋದು ಪ್ರೂವ್ ಆಗಿದೆ. ತೊನ್ನು ಸಮಸ್ಯೆ ಇದ್ದ ಹೆಂಗಸೊಬ್ಬರು ಸತ್ತು, ಅವರನ್ನು ಊರಲ್ಲಿ ಹೂಳಲಾಗಿತ್ತು. ಆದರೆ ಆ ಊರಿನ ಸುತ್ತಮುತ್ತ ಮಳೆ ಬಂದರೂ, ಆ ಊರಲ್ಲಿ ಮಾತ್ರ ಮಳೆ ಬಾರದೇ ಇದ್ದಾಗ, ಸೋ ಕಾಲ್ಡ್ ನಾಗರೀಕ ಸಮಾಜದ ಜನ, ತೊನ್ನು ಬಂದವರನ್ನು ಸುಟ್ಟು ಹಾಕಬೇಕು, ಅವರನ್ನು ಹೂತಿದ್ದಕ್ಕೇ ಊರಿಗೆ ಬರ ಬಂದಿದೆ ಎಂದು ಹೇಳಿ ಹೂತಿದ್ದ ಶವವನ್ನು ಹೊರತೆಗೆದು ಸುಟ್ಟು ಹಾಕಿದ್ದಾರೆ. ಇಂಥ ಮೂಢನಂಬಿಕೆಗಳನ್ನು ನೋಡಿಯೇ ದೊಡ್ಡವರು ಹುಟ್ಟು ಗುಣ ಸುಟ್ಟರೂ ಹೋಗಲ್ಲ ಅತ ಹೇಳಿದ್ದರೋ ಏನೋ. ಆದರೆ ಈ ಕೇಸಿನಲ್ಲಿ ಹುಟ್ಟುವ ಮಗುವಿನ ಕಾಲ್ಗುಣ ನೋಡುವವರು ಒಂದು ಕಡೆಯಾದರೆ ಸತ್ತವರ ಕಾಲ್ಗುಣವನ್ನೂ ಬಿಡದವರು ಇನ್ನೊಂದು ಕಡೆ. ಒಟ್ಟಿನಲ್ಲಿ, ಇವರ ಹುಟ್ಟುಗುಣ, ಸತ್ತರೂ ಹೋಗಲ್ಲ, ಹೂತಿದ್ದ ಹೆಣವನ್ನು ಹೊರತೆಗೆದು ಸುಟ್ಟರೂ ಹೋಗಲ್ಲ ಅಂತ ಜನ ಮಾತಾಡಿಕೊಳ್ಳುವ ಹಾಗಾಗಿರೋದಂತೂ ನಿಜ. ಈ ಮೂಲಕ ಮೂಢನಂಬಿಕೆಯ ಜನ, ಗಾದೆ ಮಾತನ್ನು ಅಕ್ಷರಶಃ ನಿಜ ಮಾಡಿದ್ದಾರೆ. ಬದುಕಿರುವವರನ್ನು ಬದುಕೋಕೆ ಬಿಡದ ಈ ಮೂಢನಂಬಿಕೆಗಳ ಸರದಾರರು, ಈಗ ಸತ್ತು ಹೆಣವಾದವರನ್ನೂ ಹೆಣಗಾಡಿಸುತ್ತಿರೋದು ಮಾತ್ರ ಸತ್ಯ.

ಸಂಪಾದಕರ ಸದ್ಯಶೋಧನೆ

ಎತ್ತರದಲ್ಲಿ ಹಾರುವ ಅದ್ಭುತ

ಏರ್ ಬಸ್ A350 ವಿಮಾನದ ಅದ್ಭುತ ಸಾಮರ್ಥ್ಯ ಮತ್ತು ಅದು 43,000 ಅಡಿ ಎತ್ತರದಲ್ಲಿ ಹಾರುವ ಹಿಂದಿನ ವಿಜ್ಞಾನ ಅತ್ಯಂತ ಆಸಕ್ತಿದಾಯಕ. ವಿಮಾನಯಾನ ಕ್ಷೇತ್ರದಲ್ಲಿ ಈ ಎತ್ತರವು ಕೇವಲ ಒಂದು ಅಂಕಿ-ಅಂಶವಲ್ಲ, ಅದು ಎಂಜಿನಿಯರಿಂಗ್ ಚಾತುರ್ಯದ ಪರಮಾವಧಿ. ಹೆಚ್ಚಿನ ಎತ್ತರದಲ್ಲಿ ಹಾರುವುದು ಕೇವಲ ಪ್ರದರ್ಶನವಲ್ಲ, ಅದು ದೀರ್ಘಾವಧಿಯ ವಿಮಾನಯಾನವನ್ನು ಸುಸ್ಥಿರಗೊಳಿಸುವ ಒಂದು ಅದೃಶ್ಯ ರಕ್ಷಾಕವಚ. ವಿಮಾನವೊಂದು ಎಷ್ಟು ಎತ್ತರಕ್ಕೆ ಏರಬಲ್ಲದು ಎಂಬುದು ಅದರ ವಿನ್ಯಾಸದ ದಕ್ಷತೆಯನ್ನು ಅಳೆಯುವ ಮಾಪಕ. ಏರ್ ಬಸ್ A350 ಈ ವಿಷಯದಲ್ಲಿ ಮುಂಚೂಣಿಯಲ್ಲಿರಲು ಕಾರಣಗಳೇನು? ಸಾಂಪ್ರದಾಯಿಕ ವಿಮಾನಗಳನ್ನು ಅಲ್ಯೂಮಿನಿಯಂನಿಂದ ತಯಾರಿಸಲಾಗುತ್ತಿತ್ತು. ಆದರೆ(CFRP)ನಂಥ ಸಂಯೋಜಿತ ವಸ್ತುಗಳಿಂದ ಮಾಡಲಾಗಿದೆ. ಲೋಹಕ್ಕಿಂತ ಹಗುರವಾಗಿದ್ದರೂ, ಇವು ಅಷ್ಟೇ ಬಲವಾಗಿರುತ್ತವೆ. ವಿಮಾನದ ತೂಕ ಕಡಿಮೆಯಾದಷ್ಟೂ, ತೆಳುವಾದ ಗಾಳಿ ಇರುವ ಎತ್ತರದ ಪ್ರದೇಶಗಳಲ್ಲಿ ವಿಮಾನವು ಸುಲಭವಾಗಿ ತೇಲಬಲ್ಲದು. ಅಲ್ಯೂಮಿನಿಯಂಗೆ ಹೋಲಿಸಿದರೆ ಇವುಗಳಿಗೆ ತುಕ್ಕು ಹಿಡಿಯುವುದಿಲ್ಲ, ಇದು ವಿಮಾನದ ದೀರ್ಘಾಯುಷ್ಯಕ್ಕೆ ಪೂರಕ. A350 ನ ರೆಕ್ಕೆಗಳು ಕೇವಲ ಲೋಹದ ಚಪ್ಪಡಿಗಳಲ್ಲ, ಅವು ಪ್ರಕೃತಿಯಿಂದ ಪ್ರೇರಿತವಾದ ಅದ್ಭುತ ರಚನೆಗಳು. ಇದರ ರೆಕ್ಕೆಗಳು ಉದ್ದವಾಗಿದ್ದು, ಹಾರಾಟದ ಸಮಯದಲ್ಲಿ ಗಾಳಿಯ ಪ್ರತಿರೋಧವನ್ನು (Drag) ಕಡಿಮೆ ಮಾಡುತ್ತವೆ. ಹಾರಾಟದ ಹಂತಕ್ಕೆ ತಕ್ಕಂತೆ ಈ ರೆಕ್ಕೆಗಳು ತಮ್ಮ ಆಕಾರವನ್ನು ಸ್ವಲ್ಪಮಟ್ಟಿಗೆ ಬದಲಿಸಿಕೊಳ್ಳಬಲ್ಲವು. ಎತ್ತರಕ್ಕೆ ಹೋದಂತೆ ಗಾಳಿಯ ಸಾಂದ್ರತೆ ಕಡಿಮೆಯಾಗುತ್ತದೆ. ಆಗ ಇಂಥ ಅತ್ಯಾಧುನಿಕ ವಿನ್ಯಾಸವು ಕಡಿಮೆ ಇಂಧನ ಬಳಸಿ ಹೆಚ್ಚಿನ ಲಿಫ್ಟ್ ನೀಡುತ್ತದೆ. ಯಾವುದೇ ವಿಮಾನದ ಯಶಸ್ಸು ಅದರ ಇಂಜಿನ್ ಮೇಲೆ ನಿಂತಿರುತ್ತದೆ. ಟ್ರೆಂಟ್ XWB ಇಂಜಿನ್‌ಗಳು ವಿಶೇಷವಾಗಿ ದೀರ್ಘಕಾಲದ ಹಾರಾಟಕ್ಕಾಗಿ ವಿನ್ಯಾಸಗೊಳಿಸಲಾಗಿವೆ. ಈ ಇಂಜಿನ್‌ಗಳು ಅತ್ಯಂತ ಹೆಚ್ಚಿನ ತಾಪಮಾನ ಮತ್ತು ಕಡಿಮೆ ಒತ್ತಡದ ಪರಿಸರದಲ್ಲೂ ಸ್ಥಿರವಾಗಿ ಕಾರ್ಯನಿರ್ವಹಿಸುತ್ತವೆ. ಎತ್ತರದ ಪ್ರದೇಶದಲ್ಲಿ ಗಾಳಿಯ ಪ್ರತಿರೋಧ ಕಡಿಮೆ ಇರುವುದರಿಂದ, ಈ ಇಂಜಿನ್‌ಗಳು ಕಡಿಮೆ ಇಂಧನ ಬಳಸಿ ಹೆಚ್ಚು ವೇಗವಾಗಿ ಚಲಿಸಲು ಸಹಾಯ ಮಾಡುತ್ತವೆ. 43,000 ಅಡಿ ಎತ್ತರದಲ್ಲಿ ಹಾರುವಾಗ ಪ್ರಯಾಣಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ದೊಡ್ಡ ಸವಾಲು. ಸಾಮಾನ್ಯವಾಗಿ ವಿಮಾನಗಳು ಎತ್ತರಕ್ಕೆ ಹೋದಂತೆ ಒಳಗಿನ ಗಾಳಿಯ ಒತ್ತಡ ಕಡಿಮೆಯಾಗಿ ಪ್ರಯಾಣಿಕರಿಗೆ ಆಯಾಸ, ತಲೆನೋವು ಕಾಣಿಸಿಕೊಳ್ಳಬಹುದು. ಆದರೆ A350 ಮತ್ತು ಬೋಯಿಂಗ್ 787 ನಂಥ ವಿಮಾನಗಳಲ್ಲಿ ವಿಮಾನವು 40,000 ಅಡಿಗಿಂತ ಎತ್ತರದಲ್ಲಿದ್ದರೂ, ಒಳಗೆ ಪ್ರಯಾಣಿಕರಿಗೆ ಸುಮಾರು 6,000 ಅಡಿ ಎತ್ತರದಲ್ಲಿರುವ ಅನುಭವವಾಗುತ್ತದೆ (ಸಾಮಾನ್ಯ ವಿಮಾನಗಳಲ್ಲಿ ಇದು 8,000 ಅಡಿ ಇರುತ್ತದೆ). ಕಾರ್ಬನ್ ಫೈಬರ್ ಬಳಸಿರುವುದರಿಂದ ಕ್ಯಾಬಿನ್‌ನಲ್ಲಿ ಹೆಚ್ಚಿನ ತೇವಾಂಶವನ್ನು ಕಾಪಾಡಿಕೊಳ್ಳಬಹುದು, ಇದರಿಂದ ಕಣ್ಣು ಮತ್ತು ಗಂಟಲು ಒಣಗುವ ಸಮಸ್ಯೆ ಕಡಿಮೆಯಾಗುತ್ತದೆ. ವಿಮಾನಯಾನ ಸಂಸ್ಥೆಗಳು ಯಾವಾಗಲೂ ಗರಿಷ್ಠ ಎತ್ತರದಲ್ಲೇ ಹಾರುವುದಿಲ್ಲ. ಆದರೆ ಆ ಸಾಮರ್ಥ್ಯ ಇರುವುದು ಏಕೆ ಮುಖ್ಯ? ಕೆಳಮಟ್ಟದ ಎತ್ತರದಲ್ಲಿ ಗುಡುಗು, ಮಿಂಚು ಮತ್ತು ಮೋಡಗಳ ಅಬ್ಬರವಿರುತ್ತದೆ. 43,000 ಅಡಿ ಎತ್ತರವು ವಿಮಾನಕ್ಕೆ ಈ ಹವಾಮಾನದ ಮೇಲೆ ಹಾರಲು ಅವಕಾಶ ನೀಡುತ್ತದೆ, ಇದರಿಂದ ಪ್ರಯಾಣವು ಸುಗಮವಾಗಿರುತ್ತದೆ. ಆಕಾಶದಲ್ಲೂ ಟ್ರಾಫಿಕ್ ಇರುತ್ತದೆ! ಕೆಳಮಟ್ಟದ ಎತ್ತರಗಳಲ್ಲಿ (30,000 - 36,000 ಅಡಿ) ಹೆಚ್ಚಿನ ವಿಮಾನಗಳು ಹಾರುತ್ತಿರುತ್ತವೆ. ಹೆಚ್ಚಿನ ಎತ್ತರಕ್ಕೆ ಹೋಗುವ ಸಾಮರ್ಥ್ಯವು ವಿಮಾನಕ್ಕೆ ಖಾಲಿ ಇರುವ ಮಾರ್ಗದಲ್ಲಿ ಹಾರಲು ಅನುವು ಮಾಡಿಕೊಡುತ್ತದೆ. ತೆಳುವಾದ ಗಾಳಿಯಲ್ಲಿ ಹಾರುವಾಗ ವಿಮಾನದ ವೇಗ ಹೆಚ್ಚಿರುತ್ತದೆ ಮತ್ತು ಇಂಧನ ವ್ಯಯ ಕಡಿಮೆಯಾಗುತ್ತದೆ. ಇದು ವಿಮಾನಯಾನ ಸಂಸ್ಥೆಗಳಿಗೆ ಕೋಟ್ಯಂತರ ರುಪಾಯಿ ಉಳಿತಾಯ ಮಾಡಿಕೊಡುತ್ತದೆ. ಒಂದು ವೇಳೆ ಕೆಳಮಟ್ಟದಲ್ಲಿ ಹವಾಮಾನ ಕೆಟ್ಟಿದ್ದರೆ ಅಥವಾ ಹಾದಿಯಲ್ಲಿ ಅಡೆತಡೆಗಳಿದ್ದರೆ, ಎತ್ತರಕ್ಕೆ ಏರುವ ಈ ಸಾಮರ್ಥ್ಯವೇ ವಿಮಾನವನ್ನು ಸುರಕ್ಷಿತವಾಗಿ ಗುರಿ ತಲುಪಿಸುತ್ತದೆ. ಏರ್ ಬಸ್ A350ನ ಈ ತಾಂತ್ರಿಕ ಶ್ರೇಷ್ಠತೆಯು ಆಧುನಿಕ ವಿಜ್ಞಾನವು ಪ್ರಕೃತಿಯ ನಿಯಮಗಳನ್ನು ಎಷ್ಟು ಅದ್ಭುತವಾಗಿ ಬಳಸಿಕೊಳ್ಳ ಬಹುದು ಎಂಬುದಕ್ಕೆ ಸಾಕ್ಷಿ. ಇದು ಕೇವಲ ಒಂದು ಯಂತ್ರವಲ್ಲ, ಇದು ಆಕಾಶದಲ್ಲಿ ಹಾರುವ ಇಂಜಿನಿಯರಿಂಗ್ ಕಾವ್ಯ.

ನಿಮ್ಮ ಬಲಗೈ ಸದಾ ನನ್ನ ತಲೆ ಮೇಲಿರಲಿ!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಕಾಲದ ವೇಗ ಎಂಥದ್ದು ಎಂಬುದು ಹಿಂತಿರುಗಿ ನೋಡಿದಾಗಷ್ಟೇ ಅರಿವಾಗುತ್ತದೆ. ನಾನು 'ವಿಶ್ವವಾಣಿ' ಎಂಬ ಅಕ್ಷರ ಜ್ಯೋತಿಯನ್ನು ನಾಡೋಜ ಪಾಟೀಲ ಪುಟ್ಟಪ್ಪ (ಪಾಪು) ಅವರಿಂದ ಪಡೆದು ಇಂದಿಗೆ ಸರಿಯಾಗಿ 10 ವರ್ಷಗಳು ತುಂಬುತ್ತಿವೆ. ಇದು ಕೇವಲ ಒಂದು ಪತ್ರಿಕೆಯ ಮಾಲೀಕತ್ವ ಬದಲಾವಣೆಯಷ್ಟೇ ಆಗಿರಲಿಲ್ಲ. ಬದಲಾಗಿ, ನನ್ನ ಪತ್ರಿಕೋದ್ಯಮ ಬದುಕಿನ ದೊಡ್ಡ ಸಾಹಸಕ್ಕೆ ಮುನ್ನುಡಿ ಬರೆದ ಅಪೂರ್ವ ದಿನ, ಕ್ಷಣವೂ ಆಗಿತ್ತು. ಹತ್ತು ವರ್ಷಗಳ ಹಿಂದೆ, ಇದೇ ದಿನದಂದು ನಾನು ಹೊತ್ತ ಜವಾಬ್ದಾರಿಯ ಭಾರ ಎಷ್ಟಿತ್ತು ಎಂಬುದು ಇಂದಿಗೂ ನನ್ನ ಭುಜಗಳಿಗಷ್ಟೇ ಗೊತ್ತು. ಅಂದು ಕಂಡ ಕನಸುಗಳು, ಇಟ್ಟ ಹೆಜ್ಜೆಗಳು ಮತ್ತು ಎದುರಿಸಿದ ಅಡೆತಡೆಗಳೇ ಇಂದು ನನ್ನನ್ನು ಮತ್ತು 'ವಿಶ್ವವಾಣಿ'ಯನ್ನು ಗಟ್ಟಿಗೊಳಿಸಿವೆ. ದಶಕದ ಈ ಪಯಣವನ್ನು 'ಸಿಂಹಾವಲೋಕನ' ಮಾಡಿಕೊಳ್ಳುವಾಗ, ಎದುರಾದ ಸವಾಲುಗಳು ಬೆಟ್ಟದಷ್ಟಿದ್ದರೂ, ಅದನ್ನು ಮೀರಿ ನಿಂತ ಛಲವೂ ಅಷ್ಟೇ ಎತ್ತರದ್ದಾಗಿತ್ತು ಎಂಬ ತೃಪ್ತಿ ನನಗಿದೆ. ಹನ್ನೊಂದು ವರ್ಷಗಳ ಹಿಂದೆ ಇದೇ ದಿನ ನನ್ನ ಎದೆಯಲ್ಲಿ ಒಂದು ಬಗೆಯ ಆತಂಕ ಮನೆ ಮಾಡಿತ್ತು, ಕೈಯಲ್ಲಿ ಅನಿಶ್ಚಿತತೆಯ ನಡುಕವಿತ್ತು. ಅದು ನನ್ನನ್ನು ಸುಮ್ಮನೆ ಕೂರಲು ಬಿಡಲಿಲ್ಲ. ಬೆನ್ನಿಗೆ ಕಟ್ಟಿಕೊಂಡ ಕೆಂಡದ ಮೂಟೆಯಂತೆ ಪತ್ರಿಕೋದ್ಯಮದ ಈ ಮಹಾ ಸಾಹಸಕ್ಕೆ ಅಂದು ಮುನ್ನುಡಿ ಬರೆದಿದ್ದೆ.

ಆ ಹಾದಿ ಹೂವಿನ ಹಾಸಿಗೆಯಾಗಿರಲಿಲ್ಲ. ಪ್ರತಿ ದಿನವೂ ಒಂದು ಹೋರಾಟ, ಪ್ರತಿ ಸಂಚಿಕೆಯೂ ಒಂದು ಸವಾಲು. ಅಂದು ಹೊತ್ತ ಜವಾಬ್ದಾರಿಯ ಭಾರಕ್ಕೆ ನನ್ನ ಭುಜಗಳು ಎಷ್ಟೋ ಬಾರಿ ಸೋತಿದ್ದವು, ಆದರೆ ಮನಸ್ಸು ಮಾತ್ರ ಸೋಲೊಪ್ಪಲು ತಯಾರಿರಲಿಲ್ಲ. 'ವಿಶ್ವವಾಣಿ' ಎಂಬ ಹೆಸರನ್ನು ಉಳಿಸುವುದಕ್ಕಿಂತ ಹೆಚ್ಚಾಗಿ, ಅದನ್ನು ಒಂದು ಒಳ್ಳೆಯ ಪತ್ರಿಕೆಯಾಗಿ ರೂಪಿಸಿ ಕನ್ನಡಿಗರ ಕೈಯಲ್ಲಿಡಬೇಕು ಎಂಬ ಹುಚ್ಚು ಹಠ ನನ್ನನ್ನು ನಿತ್ಯವೂ ನಿದ್ದೆ ಮಾಡದಂತೆ ಕಾಡಿತ್ತು. ಅಂದು ಕಂಡ ಕನಸುಗಳು ಇಂದು ನನಸಾಗಿ ಕಣ್ಣ ಮುಂದೆ ನಿಂತಾಗ, ಆ ಹಳೆಯ ಕೆಟ್ಟ ಕನಸುಗಳೆಲ್ಲ ಮಾಯವಾಗಿ ಮನಸ್ಸು ನಿರಾಳ.

ಹಿಂತಿರುಗಿ ನೋಡಿದಾಗ ಅಚ್ಚರಿಯಾಗುತ್ತದೆ. ಎದುರಾದ ಸವಾಲುಗಳು ಹಿಮಾಲಯದಷ್ಟಿದ್ದರೂ, ಅದನ್ನು ದಾಟುವ ಛಲವೂ ನನಗಿತ್ತು, ಈಗಲೂ ಇದೆ. ಅಡೆತಡೆಗಳನ್ನೇ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಸಾಗಿದ ಈ ಪಯಣದಲ್ಲಿ ಸೋಲಿಗಿಂತ ಗೆಲುವಿನ ರುಚಿಯೇ ಹೆಚ್ಚು ಆಪ್ತ. ಇಂದು 'ವಿಶ್ವವಾಣಿ' ಬೆಳೆದು ನಿಂತಿರುವ ರೀತಿಗೆ ಹತ್ತು ವರ್ಷಗಳ ಹಿಂದೆ ಇಟ್ಟ ಆ ಸಣ್ಣ ಹೆಜ್ಜೆಯೇ ಕಾರಣ. ಬದುಕು ಎಂದರೆ ಹೀಗೆ, ಇಲ್ಲಿ ಸಾಹಸ ಮಾಡದಿದ್ದರೆ ಸಾರ್ಥಕತೆ ಎಲ್ಲಿಂದ ಬರಬೇಕು? ಅಂದು ಹೊತ್ತ ಆ ಅಗ್ನಿಕುಂಡ ಇಂದಿಗೂ ಅಕ್ಷರ ಪ್ರೇರಣೆಯ ಅಗ್ನಿದಿವ್ಯವಾಗಿ ಬೆಳಗುತ್ತಿದೆ.

ಆ ದಿನಗಳಲ್ಲಿ ಪತ್ರಿಕೆಯ ಮಾಲೀಕತ್ವ ಅಂದ್ರೆ ಅದು ಬರೀ ಹಣದ ವ್ಯವಹಾರವಾಗಿರಲಿಲ್ಲ, ಅದು ಅಕ್ಷರಗಳ ಜತೆಗಿನ ಒಂದು ಪ್ರೇಮ ಪ್ರಕರಣವಾಗಿತ್ತು. ಅಕ್ಷರಗಳನ್ನೇ ಉಸಿರಾಡುವ ನನಗೆ, ಆ ಅಗ್ನಿಪಥದಲ್ಲಿ ನಡೆಯುವಾಗ ಅನೇಕರು, 'ಇವನ ಕೈಲಿ ಇದು ಸಾಧ್ಯವೇ?' ಎಂದು ನಕ್ಕಿದ್ದರು. ಆ ನಗುಗಳೇ ನನಗೆ ಇಂಧನವಾದವು. 'ವಿಶ್ವವಾಣಿ'ಯ ಹಳೆಯ ಪುಟಗಳ ಗಂಧದ ನಡುವೆ ನಾನು ನವೀನ ಕಾಲದ ಕನ್ನಡಿಗರ ನಾಡಿಮಿಡಿತವನ್ನು ಹುಡುಕಿದೆ. ಅಂದು ಇಟ್ಟ ಪ್ರತಿಯೊಂದು ಹೆಜ್ಜೆಯಲ್ಲೂ ಒಂದು ಭರವಸೆಯಿತ್ತು, ಪ್ರತಿ ಸವಾಲಿನಲ್ಲೂ ಒಂದು ಗೆಲುವಿನ ಹಸಿವಿತ್ತು. ಹತ್ತು ವರ್ಷಗಳ ಈ ಜೈತ್ರಯಾತ್ರೆಯಲ್ಲಿ ನಾನು ಗಳಿಸಿದ್ದು ಈ ನಾಡಿನ ಅಸಂಖ್ಯಾತ ಓದುಗರ ಪ್ರೀತಿ, ಅಭಿಮಾನ ಮತ್ತು ವಿಶ್ವಾಸ.

ಕಳೆದ ಒಂದು ದಶಕದಲ್ಲಿ ಪತ್ರಿಕೋದ್ಯಮ ಮತ್ತು ಕನ್ನಡ ಪತ್ರಿಕೋದ್ಯಮ ಸಾಕಷ್ಟು ಬದಲಾಗಿವೆ. ಈ ಅವಧಿ ಅಕ್ಷರಶಃ ಒಂದು ಯುಗಾಂತರದಂತೆ ಭಾಸವಾಗುತ್ತಿದೆ. ಶತಮಾನಗಳಿಂದ ರೂಢಿಸಿಕೊಂಡು ಬಂದಿದ್ದ ಮುದ್ರಣ ಮಾಧ್ಯಮದ ಭದ್ರ ಬುನಾದಿಯನ್ನು ಕಾಲದ ವೇಗ ಮತ್ತು ತಂತ್ರಜ್ಞಾನದ ಅಬ್ಬರ ಅಲುಗಾಡಿಸಿವೆ. ಈ ಬದಲಾವಣೆಯ ಪಯಣದಲ್ಲಿ ಎರಡು ಪ್ರಮುಖ ಘಟ್ಟಗಳು ಪತ್ರಿಕೋದ್ಯಮದ ದಿಕ್ಕನ್ನೇ ಬದಲಿಸಿದವು - ಒಂದು ಕೋವಿಡ್ ಮಹಾಮಾರಿ ಮತ್ತೊಂದು ಸಾಮಾಜಿಕ ಜಾಲತಾಣಗಳ ಅಬ್ಬರ.

ಕೋವಿಡ್ ಬರುವವರೆಗೂ ಪತ್ರಿಕೆ ಎಂದರೆ ಬೆಳಗ್ಗೆ ಕಾಫಿಯ ಜೊತೆಗೆ ಕೈಗೆ ಸಿಗುವ ಕಾಗದದ ಕಂತೆ ಎಂಬ ಅಲಿಖಿತ ನಿಯಮವಿತ್ತು. ಆದರೆ ಲಾಕ್‌ಡೌನ್ ಎಂಬ ಕತ್ತಲೆಕಾಲ ಪತ್ರಿಕಾ ವಿತರಣೆಯ ಸರಪಳಿಯನ್ನೇ ಕತ್ತರಿಸಿ ಹಾಕಿತು. ಜನರು ಪತ್ರಿಕೆಯನ್ನು ಕೈಯಿಂದ ಮುಟ್ಟಲು ಹೆದರಿದ ಆ ಕ್ಷಣದಲ್ಲಿ, ದಶಕಗಳಿಂದ ಪಾಲಿಸಿಕೊಂಡು ಬಂದಿದ್ದ ಮಾರುಕಟ್ಟೆ ಪಟ್ಟುಗಳು ತಲೆಕೆಳಗಾದವು. ಇದು ಪತ್ರಿಕೋದ್ಯಮವನ್ನು ಅನಿವಾರ್ಯವಾಗಿ ಡಿಜಿಟಲ್ ಲೋಕಕ್ಕೆ ತಳ್ಳಿತು. ಇ-ಪೇಪರ್ ಮತ್ತು ವೆಬ್‌ಸೈಟ್‌ಗಳು ಕೇವಲ ಆಯ್ಕೆಯಾಗಿ ಉಳಿಯದೇ, ಅಸ್ತಿತ್ವದ ಪ್ರಶ್ನೆಯಾದವು. ಜಾಹೀರಾತುಗಳ ಕುಸಿತ ಮತ್ತು ಕಾಗದದ ಬೆಲೆ ಏರಿಕೆ ಪತ್ರಿಕಾ ಸಂಸ್ಥೆಗಳನ್ನು ಆರ್ಥಿಕ ಸಂಕಷ್ಟಕ್ಕೆ ನೂಕಿದರೂ, ಅದು ಹೊಸ ಮಾದರಿಯ ಪತ್ರಿಕೋದ್ಯಮಕ್ಕೆ ನಾಂದಿ ಹಾಡಿತು.

ಇದೇ ಸಮಯದಲ್ಲಿ ಸಾಮಾಜಿಕ ಜಾಲತಾಣಗಳು ಪತ್ರಿಕೋದ್ಯಮದ ಸ್ಥಾಪಿತ ನಿಯಮಗಳನ್ನು ಪುಡಿಪುಡಿ ಮಾಡಿದವು. ಹಿಂದೆ ಪತ್ರಕರ್ತರು ಸುದ್ದಿಯ ಏಕಸ್ವಾಮ್ಯ ಹೊಂದಿದ್ದರು. ಆದರೆ ಇಂದು ಪ್ರತಿಯೊಬ್ಬ ನಾಗರಿಕನೂ ಒಬ್ಬ ವರದಿಗಾರನೇ. ಫೇಸ್‌ಬುಕ್, ಎಕ್ಸ್ (ಟ್ವಿಟರ್) ಮತ್ತು ವಾಟ್ಸಾಪ್‌ಗಳು ಸುದ್ದಿಯ ವೇಗವನ್ನು ಹೆಚ್ಚಿಸಿದವು ನಿಜ, ಆದರೆ ಅದರ ಜತೆಗೇ 'ಫೇಕ್ ನ್ಯೂಸ್' ಎಂಬ ಪಿಡುಗನ್ನೂ ತಂದವು. ಬ್ರೇಕಿಂಗ್ ನ್ಯೂಸ್‌ಗಳ ಭರಾಟೆಯಲ್ಲಿ ವಿಶ್ಲೇಷಣಾತ್ಮಕ ಓದುವಿಕೆ ಹಿಂದೆ ಸರಿಯಿತು. ಗಂಭೀರ ಸುದ್ದಿಗಳಿಗಿಂತ 'ಕ್ಲಿಕ್ ಬೈಟ್' ಸುದ್ದಿಗಳೇ ಹೆಚ್ಚು ಸದ್ದು ಮಾಡತೊಡಗಿದವು.

ಕನ್ನಡ ಪತ್ರಿಕೋದ್ಯಮದ ಮಟ್ಟಿಗೆ ಹೇಳುವುದಾದರೆ, ಈ ಸ್ಥಿತ್ಯಂತರ ದೊಡ್ಡ ಸವಾಲಾಗಿತ್ತು. ಹಳೆಯ ಪೀಳಿಗೆಯ ಓದುಗರು ಇಂದಿಗೂ ಮುದ್ರಿತ ಅಕ್ಷರಗಳನ್ನೇ ನಂಬುತ್ತಿದ್ದರೆ, ಹೊಸ ಪೀಳಿಗೆ ಸ್ಮಾರ್ಟ್‌ಫೋನ್‌ಗಳಲ್ಲಿ ಸುದ್ದಿ ಹುಡುಕುತ್ತಿದೆ. ಈ ಎರಡೂ ತಲೆಮಾರುಗಳ ನಡುವೆ ಸೇತುವೆಯಾಗುವುದು ಇಂದು 'ವಿಶ್ವವಾಣಿ'ಯಂಥ ಪತ್ರಿಕೆಗಳ ಮುಂದಿರುವ ಅತಿ ದೊಡ್ಡ ಸಾಹಸ. ಬದಲಾವಣೆ ಜಗತ್ತಿನ ನಿಯಮ, ಆದರೆ ಈ ಅನಿಶ್ಚಿತತೆಯ ನಡುವೆಯೂ ಸುದ್ದಿಯ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. ಸಾಮಾಜಿಕ ಜಾಲತಾಣಗಳ ಅಬ್ಬರದ ನಡುವೆಯೂ ಪತ್ರಿಕೆಗಳು ಇಂದಿಗೂ ಭದ್ರವಾಗಿದ್ದರೆ ಅದಕ್ಕೆ ಕಾರಣ ಪತ್ರಿಕೆಯ ವಿಶ್ವಾಸಾರ್ಹತೆ ಮತ್ತು ಮುದ್ರಿತ ಅಕ್ಷರಗಳ ನಂಟು, ಮೋಹ. ಸಾಮಾಜಿಕ ಜಾಲತಾಣಗಳು ಮಾಹಿತಿಯ ಸುನಾಮಿಯನ್ನೇ ಎಬ್ಬಿಸಿರಬಹುದು, ಆದರೆ ಅಕ್ಷರ ಲೋಕದ ಗಾಂಭೀರ್ಯ ಮತ್ತು ವಿಶ್ವಾಸಾರ್ಹತೆಯ ವಿಷಯಕ್ಕೆ ಬಂದಾಗ ಇಂದಿಗೂ ಪತ್ರಿಕೆಗಳೇ ಸಾರ್ವಭೌಮ. ಕಾಲ ಎಷ್ಟು ಬದಲಾದರೂ, ಸ್ಕ್ರೀನ್ ಮೇಲೆ ಮೂಡುವ ಬೆಳಕಿನ ಅಕ್ಷರಗಳಿಗಿಂತ, ಕಾಗದದ ಮೇಲೆ ಶಾಶ್ವತವಾಗಿ ಕುಳಿತ ಕಪ್ಪು ಅಕ್ಷರಗಳ ಮೇಲೆ ಜನರಿಗೆ ನಂಬಿಕೆ ಹೆಚ್ಚು. ಈ ವಿಶ್ವಾಸವೇ ಪತ್ರಿಕೋದ್ಯಮದ ಅತಿ ದೊಡ್ಡ ಆಸ್ತಿ ಮತ್ತು ಅದು ಅಲುಗಾಡದಂತೆ ಕಾಪಾಡುತ್ತಿರುವ ಶ್ರೀರಕ್ಷೆ.

ನಾನು ಹೇಳಿ-ಕೇಳಿ ಪ್ರಿಂಟ್ ಪತ್ರಕರ್ತ. ಮೂರು ವರ್ಷ ನ್ಯೂಸ್ ಚಾನೆಲ್ ಸಂಪಾದಕನಾಗಿದ್ದರೂ, ನನಗೆ ಮಾತಾಡುವುದಕ್ಕಿಂತ, ಬರೆಯುವುದರಲ್ಲಿಯೇ ಹೆಚ್ಚು ಆಸಕ್ತಿ. ಆದರೆ ಮುದ್ರಣ ಮಾಧ್ಯಮದ ಮಂದಗತಿಯ ನಡೆ ಹೊಸ ಸಾಹಸಕ್ಕೆ ಮುಂದಾಗುವವರಿಗೆ ಎಚ್ಚರಿಕೆಯ ಗಂಟೆಯಂತೆ ತೋರುವ ಈ ದಿನಗಳಲ್ಲಿ, ನಾನು ಭರವಸೆ ಕಂಡಿದ್ದು ಮುದ್ರಣ ಮಾಧ್ಯಮದ ಹೊಸ ಸಾಧ್ಯತೆಗಳಲ್ಲಿಯೇ. ಇರುವ ಪತ್ರಿಕೆಯನ್ನು ಮುನ್ನಡೆಸಿಕೊಂಡು ಹೋಗುವುದರಲ್ಲಿಯೇ ತೃಪ್ತಿ ಕಾಣುವುದರ ಜತೆಗೆ ಹೊಸ ಸಾಧ್ಯತೆ ಮತ್ತು ಹೊಸ ಪ್ರಯೋಗಗಳಲ್ಲಿ ನಂಬಿಕೆ ಇಟ್ಟುಕೊಂಡು ಆರಂಭಿಸಿದ 'ಪ್ರವಾಸಿ ಪ್ರಪಂಚ' ಕನ್ನಡ ಪತ್ರಿಕೋದ್ಯಮದಲ್ಲಿ ಒಂದು ದಿಟ್ಟ ಹೆಜ್ಜೆ. ಪ್ರವಾಸ, ಪ್ರವಾಸೋದ್ಯಮ ಮತ್ತು ಆತಿಥ್ಯ ಕ್ಷೇತ್ರಕ್ಕೆ ಮೀಸಲಾದ, ಇಪ್ಪತ್ತನಾಲ್ಕು ಪುಟಗಳ, ಬ್ರಾಡ್ ಶೀಟ್ ಆಕಾರದ ವಾರಪತ್ರಿಕೆ ಆರಂಭಿಸಿದ್ದು ಭಾರತೀಯ ಪತ್ರಿಕೋದ್ಯಮದಲ್ಲಿ ಒಂದು ದಾಖಲೆಯೇ.

ಈ ಹೊಸ ಪತ್ರಿಕೆ ಅತ್ಯಂತ ಕಡಿಮೆ ಅವಧಿಯಲ್ಲಿ ಕನ್ನಡಿಗರ ಅಚ್ಚುಮೆಚ್ಚಿನ ಪತ್ರಿಕೆಯಾಗಿದ್ದು ಒಂದು ಅಪೂರ್ವ ಸಾಧನೆಯೇ. 'ಪ್ರವಾಸಿ ಪ್ರಪಂಚ' ಪ್ರಿಂಟ್, ವೆಬ್, ಡಿಜಿಟಲ್ ಮತ್ತು ಸೋಶಿಯಲ್ ಮೀಡಿಯಾ... ಹೀಗೆ ಎಲ್ಲ ಪ್ಲಾಟ್‌ಫಾರ್ಮ್‌ಗಳಲ್ಲಿ ಲಭ್ಯವಿದೆ. ಇಲ್ಲಿ ತನಕ ಕನ್ನಡದಲ್ಲಿ ಬಂದ ಪತ್ರಿಕೆಗಳಲ್ಲೇ ಅತ್ಯಂತ ಸುಂದರ ಎಂಬುದು 'ಪ್ರವಾಸಿ ಪ್ರಪಂಚ'ದ ಅಗ್ಗಳಿಕೆ. ಹೊಸ ಪತ್ರಿಕೆಯನ್ನು ಆರಂಭಿಸಲು ಹಿಂದೆ ಮುಂದೆ ನೋಡುವ ಈ ದಿನಗಳಲ್ಲಿ, ರಾಜಕೀಯ, ಸಿನಿಮಾ, ಕ್ರೈಂ, ಕ್ರೀಡೆ, ಸೆನ್ಸೇಷನ್ ಸುದ್ದಿ ಇಲ್ಲದ ಪತ್ರಿಕೆ ಹೊರತರುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲದ ದಿನಗಳಲ್ಲಿ, 'ಪ್ರವಾಸಿ ಪ್ರಪಂಚ' ನೆಲೆಯೂರಿದ್ದು ಸಣ್ಣ ಸಂಗತಿಯೇನಲ್ಲ. ಹೊಸತನ್ನು ಸುಂದರವಾಗಿ ಕೊಟ್ಟರೆ ಕನ್ನಡಿಗರು ಸ್ವೀಕರಿಸುತ್ತಾರೆ ಎಂಬುದಕ್ಕೆ 'ಪ್ರವಾಸಿ ಪ್ರಪಂಚ' ಒಂದು ತಾಜಾ ನಿದರ್ಶನ.

ಕಳೆದ ಒಂದು ದಶಕದಲ್ಲಿ 'ವಿಶ್ವವಾಣಿ' ಭದ್ರವಾಗಿ ನೆಲೆಯೂರಿರುವುದಕ್ಕೆ ಅದು ಹುಟ್ಟು ಹಾಕಿದ ಇತರ ಸಂಸ್ಥೆಗಳೇ ಸಾಕ್ಷಿ. ಕಳೆದ ನಲವತ್ತೆರಡು ವರ್ಷಗಳಿಂದ ಉತ್ತರ ಕನ್ನಡ ಜಿಲ್ಲೆಯ ಪ್ರಪ್ರಥಮ ದೈನಿಕ 'ಲೋಕಧ್ವನಿ', 'ವಿಶ್ವವಾಣಿ' ತೆಕ್ಕೆಗೆ ಬಂದು ಹೊಸ ರೂಪ, ವಿನ್ಯಾಸ ಪಡೆದು ಪ್ರಕಟವಾಗುತ್ತಿದೆ. ಕಳೆದ ವರ್ಷ 'ಲೋಕಧ್ವನಿ'ಯ ಕೊಪ್ಪಳ ಆವೃತ್ತಿ ಆರಂಭವಾಗಿದ್ದು, ಈ ವರ್ಷ ಇನ್ನೂ ಎರಡು ಜಿಲ್ಲೆಗಳಲ್ಲಿ ತನ್ನ ಅಸ್ತಿತ್ವವನ್ನು ವೃದ್ಧಿಸಿಕೊಳ್ಳಲಿದೆ. ಕಳೆದ ವರ್ಷದಿಂದ ವಿಶ್ವವಾಣಿ ಡಿಜಿಟಲ್ ಲೋಕಕ್ಕೂ ಕಾಲಿಟ್ಟಿದ್ದು, 'ವಿಶ್ವವಾಣಿ ಟಿವಿ', 'ವಿಶ್ವವಾಣಿ ಹೆಲ್ತ್', 'ವಿಶ್ವವಾಣಿ ಮನಿ', 'ವಿಶ್ವವಾಣಿ ಪ್ರಾಪರ್ಟಿ' ಚಾನೆಲ್‌ಗಳನ್ನು ಆರಂಭಿಸಿದೆ. ಸ್ಯಾಟಲೈಟ್ ಚಾನೆಲ್‌ಗೆ ಕಮ್ಮಿಯಿಲ್ಲದ ಅತ್ಯಂತ ಸುಸಜ್ಜಿತ ಡಿಜಿಟಲ್ ಟೀಮ್ ನವಮಾಧ್ಯಮದ ಎಲ್ಲ ಪಟ್ಟುಗಳಿಗೆ ತೆರೆದುಕೊಂಡು, ಕನ್ನಡ ಪತ್ರಿಕೋದ್ಯಮದ ಹೊಸ ಸಾಧ್ಯತೆಗಳನ್ನು ಅನ್ವೇಷಿಸುತ್ತಾ ದಾಪುಗಾಲಿಡುತ್ತಿರುವುದು ಗಮನಾರ್ಹ.

'ವಿಶ್ವವಾಣಿ' ಪತ್ರಿಕೆ ರಾಜ್ಯದ ತೆರೆಮರೆಯಲ್ಲಿರುವ ಅಸಾಮಾನ್ಯ ಸಾಧಕರನ್ನು ವಿದೇಶಗಳಲ್ಲಿ ಸನ್ಮಾನಿಸುವ ಉದ್ದೇಶದಿಂದ 'ವಿಶ್ವವಾಣಿ ಗ್ಲೋಬಲ್ ಫೋರಂ' ಎಂಬ ಹೊಸ ಪ್ರಯೋಗವನ್ನು ಆರಂಭಿಸಿ, ಆ ಮೂಲಕ ಈ ತನಕ ಜಪಾನ್, ರಷ್ಯಾ, ಫ್ರಾನ್ಸ್, ಕಾಂಬೋಡಿಯ, ವಿಯೆಟ್ನಾಂ, ಬಾಲಿ, ಒಮಾನ್, ಭೂತಾನ್, ಮಾಲ್ಡೀವ್ಸ್, ಮಾರಿಷಸ್ ಸೇರಿದಂತೆ ಹನ್ನೆರಡು ದೇಶಗಳಲ್ಲಿ ಕಾರ್ಯಕ್ರಮವನ್ನು ಸಂಘಟಿಸಿದ್ದು ಸಹ ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ಸಾಹಸವೇ. ವಿದೇಶಿ ನೆಲದಲ್ಲಿ ಕಾರ್ಯಕ್ರಮ ಆಯೋಜಿಸಿದ ಮೊದಲ ಪತ್ರಿಕೆ 'ವಿಶ್ವವಾಣಿ'ಯೇ. ಇದರ ಜತೆಗೆ, 'ವಿಶ್ವವಾಣಿ ಪುಸ್ತಕ' ಪ್ರಕಾಶನ ಐವತ್ತಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟಿಸಿದೆ. ಕನ್ನಡ ಪತ್ರಿಕೆಯೊಂದು ಪುಸ್ತಕ ಪ್ರಕಾಶನದಲ್ಲೂ ಸಕ್ರಿಯವಾಗಿರುವುದು ವಿಶೇಷವೇ. ಇನ್ನು ಕನ್ನಡದ ಮಾತಿನ ಮಂಟಪ 'ವಿಶ್ವವಾಣಿ ಕ್ಲಬ್ ಹೌಸ್' ಮನೆಮಾತು. ಸಾವಿರದ ಮುನ್ನೂರಕ್ಕೂ ಹೆಚ್ಚು ಕಾರ್ಯಕ್ರಮಗಳ ಮೂಲಕ ನಿತ್ಯ ಸಂವಾದಕ್ಕೆ ಆಸ್ಪದ ನೀಡಿರುವುದು ದಾಖಲೆಯೇ ಸರಿ.

ನಾನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ಸ್ನಾತಕೋತ್ತರ ವ್ಯಾಸಂಗ ಮಾಡುವಾಗ, 'ಅವಲೋಕನ' ಎಂಬ ಪತ್ರಿಕೆಯನ್ನು ಆರಂಭಿಸಿದ್ದೆ. ನಂತರ 'ಸಂಯುಕ್ತ ಕರ್ನಾಟಕ', 'ವಿಜಯ ಕರ್ನಾಟಕ', 'ಕನ್ನಡಪ್ರಭ', 'ಸುವರ್ಣ ನ್ಯೂಸ್ ಚಾನೆಲ್'ಗಳಲ್ಲಿ ಸುತ್ತಾಡಿ, ಈಗ ನನ್ನದೇ 'ವಿಶ್ವವಾಣಿ' ಎಂಬ ಸ್ವಂತ ಮನೆ ಮಾಡಿಕೊಂಡಿದ್ದೇನೆ. ಆಗ 'ಅವಲೋಕನ'ದಲ್ಲಿ ನನ್ನೊಂದಿಗೆ ಒಬ್ಬ ಸ್ನೇಹಿತನಿದ್ದ. ವಿಶ್ವವಾಣಿ, ಲೋಕಧ್ವನಿ, ವಿಶ್ವವಾಣಿ ಟಿವಿ, ಪ್ರವಾಸಿ ಪ್ರಪಂಚ, ವಿಶ್ವವಾಣಿ ಪುಸ್ತಕ ಸೇರಿ ಈಗಿನ ನನ್ನ 'ವಿಶ್ವಕುಟುಂಬ'ದಲ್ಲಿ ನನ್ನೊಂದಿಗೆ ಇನ್ನೂರಕ್ಕೂ ಹೆಚ್ಚು ಮಂದಿ ಇದ್ದಾರೆ. ರಾಜರಾಜೇಶ್ವರಿನಗರದಲ್ಲಿ 'ವಿಶ್ವವಾಣಿ' ಸ್ವಂತ ಕಟ್ಟಡ ಹೊಂದುವ ದಿನ ದೂರವಿಲ್ಲ.

ಇವೆಲ್ಲವುಗಳ ಮಧ್ಯೆ ನನ್ನ ಬರಹ, ಪ್ರವಾಸ ಮುಂದುವರಿದಿದೆ. ವಾರದಲ್ಲಿ ಕನಿಷ್ಠ ನಾಲ್ಕು ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು ಇದ್ದೇ ಇದೆ. ಹಿಂದಿನ ವರ್ಷವೊಂದೇ ಇಪ್ಪತ್ತೂರು ದೇಶಗಳಿಗೆ ಹೋಗಿದ್ದೆ. ಈ ವರ್ಷ ಹತ್ತು ಪುಸ್ತಕಗಳನ್ನಾದರೂ ಹೆರಬೇಕು ಅಂದುಕೊಂಡಿದ್ದೇನೆ. ಇವೆಲ್ಲವೂ ಸಾಧ್ಯವಾಗಿದ್ದು ಓದುಗರೂ, ಹಿತೈಷಿಗಳೂ ಆದ ನಿಮ್ಮ ಆಶೀರ್ವಾದದಿಂದ. ನೀವು ನನ್ನ ಮೇಲೆ ತೋರಿದ ಪ್ರೀತಿ ಅಷ್ಟಿಷ್ಟಲ್ಲ. ಈ ವಿಷಯದಲ್ಲಿ ನಾನು ಅದೃಷ್ಟವಂತ. ಕಳೆದ ಮೂವತ್ತು ವರ್ಷಗಳಿಂದ ನಾನು ಬರೆದಿದ್ದನ್ನು ಓದುತ್ತಾ, ನನ್ನನ್ನು ತಿದ್ದಿದವರು, ಮುನ್ನಡೆಸಿದವರು ನೀವು. ಏಕಾಂಗಿಯಾಗಿ 'ವಿಶ್ವವಾಣಿ'ಯನ್ನು ಆರಂಭಿಸಿದಾಗ ಕೈಹಿಡಿದವರೂ ನೀವೇ. ನಿಮಗೆ ನಾನು ಚಿರಋಣಿ. ಅಂದುಕೊಂಡಂತೆ ಆದರೆ ನಿಮಗೆ ಇನ್ನೊಂದು ಅಚ್ಚರಿ ಸದ್ಯದಲ್ಲೇ ನೀಡುತ್ತೇನೆ. ನಿಮ್ಮ ಬಲಗೈ ಸದಾ ನನ್ನ ತಲೆ ಮೇಲಿರಲಿ.

ತೈವಾನ್ ಮೇಲೆ ಯುದ್ಧ ಸಾರಲಿದೆಯೇ ಚೀನಾ?

ಸಂಗತ

ಡಾ.ವಿಜಯ್ ದರಡಾ
vveditoped@gmail.com

ಜಗತ್ತಿನಲ್ಲಿ ಇತ್ತೀಚೆಗೆ ಬಿರುಸಿನ ಬೆಳವಣಿಗೆಗಳು ನಡೆಯುತ್ತಿವೆ. ಭೂರಾಜಕೀಯ ಚಿತ್ರಣಗಳು ಏಕಾಏಕಿ ಬದಲಾಗುತ್ತಿವೆ. ಅದರಿಂದಾಗಿ ಜಗತ್ತಿನಲ್ಲಿ ಈವರೆಗೆ ಇದ್ದ ಅಧಿಕಾರದ ಸಮತೋಲನ ಹೊಸ ರೂಪ ಪಡೆಯುತ್ತಿದೆ. ಇದನ್ನೆಲ್ಲ ನೋಡಿದಾಗ ಹೊಸ ಪ್ರಶ್ನೆಯೊಂದು ಅನೇಕರ ಮನದಲ್ಲಿ ಹುಟ್ಟಿಕೊಂಡಿದೆ: ಸದ್ಯದಲ್ಲೇ ತೈವಾನ್ ದೇಶವನ್ನು ಚೀನಾ ತನ್ನ ವಶಕ್ಕೆ ಪಡೆದುಕೊಳ್ಳಲಿದೆಯೇ? ಅದನ್ನು ಜಗತ್ತು ಅಸಹಾಯಕವಾಗಿ ನೋಡುತ್ತಾ ಕುಳಿತುಕೊಳ್ಳಲಿದೆಯೇ? ಅಥವಾ ತೈವಾನ್ ದೇಶವನ್ನು ಉಳಿಸಲು ಅಮೆರಿಕ ಧಾವಿಸುತ್ತದೆಯೇ? ಹಾಗೇನಾದರೂ ಅಮೆರಿಕ ರಂಗಪ್ರವೇಶ ಮಾಡಿದರೆ ಚೀನಾದ ನಡೆ ಏನಿರಬಹುದು? ಇವೆಲ್ಲಕ್ಕಿಂತ ದೊಡ್ಡ ಪ್ರಶ್ನೆಯೆಂದರೆ, ಈ ಬೆಳವಣಿಗೆಗಳಿಂದಾಗಿ ಭಾರತದ ಮೇಲೇನು ಪರಿಣಾಮ ಉಂಟಾಗಲಿದೆ?

ಏಕೆ ಈ ಪ್ರಶ್ನೆ ಈಗ ಇದ್ದಕ್ಕಿದ್ದಂತೆ ಎದ್ದು ಕುಳಿತಿದೆ ಅಂದರೆ, ರಷ್ಯಾದವರು ಉಕ್ರೇನ್ ಮೇಲೆ ದಾಳಿ ನಡೆಸಿ ಆ ದೇಶದ 7000 ಚದರ ಕಿಲೋಮೀಟರ್ ವಿಸ್ತೀರ್ಣದ ಜಾಗವನ್ನು ತಮ್ಮ ದೇಶಕ್ಕೆ ಸೇರಿಸಿಕೊಂಡಿದ್ದಾರೆ. ರಷ್ಯಾ-ಉಕ್ರೇನ್ ನಡುವಿನ ಯುದ್ಧ ಅಂತ್ಯಗೊಳಿಸಲು ಅಮೆರಿಕ ಮಧ್ಯಸ್ಥಿಕೆ ವಹಿಸಿ ಮಾತುಕತೆ ನಡೆಸಿತು. ಆ ವೇಳೆ, ರಷ್ಯಾ ಈಗಾಗಲೇ ವಶಪಡಿಸಿಕೊಂಡಿರುವ ಜಾಗ ರಷ್ಯಾದ ಬಳಿಯಲ್ಲೇ ಉಳಿಯುವಂತೆ ನೋಡಿಕೊಳ್ಳುವ ಬಗ್ಗೆ ಪ್ರಸ್ತಾಪವಾಗಿದೆ. ಅಂದರೆ ರಷ್ಯಾದವರು ಕಬಳಿಸಿದ ಉಕ್ರೇನ್‌ನ ಜಾಗ ರಷ್ಯಾಕ್ಕೇ! ಇನ್ನೊಂದೆಡೆ, ಅಮೆರಿಕನ್ ಸೈನಿಕರು ದಾಳಿ ನಡೆಸಿ ವೆನೆಜುವೆಲಾದ ಅಧ್ಯಕ್ಷರನ್ನೇ ಹೊತ್ತುಕೊಂಡು ಹೋಗಿ ಜೈಲಿನಲ್ಲಿ ಕೂಡಿಹಾಕಿದ್ದಾರೆ. ಅದರೊಂದಿಗೆ ವೆನೆಜುವೆಲಾದ ಆಡಳಿತ ವ್ಯವಸ್ಥೆ ನಿರಾಯಾಸವಾಗಿ ಅಮೆರಿಕದ ಕೈಗೆ ಬಂದಿದೆ. ಜಗತ್ತಿನ ಎರಡು ಪ್ರಬಲ ದೇಶಗಳು ಹೀಗೆ ಇನ್ನೊಂದು ದೇಶದ ಮೇಲೆ ದಾಳಿ ನಡೆಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಂದ ವಿರೋಧವನ್ನು ಜೀರ್ಣಿಸಿಕೊಂಡಿದ್ದನ್ನು ನೋಡಿದ ಮೇಲೆ ಚೀನಾ ಸುಮ್ಮನೆ ಕುಳಿತುಕೊಳ್ಳುತ್ತದೆಯೇ? ಜಗತ್ತಿನ ಇನ್ನೊಂದು ಪ್ರಬಲ ದೇಶವಾದ ತಾನು ಕೂಡ ತೈವಾನ್ ಮೇಲೆ ದಾಳಿ ನಡೆಸಿ ಆ ದೇಶವನ್ನು ವಶಕ್ಕೆ ಪಡೆದುಕೊಳ್ಳಲು ಇದು ಸುವರ್ಣಾವಕಾಶವೆಂದೇ ಚೀನಾ ಯೋಚಿಸುತ್ತದೆ.

ಇನ್ನೊಂದು ದೇಶವನ್ನು ವಶಪಡಿಸಿಕೊಳ್ಳುವ ಖಯಾಲಿ ಚೀನಾಕ್ಕೆ ಮೊದಲಿನಿಂದಲೂ ಇದೆ. 1950-51ರಲ್ಲೇ ಅದು ಟಿಬೆಟ್ ದೇಶವನ್ನು ವಶಕ್ಕೆ ತೆಗೆದುಕೊಂಡಿದೆ. ಅದನ್ನು ನೋಡಿ ಜಗತ್ತು ಬಾಯ್ಮಾತಿನಲ್ಲಿ ಒಂದಷ್ಟು ಖಂಡನೆ ವ್ಯಕ್ತಪಡಿಸಿತೇ ಹೊರತು ಇನ್ನೇನೂ ಮಾಡಲಿಲ್ಲ. ತೈವಾನ್ ವಿಷಯಕ್ಕೆ ಬಂದರೆ, ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಆ ದೇಶವನ್ನು ವಶಪಡಿಸಿಕೊಳ್ಳುವ ಬಗ್ಗೆ ನಿರಂತರವಾಗಿ ಹೇಳಿಕೆಗಳನ್ನು ನೀಡುತ್ತಾ ಬಂದಿದ್ದಾರೆ. ದೇಶದ ಸೇನೆಗೂ ಕೂಡ ಅವರು ಸನ್ನದ್ಧವಾಗಿರುವಂತೆ ಸೂಚನೆ ನೀಡಿದ್ದಾರೆ. ಪ್ರತಿ ವರ್ಷ ತೈವಾನ್ ದೇಶವನ್ನು ಹೆದರಿಸುವುದಕ್ಕೆಂದೇ ಚೀನಾ ಒಂದು ಸೇನಾ ಕವಾಯತು ನಡೆಸುತ್ತದೆ. ಇನ್ನೇನು ತೈವಾನ್ ಮೇಲೆ ಚೀನಾ ಯುದ್ಧಕ್ಕೆ ಹೊರಟೇಬಿಟ್ಟಿತು ಎಂದು ಜಗತ್ತು ಭಾವಿಸುವಂತೆ ಮಾಡಿ, ಕೊನೆಗೆ ಸುಮ್ಮನಾಗುತ್ತದೆ. ತೈವಾನ್‌ನ ವಾಯುಸೀಮೆಯೊಳಗೆ ಚೀನಾದ ವಿಮಾನಗಳು ಹಾರಾಡುವುದು ಮತ್ತು ತೈವಾನ್‌ನ ಸಮುದ್ರದೊಳಗೆ ಚೀನಾದ ಹಡಗುಗಳು ಅತಿಕ್ರಮ ಪ್ರವೇಶ ಮಾಡುವುದು ಹೊಸತೇನಲ್ಲ. ಅಪ್ಪಿತಪ್ಪಿ ತೈವಾನ್ ಸೇನೆಯೇನಾದರೂ ಚೀನಾದ ಒಂದೇ ಒಂದು ವಿಮಾನ ಅಥವಾ ಹಡಗಿನ ಮೇಲೆ ದಾಳಿ ನಡೆಸಿದರೂ ಚೀನಾ ತಕ್ಷಣ ದೊಡ್ಡ ಪ್ರಮಾಣದಲ್ಲಿ ದಾಳಿ ಆರಂಭಿಸಲು ಸಿದ್ಧವಾಗಿ ಕುಳಿತಿದೆ. ತೈವಾನ್ ದಾಳಿ ನಡೆಸಿದ್ದಕ್ಕೇ ತಾನು ಪ್ರತಿದಾಳಿ ನಡೆಸುತ್ತಿರುವುದಾಗಿ ನೆಪ ಹೇಳುವುದಕ್ಕೆ ಅದು ಸಿದ್ಧತೆ ಮಾಡಿಕೊಂಡಿದೆ. ಇದನ್ನು ಅರಿತಿರುವ ತೈವಾನ್, ಬಹಳ ತಾಳ್ಮೆಯಿಂದ ತೆಪ್ಪಗಿದೆ. ಈವರೆಗೆ ಯಥಾಸ್ಥಿತಿಯೇ ಇದೆ.

ನಿಮ್ಮಲ್ಲಿ ಬಹಳ ಜನರಿಗೆ ಏಕೆ ಚೀನಾ ಅಷ್ಟೊಂದು ಹಟಕ್ಕೆ ಬಿದ್ದು ತೈವಾನ್ ದೇಶವನ್ನು ವಶಪಡಿಸಿಕೊಳ್ಳಲು ಹೊಂಚು ಹಾಕುತ್ತಿದೆ ಎಂಬ ಪ್ರಶ್ನೆ ಇರಬಹುದು. ಇದಕ್ಕೆ ಉತ್ತರ ಕಂಡುಕೊಳ್ಳಲು ನಾವು ಇತಿಹಾಸಕ್ಕೆ ಹೋಗಬೇಕು. 1931ರಲ್ಲಿ ಜಪಾನ್ ಸೇನೆ ಚೀನಾವನ್ನು ವಶಪಡಿಸಿಕೊಳ್ಳಲು ಆರಂಭಿಸಿತ್ತು. 1945ರ ವೇಳೆಗೆ ಅದು ಚೀನಾದ ದೊಡ್ಡ ಭಾಗವನ್ನು ತನ್ನ ವಶಕ್ಕೆ ಪಡೆದುಕೊಂಡಿತ್ತು. ಜಪಾನ್‌ನ ಹಿರೋಶಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ಅಮೆರಿಕ ಅಣುಬಾಂಬ್ ಹಾಕಿದಾಗ ಎರಡನೇ ವಿಶ್ವ ಮಹಾಯುದ್ಧ ಕೊನೆಗೊಂಡಿತು. ಆಗ ಜಪಾನ್‌ನ ಹಿಡಿತದಿಂದ ಚೀನಾ ಸ್ವತಂತ್ರವಾಗಿ, ರಿಪಬ್ಲಿಕ್ ಆಫ್ ಚೀನಾ (ಚೀನಾ ಗಣರಾಜ್ಯ) ಎಂದು ನಾಮಕರಣ ಮಾಡಿಕೊಂಡಿತು. ಆದರೆ ಬಹಳ ಬೇಗನೆ ಅಲ್ಲಿ ಎರಡು ರಾಜಕೀಯ ಪಕ್ಷಗಳ ನಡುವೆ ಅಧಿಕಾರದ ಸಂಘರ್ಷ ಆರಂಭವಾಯಿತು. ಅವುಗಳ ಪೈಕಿ ಅತ್ಯಂತ ಹಳೆಯ ಪಕ್ಷವೆಂದರೆ ಕೌಮಿನ್ ತಾಂಗ್ ಅಲಿಯಾಸ್ ಚೈನೀಸ್ ನ್ಯಾಷನಲಿಸ್ಟ್ ಪಾರ್ಟಿ. ಅದರ ಮುಖ್ಯಸ್ಥ ಚಿಯಾಂಗ್ ಕಾಯ್-ಶೇಕ್ ಆಗಿದ್ದರು. ಇನ್ನೊಂದು ಪಕ್ಷವೆಂದರೆ ಮಾವೋ ತ್ಸೆ ತುಂಗ್ ನೇತೃತ್ವದ ಚೈನೀಸ್ ಕಮ್ಯುನಿಸ್ಟ್ ಪಾರ್ಟಿ. ಇವರಿಬ್ಬರ ನಡುವೆ ತೀವ್ರ ಸಂಘರ್ಷ ಏರ್ಪಟ್ಟಿತು. ರಾಜಕೀಯ ಸಮರದಲ್ಲಿ ಮಾವೋ ಗೆದ್ದರು. ಚಿಯಾಂಗ್ ಕಾಯ್ ಶೇಕ್ ಓಡಿಹೋಗಿ ಚೀನಾದ ಕರಾವಳಿ ಪ್ರದೇಶದಲ್ಲಿ ಆಶ್ರಯ ಪಡೆದುಕೊಂಡು, ಆ ಪ್ರದೇಶವನ್ನೇ ಸ್ವತಂತ್ರ ದೇಶ ಎಂದು ಘೋಷಿಸಿಕೊಂಡರು. ಅದಕ್ಕೂ ರಿಪಬ್ಲಿಕ್ ಆಫ್ ಚೀನಾ ಎಂದೇ ಹೆಸರಿಟ್ಟಿದ್ದರು. ಅದು ಕ್ರಮೇಣ ತೈವಾನ್ ಆಗಿ ಗುರುತಿಸಿಕೊಂಡಿತು. ಚಿಯಾಂಗ್ ಕಾಯ್ ಶೇಕ್ ತನ್ನ ದೇಶಕ್ಕೆ ರಿಪಬ್ಲಿಕ್ ಆಫ್ ಚೀನಾ ಎಂದು ಹೆಸರಿಟ್ಟಿದ್ದರಿಂದ ಮಾವೋ ತ್ಸೆ ತುಂಗ್ ತನ್ನ ಅಧೀನದಲ್ಲಿರುವ ಮುಖ್ಯ ಪ್ರದೇಶದ ಚೀನಾಕ್ಕೆ ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾ ಎಂದು ಹೆಸರು ಬದಲಾವಣೆ ಮಾಡಿಕೊಂಡರು. ತೈವಾನ್ ಪ್ರದೇಶವನ್ನು ಕೂಡ ಚೀನಾಕ್ಕೆ ಸೇರಿಸಬೇಕು ಎಂದು ಮಾವೋ ಎಷ್ಟೇ ಪ್ರಯತ್ನಪಟ್ಟರೂ ಅದು ಸಾಧ್ಯವಾಗಲಿಲ್ಲ. ಎಲ್ಲಾ ದಿಕ್ಕಿನಲ್ಲೂ ಸಮುದ್ರದಿಂದ ಸುತ್ತುವರೆದ ದ್ವೀಪವನ್ನು ವಶಪಡಿಸಿಕೊಳ್ಳುವ ಸಲಕರಣೆ ಅಥವಾ ಮೂಲಸೌಕರ್ಯಗಳು ಆ ದಿನಗಳಲ್ಲಿ ಇರಲಿಲ್ಲ. ಆಗಾಗ ಒಂದಷ್ಟು ದಾಳಿಗಳನ್ನು ಮಾವೋ ನಡೆಸಿದರೂ ಅವು ಯಶಸ್ಸು ನೀಡಿರಲಿಲ್ಲ.

ಈ ಎಲ್ಲ ಬೆಳವಣಿಗೆಗಳಿಗೂ ಹೊಸ ತಿರುವು ದೊರೆತಿದ್ದು 1979ರಲ್ಲಿ. ಆ ವರ್ಷ ಚೀನಾ ಮತ್ತು ಅಮೆರಿಕ ದೇಶಗಳು ಒಂದು ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿದವು. ಅಮೆರಿಕಕ್ಕೆ ತನ್ನ ಉತ್ಪನ್ನಗಳನ್ನು ಮಾರಲು ದೊಡ್ಡ ಮಾರುಕಟ್ಟೆ ಬೇಕಿತ್ತು. ಚೀನಾದಲ್ಲಿ ಅತಿಹೆಚ್ಚು ಜನಸಂಖ್ಯೆಯಿತ್ತು. ಅಮೆರಿಕದ ವಸ್ತುಗಳನ್ನು ಚೀನಾದಲ್ಲಿ ಮಾರಲು ಅನುಮತಿ ನೀಡುವುದಕ್ಕೆ ಪ್ರತಿಯಾಗಿ ಚೀನಾದ ಅಂದಿನ ನಾಯಕ ಡೆಂಗ್ ಕ್ಸಿಯಾಪಿಂಗ್ ಅವರು 'ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾವನ್ನೇ ನಿಜವಾದ ಚೀನಾ ಎಂದು ಗುರುತಿಸಬೇಕೆಂಬ ಬೇಡಿಕೆಯಿಟ್ಟರು. ಅದಕ್ಕೆ ಆಗಿನ ಅಮೆರಿಕದ ಅಧ್ಯಕ್ಷ ಜಿಮ್ಮಿ ಕಾರ್ಟರ್ ಒಪ್ಪಿಕೊಂಡು, ರಿಪಬ್ಲಿಕ್ ಆಫ್ ಚೀನಾದಲ್ಲಿರುವ, ಅಂದರೆ ತೈವಾನ್‌ನಲ್ಲಿರುವ ಅಮೆರಿಕದ ದೂತಾವಾಸವನ್ನೇ ಮುಚ್ಚಿಬಿಟ್ಟರು. ತಕ್ಷಣ ತೈವಾನ್‌ಗೆ ಬೆದರಿಕೆ ಹಾಕಲು ಆರಂಭಿಸಿದ ಡೆಂಗ್ ಕ್ಸಿಯಾಪಿಂಗ್, ಯಾವುದೇ ತಕರಾರು ಮಾಡದೆ ಚೀನಾದಲ್ಲಿ ಸೇರಿಕೊಳ್ಳಿ ಎಂದು ಒತ್ತಡ ಹೇರತೊಡಗಿದರು. ಆದರೆ ತೈವಾನ್ ಮೇಲೆ ದಾಳಿ ನಡೆಸುವುದಕ್ಕೆ ಹೋಗಲಿಲ್ಲ. ನಂತರವೂ ಎರಡು ದೇಶಗಳ ನಡುವೆ ಬೇರೆ ಬೇರೆ ಹಂತದಲ್ಲಿ ಮಾತುಕತೆ ಮುಂದುವರಿಯುತ್ತಲೇ ಇತ್ತು. ಆದರೆ ಪರಿಸ್ಥಿತಿ ತಿಳಿಯಾಗುವುದರ ಬದಲು ಮತ್ತಷ್ಟು ಹದಗೆಡುತ್ತಲೇ ಹೋಯಿತು. ಇಂದು ತೈವಾನ್‌ನ ಅಷ್ಟೂ ಜನರು ಚೀನಾದ ವಿರುದ್ಧ ಕೆಂಡ ಕಾರುತ್ತಾರೆ. ಚೀನಾ ಏನಾದರೂ ದಾಳಿ ನಡೆಸಿದರೆ ತೈವಾನ್‌ನಿಂದ ಬಹಳ ಕಠಿಣವಾದ ಪ್ರತಿಕ್ರಿಯೆಯೇ ಬರುತ್ತದೆ. ಹೀಗಾಗಿ ದೊಡ್ಡ ರಕ್ತಪಾತವಾಗುವುದು ನಿಶ್ಚಿತ. ವಾಸ್ತವವಾಗಿ, ಚೀನಾದಲ್ಲಿ ಕ್ಸಿ ಜಿನ್‌ಪಿಂಗ್ ಅಧಿಕಾರಕ್ಕೆ ಬಂದ ಮೇಲೆ ತಾನು ತೈವಾನ್ ಭೂಭಾಗ ಚೀನಾದಲ್ಲಿ ವಿಲೀನಗೊಳ್ಳುವುದಕ್ಕಿಂತ ಕಡಿಮೆಯ ಯಾವುದೇ ಪ್ರಸ್ತಾಪವನ್ನು ಒಪ್ಪುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳುತ್ತಾ ಬಂದಿದ್ದಾರೆ. ಅಂದರೆ ಅವರ ಉದ್ದೇಶ ಸ್ಪಷ್ಟವಾಗಿದೆ. ತೈವಾನ್ ವಶಪಡಿಸಿಕೊಳ್ಳುವುದು ಜಿನ್‌ಪಿಂಗ್ ಅವರಿಗೀಗ ಪ್ರತಿಷ್ಠೆಯ ವಿಷಯವಾಗಿ ಮಾರ್ಪಟ್ಟಿದೆ. ಅದರಲ್ಲಿ ಅವರು ಯಶಸ್ವಿಯಾದರೆ ಚೀನಾದ ಇತಿಹಾಸದಲ್ಲಿ ಆಗಿಹೋದ ಎಲ್ಲಾ ನಾಯಕರಿಗಿಂತ ಪ್ರಬಲ ನಾಯಕನೆಂಬ ಶಾಶ್ವತವಾದ ಹೆಗ್ಗಳಿಕೆಯನ್ನು ಗಳಿಸುತ್ತಾರೆ.

ಹಾಗೆ ನೋಡಿದರೆ ಚೀನಾ ಮತ್ತು ತೈವಾನ್ ನಡುವೆ ಮಿಲಿಟರಿ ಶಕ್ತಿಯಲ್ಲಿ ಬಹಳ ದೊಡ್ಡ ಅಂತರ ಇರುವುದು ನಿಜವೇ. ಆದರೆ, ಚೀನಾ ತನ್ನ ಮೇಲೆ ಯುದ್ಧ ಮಾಡಿದರೆ ಅಮೆರಿಕ ತನ್ನ ಬೆಂಬಲಕ್ಕೆ ಬರುತ್ತದೆ ಎಂಬ ಬಲವಾದ ನಂಬಿಕೆ ತೈವಾನ್‌ಗಿದೆ. ಇತ್ತೀಚೆಗೆ ಅಮೆರಿಕದ ಚಿಂತಕರ ಚಾವಡಿಯೊಂದು ನಡೆಸಿದ ಸಮೀಕ್ಷೆಯಲ್ಲಿ ಚೀನಾ ಏನಾದರೂ ತೈವಾನ್ ಮೇಲೆ ದಾಳಿ ನಡೆಸಿದರೆ ಜಯ ಸುಲಭವಿಲ್ಲ ಎಂಬ ಫಲಿತಾಂಶ ಬಂದಿದೆ. ಯುದ್ಧದಲ್ಲಿ 1,00,000 ಚೀನಿ ಸೈನಿಕರು ಸಾಯಬಹುದು. ತೈವಾನ್‌ನಲ್ಲಿ 50,000 ಯೋಧರು ಮತ್ತು 50,000 ನಾಗರಿಕರು ಸಾಯಬಹುದು. ಜೊತೆಗೆ 5,000 ಅಮೆರಿಕನ್ ಸೈನಿಕರೂ ಸಾಯಬಹುದು ಎಂದು ಅಂದಾಜಿಸಲಾಗಿದೆ. ಸಮೀಕ್ಷೆಯ ವರದಿ ಪ್ರಕಾರ, ಯುದ್ಧದ ಕೊನೆಯಲ್ಲಿ ಚೀನಾ ಬಲವಂತವಾಗಿ ಹಿಂದೆ ಸರಿಯಬೇಕಾಗಿ ಬರಬಹುದು. ಈ ಸಮೀಕ್ಷೆಯಲ್ಲಿ ಅಮೆರಿಕದ ಸೈನಿಕರ ಸಾವಿನ ಬಗ್ಗೆ ಪ್ರಸ್ತಾಪ ಮಾಡಿರುವುದರ ಅರ್ಥವೇನು? ಅದು ಸ್ಪಷ್ಟವಾಗಿದೆ. ತೈವಾನ್ ಮೇಲೆ ಚೀನಾ ಯುದ್ಧ ಸಾರಿದರೆ ತೈವಾನ್‌ಗೆ ಅಮೆರಿಕ ಬೆಂಬಲ ನೀಡುತ್ತದೆ ಎಂಬುದೇ ಇದರರ್ಥ. ಚೀನಾಕ್ಕೂ ಇದು ತಿಳಿದಿದೆ. ಆ ಕಾರಣದಿಂದಲೇ ಅದು ಈವರೆಗೆ ತೈವಾನ್ ಮೇಲೆ ದಾಳಿ ನಡೆಸಲು ಹೋಗಿಲ್ಲ. ಕಾಲಕಾಲಕ್ಕೆ ತೈವಾನ್‌ಗೆ ಅದು ದಾಳಿಯ ಬೆದರಿಕೆ ಒಡ್ಡುತ್ತಲೇ ಇದ್ದರೂ ನಿಜವಾದ ದಾಳಿಯನ್ನು ಮಾತ್ರ ನಡೆಸುತ್ತಿಲ್ಲ. ತೈವಾನ್ ಮೇಲೆ ಚೀನಾ ಯುದ್ಧ ನಡೆಸಿದರೆ ಅದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ. ಭಾರತಕ್ಕೂ ಅದರಿಂದ ದುಷ್ಪರಿಣಾಮಗಳೇ ಉಂಟಾಗುತ್ತವೆ.

ಜಗತ್ತಿನ ಎಲ್ಲಾ ದೇಶಗಳೂ ಒಂದು ಅಂತಿಮ ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು. ಯುದ್ಧ ಯಾವ ಸಮಸ್ಯೆಗೂ ಪರಿಹಾರವಲ್ಲ. ಅದು ಇತಿಹಾಸದಿಂದ ಸಾಬೀತಾಗಿರುವ ಸತ್ಯ. ಆದರೆ, ಆತುರದ ನಾಯಕರಿಗೆ ಇದರನ್ನು ಅರ್ಥ ಮಾಡಿಸುವವರು ಯಾರು?

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ದೇಶದ ಅಂತರಿಕ ಭದ್ರತೆಗೆ ಬಾಂಗ್ಲಾ ವಲಸಿಗರ ಸವಾಲು

ದೇಶದ ಗಡಿಯಲ್ಲಿ ಸೈನಿಕರು ಎಷ್ಟೇ ಕಟ್ಟೆಚ್ಚರವಿದ್ದರೂ, ಬಾಂಗ್ಲಾ ಗಡಿ ಹಂಚಿಕೊಂಡಿರುವ ಕೆಲವು ರಾಜ್ಯಗಳ ನೀತಿ, ಅಲ್ಲಿ ತಾಂಡವವಾಡುತ್ತಿರುವ ನಿರುದ್ಯೋಗ ಸಮಸ್ಯೆ, ಅಲ್ಲಿನ ರಾಜಕೀಯ ಅರಾಜಕತೆ ಇಡೀ ಭಾರತಕ್ಕೆ ತಟ್ಟುತ್ತಿದೆ. ನಮ್ಮ ದೇಶದಲ್ಲಿ ಇರುವ ಕೆಲವು ಧರ್ಮಾಂಧರ ಧರ್ಮದ ಮೇಲಿನ ಪ್ರೀತಿ ಹಾಗೂ ಕೆಲವು ಹೊಲಸು ರಾಜಕಾರಣಿಗಳ ಮತ ಬ್ಯಾಂಕಿನ ಕಾರಣಗಳಿಂದಾಗಿ ಬಾಂಗ್ಲಾ ವಲಸಿಗ ನುಸುಳುಕೋರರು ದೇಶದ ಅಂತರಿಕ ಭದ್ರತೆಗೆ ಅಪಾಯಕಾರಿಯಾಗುತ್ತಿದ್ದಾರೆ. ನಮ್ಮ ದೇಶದಲ್ಲಿ ಇರುವ ಕೆಲವು ಬುದ್ಧಿ ಜೀವಿಗಳು ಹಾಗೂ ಜಾತ್ಯತೀತ ಮನಸ್ಸಿನವರು ಹಾಗೂ ಮಾನವಹಕ್ಕು ಹೋರಾಟಗಾರರಿಗೆ ಬಾಂಗ್ಲಾದಲ್ಲಿ ನಡೆಯುತ್ತಿರುವ ಹಿಂದೂಗಳ ಮೇಲಿನ ದೌರ್ಜನ್ಯಗಳನ್ನು ಖಂಡಿಸಲು ಸಹ ಸಮಯವಿಲ್ಲ. ಯಾಕೆಂದರೆ ಎಲ್ಲೇ ಹಿಂದೂಗಳ ಮೇಲೆ ದೌರ್ಜನ್ಯ ನಡೆದರೂ ಅವರ ವ್ಯಾಪ್ತಿಗೆ ಬರುವುದಿಲ್ಲ. ಹಿಂದೂಗಳ ಹೊರತುಪಡಿಸಿ ಅನ್ಯಮತಿಯರ ಮೇಲೆ ದೌರ್ಜನ್ಯವಾದರೆ ಅಲ್ಲಿ ಈ ಭಟ್ಟಂಗಿಗಳು ತಮ್ಮ ಹೋರಾಟಗಳ ಮೂಲಕ ಎಚ್ಚರವಾಗುತ್ತಾರೆ. ಒಂದು ಮಾಹಿತಿಯ ಪ್ರಕಾರ ದೇಶದ ಹಲವಾರು ರಾಜ್ಯಗಳಲ್ಲಿ ಬಾಂಗ್ಲಾದವರು ವಾಸಮಾಡುತ್ತಿದ್ದು ಅವರು ವಾಸಮಾಡಲು ಸಹಕಾರ ನೀಡುತ್ತಿರುವವರು ಸಹ ಇಲ್ಲಿಯವರೆ. ಅವರು ಬಂದಾಗ ಅವರ ಹಿನ್ನೆಲೆ ತಿಳಿಯದೆ ಕೇವಲ ದುಡ್ಡಿನ ಆಸೆಗಾಗಿ ಅವರಿಗೆ ತಮ್ಮ ಮನೆಗಳು ಹಾಗೂ ಗುಡಿಸಲು ನಿರ್ಮಾಸಿಕೊಳ್ಳಲು ಖಾಲಿ ಭೂಮಿ ಬಾಡಿಗೆಗೆ ಕೊಡಲಾಗುತ್ತದೆ. ಅಕ್ಕಪಕ್ಕದ ಸ್ಥಳೀಯರು ಸಹ ಪಕ್ಕದಲ್ಲಿ ಇರುವ ಬಾಡಿಗೆದಾರರ ಬಗ್ಗೆಯಾಗಲಿ ಹಾಗೂ ಅವರ ಚಲನವಲನಗಳ ಬಗ್ಗೆ ಗಮನಿಸದಿರುವುದು ದೊಡ್ಡ ತಪ್ಪು. ಇನ್ನು ದೇಶಕ್ಕೆ ಆಕ್ರಮವಾಗಿ ನುಸುಳುಕೋರರಿಗೆ ಬೇಕಾದ ಆಧಾರ್ ಕಾರ್ಡ್ ಮತದಾರರ ಚೀಟಿ ಇವೆಲ್ಲವೂ ಇಲ್ಲಿ ಹೇಗೆ ಸಿಗುತ್ತಿವೆ? ಎನ್ನುವುದೇ ಪ್ರಶ್ನೆ. ಪೊಲೀಸ್ ಇಲಾಖೆ ತಮ್ಮ ವ್ಯಾಪ್ತಿಯಲ್ಲಿ ಬರುವ ಯಾವುದೇ ಸರಕಾರದ ಖಾಲಿ ಜಾಗದಲ್ಲಿ ಜೋಪಡಿ ನಿರ್ಮಾಣ ಮಾಡಿ ವಾಸಮಾಡುವವರ ಬಗ್ಗೆ ಮಾಹಿತಿ ಕಲೆ ಹಾಕಿ ಅಕ್ರಮ ವಲಸಿಗರನ್ನು ಪತ್ತೆ ಹಚ್ಚುವ ಮಾಡುತ್ತಿರುವ ಕೆಲಸ ತುಂಬಾ ವಿರಳ. ಒಕ್ಕೂಟ ರಾಷ್ಟ್ರದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಹೋಗಿ ಉದ್ಯೋಗ ಮಾಡುವ ಅಧಿಕಾರ ಪ್ರತಿಯೊಬ್ಬ ಭಾರತೀಯನಿಗೂ ಇದೆ. ಕೆಲವರು ಭಾಷೆಯ ಹಾಗೂ ಗಡಿಯ ಹೆಸರಿನಲ್ಲಿ ವಿರೋಧ ಮಾಡುವ ಮಾನಸಿಕತೆ ಇರುವವರು, ಅದೇ ಆಕ್ರಮವಾಗಿ ಭಾರತಕ್ಕೆ ಬಂದು ನಮ್ಮ ಜನಗಳ ಉದ್ಯೋಗ ಕಸಿದು ಹಾಗೂ ಗಾಂಜಾ ಅಫೀಮು ಕಳ್ಳತನದಂತಹ ನಮ್ಮ ದೇಶದ ಭದ್ರತೆಗೆ ಸವಾಲು ಆಗಿರುವವರ ಬಗ್ಗೆ ಮಾತ್ರ ಬೇರೆಯದೆ ಧೋರಣೆ ತೋರುತ್ತಾರೆ.

-ಅಗ್ನಿಹೋತ್ರಿ ಲೋಕೇಶ್ ಶರ್ಮಾ

ಭಟ್ಟರ್ ಸ್ಕಾಚ್

- **ರಾಜೇಶ್ ರಾವ್, ಬೆಂಗಳೂರು**
ಭಟ್ರೇ, ನಿಮ್ಮ ವಿರುದ್ಧ ಉಡುಪಿಯಲ್ಲಿ ಪ್ರೆಸ್ ಮೀಟ್ ಮಾಡಿದರಂತೆ?
– **ಹೂಂ.. ಭಾಗವಹಿಸಿದ ಪತ್ರಕರ್ತರು, ಸಿಕ್ಕ ಕವರೇಜ್‌ಗಿಂತ, ಪ್ರೆಸ್ ಮೀಟ್ ಉದ್ದೇಶಿಸಿ ಮಾತಾಡಿದವರ ಸಂಖ್ಯೆ ಮತ್ತು ಮಾತೇ ಜಾಸ್ತಿಯಾಗಿತ್ತಂತೆ!**

- **ಪುರುಷೋತ್ತಮ ಕೆ, ಮಂಗಳೂರು**
ಭಟ್ರೇ, ನಾಯಿಯಂತೆ ನಮ್ಮ ಮೈಯನ್ನು ನಾವೇ ನೆಕ್ಕಿಕೊಳ್ಳಬಾರದು ಅಂತಾರಲ್ಲ?
– **ಬೇರೆಯವರ ಮೈಯನ್ನು ನೆಕ್ಕುವುದಕ್ಕಿಂತ, ಅದೇ ವಾಸಿ!**

- **ಪಿ.ಸುಮಲತಾ, ಬೆಂಗಳೂರು**
ಭಟ್ರೇ, ರಾಜಕಾರಣಿಗಳು ಸುಳ್ಳು ಹೇಳುವುದನ್ನು ಯಾವಾಗ ನಿಲ್ಲಿಸುತ್ತಾರೆ?
– **ಯಾವಾಗ ಅವರು ಮಾತನಾಡಬಾರದೆಂದು ನಿರ್ಧರಿಸುತ್ತಾರೋ ಆಗ..!**

- **ಪಿ.ಸುರೇಶ ರಾವ್, ಮೈಸೂರು**
ಭಟ್ರೇ, ಪ್ರೀತಿ ಮತ್ತು ಮದುವೆಗೆ ಇರುವ ವ್ಯತ್ಯಾಸವೇನು?
– **ಪ್ರೀತಿ ಎಂಬುದು ಸುಂದರವಾದ ಕನಸು, ಮದುವೆ ಎಂಬುದು ಆ ಕನಸಿನಿಂದ ನಿಮ್ಮನ್ನು ಎಬ್ಬಿಸುವ 'ಅಲಾರಾಂ'!**

- **ಪಿ.ವಿ.ಪ್ರಭಾಕರ, ಉಡುಪಿ**
ಭಟ್ರೇ, ದೇವರು ಎಲ್ಲರಿಗೂ ಬುದ್ಧಿಯನ್ನು ಕೊಟ್ಟಿದ್ದಾನಲ್ಲವೇ?
– **ಖಂಡಿತ ಕೊಟ್ಟಿದ್ದಾನೆ, ಆದರೆ ಕೆಲವರು ಅದನ್ನು 'ಶೋಕೇಸ್'ನಲ್ಲಿ ಇಟ್ಟಿರುತ್ತಾರೆ!**

- **ಶಂಕರ ಶರ್ಮ, ಬೈಂದೂರು**
ಭಟ್ರೇ, ದೇವರಿಗೂ ಮತ್ತು ತಾಳಮದ್ದಳೆ ಅರ್ಥಧಾರಿಗೂ ಇರುವ ವ್ಯತ್ಯಾಸವೇನು?
– **ದೇವರಿಗೆ ಎಲ್ಲವೂ ತಿಳಿದಿದೆ ಆದರೆ ಏನೂ ಹೇಳುವುದಿಲ್ಲ.. ಮುಂದಿನ ಸಾಲು ನಿನಗೆ ಗೊತ್ತಿದೆ!**

- **ಮೋಹನ ತಾರೆಮಕ್ಕಿ, ಶಿರಸಿ**
'ಭಟ್ಟರ ಸ್ಕಾಚ್'ನಲ್ಲಿ ಅರ್ಥಧಾರಿಗಳ ಬಗ್ಗೆ ಯಾವಾಗ ನಿಲ್ಲುತ್ತದೆ?
– **ನೀನು ಮತ್ತು ನಿನ್ನಂತೆ ಅನೇಕರು ಈ ಕುರಿತು ಪ್ರಶ್ನೆ ಕೇಳುವುದನ್ನು ನಿಲ್ಲಿಸಿದಾಗ!**

- **ಶ್ರೀ ಪೂಜಾರಿ, ಕೊಳ್ಳೂರು**
ಭಟ್ರೇ, ಒಬ್ಬ ಯಶಸ್ವಿ ಪುರುಷನ ಪಕ್ಕದಲ್ಲಿ ಒಬ್ಬ ಮಹಿಳೆ ಇರುತ್ತಾಳೆ ಅಂತಾರಲ್ಲ?
– **ಹೂಂ.. ಅವಳ ಪಕ್ಕದಲ್ಲಿ ಅವನ ಹೆಂಡತಿ ಇರುತ್ತಾಳೆ!**

ಖಗೋಳ-ಭೂಗೋಳ ಬೆಸೆದ ಶ್ರೀನಿವಾಸ



ಕಾಡುದಾರಿ

ಹರೀಶ್ ಕೇರ
vveditoped@gmail.com

ವೆನೆಜುವೆಲಾವನ್ನು ನುಂಗಿ ನೊಣೆದು ಈಗ ಇರಾನನ್ನು ಮುಕ್ಕಿ ಮುಗಿಸಲು ಅಮೆರಿಕದ ಹೊಂಚು. ಸಿರಿಯಾದ ಮೇಲೆ ಮುಗಿಬಿದ್ದ ಇಸ್ರೇಲ್. ಉಕ್ರೇನನ್ನು ಧೂಳೀಪಟ ಮಾಡುತ್ತಿರುವ ರಷ್ಯಾ. ಇದೆಲ್ಲದರ ಮಧ್ಯೆ ದೇಶ-ದೇಶಗಳನ್ನು ಪರಸ್ಪರ ಎತ್ತಿ ಕಟ್ಟಿ ತನ್ನ ಲಾಭ ಮಾಡಿಕೊಳ್ಳುತ್ತಿರುವ ಚೀನಾ. ಅಂತರ್ಯುದ್ಧದಿಂದ ಬೆದರಿರುವ ಯುರೋಪ್. ತೀವ್ರ ವೇಗದಲ್ಲಿ ಮುಗಿಯುತ್ತಿರುವ ತೈಲನಿಕ್ಷೇಪದ ಮೇಲೆ ಗಾಬರಿಯಿಂದ ಕಣ್ಣು ಹಾಯಿಸುತ್ತಿರುವ ಗಲ್ಫ್ ದೇಶಗಳು. ಜನಾಂಗಹತ್ಯೆಗಳಿಂದ ಕಂಗಾಲಾಗಿರುವ ಆಫ್ರಿಕ, ಲ್ಯಾಟಿನ್ ಅಮೆರಿಕದ ದೇಶಗಳು. ಎಲ್ಲ ಕಡೆ ಒಬ್ಬರು ಇನ್ನೊಬ್ಬರನ್ನು ನಂಬಲಾಗದ, ಕತ್ತಿ ಮಸೆಯುತ್ತಿರುವ ಸ್ಥಿತಿ.

ಈ ನಡುವೆ ನಿಜಕ್ಕೂ ಮಾನವ ಜನಾಂಗವನ್ನು ತುಸುವಾದರೂ ಒಂದು ಮಾಡುತ್ತಿರುವವರು ವಿಜ್ಞಾನಿಗಳು ಮಾತ್ರ. ಅದರಲ್ಲೂ ಖಗೋಳ ಶಾಸ್ತ್ರಜ್ಞರು, ಖಭೌತಜ್ಞರು. ಸಿಹಿ ಸುದ್ದಿ ಏನೆಂದರೆ ಭಾರತ ಮೂಲದ ಖಗೋಳವಿಜ್ಞಾನಿ ಶ್ರೀನಿವಾಸ ಆರ್. ಕುಲಕರ್ಣಿ ಅವರಿಗೆ ಲಂಡನ್ನಿನ ಪ್ರತಿಷ್ಠಿತ 'ರಾಯಲ್ ಅಸ್ಟ್ರೋನಾಮಿಕಲ್ ಸೊಸೈಟಿ' ಕೊಡುವ 2026ನೇ ಸಾಲಿನ ಚಿನ್ನದ ಪದಕ ದೊರೆತಿದೆ. ಈ ಪ್ರಶಸ್ತಿಗೆ 200 ವರ್ಷಗಳ ಇತಿಹಾಸ. ಆಲ್ಬರ್ಟ್ ಐನ್‌ಸ್ಟೈನ್, ಸ್ಟೀಫನ್ ಹಾಕಿಂಗ್ ಮತ್ತು ಎಡ್ವಿನ್ ಹಬಲ್‌ರಂತಹ ಮಹಾನ್ ವಿಜ್ಞಾನಿಗಳು ಇದನ್ನು ಈ ಹಿಂದೆ ಪಡೆದವರು ಎಂದರೆ ಸಾಕಲ್ಲ.

ಈ ಶ್ರೀನಿವಾಸ ಕುಲಕರ್ಣಿಯವರು ನಮ್ಮ ಹುಬ್ಬಳ್ಳಿಯವರು. ಸುಧಾ ಮೂರ್ತಿ ಅವರ ಸಹೋದರ. ಕೆಲವು ತಿಂಗಳ ಹಿಂದೆ ವಿಶ್ವವಾಣಿ ಪತ್ರಿಕೆ ಹಾಗೂ ವಿಶ್ವವಾಣಿ ಟಿವಿ ವಾಹಿನಿಯು ಶ್ರೀನಿವಾಸ ಕುಲಕರ್ಣಿಯವರ ಸಂದರ್ಶನ ಮಾಡಿತ್ತು. ಆಗ ಅವರಿಗೆ ಖಗೋಳಶಾಸ್ತ್ರದಲ್ಲಿ ನೀಡಿದ ಕೊಡುಗೆಗಾಗಿ 2024ರ ಪ್ರತಿಷ್ಠಿತ 'ಶಾ' ಪ್ರಶಸ್ತಿ (Shaw Prize) ಸಂದಿತ್ತು. ಅದು ನೊಬೆಲ್ ಆಫ್ ದಿ ಈಸ್ಟ್ ಎಂದೇ ಖ್ಯಾತ. ಕುಲಕರ್ಣಿಯವರು ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರೊಫೆಸರ್. ರಾಯಲ್ ಸೊಸೈಟಿ ಆಫ್ ಲಂಡನ್, ಅಮೆರಿಕದ ಹಾಗೂ ಭಾರತದ ವೈಜ್ಞಾನಿಕ ಅಕಾಡೆಮಿಗಳ ಸದಸ್ಯರೂ ಹೌದು. ಹುಟ್ಟಿದ್ದು ಭಾರತದಲ್ಲಿ, ನೆಲೆಸಿರುವುದು ಅಮೆರಿಕದಲ್ಲಿ, ಪಡೆದಿರುವುದು ಇಂಗ್ಲೆಂಡ್‌ನ ಪುರಸ್ಕಾರ. ವಿಜ್ಞಾನಿಗಳು, ಕಲಾವಿದರಷ್ಟೇ ಹೀಗೆ ಮನುಷ್ಯನಿರ್ಮಿತ ಸೀಮೆಗಳನ್ನು ಮೀರುತ್ತಾರೆ.

ಹುಬ್ಬಳ್ಳಿ ಸೆಂಟ್ರಲ್ ಸ್ಕೂಲ್, ಧಾರವಾಡ ಯೂನಿವರ್ಸಿಟಿಯಲ್ಲಿ ಓದಿ ಕಲಿತ ಶ್ರೀನಿವಾಸ್, ಬೆಂಗಳೂರಿನ ರಾಮನ್ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆದ ವಿಜ್ಞಾನ ಪ್ರದರ್ಶನಕ್ಕೆ ಹೋಗಿ ಅಲ್ಲಿ ಖಗೋಳ ವಿಜ್ಞಾನವೇ ನನ್ನ ಕ್ಷೇತ್ರ ಎಂಬ ಪ್ರೇರಣೆ ಪಡೆದು, ನಂತರ ಬರ್ಕ್ಲಿಗೆ ಹೋಗಿ ರೇಡಿಯೋ ಆಸ್ಟ್ರೋನಮಿ ಅಧ್ಯಯನ ಮಾಡಿ, ಬ್ರಹ್ಮಾಂಡದ ಮೇಲೆ ಸದಾಕಾಲ ದೂರದರ್ಶಕಗಳ ಕಣ್ಣಿಟ್ಟು ನಾನಾ ಸಂಶೋಧನೆಗಳನ್ನು ಮಾಡಿ ನೊಬೆಲ್‌ಗೆ ಸಮಾನವಾದ ಪ್ರಶಸ್ತಿ ಪಡೆದದ್ದು ರೋಚಕ ಕತೆ. ನಿಮ್ಮ ಜೀವನಕತೆ ಬರೆಯಿರಿ ಎಂದು ವಿಶ್ವವಾಣಿ ಹೇಳಿದಾಗ ಈ ವಿನಯವಂತ ಮನುಷ್ಯ ಹೇಳಿದ್ದಿಷ್ಟು-'ಆತ್ಮಕತೆ ಬರೆಯುವ ಯೋಚನೆ ಇಲ್ಲ. ಐನ್‌ಸ್ಟೈನ್ ಅಂಥವರಾದರೆ ಬರೆಯಬೇಕು. ನಾನು ಅವರ ಸಾವಿರದ ಒಂದಂಶವೂ ಇಲ್ಲ'.

ಬ್ರಹ್ಮಾಂಡದಲ್ಲಿ ಕಂಡುಬರುವ ಕಂದು ಕುಬ್ಜಗಳ (Brown Dwarfs) ಬಗ್ಗೆ ಕುಲಕರ್ಣಿಯವರ ಅಧ್ಯಯನ ಮಹತ್ವದ್ದು. ನಮ್ಮ ಸೂರ್ಯ, ಗುರು ಗ್ರಹ ಇವೆಲ್ಲ ಅನಿಲಗಳ ಮೊತ್ತ. ಸೂರ್ಯನೊಳಗೆ ಇರುವ ಜಲಜನಕ, ಹೀಲಿಯಂ ಮತ್ತಿತರ ಅನಿಲಗಳು ಗುರುವಿನೊಳಗೂ ಇವೆ. ಆದರೆ ಸೂರ್ಯನಿಂದ ಬೃಹತ್ ಶಕ್ತಿ ಹಾಗೂ ಬೆಳಕು ಹೊಮ್ಮುತ್ತದೆ. ಇದಕ್ಕೆ ಕಾರಣ, ಸೂರ್ಯನಲ್ಲಿ ನ್ಯೂಕ್ಲಿಯರ್ ಫ್ಯೂಶನ್ ಆಗಿ ಜಲಜನಕ ಹೀಲಿಯಂ ಆಗಿ ಪರಿವರ್ತನೆಯಾಗುತ್ತದೆ. ಇದು ಶಕ್ತಿ ಹಾಗೂ ಬೆಳಕನ್ನು ಹೊಮ್ಮಿಸುತ್ತದೆ. ಆದರೆ ಗುರುವೆಂಬ ಅನಿಲದ ಉಂಡೆ ತಣ್ಣಗಾಗುತ್ತ ಹೊರಟಿದೆ. ಭಾರತೀಯ ಮೂಲದ ಶಿವಕುಮಾರ್ ಎಂಬ ಖಗೋಳಶಾಸ್ತ್ರಜ್ಞ ಒಂದು ಪ್ರಮೇಯ ಮಂಡಿಸಿದ್ದರು- ಸೂರ್ಯ ತನ್ನ ಗಾತ್ರದ ಹತ್ತನೇ ಒಂದರಷ್ಟು ಸಣ್ಣದಾದರೆ ಅದರ ಶಕ್ತಿ, ಬೆಳಕು ಅಷ್ಟು ಕಡಿಮೆಯಾಗುತ್ತದೆ. ಅದನ್ನು ಕಂದು ಕುಬ್ಜ ಎನ್ನಲಾಗುತ್ತದೆ. ಇದು ಥಿಯರಿ ಆಗಿ ಇತ್ತು. ಶ್ರೀನಿವಾಸ ಅವರ ತಂಡ ಅಧ್ಯಯನದ ಮೂಲಕ 1995ರಲ್ಲಿ ಇದನ್ನು ನಿಜ ಎಂದು ತೋರಿಸಿತು. ಗುರು ಎಂದರೆ ಸೂರ್ಯನ ಸಾವಿರದ ಒಂದನೇ ಭಾಗ, ಕಂದು ಕುಬ್ಜ ಅಂದರೆ ಹತ್ತನೇ ಒಂದು ಭಾಗ. ನಕ್ಷತ್ರಗಳಲ್ಲಿ ವಿವಿಧ ಹಂತಗಳನ್ನು ನಿರೂಪಿಸಲು ಈ ಅಧ್ಯಯನ ನೆರವಾಯಿತು.



ನಕ್ಷತ್ರಗಳ ಅಂತಿಮಹಂತವಾದ ಸೂಪರ್ ನೋವಾಗಳ ಬಗೆಗೂ ಕುಲಕರ್ಣಿ ಅಧ್ಯಯನ ಮಾಡಿದ್ದಾರೆ. ಸೂರ್ಯನಿಗಿಂತ ಹತ್ತು ಪಟ್ಟು ಗಾತ್ರದ ನಕ್ಷತ್ರಗಳು ಅಷ್ಟೇ ಪ್ರಮಾಣದ ಶಕ್ತಿ ಉತ್ಪಾದಿಸುತ್ತವೆ. ಆದರೆ ಅವುಗಳ ನ್ಯೂಕ್ಲಿಯರ್ ಫ್ಯೂಶನ್ ಆಗಿ ನ್ಯೂಟ್ರಾನ್ ಸ್ಟಾರ್ ಆಗುತ್ತದೆ. ನ್ಯೂಟ್ರಾನ್ ಸ್ಟಾರ್ ಅಂದರೆ ಅಲ್ಲಿ ಬರೀ ನ್ಯೂಟ್ರಾನ್ ಇರುತ್ತದೆ. ಅದರ ತೂಕ ಸೂರ್ಯನಷ್ಟೇ ಇರಬಹುದು, ಆದರೆ ಗಾತ್ರ ಬೆಂಗಳೂರಿಗಿಂತ ಕಡಿಮೆ ಇರುತ್ತದೆ. ಅಂತಿಮವಾಗಿ ಇದು ಸ್ಫೋಟಿಸುವುದೇ ಸೂಪರ್ ನೋವಾ. ಇದು ನಕ್ಷತ್ರದ ಕೊನೆಯ ಹಂತ. ಸೂಪರ್‌ನೋವಾ ಅನ್ನು ಗುರುತಿಸುವುದು ಹೇಗೆಂದರೆ, ಭೂಮಿಯಿಂದ ದೂರದರ್ಶಕದ ಮೂಲಕ ಪ್ರತಿನಿತ್ಯ ಅವುಗಳ ಚಿತ್ರ ತೆಗೆಯುವುದು ಮತ್ತು ಅವುಗಳಲ್ಲಿ ಆಗುವ ಬದಲಾವಣೆ ಗುರುತಿಸುವುದು. ಸ್ಫೋಟಗೊಂಡ ನಂತರದ ನಕ್ಷತ್ರ ಶತಕೋಟಿ ಪಟ್ಟು ಹೆಚ್ಚಿನ ಬೆಳಕು ಸೂಸುತ್ತದೆ. 2015ಕ್ಕೂ ಮೊದಲು ವಿಶ್ವದಲ್ಲಿ ವರ್ಷಕ್ಕೆ ನೂರು ಸೂಪರ್‌ನೋವಾ ಕಾಣಸಿಗುತ್ತಿತ್ತಂತೆ. ಈಗ ಪ್ರತಿರಾತ್ರಿ ಕನಿಷ್ಠ 10 ಕಾಣಸಿಗುತ್ತದಂತೆ. ಇನ್ನು ನಾವಿರುವ ನಕ್ಷತ್ರಪಥದಲ್ಲಿ (Galaxy) ಸುಮಾರು ನೂರು ವರ್ಷಕ್ಕೊಂದು ಸೂಪರ್‌ನೋವಾ ಸಂಭವಿಸಬಹುದು ಅಷ್ಟೆ.

ಈ ಸೂಪರ್‌ನೋವಾ ಸೂರ್ಯನಿಗೂ ಸಂಭವಿಸಬಹುದು ಎಂಬುದರಲ್ಲಿ ಅನುಮಾನವಿಲ್ಲ. ಹಾಗೆ ಆದರೆ ಅದನ್ನು ಸೌರವ್ಯೂಹದ ಕೊನೆ ಎನ್ನಬಹುದು. ಅದಕ್ಕೆ ಇನ್ನೂ ಐನೂರು ಕೋಟಿ ವರ್ಷಗಳಾಗಬಹುದು. ಆದರೆ ಅದಕ್ಕೂ ಮೊದಲೇ ನಮ್ಮ ಭೂಮಿ ಬೇರೆ ಬೇರೆ ಕಾರಣಗಳಿಗಾಗಿ ನಾಶ ಆಗುತ್ತದೆ. ಕ್ಷುದ್ರಗ್ರಹಗಳ ಡಿಕ್ಕಿಯಿಂದ ಇರಬಹುದು, ಡೈನೋಸಾರ್‌ಗಳ ನಾಶ ಆದದ್ದು ಹಾಗೆಯೇ. ಕ್ಷುದ್ರ ಗ್ರಹಗಳು ಯಾವಾಗ ಭೂಮಿಗೆ ಅಪ್ಪಳಿಸಬಹುದು ಎಂದು ತಿಳಿಯಲು ನೂರು ಶೇಕಡಾ ನಿಖರ ತಂತ್ರಜ್ಞಾನ ನಮಗಿನ್ನೂ ಲಭ್ಯವಾಗಿಲ್ಲ. ಜಾಗತಿಕ ತಾಪಮಾನದಿಂದಲೋ, ಪರಮಾಣು ಬಾಂಬ್‌ಗಳ ಬಳಕೆಯಿಂದಲೋ ನಾಶವಾಗಬಹುದು- ಎನ್ನುತ್ತಾರೆ ಶ್ರೀನಿವಾಸ ಕುಲಕರ್ಣಿ. ಬಹುಶಃ ಅಣ್ವಸ್ತ್ರಶಕ್ತ ರಾಷ್ಟ್ರಗಳು ವರ್ತಿಸುತ್ತಿರುವ ರೀತಿ ನೋಡಿದರೆ ಭೂಗ್ರಹದ ನಾಶಕ್ಕೆ ಇನ್ನು ನೂರು ವರ್ಷ ಕೂಡ ಕಾಯಬೇಕಿಲ್ಲ ಅನಿಸುತ್ತದೆ.

ಶ್ರೀನಿವಾಸ ಕುಲಕರ್ಣಿ ಅವರು ಯಾವಾಗಲೂ ಬೃಹತ್ ದೂರದರ್ಶಕಗಳಲ್ಲಿ ಬ್ರಹ್ಮಾಂಡದತ್ತ ಕಣ್ಣು ನೆಟ್ಟು ಕೂತಿರುತ್ತಾರೆ. ಅಲ್ಲಿ ಉಂಟಾಗುವ ಸಣ್ಣಪುಟ್ಟ ಚಲನೆಗಳೂ ಬ್ರಹ್ಮಾಂಡದ ಮಹತ್ವದ ಬೆಳವಣಿಗೆಗಳನ್ನು ಸಂಕೇತಿಸಬಲ್ಲವು. ಉದಾಹರಣೆಗೆ, ಏಲಿಯನ್‌ಗಳಿಂದ ಬರಬಹುದಾದ ರೇಡಿಯೋ ಸಿಗ್ನಲ್‌ಗಳ ಬಗೆಗೆ ಸೆಟಿ (ಸರ್ಚ್ ಫಾರ್ ಎಕ್ಸ್ಟ್ರಾ ಟೆರೆಸ್ಟ್ರಿಯಲ್ ಒಬ್ಜೆಕ್ಸ್) ಎಂಬ ಸಂಸ್ಥೆ ಅಧ್ಯಯನ ಮಾಡುತ್ತಿದೆ. ಈಗ ನಾವು ದೂರದಿಂದ ಭೂಮಿಯನ್ನು ನೋಡಿದರೆ ಇಲ್ಲಿ ವಿಶಿಷ್ಟ ಅನಿಲಗಳು ಇರುವುದನ್ನು ಹೇಳಬಹುದು- ಆಮ್ಲಜನಕ, ಜಲಜನಕ, ಮೀಥೇನ್ ಹೀಗೆ. ಇಂಥ ಕಾಂಬಿನೇಶನ್ ಜೀವ ಬದುಕುಳಿಯಲು ಅಗತ್ಯ. 'ನನ್ನನ್ನೂ ಸೇರಿದಂತೆ ತುಂಬಾ ವಿಜ್ಞಾನಿಗಳು, ಇತರ ಗ್ರಹಗಳಲ್ಲಿ ಜೀವಿಗಳಿರಬಹುದು ಎಂಬುದನ್ನು ನಂಬುತ್ತೇವೆ. ನಮ್ಮ ಗ್ಯಾಲಾಕ್ಸಿಯಲ್ಲೇ ಇರಬಹುದು. ಆದರೆ ದೂರಪ್ರಯಾಣ ಅಸಾಧ್ಯವಾದ್ದರಿಂದ ಸಂಪರ್ಕಿಸಲು ಸಾಧ್ಯವಾಗಿಲ್ಲ. ನಮ್ಮ ಅತೀ ಹತ್ತಿರದ ನಕ್ಷತ್ರವೇ ನಮ್ಮಿಂದ ನಾಲ್ಕು ಬೆಳಕಿನ ವರ್ಷಗಳಷ್ಟು ದೂರವಿದೆ. ಇನ್ನು ಜೀವಾಂಶ ಇರುವ ಹತ್ತಿರದ ಇನ್ನೊಂದು ಗ್ರಹ ನಮಗಿಂತ ಸಾವಿರ ಬೆಳಕಿನ ವರ್ಷ ದೂರವಿರಬಹುದು. ಆದರೆ ಅಷ್ಟು ವರ್ಷ ಭೂಮಿಯ ಮೇಲೆ ನಾವೇ ಇರುತ್ತೇವೋ ಇಲ್ಲವೋ ಹೇಳಲಾಗದು. ಇಂದಿಗೆ ಹತ್ತು ಸಾವಿರ ವರ್ಷಗಳ ಹಿಂದೆ ಮನುಷ್ಯರೇ ಈಗಿರುವಂತೆ ಇರಲಿಲ್ಲ' ಎನ್ನುತ್ತಾರೆ.

ಭಾರತದಿಂದ ಕಲಿತು ಹೋದ ಕುಲಕರ್ಣಿ ಅವರಿಗೆ ಭಾರತಕ್ಕಾಗಿ ಏನಾದರೂ ಮಾಡಬೇಕೆಂಬ ಆಸೆ ಪ್ರಬಲವಾಗಿದೆ. ಇನ್ಫೋಸಿಸ್ ಸೈನ್ಸ್ ಫೌಂಡೇಶನ್‌ನಲ್ಲೂ ಇವರಿದ್ದಾರೆ. 30 ಮೀಟರ್‌ನ ವಿಶ್ವದ ಬೃಹತ್ ಆಪ್ಟಿಕಲ್ ಟೆಲಿಸ್ಕೋಪ್ ಪ್ರಾಜೆಕ್ಟ್ ಹವಾಯಿಯಲ್ಲಿ ನಿರ್ಮಾಣವಾಗುತ್ತಿದೆ. ಅದರ ಸೂಕ್ಷ್ಮ ಬಿಡಿಭಾಗಗಳು ಬೆಂಗಳೂರಿನ ಹೊಸಕೋಟೆ ಬಳಿ ತಯಾರಾಗಿ ಹೋಗಬೇಕು. 2010ರಲ್ಲಿ ಮನಮೋಹನ್ ಸಿಂಗ್ ನೇತೃತ್ವದ ಸರಕಾರ ಇದ್ದಾಗ 'ಈ ವಿಷಯದಲ್ಲಿ ನಾವು ಅಮೆರಿಕ, ಚೀನಾ ಜಪಾನ್‌ಗಿಂತ ಯಾವಾಗಲೂ ಹಿಂದೆ ಬೀಳುತ್ತೇವೆ. ರಿಸ್ಕ್ ತಗೊಂಡು ಮಾಡೋಣ' ಎಂದು ಕುಲಕರ್ಣಿಯವರು ಸಿಂಗ್ ಮನವೊಲಿಸಿದ್ದರು. ಹೊಸಕೋಟೆಯಲ್ಲಿ ತಯಾರಿ ಕೆಲಸ ಮುಂದುವರಿದಿದೆ. ಇದರಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಜತೆಗೆ ಇನ್ನೂ 70 ಸಂಸ್ಥೆಗಳು ಸೇರಿಕೊಂಡಿವೆ. ಇದು ಪೂರ್ಣ ಕಾರ್ಯಸಾಧ್ಯವಾದಾಗ ಭಾರತದ್ದೇ ಸ್ವಂತ ಆಧುನಿಕ ಟೆಲಿಸ್ಕೋಪ್ ಅಧ್ಯಯನಕ್ಕೆ ಲಭ್ಯವಾಗುತ್ತದೆ. ಜಪಾನ್, ಅಮೆರಿಕ ಮೊದಲಾದ ರಾಷ್ಟ್ರಗಳಿಗೆ ಈ ವಲಯದಲ್ಲಿ ನಾವು ಆಗ ಸರಿಗಟ್ಟಬಹುದು.

ಕುಲಕರ್ಣಿಯವರ ಪ್ರಕಾರ ಸರಕಾರಗಳು ಮೂಲವಿಜ್ಞಾನದ ಕಲಿಕೆಯನ್ನು ಆದ್ಯತೆಯಾಗಿ ತೆಗೆದುಕೊಳ್ಳಬೇಕು. ಪ್ರಾಥಮಿಕ ಶಾಲೆಯಿಂದಲೇ ಖಗೋಳಶಾಸ್ತ್ರ ಕಲಿಸಬೇಕು. ಜಪಾನ್, ಕೊರಿಯಾ, ತೈವಾನ್‌ನಂಥ ಸಣ್ಣ ದೇಶಗಳು ಕೂಡ ತುಂಬಾ ವೇಗದಲ್ಲಿ ಈ ಕ್ಷೇತ್ರದಲ್ಲಿ ಮುಂದುವರಿಯುತ್ತಿವೆ. ನಮಗಿರುವ ಈ ಅಂತರವನ್ನು ಗುರುತಿಸಿ ಸರಿಪಡಿಸಿಕೊಳ್ಳಬೇಕು. 50 ವರ್ಷದ ಹಿಂದೆ ನಮಗೆ ನಮ್ಮದೇ ಸಂಪರ್ಕ ವ್ಯವಸ್ಥೆಗಾಗಿ ಹಾಗೂ ಕೃಷಿ ಸುಧಾರಣೆಗಾಗಿ ಉಪಗ್ರಹಗಳು ಬೇಕು ಅಂದಾಗ ಸರಕಾರ ದೃಢನಿಶ್ಚಯ ಮಾಡಿತು. ಇಸ್ರೋ ಸಾಕಷ್ಟು ಕೆಲಸ ಮಾಡಿತು. ಅದು ರಾಕೆಟ್ ವ್ಯವಸ್ಥೆ, ಸಂಪರ್ಕ ಉಪಗ್ರಹ ವ್ಯವಸ್ಥೆ ಇದರಲ್ಲೆಲ್ಲ ಉತ್ಕೃಷ್ಟತೆ ಸಾಧಿಸಿತು. ಪರಮಾಣು ಶಕ್ತಿಯ ಬಗ್ಗೆಯೂ ಹೀಗೇ ಆಯಿತು. ಆದರೆ ನಾವು ರಿಸರ್ಚ್‌ನಲ್ಲಿ ಇನ್ನಷ್ಟು ಉತ್ಕೃಷ್ಟತೆ ಸಾಧಿಸಬೇಕಿದೆ ಅನ್ನುತ್ತಾರೆ.

ವಿಜ್ಞಾನಿಗಳಿಗೆ ಸ್ಪಷ್ಟವಾಗಿ ಗೊತ್ತಿದೆ- ಜಗತ್ತು ಸುಖವಾಗಿ, ನೆಮ್ಮದಿಯಾಗಿರಲು ವೈಜ್ಞಾನಿಕ ಮನೋಭಾವಕ್ಕಿಂತ ಬೇರೆ ಮಾರ್ಗವೇ ಇಲ್ಲ. ಅದಕ್ಕೆ ಎಲ್ಲ ದೇಶಗಳ ಸಹಕಾರ ಅಗತ್ಯ. ಉದಾಹರಣೆಗೆ, ನಾನಾ ದೇಶಗಳ ವಿಜ್ಞಾನಿಗಳ ಮಟ್ಟದಲ್ಲಿ ಸಹಕಾರ ಇರುವ ಕಾರಣಕ್ಕಾಗಿಯೇ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರ ಸರಿಯಾಗಿ ನಡೆಯುತ್ತಿದೆ. ಅಲ್ಲಿ ಹಲವು ದೇಶಗಳ ಗಗನಯಾತ್ರಿಗಳು ಸಾಮರಸ್ಯದಿಂದ ಅಧ್ಯಯನಗಳಲ್ಲಿ ತೊಡಗಿಕೊಂಡಿದ್ದಾರೆ. ರಾಜಕಾರಣಿಗಳಿಗೇ ಬಿಟ್ಟಿದ್ದರೆ ಅದೂ ನೂರು ಚೂರುಗಳಾಗಿರುತ್ತಿತ್ತು. ಕುಲಕರ್ಣಿಯವರಂಥ ವಿಜ್ಞಾನಿಗಳು ಸಾವಿರಾರು ವರ್ಷ ಹೆಣಗಾಡಿ ಕಟ್ಟಿಕೊಂಡ ವಿಜ್ಞಾನದ ಶಿಖರಗಳನ್ನು ಟ್ರಂಪ್, ಪುಟಿನ್, ಕ್ಸಿಯಂಥ ಮೂರ್ಖ ಸರ್ವಾಧಿಕಾರಿಗಳು ಕ್ಷಣಾರ್ಧದಲ್ಲಿ ಸರ್ವನಾಶ ಮಾಡಬಲ್ಲರು. ಅಕ್ಷರಸ್ಥರಂತೆ ಕಂಡರೂ ಒಳಗೊಳಗೇ ಮೆದುಳು ಕೊಳೆತ ಇವರು ಹಾಳುಗೆಡವಿದ್ದನ್ನೆಲ್ಲ ಮರಳಿ ಕಟ್ಟಲು ಮತ್ತೆ ಸಹಸ್ರಮಾನಗಳೇ ಬೇಕಾದೀತು.

ಗ್ರಾಮೀಣ ಮಹಿಳೆಯರ ಸ್ವಾಭಿಮಾನದ ಬದುಕಿಗೆ ಸಂಜೀವಿನಿ!

ಗಂಟಾಘೋಷ

ಗುರುರಾಜ್ ಗಂಟಿಹೊಳೆ
vveditoped@gmail.com

ಭಾರತದ ಗ್ರಾಮೀಣ ಬದುಕಿನ ಅತಿ ದೊಡ್ಡ ಸವಾಲು ಯಾವುದು ಎಂದು ಕೇಳಿದರೆ, ಸ್ಥಿರ ಬದುಕಿಗೆ ಬೇಕಾದ ಉಪಸಂಪಾದನೆಯ ಕೊರತೆ. ಉದ್ಯೋಗ ಇಲ್ಲದ ಬಡತನಕ್ಕಿಂತ, ಅನಿಶ್ಚಿತ ಆದಾಯ ಇರುವ ಬದುಕು ಇನ್ನಷ್ಟು ಅಪಾಯಕಾರಿ. ಈ ಸತ್ಯವನ್ನು ಸರಕಾರಗಳು ತಡವಾಗಿ ಒಪ್ಪಿಕೊಂಡಿವೆ. ಅದಕ್ಕೆ ಫಲವಾಗಿ ಹುಟ್ಟಿದ ಯೋಜನೆಯೇ ದೀನದಯಾಳ್ ಅಂತ್ಯೋದಯ ಯೋಜನಾ-ನ್ಯಾಷನಲ್ ರೂರಲ್ ಲೈವ್ಲಿಹುಡ್ ಮಿಷನ್ (DAY-NRLM).

ಈ ಯೋಜನೆ ಕೇವಲ ಹಣಕಾಸು ನೆರವು ಅಲ್ಲ, ಇದು ಗ್ರಾಮೀಣ ಸಮಾಜದ ಆಂತರಿಕ ಶಕ್ತಿಯನ್ನು ಸಂಘಟಿಸುವ ಪ್ರಯತ್ನವಾಗಿದೆ. ಅಂತ್ಯೋದಯ ಯೋಜನೆ ಎಂಬುದು ಸಾಮಾನ್ಯವಾಗಿ, ಸ್ವಸಹಾಯ ಗುಂಪು ಎಂದು ಕರೆದರೂ, ಸಂಸ್ಥೆಗಳನ್ನು ನಿರ್ಮಾಣ ಕಾರ್ಯ ಮಾಡುವುದಾಗಿದೆ. ದೀನದಯಾಳ್ ಅಂತ್ಯೋದಯವನ್ನು ಹಲವರು ಸ್ವಸಹಾಯ ಗುಂಪುಗಳ ಯೋಜನೆ ಎಂದು ಸೀಮಿತಗೊಳಿಸುತ್ತಾರೆ. ಆದರೆ ವಾಸ್ತವದಲ್ಲಿ ಇದು ಗ್ರಾಮೀಣ ಸಮಾಜದ ಆಂತರಿಕ ಶಕ್ತಿಯನ್ನು ಸಂಘಟಿಸುವ ಆರ್ಥಿಕ-ಸಾಮಾಜಿಕ ಚಳುವಳಿ. ಉಳಿತಾಯ, ಸಾಲ, ಬ್ಯಾಂಕ್ ಲಿಂಕೇಜ್, ಉದ್ಯಮ - ಇವೆಲ್ಲ ಹಣಕಾಸಿನ ಹಂತಗಳಷ್ಟೇ ಅಲ್ಲ; ಮಹಿಳೆಯರ ನಾಯಕತ್ವ, ನಿರ್ಧಾರಶಕ್ತಿ ಮತ್ತು ಗೌರವದ ಹಂತಗಳೂ ಹೌದು.

ಬಡತನದ ದೌರ್ಬಲ್ಯದಿಂದ ಆರ್ಥಿಕ ಶಕ್ತಿವಂತರನ್ನಾಗಿಸುವುದು, ಒಂಟಿ ವ್ಯಕ್ತಿಗಿಂತ ಗುಂಪು ಬಲಿಷ್ಠ ಮತ್ತು ಸಾಲ ಸಹಾಯವಲ್ಲ- ಸಾಧನ ಎಂಬ ಯೋಜನೆಯ ಮೂರು ಮೂಲ ತತ್ವಗಳನ್ನು ಒಳಗೊಂಡಿದ್ದು, ಕೇಂದ್ರ ಮಟ್ಟದ ಮಿನಿಸ್ಟ್ರಿ ಆಫ್ ರೂರಲ್ ಡೆವಲಪ್ಮೆಂಟ್ ಮುನ್ನಡೆಸುತ್ತಿದೆ. ಹೀಗಿದ್ದರೂ, ಈ ಯೋಜನೆಯ ನಿಜವಾದ ಪರೀಕ್ಷೆ ಇರುವುದು ಕೇಂದ್ರದಲ್ಲಿ ಅಲ್ಲ, ಬದಲಾಗಿ ಗ್ರಾಮಗಳ ಅಂಗಳದಲ್ಲಿ ಎಂಬುದನ್ನು ನಾವು ಅರಿಯಬೇಕು.

ಕರ್ನಾಟಕದಲ್ಲಿ ದೀನದಯಾಳ್ ಅಂತ್ಯೋದಯ ಅನುಷ್ಠಾನದ ಹೊಣೆ, ಕರ್ನಾಟಕ ಸ್ಟೇಟ್ ರೂರಲ್ ಲೈವ್ಲಿಹುಡ್ ಮಿಷನ್ (KSRLM) ಮೇಲೆ ವಹಿಸಲಾಗಿದೆ. KSRLM ಒಂದು ಇಲಾಖೆಯಂತಲ್ಲದೇ, ಇದು ರಾಜ್ಯ - ಜಿಲ್ಲೆ - ತಾಲ್ಲೂಕು - ಗ್ರಾಮ ಎಂಬ ನಾಲ್ಕು ಹಂತಗಳ ವ್ಯವಸ್ಥೆಯಾಗಿ ರೂಪುಗೊಂಡಿದ್ದು, ಯೋಜನೆ ಯಶಸ್ವಿಯಾಗಲು ಸಹಕಾರಿಯಾಗಿದೆ. ಆದರೆ, ಅನುಷ್ಠಾನದಲ್ಲಿ ಶಿಸ್ತು ಕಾಪಾಡಲಾಗಿದೆಯೇ? ಎಂದು ಗಮನಿಸಿದರೆ, ಇನ್ನಷ್ಟು ಕಾಳಜಿ, ಪರಿಶ್ರಮವು ಸ್ಥಳೀಯವಾಗಿಯೂ, ರಾಜ್ಯಮಟ್ಟದಲ್ಲಿಯೂ ಇರಬೇಕಿದೆ ಎಂದು ಅಭಿಪ್ರಾಯಗಳು ಬರುತ್ತಿವೆ. ಸ್ವಸಹಾಯ ಗುಂಪು (Self Help Group) ಎಂದರೆ, ಹತ್ತರಿಂದ - ಹದಿನೈದು ಮಹಿಳೆಯರು ಸೇರಿ ನಡೆಸುವ ಕೇವಲ ಹಣಕಾಸು ಕ್ಲಬ್ ಅಲ್ಲವೆಂಬುದನ್ನು ಮೊದಲು ಅರಿಯಬೇಕಿದೆ.

ಸಾಮಾಜಿಕ ಭದ್ರತೆ, ನಾಯಕತ್ವ ತರಬೇತಿ ಕೇಂದ್ರ, ಕುಟುಂಬ ನಿರ್ಧಾರಗಳ ವೇದಿಕೆಯಾಗಿ ಪರಸ್ಪರ ಸ್ವಾವಲಂಬಿಯಾಗಿ ಬೆಳೆಯಲು ಸಹಕಾರಿ ತತ್ವವಾಗಿದೆ. ಉಳಿತಾಯ - ಆಂತರಿಕ ಸಾಲ-ಬ್ಯಾಂಕ್ ಲಿಂಕೇಜ್- ಉದ್ಯಮ, ಹೀಗೆ ಒಂದು ಉತ್ತಮ ತತ್ವ ಅಂತ್ಯೋದಯ ಯೋಜನೆಯಲ್ಲಿದೆ. ಅಂತ್ಯೋದಯ ಯೋಜನೆಯ ನೆಲಮಟ್ಟದಲ್ಲಿ ಕಾಣುವ ಸಮಸ್ಯೆ ಏನು? ಎಂದು ಗಮನಿಸಿದರೆ, ಗುಂಪುಗಳಲ್ಲಿ ಸಾಲ ವ್ಯವಸ್ಥೆಯಿದೆ ಆದರೆ, ಉದ್ಯಮ ಇಲ್ಲ. ಈ ವ್ಯವಸ್ಥೆಗೆ ಬ್ಯಾಂಕ್ ವ್ಯವಸ್ಥೆಗಳ ಜೊತೆಗೆ ಲಿಂಕೇಜ್ ಇದ್ದರೂ, ಸ್ಥಳೀಯಮಟ್ಟದಲ್ಲಿ ಅಂದರೆ, ಹಲವಾರು ಗ್ರಾಮ ಪಂಚಾಯಿತ್ತಿಗಳಲ್ಲಿ ಸಾಲದ ಅರ್ಜಿಗಳು ತಡವಾಗುವುದು, ಬ್ಯಾಂಕ್ ಸಿಬ್ಬಂದಿ ಅಸಹಕಾರ, ದಾಖಲೆಗಳ ಗೊಂದಲದಿಂದಾಗಿ ಸಮಸ್ಯೆಗಳು ಆರಂಭದಲ್ಲೇ ಉದ್ಭವಿಸುತ್ತಿವೆ.

ಅಂತ್ಯೋದಯ ಯೋಜನೆಯ ಜಾರಿಯಲ್ಲಿ ಪಂಚಾಯಿತ್ತಿಗಳ ಪಾತ್ರ ಅತ್ಯಂತ ಮುಖ್ಯವಾಗಿದ್ದು, ಪಂಚಾಯಿತ್ತಿ ಸ್ವಸಹಾಯ ಸಂಘಗಳನ್ನು ಇಲಾಖೆಯ ವಿಷಯ ನಮಗೇಕೆ ಎಂದು ನಿರ್ಲಕ್ಷಿಸಿಬಿಟ್ಟರೆ, ಯೋಜನೆ ಸಂಪೂರ್ಣ ಕುಸಿದು ಹೋಗುತ್ತದೆ. ಗ್ರಾಮ ಪಂಚಾಯಿತ್ತಿ ಎಂಬುದು ಈ ಯೋಜನೆಯ ಒಂದು ಅಗೋಚರ ಆಧಾರ ಕಂಬವಾಗಿದೆ. ವಾಸ್ತವದಲ್ಲಿ, ಪಂಚಾಯಿತ್ತಿ ಸಭೆಗಳಲ್ಲಿ ಎಸ್.ಎಚ್.ಜಿ ಕುರಿತು ಚರ್ಚೆಗಳು ನಡೆಯಲ್ಲ, ಏನಾಗುತ್ತಿದೆ ಎಂಬ ವಿಮರ್ಶೆಯಿಲ್ಲ, ಮುಂದಿನ ನಿರ್ದಿಷ್ಟ ಗುರಿಯಿಲ್ಲ. ಬಹುತೇಕ ಯೋಜನೆಗಳು, ಕಾರ್ಯಗಳು ಸಾಲ ಪಡೆದುಕೊಂಡು ಅನ್ಯಕಾರ್ಯಕ್ಕೆ ಬಳಕೆಯಾಗುವ ಮೂಲಕ, ನಿರ್ದಿಷ್ಟ ಕಾರ್ಯಸೂಚಿಯಿಲ್ಲದೆ ಆರಂಭದಲ್ಲೇ ಅಂತ್ಯಗೊಂಡುಬಿಡುತ್ತವೆ.

ಇಂತಹ ಯೋಜನೆಗಳ ಅನುಷ್ಠಾನಕ್ಕೆ ನಮ್ಮ ಕರಾವಳಿಯು, ಅವಕಾಶಗಳ ಭಂಡಾರವೆಂದೇ ಕರೆಯಬಹುದಾಗಿದೆ. ಉಡುಪಿ-ದಕ್ಷಿಣ ಕನ್ನಡ-ಉತ್ತರ ಕನ್ನಡ, ಈ ಮೂರು ಜಿಲ್ಲೆಗಳು ಮೀನುಗಾರಿಕೆ, ಅರಣ್ಯ ಉತ್ಪನ್ನಗಳು, ಕೃಷಿ, ಪ್ರವಾಸೋದ್ಯಮ, ದೇಗುಲದಂತಹ ಧಾರ್ಮಿಕ ಪ್ರವಾಸೋದ್ಯಮ, ಸೇವಾ ಉದ್ಯಮ, ಹೋಟೆಲ್ ಉದ್ಯಮ ಸೇರಿದಂತೆ ವಿಪುಲ ಅವಕಾಶಗಳನ್ನು ಹೊಂದಿರುವ ಮೂಲಕ ಇಂತಹ ಯೋಜನೆಗಳನ್ನು ಮನೆಮನೆಗಳಿಗೆ, ಪ್ರತೀ ಪಂಚಾಯಿತ್ತಿ ಮೂಲಕ ಕಡ್ಡಾಯವಾಗಿ ಜಾರಿಗೆ ತರುವ ಕಾರ್ಯಯೋಜನೆ ಹಮ್ಮಿಕೊಳ್ಳುವ ಜರೂರತ್ತಿದೆ. ಇದಕ್ಕೆ ಅಗತ್ಯವಿರುವ ಉದ್ಯಮಗಳ ಮ್ಯಾಪಿಂಗ್ ಮಾಡಿ, ಸಶಕ್ತವಾಗಿ ಕಾರ್ಯಗೊಳಿಸಬೇಕಾದ ದೃಢನಿರ್ಧಾರ ಸ್ಥಳೀಯ ಮಟ್ಟದಲ್ಲಾಗಬೇಕಿದೆ.

ಇಂತಹ ಉಪಾರ್ಜನೆ ಯೋಜನೆಗಳಿಗೆ ಫೀಲ್ಡ್ ಸ್ಟಾಫ್ ಮುಂಚೂಣಿ ಯೋಧರಾಗಿ ನಿಲ್ಲುತ್ತಾರೆ. ಇವರನ್ನು ಹೆಚ್ಚು ವಿಶ್ವಾಸಕ್ಕೆ ತೆಗೆದುಕೊಂಡು, ಯೋಜನೆಯನ್ನು ಸಮರ್ಪಕವಾಗಿ ತಲುಪಿಸುವ ಕಾರ್ಯವಾಗಬೇಕಿದೆ. ಸಿಆರ್‌ಪಿ, ಕ್ಲಸ್ಟರ್, ಕೋ-ಆರ್ಡಿನೇಟರ್, ತಾಲೂಕು ಮಟ್ಟದ ಸಿಬ್ಬಂದಿ ಸೇರಿದಂತೆ ಈ ಹಂತದ ಬಹುತೇಕ ನೌಕರರು ನೆಲಮಟ್ಟದ ಯೋಧರು. ಪ್ರಶ್ನಿಸದ ಯೋಜನೆ ಕಾಲಾಂತರದಲ್ಲಿ ಸತ್ತುಹೋಗುತ್ತದೆ. ರಿವ್ಯೂ ಎಂದರೆ ಕೇವಲ ಪವರ್ ಪಾಯಿಂಟ್ ಇತ್ಯಾದಿ ಸಾಧನಗಳ ಮೂಲಕ ಮಾಡುವುದಲ್ಲ ಎಂಬುದನ್ನು ಮೊದಲು ಅರಿಯಬೇಕಿದೆ.

ಯಾವ ತಾಲೂಕು ರೆಡ್ ಝೋನ್? ಯಾವ ಗ್ರಾಮ ಪಂಚಾಯಿತ್ತಿ ದುರ್ಬಲ? ಯಾವ ಸ್ವಸಹಾಯ ಸಂಘಗಳು ನಿರ್ಜೀವಗೊಂಡಿದೆ? ಯಾವುದು ಅತ್ಯುತ್ತಮ ಕಾರ್ಯನೀತಿ ಹೊಂದಿದೆ? ಮುಂದಿನ ಆಕ್ಷನ್ ಪಾಯಿಂಟ್ ಏನು? ಎಂಬಿತ್ಯಾದಿ ಪ್ರಶ್ನೆಗಳು ಸಭೆಗಳಲ್ಲಿ ಗಂಭೀರವಾಗಿ ಚರ್ಚೆ ನಡೆದರೆ ಮಾತ್ರ ಅಂತ್ಯೋದಯದಂತಹ ಯೋಜನೆಗಳು ಉಳಿಯಬಲ್ಲದಾಗಿವೆ. ಮೇಲ್ವಿಚಾರಣೆಯ ಕೊರತೆಯಲ್ಲಿ, ಹೊಣೆಗಾರಿಕೆಯ ಕೊರತೆಯಲ್ಲಿ ಮತ್ತು ನೆಲಮಟ್ಟದ ಶಿಸ್ತು ಕೊರತೆಯಲ್ಲಿ ಸಮಸ್ಯೆಗಳು ಕಂಡುಬರುತ್ತಿವೆ. ಇದನ್ನು ಸರಿಪಡಿಸಲು, ದೀನದಯಾಳ್ ಅಂತ್ಯೋದಯ ಯೋಜನೆಯ ಯಶಸ್ಸಿಗೆ ಸ್ವಸಹಾಯ ಗುಂಪುಗಳನ್ನು ಸಾಮಾಜಿಕ ಗುಂಪುಗಳೆಂದು ಒಪ್ಪಿಕೊಳ್ಳಬೇಕಿದೆ, ಪಂಚಾಯಿತ್ತಿಗಳನ್ನು ಪಾಲುದಾರರನ್ನಾಗಿ ಮಾಡಬೇಕಿದೆ, ಬ್ಯಾಂಕುಗಳನ್ನು ವ್ಯವಸ್ಥೆಯ ಭಾಗವಾಗಿಸಿ, ಫೀಲ್ಡ್ ಸ್ಟಾಫ್‌ಗೆ ಸರಳ ಸಾಧನ ಕೊಡಬೇಕಿದೆ. ಜೊತೆಗೆ, ಇದೆಲ್ಲದರ ಮೇಲೆ ರಿವ್ಯೂ ಮತ್ತು ಆಕ್ಷನ್ ಆಗುವಂತೆ ನೋಡಿಕೊಂಡಲ್ಲಿ ಇಂತಹ ಯೋಜನೆಗಳು ಜಾರಿಗೊಂಡು ಸದುಪಯೋಗವಾಗಬಲ್ಲವು.

ಗ್ರಾಮೀಣ ಜನತೆಯ, ವಿಶೇಷವಾಗಿ ಮಹಿಳೆಯರ ಆರ್ಥಿಕ ಸಬಲೀಕರಣದ ಅಗತ್ಯತೆ ತೀವ್ರವಾಗಿ ಕಾಡತೊಡಗಿತು. ಈ ಅಗತ್ಯತೆಗೆ ಉತ್ತರವಾಗಿ ರೂಪುಗೊಂಡ ಪ್ರಮುಖ ಕಾರ್ಯಕ್ರಮಗಳಲ್ಲಿ ದೀನದಯಾಳ್ ಅಂತ್ಯೋದಯ (ದೀನದಯಾಳ ಅಂತ್ಯೋದಯ ಯೋಜನೆ - ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್) ಮತ್ತು ಅದರ ಪ್ರಮುಖ ಅಂಗವಾದ ಸರಸ್ ತರಬೇತಿ ಹಾಗೂ ಮೇಳಗಳು ಮಹತ್ವ ಪಡೆದಿವೆ.

ಸರಸ್ ತರಬೇತಿ ಕೇವಲ ಉದ್ಯೋಗ ಕಲಿಸುವ ಯೋಜನೆಯಲ್ಲ; ಅದು ಸ್ವಾವಲಂಬನೆ, ಆತ್ಮವಿಶ್ವಾಸ, ಸಾಮಾಜಿಕ ಗೌರವ ಮತ್ತು ಆರ್ಥಿಕ ಸ್ವತಂತ್ರತೆಯ ಸಂಯೋಜಿತ ಮಾದರಿಯಾಗಿದೆ. ಗ್ರಾಮೀಣ ಮಹಿಳೆಯರ ಕೌಶಲ್ಯಗಳನ್ನು ಗುರುತಿಸುವ ವೇದಿಕೆ, ತರಬೇತಿ ಮತ್ತು ಉತ್ಪಾದನೆಗೆ ಪ್ರೋತ್ಸಾಹ, ಮಾರುಕಟ್ಟೆ ಸಂಪರ್ಕ ಒದಗಿಸುವ ವ್ಯವಸ್ಥೆ, ಸ್ವಸಹಾಯ ಸಂಘಗಳನ್ನು ಉದ್ಯಮಗಳಾಗಿ ರೂಪಿಸುವ ಪ್ರಕ್ರಿಯೆಗಳು ಇದರಡಿಯಲ್ಲಿವೆ. ಸರಸ್ ಕಾರ್ಯಕ್ರಮವು ದೀನದಯಾಳ್ ಅಂತ್ಯೋದಯ ಅಡಿಯಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಸಚಿವಾಲಯದ ಮಾರ್ಗದರ್ಶನದಲ್ಲಿ ಜಾರಿಯಲ್ಲಿದೆ. ರಾಜ್ಯ ಮಟ್ಟದಲ್ಲಿ SRLMಗಳ ಮೂಲಕ ಅನುಷ್ಠಾನಗೊಳ್ಳುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳ ಕೊರತೆ ಇದೆ. ಕೃಷಿಯ ಮೇಲೆ ಅವಲಂಬಿತ ಆದಾಯ ಅನಿಶ್ಚಿತ. ಮಹಿಳೆಯರು ಹೆಚ್ಚಿನ ಸಂದರ್ಭಗಳಲ್ಲಿ ಗೃಹಕಾರ್ಯಗಳಿಗೆ ಸೀಮಿತವಾಗಿದ್ದಾರೆ. ಆಹಾರ ತಯಾರಿಕೆ, ಕೈಮಗ್ಗ, ಹೊಲಿಗೆ, ಕರಕುಶಲಗಳಂತಹ ಕೌಶಲ್ಯಗಳನ್ನು ಹೊಂದಿದ್ದರೂ, ಅವುಗಳಿಗೆ ಮಾರುಕಟ್ಟೆ ದೊರೆಯದೇ ಉಳಿಯುತ್ತವೆ. ಇದನ್ನೇ ಒಂದು ಅವಕಾಶವನ್ನಾಗಿ ರೂಪಿಸಿಕೊಳ್ಳುವಂತೆ ಸರಸ್ ತರಬೇತಿ ಸಹಾಯಕ್ಕೆ ಬರುತ್ತದೆ.

ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆ, ಸ್ವಸಹಾಯ ಸಂಘಗಳ ಬಲವರ್ಧನೆ, ಸ್ಥಳೀಯ ಕೌಶಲ್ಯಗಳ ಮೌಲ್ಯವರ್ಧನೆ, ಉದ್ಯಮಶೀಲತೆಯ ಉತ್ತೇಜನ, ಸ್ಥಿರ ಆದಾಯದ ಮೂಲ ಸೃಷ್ಟಿ, ಮಹಿಳೆಯರಲ್ಲಿ ಆತ್ಮವಿಶ್ವಾಸ ಮತ್ತು ನಾಯಕತ್ವ ಬೆಳೆಸುವುದು ಹಾಗೂ ಗ್ರಾಮೀಣ ಆರ್ಥಿಕತೆಯ ಬಲಪಡಿಸುವಿಕೆಯಂತಹ ತರಬೇತಿ ಕಾರ್ಯಕ್ರಮಗಳು ಇದರಲ್ಲಿವೆ.

ಆಹಾರ ಸಂಸ್ಕರಣೆ (ಮಿಲೆಟ್ ಉತ್ಪನ್ನಗಳು, ಉಪ್ಪಿನಕಾಯಿ, ಸಿಹಿತಿಂಡಿಗಳು), ಕೈಮಗ್ಗ ಮತ್ತು ಜವಳಿ, ಹಸ್ತಶಿಲ್ಪ, ಹೊಲಿಗೆ, ಕಸೂತಿ, ನೈಸರ್ಗಿಕ ಉತ್ಪನ್ನಗಳ ತಯಾರಿಕೆಯಂತಹ ಕೌಶಲ್ಯಾಭಿವೃದ್ಧಿ ತರಬೇತಿಗಳ ಜೊತೆಗೆ, ಉದ್ಯಮ ಆರಂಭಿಸುವ ವಿಧಾನ, ವೆಚ್ಚ-ಲಾಭ ವಿಶ್ಲೇಷಣೆ, ವ್ಯವಹಾರ ಯೋಜನೆ, ಅರಿವು ಮುಂತಾದ ಉದ್ಯಮಶೀಲತಾ ತರಬೇತಿಗಳೂ ನಡೆಯುತ್ತವೆ. ಪ್ಯಾಕೇಜಿಂಗ್ ಮತ್ತು ಬ್ರಾಂಡಿಂಗ್, ಬೆಲೆ ನಿಗದಿ, ಗ್ರಾಹಕ ಸಂಬಂಧ, ಆನ್‌ಲೈನ್ ಮಾರಾಟ ಪರಿಚಯಗಳಂತಹ ಮಾರುಕಟ್ಟೆ ತರಬೇತಿಯೂ ಇದರಲ್ಲಿ ಬರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ, ಸರಸ್ ಅಡಿಯಲ್ಲಿ ನಡೆಯುವ ಮೇಳಗಳು.

ಗ್ರಾಮೀಣ ಉತ್ಪನ್ನಗಳಿಗೆ ಮಾರುಕಟ್ಟೆ, ಗ್ರಾಹಕರೊಂದಿಗೆ ನೇರ ಸಂಪರ್ಕ, ಮಧ್ಯವರ್ತಿಗಳ ನಿವಾರಣೆ, ಉತ್ಪನ್ನಗಳ ಮೌಲ್ಯವರ್ಧನೆ ಒಳಗೊಂಡು ಆಯಾ ವಲಯಗಳಲ್ಲಿ ಸರಸ್ ಮೇಳಗಳು ನಡೆಯುತ್ತವೆ. ಜಿಲ್ಲಾ ಮಟ್ಟ, ರಾಜ್ಯ ಮಟ್ಟ, ರಾಷ್ಟ್ರಮಟ್ಟದಲ್ಲಿ (ದೆಹಲಿ ಸರಸ್) ಈ ಮೇಳಗಳ ವ್ಯಾಪ್ತಿಯಿದ್ದು, ಇವು ಗ್ರಾಮೀಣ ಮಹಿಳೆಯರಿಗೆ ಮೊದಲ ಬಾರಿಗೆ ರಾಷ್ಟ್ರೀಯ ಮಾರುಕಟ್ಟೆಯ ಅನುಭವ ನೀಡುತ್ತವೆ. 2025ರ ಫೆಬ್ರುವರಿ 24ರಿಂದ ಮಾರ್ಚ್ 5ರವರೆಗೆ ಕಲಬುರಗಿಯ ಜಾತ್ರಾ ಮೈದಾನದಲ್ಲಿ ರಾಷ್ಟ್ರಮಟ್ಟದ ಸರಸ್ ಮೇಳವು ಅತ್ಯಂತ ಯಶಸ್ವಿಯಾಗಿ ನಡೆಯಿತು.

ಗ್ರಾಮೀಣ ಮಹಿಳಾ ಸ್ವ-ಸಹಾಯ ಸಮೂಹಗಳ ಸದಸ್ಯರ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ ಆಯೋಜಿಸಲಾಯಿತು. ಮೇಳದಲ್ಲಿನ ತರಬೇತಿ ಕಾರ್ಯಾಗಾರಗಳು- ಪ್ಯಾಕೇಜಿಂಗ್, ಬ್ರಾಂಡಿಂಗ್, ಮಾರುಕಟ್ಟೆ ಕೌಶಲ್ಯ, ಉತ್ಪನ್ನ ಮೌಲ್ಯವರ್ಧನೆ, ಬ್ಯಾಂಕ್-ಲಿಂಕೇಜ್ ಸೇವೆಗಳ ಕುರಿತು ವಿಶೇಷ ತರಬೇತಿಗಳನ್ನು ಕೂಡ ನಿರ್ವಹಿಸಲಾಯಿತು. ಬೆಂಗಳೂರು, ಬೆಳಗಾವಿಯಲ್ಲಿ ಸರಸ್ ಮೇಳ/ತರಬೇತಿ ಕಾರ್ಯಕ್ರಮಗಳು ನಡೆಸಿರುವ ದಾಖಲೆಗಳಿವೆ.

ಜಮ್ಮುಕಾಶ್ಮೀರದ ಶ್ರೀನಗರದಲ್ಲಿ ಶೇರ್-ಇ-ಕಾಶ್ಮೀರ ಪಾರ್ಕ್ ನಲ್ಲಿ 2025ರಲ್ಲಿ ನಡೆದ ಸರಸ್ ಮೇಳದಲ್ಲಿ ದೇಶದ ವಿವಿಧ ಸ್ವಸಹಾಯ ಸಂಘದ ಮಹಿಳೆಯರು ತಮ್ಮ ಕಲಾಕೃತಿ, ಕೈಗಾರಿಕೆ ಸಿದ್ಧಾಂತಗಳನ್ನು ಪ್ರದರ್ಶಿಸಿದರು. ಉತ್ತರ ಪ್ರದೇಶದ ಇಟಾವಾ ಮತ್ತು ಹತ್ತಿರದ ಪ್ರದೇಶಗಳಲ್ಲಿ ಸ್ಥಳೀಯ ಸರಸ್ ಮೇಳಗಳು ನಡೆದು, ಸ್ವಸಹಾಯ ಸಂಘದ ಸದಸ್ಯರು-ಉತ್ಪನ್ನ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮ ನಡೆಸಲ್ಪಟ್ಟಿದೆ.

ಸರಸ್ ತರಬೇತಿ ಯಶಸ್ವಿಯಾದರೂ, ನಿರಂತರ ಮಾರುಕಟ್ಟೆ ಲಭ್ಯತೆ ಕೊರತೆ, ಡಿಜಿಟಲ್ ಜ್ಞಾನ ಅಭಾವ, ಗುಣಮಟ್ಟ ನಿರ್ವಹಣೆಯ ಸಮಸ್ಯೆ, ಯುವಜನರ ಕಡಿಮೆ ಭಾಗವಹಿಸುವಿಕೆ, ಲಾಜಿಸ್ಟಿಕ್ಸ್ ಮತ್ತು ಸಂಗ್ರಹ ಸಮಸ್ಯೆಗಳಂತಹ ಕೆಲವು ಸವಾಲುಗಳಿವೆ. ಇವುಗಳನ್ನು ಸಮರ್ಥವಾಗಿ ನಿವಾರಿಸಿ ಮುನ್ನಡೆಯಲು, ಸರಸ್ ತರಬೇತಿಯನ್ನು ಇನ್ನಷ್ಟು ಪರಿಣಾಮಕಾರಿ ಮಾಡಲು, ಇ-ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳೊಂದಿಗೆ ಜೋಡಣೆ, ಸರಸ್ ಎಂಬ ರಾಷ್ಟ್ರೀಯ ಬ್ರಾಂಡ್, ಯುವ ಮಹಿಳೆಯರಿಗೆ ಸ್ಟಾರ್ಟಪ್ ತರಬೇತಿ, ಪಂಚಾಯತ್ ಮಟ್ಟದ ಉತ್ಪಾದನಾ ಕ್ಲಸ್ಟರ್‌ಗಳು, ಡಿಜಿಟಲ್ ಮಾರ್ಕೆಟಿಂಗ್ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಇದು ಒಂದು ತ್ರಿಕೋನ ತತ್ವ ಯೋಜನೆ ಎನ್ನಬಹುದು. ಮೂರು ಅಂಶಗಳು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ನಿಜವಾದ ಬದಲಾವಣೆ ಸಾಧ್ಯ ಎಂಬುದೇ ಇದರ ಅರ್ಥ. ಮಹಿಳಾ ಸಬಲೀಕರಣ: ಮಹಿಳೆ ಶಕ್ತಿಶಾಲಿಯಾಗಬೇಕು ಎಂದರೆ ಕೇವಲ ಹಣ ಕೊಡೋದು ಸಾಕಾಗಲ್ಲ. ಅವರಿಗೆ ಬೇಕಾಗಿರುವುದು, ಆತ್ಮವಿಶ್ವಾಸ, ನಿರ್ಣಯ ತೆಗೆದುಕೊಳ್ಳುವ ಶಕ್ತಿ, ನಾಯಕತ್ವ, ಸ್ವಂತ ಆದಾಯ, ಸಮಾಜದಲ್ಲಿ ಗೌರವ ದೊರೆಯಬೇಕಾಗಿದೆ.

ಗ್ರಾಮೀಣ ಸ್ವಾವಲಂಬನೆ: ಗ್ರಾಮ ಯಾವಾಗ ಸ್ವಾವಲಂಬಿಯಾಗುತ್ತದೆ? ಅಂದರೆ, ಕೆಲಸಕ್ಕಾಗಿ ನಗರಕ್ಕೆ ಓಡಬೇಕಾಗಿಲ್ಲ. ಬದಲಾಗಿ, ಊರಲ್ಲೇ ಉದ್ಯೋಗ ಸೃಷ್ಟಿಯಾಗಬೇಕು, ಊರಲ್ಲೇ ಆದಾಯ ಬರಬೇಕು, ಊರಿನ ಸಂಪನ್ಮೂಲಗಳನ್ನು ಊರಿಗೇ ಬಳಸಬೇಕು. ಸ್ವಸಹಾಯ ಸಂಘಗಳ ಮೂಲಕ ಉದ್ಯಮಗಳು ಹುಟ್ಟುತ್ತವೆ, ಸ್ಥಳೀಯ ಉತ್ಪನ್ನಗಳಿಗೆ ಮೌಲ್ಯ ಬರುತ್ತದೆ ಹಾಗೂ ಹಣ ಗ್ರಾಮದಲ್ಲೇ ಸುತ್ತುತ್ತದೆ.

ಆತ್ಮನಿರ್ಭರ ಭಾರತ: ಆತ್ಮನಿರ್ಭರ ಭಾರತ ಅಂದ್ರೆ, ದೇಶವು ತನ್ನ ಅಗತ್ಯಗಳಿಗೆ ತನ್ನ ಶಕ್ತಿಯಲ್ಲೇ ಉತ್ತರ ಕೊಡುವುದು. ಆದರೆ ದೇಶ ಸ್ವತಂತ್ರವಾಗಬೇಕಾದರೆ ಮೊದಲು, ಕುಟುಂಬ ಸ್ವತಂತ್ರವಾಗಬೇಕು, ಗ್ರಾಮ ಸ್ವತಂತ್ರವಾಗಬೇಕು, ಮಹಿಳೆ ಸ್ವತಂತ್ರವಾಗಬೇಕು. ಇದರ ಮೂಲ ಬೇರು ಗ್ರಾಮದಲ್ಲೇ ಇದೆ. ಗ್ರಾಮ ಬಲವಾಗದೆ ದೇಶ ಬಲವಾಗುವುದಿಲ್ಲ. ಈ ಯೋಜನೆ ಸರ್ಕಾರದ ಯೋಜನೆ ಮಾತ್ರವಲ್ಲ, ಇದು ಒಂದು ಸಾಮಾಜಿಕ ಪರಿವರ್ತನೆಯ ಯಂತ್ರ. ಅಂದರೆ, ಇದು ಫೈಲ್, ಸಾಲ, ಸಬ್ಸಿಡಿ, ಫಾರ್ಮ್‌ಗಳ ವಿಷಯ ಅಲ್ಲ. ಇದು, ಮನಸ್ಥಿತಿಯನ್ನು ಬದಲಾಯಿಸುವುದು, ಮಹಿಳೆಯನ್ನು ನಾಯಕಿಯನ್ನಾಗಿಸುವುದು, ಗ್ರಾಮವನ್ನು ಉತ್ಪಾದಕ ಶಕ್ತಿಯಾಗಿಸುವುದು, ದೇಶವನ್ನು ಒಳಗಿನಿಂದ ಬಲಪಡಿಸುವುದು. ಗ್ರಾಮೀಣ ಮಹಿಳೆಯರ ಅಭಿವೃದ್ಧಿಗೆ ಇದು ಸರಿಯಾದ ಸಂಜೀವಿನಿ. ಸರಿಯಾಗಿ ಮತ್ತು ಸಮರ್ಥವಾಗಿ ಜಾರಿಗೆ ತರಬೇಕು. ಎಲ್ಲಾ ಸ್ತರದಲ್ಲಿ ಅವರಿಗೆ ಬೆಂಬಲ ಸಿಕ್ಕಿದರೆ, ಇಂತಹ ಮಹಿಳಾ ಸಂಜೀವಿನಿ ಸಂಘಗಳಂತಹ ಸಮೂಹ ಕಾರ್ಯಕ್ರಮಗಳು ಯಶಸ್ವಿಯಾಗಬಲ್ಲವು.

ಪ್ರಸ್ತುತ

ನಾಡೋಜ ಡಾ.ಮನು ಬಳಿಗಾರ್

ತ್ಯಾಗವೀರ ಶಿರಸಂಗಿ ಲಿಂಗರಾಜ ದೇಸಾಯಿ

ಜಗತ್ತಿನ ಇತಿಹಾಸದಲ್ಲಿ ಸರ್ವಸ್ವವನ್ನೂ ತ್ಯಾಗ ಮಾಡಿ ತನ್ನ ಉಪಜೀವನಕ್ಕೂ ಕೂಡ ಏನಿದೆ ಎಂಬುದನ್ನು ಪರಿಗಣಿಸದೆ ಎಲ್ಲ ಆಸ್ತಿ ಭೂಮಿ ನಗದು ಬಂಗಾರದ ಆಭರಣಗಳು ವಜ್ರ ವೈಡೂರ್ಯ ಎಲ್ಲವನ್ನೂ ಸಮಾಜದ ಏಳಿಗೆಗಾಗಿ, ಬಡವರ ಶಿಕ್ಷಣ ಸೌಲಭ್ಯಕ್ಕಾಗಿ ದಾನ ಮಾಡಿ ತ್ಯಾಗವೀರರು ಎನಿಸಿಕೊಂಡವರು ಶಿರಸಂಗಿ ಲಿಂಗರಾಜ ಸರ್ದೇಸಾಯಿ. ವಿಚಿತ್ರವೆಂದರೆ ಇಡೀ ವಿಶ್ವದಲ್ಲಿ ಹೀಗೆ ಸರ್ವಸ್ವವನ್ನು ಲೋಕದ ಹಿತಕ್ಕಾಗಿ ಧಾರೆ ಎರೆದವರು ಅತ್ಯಂತ ವಿರಳವಾಗಿದ್ದಾರೆ. ಅಂತಹ ಅಪರೂಪದಲ್ಲಿ ಅಪರೂಪರಾದವರು ಈ ಮಹಾದಾನಿಗಳು. ಲಿಂಗರಾಜರು ಬದುಕಿದ್ದು ಕೇವಲ 46 ವರ್ಷಗಳು. ಆ ಸೀಮಿತ ಅವಧಿಯ ಜೀವನದಲ್ಲಿಯೇ ತಮ್ಮ ಸಕಲ ಸಂಪತ್ತು ಸಿರಿ ಸಂತೋಷಗಳನ್ನು ಬದಿಗಿಟ್ಟು ಸಮಾಜದಲ್ಲಿ ನೊಂದವರ ಹಿಂದುಳಿದವರ ಬಡಬಗ್ಗರ ಕಷ್ಟಗಳನ್ನು ಪರಿಹರಿಸಿದವರು ಈ ಪುಣ್ಯಾತ್ಮರು. ತಮ್ಮೆಲ್ಲ ಆಸ್ತಿಯನ್ನು ಸಮಾಜಕ್ಕೆ ದಾನ ಮಾಡುವುದು ಅಲ್ಲದೆ ತಮ್ಮ ವಿಲ್ ಹಾಗೂ ಟ್ರಸ್ಟ್ ರಚನೆಯ ಎಂಓಯು ಅನ್ನು ರಿಜಿಸ್ಟರ್ ಡೀಡ್ ಮಾಡಿ ಇಡೀ ಆಸ್ತಿಯ ಮೇಲ್ವಿಚಾರಣೆಗಾಗಿ ಸಮಾಜದ ಗಣ್ಯರ ಸಮಿತಿ ಒಂದನ್ನು ರಚಿಸಿ ಅದಕ್ಕೆ ಆಗಿನ ಕಲೆಕ್ಟರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ ಅಪೂರ್ವ ಎನಿಸುವ ಕೈಂಕರ್ಯವನ್ನು ನೆರವೇರಿಸಿದರು.

ಇಂತಹ ಪುಣ್ಯಾತ್ಮರು ಹುಟ್ಟಿದ್ದು 1861 ಜನವರಿ 10ರಂದು. ಶ್ರೀಯುತರು ಖ್ಯಾತನಾಮರಾದದ್ದು ಶಿರಸಂಗಿ ಲಿಂಗರಾಜ ದೇಸಾಯಿ ಎಂದಿದ್ದರೂ, ಇವರು ಅಂದಿನ ಧಾರವಾಡ ಜಿಲ್ಲೆಯ (ಈಗ ಗದಗ ಜಿಲ್ಲೆ) ಶಿಗ್ಲಿ ಗ್ರಾಮದ ಸಾಧಾರಣ ರೈತ ಕುಟುಂಬದಲ್ಲಿ ಜನಿಸಿದವರು. 11 ವರ್ಷದ ಬಾಲಕನಾಗಿದ್ದಾಗ ಶಿರಸಂಗಿ ಸಂಸ್ಥಾನಕ್ಕೆ ದತ್ತಕ ಮಗನಾಗಿ ಬಂದರು. ಸಂಸ್ಥಾನದ ರಾಜಮಾತೆ, ಇವರ ದತ್ತಕ ತಾಯಿ ಗಂಗಾಬಾಯಿಯವರು ಸ್ವಂತ ಮಗನಂತೆಯೇ ಇವರನ್ನು ಬೆಳೆಸಿದ್ದರಾದರೂ ಅವರ ನಂತರ ಮಲತಾಯಿಯ ಆಶ್ರಯದಲ್ಲಿ ಬೆಳೆಯಬೇಕಾದಾಗ ಬಹಳಷ್ಟು ತೊಂದರೆಗಳಿಗೆ ಲಿಂಗರಾಜರು ಒಳಗಾದರು. ಎಷ್ಟೇ ಕಷ್ಟಗಳು ಎದುರಾದರೂ ಅವುಗಳನ್ನೆಲ್ಲ ಬಹಳ ಶಾಂತಿ ಸಮಾಧಾನ ಹಾಗೂ ತುಂಬ ವಿವೇಚನೆಯಿಂದಲೇ ಪರಿಹರಿಸಿಕೊಂಡು ಮುನ್ನಡೆದ ಆದರ್ಶ ಜೀವಿ ಇವರು. ಒಟ್ಟಾರೆಯಾಗಿ ಆರು ಸಲ ಮದುವೆಯಾದರೂ ಇಬ್ಬರಿಗೆ ಮಕ್ಕಳಾದರೂ ಅವರಾರೂ ಉಳಿಯಲಿಲ್ಲ. ಹೀಗೆ ವಾರಸುದಾರರಿಲ್ಲದಾಗ ಕೊರಗುತ್ತಾ ಕುಳಿತುಕೊಳ್ಳದೆ ಲಿಂಗರಾಜರು ತಮ್ಮ ಆತ್ಮೀಯ ಮಿತ್ರರಾದ ಅರಟಾಳ ರುದ್ರಗೌಡರು, ರಾಜಾಲಕಮನಗೌಡರು, ವಂಟಮುರಿ ದೇಸಾಯಿಯವರು ಮುಂತಾದ ಮಹನೀಯರನ್ನು ಸಂಪರ್ಕಿಸಿ ಸುದೀರ್ಘವಾದ ಚರ್ಚೆಗಳನ್ನು ನಡೆಸಿ ಸಮಗ್ರ ಸಂಪತ್ತನ್ನು ಸಮಾಜಕ್ಕಾಗಿ ವಿನಿಯೋಗಿಸುವ ಐತಿಹಾಸಿಕ ನಿರ್ಣಯವನ್ನು ಕೈಗೊಂಡರು. ಹೀಗೆ ರಚಿತವಾದ ನವಲಗುಂದ -ಶಿರಸಂಗಿ ಟ್ರಸ್ಟ್ ವತಿಯಿಂದ ದೊರಕಿದ ಸ್ಕಾಲರ್‌ಶಿಪ್ ಹಣದಿಂದ ತಮ್ಮ ಶಿಕ್ಷಣವನ್ನು ಮುಂದುವರಿಸಿಕೊಂಡ/ಪೂರೈಸಿಕೊಂಡ ಸಾವಿರ ಸಾವಿರ ವಿದ್ಯಾರ್ಥಿಗಳು ವಿಶ್ವದಲ್ಲೆಡೆ ಇಂದು ತಮ್ಮ ಜೀವನೋದ್ಧಾರ ಮಾಡಿಕೊಳ್ಳುತ್ತಿದ್ದಾರೆ.

ಇತಿಹಾಸದಲ್ಲಿ ಇಣುಕಿ ನೋಡಿದಾಗ ಈ ಒಂದು ಲಾಭವನ್ನು ಅಂದರೆ ಸಹಾಯಧನವನ್ನು ಪಡೆದುಕೊಂಡು ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿಕೊಂಡ ಮೇಧಾವಿಗಳಲ್ಲಿ ಭಾರತದ ಹಂಗಾಮಿ ರಾಷ್ಟ್ರಪತಿಗಳಾಗಿ ಉಪರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸಿದ ಬಿ.ಡಿ.ಜತ್ತಿಯವರು, ಪಂಜಾಬ್-ಹರ್ಯಾಣ ರಾಜ್ಯಗಳ ರಾಜ್ಯಪಾಲರಾಗಿದ್ದ ಡಿಸಿ ಪಾವಟೆಯವರು, ಮಹಾರಾಷ್ಟ್ರರಾಜ್ಯದಲ್ಲಿ ಮಂತ್ರಿಗಳಾಗಿ ಹಲವಾರು ವರ್ಷ ಸೇವೆ ಸಲ್ಲಿಸಿದ ರತ್ನಪ್ಪಣ್ಣ ಕುಂಬಾರ್, ಕರ್ನಾಟಕದ ಮುಖ್ಯಮಂತ್ರಿಗಳಾದ ಎಸ್.ಆರ್. ಕಂಠೀ ಅವರು, ಎಸ್.ಆರ್.ಬೊಮ್ಮಾಯಿ ಅವರಂತವರು ಇರುವುದು ಅತ್ಯಂತ ಹೆಮ್ಮೆಯ ವಿಷಯ.

ಲಿಂಗರಾಜರ ವಿದ್ಯಾಪ್ರೇಮದಂತೆಯೇ ಕೃಷಿ ಸಹಕಾರ ಈ ಕ್ಷೇತ್ರಗಳ ಮೇಲಿನ ಪ್ರೀತಿಯೂ ಅಪಾರವಾಗಿತ್ತು. ಇದಕ್ಕಾಗಿ ಅವರು ತಮ್ಮ ಸಂಸ್ಥಾನದ ಗ್ರಾಮಗಳಲ್ಲಿ ಎಲ್ಲೆಲ್ಲಿ ಕುಡಿಯುವ ನೀರಿನ ಕೊರತೆ ನೀರಾವರಿ ಸೌಲಭ್ಯಗಳ ಅವಶ್ಯಕತೆ ಇರುವವೋ, ಅಲ್ಲಲ್ಲೆಲ್ಲ ಕುಡಿಯುವ ನೀರಿನ ಬಾವಿಗಳು ಕೆರೆಗಳು ನೀರಾವರಿ ಕಾಲುವೆಗಳು ದೊಡ್ಡ ಕೊಳಗಳು ಇಂತಹವನ್ನೆಲ್ಲ ನಿರ್ಮಿಸಿ ಪ್ರಜಾಪ್ರೀತಿಯನ್ನು ಮನ್ನಣೆಯನ್ನು ಸಹಜವಾಗಿಯೇ ಗಳಿಸಿಕೊಂಡರು. ಅವರ ಕೃಷಿಪ್ರೇಮ ಎಷ್ಟಿತ್ತೆಂದರೆ ಹಿಂದಿನ ಶತಮಾನದಲ್ಲಿಯೇ ರೈತರ ಮಕ್ಕಳಿಗಾಗಿ ಕೃಷಿ ತರಬೇತಿ ಪಾಠಶಾಲೆಗಳನ್ನು ದೇವಿ ಹೊಸೂರು ಮುಂತಾದ ಕಡೆಗಳಲ್ಲಿ ಸ್ಥಾಪಿಸಿದರು. ಸುಧಾರಿತ ಬೇಸಾಯ ಕ್ರಮವು ಅಂದಿನ ಅವಶ್ಯಕತೆ ಎಂದು ತಿಳಿದು ನಾಡಿನಲ್ಲಿ ಅಸಂಖ್ಯ ಪ್ರಗತಿಪರ ರೈತರು, ಕೃಷಿ ವಿಜ್ಞಾನಿಗಳು ರೂಪುಗೊಳ್ಳುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು. ಅಂದು ಈ ಪುಣ್ಯಾತ್ಮರು ನಿರ್ಮಿಸಿದ ಕೆರೆಕುಂಟೆಗಳು ಆ ತರಬೇತಿ ಶಾಲೆಗಳು ಇಂದಿಗೂ ಗ್ರಾಮೀಣ ಭಾಗದ ಜನರ ವಿಶೇಷವಾಗಿ ರೈತರ ಅವಶ್ಯಕತೆಗಳನ್ನು ಪೂರೈಸುತ್ತಿರುವುದು ಲಿಂಗರಾಜರನ್ನು ಸದಾ ನೆನೆಯುವಂತೆ ಮಾಡುತ್ತಿದೆ. ಇದಲ್ಲದೆ ಶ್ರೀಯುತರು ಹಲವಾರು ಗುಡಿಗುಂಡಾರಗಳಿಗೆ ಧಾರ್ಮಿಕ ಸಂಸ್ಥೆಗಳಿಗೆ ಪೀಠಗಳಿಗೆ ಯಥೇಚ್ಛವಾಗಿ ದಾನ ದಾಸೋಹದ ಅವಕಾಶ ಮಾಡಿಕೊಟ್ಟರು.

ಸಮಾಜದ ಒಳಿತಿಗಾಗಿ ಸಹಕಾರ ಸಂಘಸಂಸ್ಥೆಗಳನ್ನು ಸ್ಥಾಪಿಸುವುದು ಹಾಗೂ ಸಮಾಜ ಸೇವಾ ಸಂಘಟನೆಗಳನ್ನು ಹುಟ್ಟುಹಾಕುವುದು ಅತಿ ಅವಶ್ಯಕ ಎಂಬುದನ್ನು ಮನಗಂಡು ಲಿಂಗರಾಜರು ಅಂದಿನ ಕೆಲ ಮಹಾ ಸ್ವಾಮೀಜಿಗಳ ಇಚ್ಛೆಯಂತೆ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸ್ಥಾಪಿಸುವಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿದರು. ಹಾಗೆ ನೋಡಿದರೆ ಇದರ ಪ್ರಮುಖ ರೂವಾರಿ ಇವರೇ ಆಗಿದ್ದರು ಎಂಬುದನ್ನು ನಾವು ಆ ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ಅಂದರೆ (1904)ರಲ್ಲಿ ಕಾಣಬಹುದಾಗಿದೆ. ಆ ವರ್ಷಗಳಲ್ಲಿ ನೆರವೇರಿದ ಪ್ರಥಮ ಅಖಿಲ ಭಾರತ ವೀರಶೈವ ಮಹಾ ಅಧಿವೇಶನ ಹಾಗೂ ಎರಡನೆಯ ಅಧಿವೇಶನಗಳಿಗೆ (ಧಾರವಾಡ ಹಾಗೂ ಬೆಂಗಳೂರು)ಲಿಂಗರಾಜ ದೇಸಾಯಿ ಅವರೇ ಅಧ್ಯಕ್ಷರಾಗಿ ನಾಡಿಗೆ ಅತ್ಯಂತ ಉಪಯೋಗ ಆಗುವಂತಹ ದಿಕ್ಸೂಚಿ ಭಾಷಣಗಳನ್ನು ಮಾಡಿ ಅವುಗಳನ್ನು ಅಚ್ಚು ಹಾಕಿಸಿ ನೆರೆದ ಸಾವಿರಾರು ಜನರಿಗೆ ಹಂಚುವ ವ್ಯವಸ್ಥೆಯನ್ನು ಮಾಡಿದ್ದರು. ಆ ಕಾಲದ ಬಹುತೇಕ ಸಂಘ ಸಂಸ್ಥೆಗಳು ಸಂಘಟನೆಗಳು ಲಿಂಗರಾಜರ ಸಹಾಯ ಹಸ್ತದಿಂದ ನಡೆಯುತ್ತಿದ್ದವು ಎಂಬುದು ಗಮನಾರ್ಹವಾದದ್ದು. ಈ ಮಹಾಸಭೆಯ ಅವರ ಅಧ್ಯಕ್ಷತೆಯ ಭಾಷಣಗಳು ಕರ್ನಾಟಕದ ಅನೇಕ ಮಹನೀಯರನ್ನು ದಟ್ಟವಾಗಿ ಪ್ರಭಾವಿಸಿದವು. ಸಮಾಜ ಕಲ್ಯಾಣಕ್ಕಾಗಿ ತಾವು ಏನನ್ನಾದರೂ ಮಾಡಲೇಬೇಕೆಂದು ಪಣತೊಟ್ಟ ಮಹಾಮಹಿಮರಲ್ಲಿ ವಚನ ಪಿತಾಮಹ ಫ.ಗು. ಹಳಕಟ್ಟಿ ಅವರೂ ಒಬ್ಬರು ಎಂಬುದು ಗಮನಾರ್ಹ.

ಬೆಳಗಾವಿ ಜಿಲ್ಲೆಯ ಶಿರಸಂಗಿ ಸಂಸ್ಥಾನದ ಈ ದೊರೆ ತಮ್ಮ ವಿಶಿಷ್ಟ ಕೆಲಸ ಕಾರ್ಯಗಳಿಂದಾಗಿ ಆಧುನಿಕ ಆಲೋಚನೆಗಳಿಂದಾಗಿ ಜಗತ್ತಿನ ಮಹಾಪುರುಷರ ಸಾಲಿನಲ್ಲಿ ನಿಲ್ಲುತ್ತಾರೆ. ಇವರು ರಚಿಸಿದ ಆ ನವಲಗುಂದ-ಶಿರಸಂಗಿ ಟ್ರಸ್ಟ್ ಇಂದಿಗೂ ಬೆಳಗಾವಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೆಲಸ ಮಾಡುತ್ತಿದೆ. ಖೇದದ ವಿಷಯವೆಂದರೆ ಈ ಈ ಟ್ರಸ್ಟ್‌ನಿಂದ ತಮ್ಮ ಜೀವನೋದ್ಧಾರ ಮಾಡಿಕೊಂಡ ಫಲಾನುಭವಿಗಳು ಇದನ್ನು ಬೆಳೆಸಲಿಕ್ಕಾಗಿ ಹೇಳಿಕೊಳ್ಳುವಂತಹ ಯಾವ ಕೆಲಸಗಳನ್ನು ಮಾಡಲಿಲ್ಲ. ಈಗಲಾದರೂ ಜಗತ್ತಿನಾದ್ಯಂತ ಇರುವ ಇವರೆಲ್ಲ ಈ ಟ್ರಸ್ಟ್ ಫಂಡ್ ಬೆಳೆಯುವ ಹಾಗೆ ಮುಂದಿನ ತಲೆಮಾರಿಗೆ ಹೆಚ್ಚೆಚ್ಚು ಉಪಯೋಗವಾಗುವ ಹಾಗೆ ಮಾಡಲು ಕ್ರಮ ಕೈಗೊಳ್ಳುವುದು ಅತ್ಯಂತ ಅವಶ್ಯಕ ಎಂಬುದು ನನ್ನ ಪ್ರಾಮಾಣಿಕ ಅನಿಸಿಕೆಯಾಗಿದೆ. ನಾವು ಚಿಕ್ಕವರಿದ್ದಾಗ ಅಂದಾಜು 50 ವರ್ಷಗಳ ಹಿಂದೆ ಲಿಂಗರಾಜ ದೇಸಾಯಿವರ ಜೀವನ ಚರಿತ್ರೆಯು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಪಠ್ಯವಾಗಿ ಇರುತ್ತಿತ್ತು. ಇಂದಿಗೆ ಅದು ಎಲ್ಲೂ ಕಾಣುತ್ತಿಲ್ಲ. ಸರಕಾರ ಈ ಬಗ್ಗೆ ಪರಿಶೀಲಿಸಿ ಪುನಃ ಅದನ್ನು ಪಠ್ಯಕ್ರಮದಲ್ಲಿ ಸೇರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನನ್ನ ಕೋರಿಕೆಯಾಗಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:11, Issue: 01

बैंक ऑफ़ बड़ौदा Bank of Baroda

ಬ್ಯಾಂಕ್ ಆಫ್ ಬರೋಡ, ಪ್ರಾದೇಶಿಕ ಕಛೇರಿ, ಬೆಂಗಳೂರು ದಕ್ಷಿಣ

4ನೇ ಮಹಡಿ, ವಿಜಯ ಟವರ್ಸ್, 41/2, ಎಂ.ಜಿ. ರಸ್ತೆ, ಬೆಂಗಳೂರು–560001,

ದೂರವಾಣಿ ಸಂಖ್ಯೆ: 080-25011710, ಇ–ಮೇಲ್: recovery.blrsouth@bankofbaroda.com

SCAN HERE For detailed terms & conditions.

ಇ–ಹರಾಜು ಮಾರಾಟ ಸೂಚನೆ "ಅನುಬಂಧ – IV-A [ನಿಯಮ 6(2) & 8 (6)]

ಇ–ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಸ್ಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, **" ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ"** ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮಿನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ. ಸಂ	ಸಾಲಗಾರರ / ಜಾಮೀನುದಾರರ / ಅಡಮಾನುದಾರ ಹೆಸರು & ವಿಳಾಸ	ತಿಳಿದಿರುವ ನಿರ್ಬಂಧಗಳೊಂದಿಗೆ ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆ, ಋಣಭಾರಗಳು ಯಾವುದಾದರೂ ಬ್ಯಾಂಕಿಗೆ ತಿಳಿದಿದ್ದಲ್ಲಿ	ಎ. ಶಾಖೆಯ ಹೆಸರು ಬಿ. ಒಟ್ಟು ಬಾಕಿ ಮೊತ್ತ	ಇ–ಹರಾಜಿನ ದಿನಾಂಕ ಮತ್ತು ಸಮಯ	ಎ.ಮೀಸಲು ಬೆಲೆ, ಬಿ.ಇಎಂಡಿ, ಸಿ.ಬಿಡ್ ಗುಣಾಂಕ ಮೊತ್ತ, ಡಿ. ಇಎಂಡಿ ಸ್ವೀಕರಿಸುವ ಕೊನೆಯ ದಿನಾಂಕ, ಇ. ಸ್ವಾಧೀನದ ರೀತಿ	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ.
1	**ಸುಹಾಸ್ ಕೆ ಎಸ್** ವಿಳಾಸ : ಬ್ಲಾಕ್ 5 502 242 ಅಲ್ ಕ್ಯುಸೈಸ್ ಇಂಡಿ ಮೊದಲ ಆವರಣ ಸಂಖ್ಯೆ 242033555 ದುಬೈ ಯುಎಇ 498950 ಶಾಶ್ವತ ವಿಳಾಸ: ಕೊಂಡಿಯಾರ ಹೌಸ್, ಕರಾಯಮುತ್ತಂ, ವಳಪ್ಪಾಡ್, ಕರಾಯಂವಟ್ಟಂ, ತ್ರಿಶೂರ್, ಚವಕ್ಕಡ್, ಕೇರಳ – 680567 **ಜಾಮೀನುದಾರರು : ಅನುಗ್ರಾ ಕೆ ಎಸ್** ವಿಳಾಸ : ಕರಾಯಮುತ್ತಂ, ವಳಪ್ಪಾಡ್, ಕೊಂಡಿಯಾರ ಹೌಸ್, ಕರಾಯಂವಟ್ಟಂ, ತ್ರಿಶೂರ್, ಚವಕ್ಕಡ್, ಕೇರಳ –680567	ಫ್ಲಾಟ್ ನಂ. ಜಿ–106, ಮೊದಲನೇ ಮಹಡಿ, ಜಿ ಟವರ್ ಜೊತೆಗೆ ಸೂಪರ್ ಬಿಲ್ಟ್ ಅಪ್ ಪ್ರದೇಶ 113.80 ಚದರ ಮೀಟರ್ ಮತ್ತು ಅವಿಭಾಜಿತ ಭಾಗ 42.27 ಚದರ ಮೀಟರ್, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡವು ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606 ರಲ್ಲಿದೆ ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಜಿ–101, ಪಶ್ಚಿಮಕ್ಕೆ : ಫ್ಲಾಟ್ ನಂ. ಜಿ–105, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ತೆರೆದ ಜಾಗ ಮತ್ತು ಒಂದು ಕಾರು ನಿಲ್ಲಿಸುವ ಜಾಗ. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಬಿಟಿಎಂ ಲೇಔಟ್ ಬಿ. ರೂ.93,10,733.58 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಸಾಂಕೇತಿಕ ಸ್ವಾಧೀನ	19.01.2026 ರ ನಂತರ
2	**ಸುಹಾಸ್ ಕೆ ಎಸ್** ವಿಳಾಸ : ಬ್ಲಾಕ್ 5 502 242 ಅಲ್ ಕ್ಯುಸೈಸ್ ಇಂಡಿ ಮೊದಲ ಆವರಣ ಸಂಖ್ಯೆ 242033555 ದುಬೈ ಯುಎಇ 498950 ಶಾಶ್ವತ ವಿಳಾಸ: ಕೊಂಡಿಯಾರ ಹೌಸ್, ಕರಾಯಮುತ್ತಂ, ವಳಪ್ಪಾಡ್, ಕರಾಯಂವಟ್ಟಂ, ತ್ರಿಶೂರ್, ಚವಕ್ಕಡ್, ಕೇರಳ – 680567 **ಜಾಮೀನುದಾರರು : ಅನುಗ್ರಾ ಕೆ ಎಸ್** ವಿಳಾಸ : ಕರಾಯಮುತ್ತಂ, ವಳಪ್ಪಾಡ್, ಕೊಂಡಿಯಾರ ಹೌಸ್, ಕರಾಯಂವಟ್ಟಂ, ತ್ರಿಶೂರ್, ಚವಕ್ಕಡ್, ಕೇರಳ –680567	ಫ್ಲಾಟ್ ನಂ. ಜಿ–103, ಮೊದಲನೇ ಮಹಡಿ, ಜಿ ಟವರ್ ಜೊತೆಗೆ ಸೂಪರ್ ಬಿಲ್ಟ್ ಅಪ್ ಪ್ರದೇಶ 113.80 ಚದರ ಮೀಟರ್ ಮತ್ತು ಅವಿಭಾಜಿತ ಭಾಗ 42.27 ಚದರ ಮೀಟರ್, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡವು ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606 ರಲ್ಲಿದೆ ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಜಿ–102, ಪಶ್ಚಿಮಕ್ಕೆ : ಫ್ಲಾಟ್ ನಂ. ಜಿ–104, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ತೆರೆದ ಜಾಗ ಮತ್ತು ಒಂದು ಕಾರು ನಿಲ್ಲಿಸುವ ಜಾಗ. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಬಿಟಿಎಂ ಲೇಔಟ್ ಬಿ. ರೂ..93,11,836.01 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಸಾಂಕೇತಿಕ ಸ್ವಾಧೀನ	19.01.2026 ರ ನಂತರ
3	ಸಿಜು ಎಂ ಸಿ, ವಿಲ್ಲಾ ನಂ–10, ಸ್ಟ್ರೀಟ್ ನಂ–20, ಅಬುಧಾಬಿ, ಅಲ್ ಐನ್ ಎಐ, ಖಬಿಸಿ, ಅಂಚೆಪೆಟ್ಟಿಗೆ ಸಂಖ್ಯೆ : 16108, ಎನ್‌ರಿ ವಾಸಿಸುತ್ತಿದ್ದಾರೆ ಅಲ್, ಖಾಬಿಸಿ, ಅಂಚೆ ಪೆಟ್ಟಿಗೆ ಸಂಖ್ಯೆ–16108. ಶಾಶ್ವತ ವಿಳಾಸ: ಮೂತೇದತ್ ಹೌಸ್, ಚೋವಲ್ಲೂರ್, ಕಂದನಸ್ಸೇರಿ, ತ್ರಿಶೂರ್, ಕೇರಳ – 680102. ಜಾಮೀನುದಾರರು : ಸರನ್ ಟಿ ಎಸ್, ವಿಳಾಸ : ತೇರಂಬತ್ ಹೌಸ್ ಪನ್ನನ್ ಲೇನ್ ಚೇರೂರ್ ಪೊ ತ್ರಿಶೂರ್ ಕೇರಳ–680008	ಫ್ಲಾಟ್ ನಂ. ಎಫ್–901, ಒಂಭತ್ತನೇ ಮಹಡಿ, ಎಫ್ ಟವರ್ ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡವು ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606 ರಲ್ಲಿದೆ. ಜೊತೆಗೆ ಸೂಪರ್ ಬಿಲ್ಟ್ ಅಪ್ ಪ್ರದೇಶ 1624 ಚದರ ಅಡಿ, ಕಾರ್ಪೆಟ್ ಪ್ರದೇಶ 1217.7 ಚದರ ಅಡಿ, ಯುಡಿಎಸ್ ಪ್ರದೇಶ 603.74 ಚದರ ಅಡಿ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿರುತ್ತದೆ. ಚಕ್ಕುಬಂದಿ : ಪೂರ್ವಕ್ಕೆ : ತೆರೆದ ಜಾಗ, ಪಶ್ಚಿಮಕ್ಕೆ : ಫ್ಲಾಟ್ ನಂ. ಎಫ್906, ಉತ್ತರಕ್ಕೆ : ಫ್ಲಾಟ್ ನಂ. ಎಫ್ 902, ದಕ್ಷಿಣಕ್ಕೆ : ತೆರೆದ ಜಾಗ. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಗಾಂಧಿಬಜಾರ್ ಬಿ. ರೂ.1,15,31,258.80 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.55,44,045.00 ಬಿ) ರೂ.5,54,404.50 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
4	**ಬಿಜೇಶ್ ಪಂಥಾಯಿಲ್ ತಂಬಿ** ಪ್ರಸ್ತುತ ವಿಳಾಸ : ಅಂಚೆ ಬಾಕ್ಸ್ ಸಂಖ್ಯೆ–16888, ಬುರ್ಜುಮನ್, ಅಬುಧಾಬಿ, ಯುಎಇ, ಅಂಚೆ ಪೆಟ್ಟಿಗೆ–16888 ಖಾಯಂ ವಿಳಾಸ: ಪಂಥಯಿಲ್, ಕಂದನಸ್ಸೇರಿ, ತ್ರಿಶೂರ್, ಕೇರಳ – 680102. ಜಾಮೀನುದಾರರು : ಮೃದುಲಾ ಎ ಸಿ, ವಿಳಾಸ : ಪಂಥಯಿಲ್, ಕಂದನಸ್ಸೇರಿ, ತ್ರಿಶೂರ್, ಕೇರಳ – 680102	ಫ್ಲಾಟ್ ನಂ. ಜಿ–403, ನಾಲ್ಕನೇ ಮಹಡಿ, ಜಿ ಟವರ್ ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡವು ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606 ರಲ್ಲಿದೆ. ಜೊತೆಗೆ ಸೂಪರ್ ಬಿಲ್ಟ್ ಅಪ್ ಪ್ರದೇಶ 1225 ಚದರ ಅಡಿ, ಕಾರ್ಪೆಟ್ ಪ್ರದೇಶ 897.38 ಚದರ ಅಡಿ, ಯುಡಿಎಸ್ ಪ್ರದೇಶ 455.79 ಚದರ ಅಡಿ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿರುತ್ತದೆ. ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಜಿ–402, ಪಶ್ಚಿಮಕ್ಕೆ : ಫ್ಲಾಟ್ ನಂ. ಜಿ–404, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ತೆರೆದ ಜಾಗ. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಬಿಟಿಎಂ ಲೇಔಟ್ 1ನೇ ಹಂತ ಬಿ. ರೂ.90,01,146.49 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
5	**ಸಯನಾ ಸಸೀಂದ್ರನ್,** ಪ್ರಸ್ತುತ ಬ್ಲಾಕ್ 5–502,242–ಅಲ್– ಕ್ವಾಸಿಸ್ ಇಂಡಿ ಫಸ್ಟ್, ದುಬೈ, ಯುಎಇ. ಶಾಶ್ವತ ವಿಳಾಸ : ಅಟ್ಟುವೆಪ್ಪಿಲ್ ಹೌಸ್, ಪಡಿಯೂರ್ ಎಡತಿರಿಂಜಿ ರಸ್ತೆ, ಎಡತಿರಿಂಜಿ, ಹ್ರೀಶೂರ್, ಕೇರಳ – 680122. ಜಾಮೀನುದಾರರು : ಅಜಿತಾ ಕುಮಾರಿ ವಿಳಾಸ : ಅಟ್ಟುವೆಪ್ಪಿಲ್ ಹೌಸ್, ಅಡಿಯೂರ್ ಎಡತಿರಿಂಜಿ ರಸ್ತೆ, ಎಡತಿರಿಂಜಿ, ತ್ರಿಶೂರ್, ಕೇರಳ – 680122.	ಫ್ಲಾಟ್ ನಂ. ಇ–003, ನೆಲ ಮಹಡಿ, ಇ– ಟವರ್ ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡವು ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606 ರಲ್ಲಿದೆ. ಜೊತೆಗೆ ಸೂಪರ್ ಬಿಲ್ಟ್ ಅಪ್ ಪ್ರದೇಶ 1240 ಚದರ ಅಡಿ, ಕಾರ್ಪೆಟ್ ಪ್ರದೇಶ 910.85 ಚದರ ಅಡಿ, ಯುಡಿಎಸ್ ಪ್ರದೇಶ 460.85 ಚದರ ಅಡಿ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿರುತ್ತದೆ. ಚಕ್ಕುಬಂದಿ : ಪೂರ್ವಕ್ಕೆ : ಪೂರ್ವಕ್ಕೆ : ತೆರೆದ ಜಾಗ, ಪಶ್ಚಿಮಕ್ಕೆ : ಫ್ಲಾಟ್ ನಂ. ಇ–006, ಉತ್ತರಕ್ಕೆ : ಫ್ಲಾಟ್ ನಂ. ಇ–002, ದಕ್ಷಿಣಕ್ಕೆ : ಫ್ಲಾಟ್ ನಂ. ಇ–004. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಬಿಟಿಎಂ ಲೇಔಟ್ 1ನೇ ಹಂತ ಬಿ. ರೂ.88,94,102.24 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಸಾಂಕೇತಿಕ ಸ್ವಾಧೀನ	19.01.2026 ರ ನಂತರ
6	**ರಿಶಾಲ್ ರಾಮಕೃಷ್ಣನ್ ಮೊಟ್ಟಮ್ಮಾಳ್** **ವಿಳಾಸ:** ಫ್ಲಾಟ್ ನಂ.1004, ಜುಮಾಲ್ ಮಜಿದ್ ಬಿಡ್ಜ್, ಅಲ್ ನಹ್ದಾ, ಶಾರ್ಜನ್, ದುಬೈ. ಪೋಸ್ಟ್ ಬಾಕ್ಸ್–47471. **ಪರ್ಮನೆಂಟ್ ವಿಳಾಸ :** ಮೊಟ್ಟಮಲ್ ಹೌಸ್, ಇರಿವೇರಿ, ಮೋವಾಂಚೇರಿ, ಕಣ್ಣೂರು, ಕೇರಳ–670613 **ನೀತು ರಾಜೀವನ್** **ವಿಳಾಸ:** ಮೊಟ್ಟಮಲ್ ಹೌಸ್, ಇರಿವೇರಿ, ಮೋವಾಂಚೇರಿ, ಕಣ್ಣೂರು, ಕೇರಳ–670613.	ಫ್ಲಾಟ್ ನಂ.ಎಫ್–303, 3ನೇ ಮಹಡಿ, ಎಫ್–ಟವರ್, 2 ಬಿಹೆಚ್‌ಕೆ ಜುವಾರಿ ಗಾರ್ಡನ್ ಸಿಟಿ–ಕಾವೇರಿ ಅಪಾರ್ಟ್‌ಮೆಂಟ್ಸ್, ಸರ್ವೆ ನಂ.111 /1ಎ,107/1,107/2,106/1 ಮತ್ತು 106/2, ಹುಲಿಕೆರೆ ಗ್ರಾಮ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. 2 ಬಿಹೆಚ್‌ಕೆ ಫ್ಲಾಟ್‌ನ್ನು ಹೊಂದಿರುವ ಸೂಪರ್ ಬಿಲ್ಟ್‌ಅಪ್ ಪ್ರದೇಶದ ವಿಸ್ತೀರ್ಣ 1225.00 ಚದರ ಅಡಿ, 897.72 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 455.79 ಚದರ ಅಡಿ ಯುಡಿಎಸ್ ಪ್ರದೇಶ ಮತ್ತು ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. 302, ಪಶ್ಚಿಮಕ್ಕೆ : ಫ್ಲಾಟ್ ನಂ. 304 & ಪ್ರವೇಶ, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ಲಾಬಿ ಪ್ರದೇಶ **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸೆಂಟ್ ಜಾನ್ಸ್ ಮೆಡ್ ಕಾಲ್ ಬಿ. ರೂ.89,35,442.96 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.41,79,600.00 ಬಿ) ರೂ.4,17,960.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
7	**ಶ್ರೀಜಿತ್ ಕಿಜಕ್ಕೆ ನೀರಮನ್ನಿಲ್** ವಿಳಾಸ: 607, ನಸ್ರಿಯಾ ಶಾರ್ಜಾ 607 ನಸ್ರಿಯಾ ಪೋಸ್ಟ್ ಬಾಕ್ಸ್ 35880, ಶಾರ್ಜಾ. **ಪರ್ಮನೆಂಟ್ ವಿಳಾಸ :** ಉದಯ ಭವನ ನೆಡೋಲಿ, ವೆಲ್ಲನೂರ್, ಪೋಸ್ಟ್ ಚೂಲೂರ್, ಪೊಲ್ಲಕೋಡ್ ಕೋರಿಖಿಕೋಡ್, ಎನ್‌ಐಟಿ ಕ್ಯಾಂಪಸ್, ಕೇರಳ 673601. **ಜಿನಿತ್ ಕುಮಾರ್ ಕೆ ಎನ್** **ವಿಳಾಸ :** ಉದಯ ಭವನ ನೆಡೋಲಿ, ವೆಲ್ಲನೂರ್, ಪೋಸ್ಟ್ ಚೂಲೂರ್, ಪೊಲ್ಲಕೋಡ್ ಕೋರಿಖಿಕೋಡ್, ಎನ್‌ಐಟಿ ಕ್ಯಾಂಪಸ್, ಕೇರಳ 673601.	ಫ್ಲಾಟ್ ನಂ.ಇ–203, 2ನೇ ಮಹಡಿ, ಇ–ಟವರ್, "ಜುವಾರಿ ಗಾರ್ಡನ್ ಸಿಟಿ" ಎಂದು ಕರೆಯಲ್ಪಡುವ ಕಟ್ಟಡ ಸರ್ವೆ ನಂ.111/1ಎ, 107/1, 107/2, 106/1 ಮತ್ತು 106/2, ಈ ಆಸ್ತಿಯು ಹುಲಿಕೆರೆ ಗ್ರಾಮ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. ಫ್ಲಾಟ್‌ನ ಸೂಪರ್ ಬಿಲ್ಟ್‌ಅಪ್ ಪ್ರದೇಶದ ವಿಸ್ತೀರ್ಣ 1240 ಚದರ ಅಡಿ , 910 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 461.02 ಚದರ ಅಡಿ ಯುಡಿಎಸ್ ಪ್ರದೇಶ ಮತ್ತು ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ತೆರೆದ ಜಾಗ, ಪಶ್ಚಿಮಕ್ಕೆ : ಫ್ಲಾಟ್ ನಂ. ಇ–206, ಉತ್ತರಕ್ಕೆ : ಫ್ಲಾಟ್ ನಂ. ಇ–202, ದಕ್ಷಿಣಕ್ಕೆ : ಫ್ಲಾಟ್ ನಂ. ಇ–204. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸೆಂಟ್ ಜಾನ್ಸ್ ಮೆಡ್ ಕಾಲ್ ಬಿ. ರೂ.1,05,98,905.08 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.41,79,600.00 ಬಿ) ರೂ.4,17,960.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
8	**ಶ್ರೀಜಿತ್ ಕಿಜಕ್ಕೆ ನೀರಮನ್ನಿಲ್** ವಿಳಾಸ: 607, ನಸ್ರಿಯಾ ಶಾರ್ಜಾ 607 ನಸ್ರಿಯಾ ಪೋಸ್ಟ್ ಬಾಕ್ಸ್ 35880, ಶಾರ್ಜಾ. **ಪರ್ಮನೆಂಟ್ ವಿಳಾಸ :** ಉದಯ ಭವನ ನೆಡೋಲಿ, ವೆಲ್ಲನೂರ್, ಪೋಸ್ಟ್ ಚೂಲೂರ್, ಪೊಲ್ಲಕೋಡ್ ಕೋರಿಖಿಕೋಡ್, ಎನ್‌ಐಟಿ ಕ್ಯಾಂಪಸ್, ಕೇರಳ 673601. **ಜಿನಿತ್ ಕುಮಾರ್ ಕೆ ಎನ್** **ವಿಳಾಸ :** ಉದಯ ಭವನ ನೆಡೋಲಿ, ವೆಲ್ಲನೂರ್, ಪೋಸ್ಟ್ ಚೂಲೂರ್, ಪೊಲ್ಲಕೋಡ್ ಕೋರಿಖಿಕೋಡ್, ಎನ್‌ಐಟಿ ಕ್ಯಾಂಪಸ್, ಕೇರಳ 673601.	ಫ್ಲಾಟ್ ನಂ.ಎಫ್–006, ನೆಲ ಮಹಡಿ, ಎಫ್–ಟವರ್, "ಜುವಾರಿ ಗಾರ್ಡನ್ ಸಿಟಿ" ಎಂದು ಕರೆಯಲ್ಪಡುವ ಕಟ್ಟಡ ಸರ್ವೆ ನಂ.111/1ಎ, 107/1, 107/2, 106/1 ಮತ್ತು 106/2, ಈ ಆಸ್ತಿಯು ಹುಲಿಕೆರೆ ಗ್ರಾಮ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. ಫ್ಲಾಟ್‌ನ ಸೂಪರ್ ಬಿಲ್ಟ್‌ಅಪ್ ಪ್ರದೇಶದ ವಿಸ್ತೀರ್ಣ 1105 ಚದರ ಅಡಿ, 773 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 410.97 ಚದರ ಅಡಿ ಯುಡಿಎಸ್ ಪ್ರದೇಶ ಮತ್ತು ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಎಫ್–001, ಪಶ್ಚಿಮಕ್ಕೆ : ಫ್ಲಾಟ್ ನಂ. ಎಫ್–005, ಉತ್ತರಕ್ಕೆ : ಫ್ಲಾಟ್ ನಂ. ಎಫ್–003, ದಕ್ಷಿಣಕ್ಕೆ : ತೆರೆದ ಜಾಗ. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸೆಂಟ್ ಜಾನ್ಸ್ ಮೆಡ್ ಕಾಲ್ ಬಿ. ರೂ.98,17,288.33 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.41,79,600.00 ಬಿ) ರೂ.4,17,960.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
9	**ಹಿಶಾಮಹಮ್ಮದ್ ಅನೀಫಾ ಜುಬೈರಾ** **ವಿಳಾಸ:** ಆರ್‌ಎ 3831–ಸಿ–ಸ್ಟ್ರೀಟ್, ಅಂಚೆ ಪೆಟ್ಟಿಗೆ –48636, ದುಬೈ–ಯುಎಇ. **ಶಾಶ್ವತ ವಿಳಾಸ :** ಶಬ್ನಮ್ ಕಾಟೇಜ್ ಚೆಮ್ಮರತ್ತುಮುಕ್ಕು ನಗರೂರು ತಿರುವನಂತಪುರಂ ಕೇರಳ–695601. **ಖದೀಜಾ ಬಿ ಎಸ್ (ಜಾಮೀನುದಾರರು)** ಶಬ್ನಮ್ ಕಾಟೇಜ್ ಚೆಮ್ಮರತ್ತುಮುಕ್ಕು ನಗರೂರು ತಿರುವನಂತಪುರಂ ಕೇರಳ–695601.	ಫ್ಲಾಟ್ ನಂ.ಎಫ್–104, ಮೊದಲನೇ ಮಹಡಿ ಎಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡದಲ್ಲಿದೆ, ಈ ಆಸ್ತಿಯು ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ, ಜೊತೆಗೆ 1225 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ ಮತ್ತು 897.38 ಚದರ ಅಡಿ ಕಾರ್ಪೆಟ್ ಪ್ರದೇಶ, 455.79 ಚದರ ಅಡಿ ಯುಡಿಎಸ್ ಪ್ರದೇಶ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಫ್ಲಾಟ್ ನಂ.ಎಫ್–103, ಪಶ್ಚಿಮಕ್ಕೆ: ತೆರೆದ ಜಾಗ, ಉತ್ತರಕ್ಕೆ: ತೆರೆದ ಜಾಗ, ದಕ್ಷಿಣಕ್ಕೆ: ಫ್ಲಾಟ್ ನಂ.ಎಫ್–105. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ.86,10,673.14 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಸಾಂಕೇತಿಕ ಸ್ವಾಧೀನ	19.01.2026 ರ ನಂತರ
10	**ರಾಜೀವ್ ಆನಂದನ್ ಪಿಳ್ಳೈ ಮತ್ತು** ಪ್ರಸ್ತುತ ಫ್ಲಾಟ್ ನಂ. 105, 322–2ಸಿ, ಅಲ್–ಹುದೈಬಾ ಪ್ರದೇಶ, ಯುನೈಟೆಡ್ ಅರಬ್ ಎಮಿರೇಟ್ಸ್ ದುಬೈ – ಅಂಚೆ ಪೆಟ್ಟಿಗೆ–564. **ಶಾಶ್ವತ ವಿಳಾಸ:** ಬಿನ್ ಆನಂದನ್ ಪಿಳ್ಳೈ, ಮುತಿರಥರ ನಂದನಂ ಕೆ ಎಸ್ ಪುರಂ ಪೋಸ್ಟ್ ಕರುನಾಗಪಲ್ಲಿ ಕೊಲ್ಲಂ ಕೇರಳ–690544. **ರಾಜೇಶ್ (ಜಾಮೀನುದಾರರು)** ಮುತುರತಾರಾ, ನೀಲಿಕುಲಂ, ಕುಲಶೇಖರಪುರಂ ಅಂಚೆ, ಕೊಲ್ಲಂ, ಕೇರಳ–690544.	ಫ್ಲಾಟ್ ನಂ.ಎಫ್–603, ಆರನೇ ಮಹಡಿ ಎಫ್–ಟವರ್, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡದಲ್ಲಿದೆ, ಈ ಆಸ್ತಿಯು ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ, ಜೊತೆಗೆ 1225.00 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 897.38 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 455.79 ಚದರ ಅಡಿ ಯುಡಿಎಸ್ ಪ್ರದೇಶ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಫ್ಲಾಟ್ ನಂ.ಎಫ್–602, ಪಶ್ಚಿಮಕ್ಕೆ: ಫ್ಲಾಟ್ ನಂ.ಎಫ್–604, ಉತ್ತರಕ್ಕೆ: ತೆರೆದ ಜಾಗ, ದಕ್ಷಿಣಕ್ಕೆ: ಫ್ಲಾಟ್ ನಂ.ಎಫ್–606. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ. 89,96,386.04 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಸಾಂಕೇತಿಕ ಸ್ವಾಧೀನ	19.01.2026 ರ ನಂತರ
11	**ರಶಾದ್,** ಫ್ಲಾಟ್ ನಂ.306, ಖಾಲಿದ್ ಬಿಲ್ಡಿಂಗ್, ಅಲ್–ಕರಮಾ, ಯುನೈಟೆಡ್ ಅರಬ್ ಎಮಿರೇಟ್ಸ್ ದುಬೈ–ಅಂಚೆ ಪೆಟ್ಟಿಗೆ 19867. **ಶಾಶ್ವತ ವಿಳಾಸ:** ಮಮ್ಮಿಣಿಕ್ಕನಕತ್ ರಹ್ಮಾ ಮಂಜಿಲ್ ಪೊಯ್ಲಿಸ್ಸೆರಿ ಬಿಪಿ ಅಂಗಡಿ ತಲಕ್ಕಾಡ್ ಮಲಾಪುರಂ ಕೇರಳ–676102. **ಹಸ್ನೂಲ್ ಬನ್ನಾ (ಜಾಮೀನುದಾರರು) ವಿಳಾಸ:** ಮಮ್ಮಿನಿಕ್ಕನಕತ್ ರಹ್ಮಾ ಮಂಜಿಲ್, ಬಿಪಿ ಅಂಗಡಿ ತಾಲ್ಲೂಕು, ಮಲಪ್ಪುರ, ಕೇರಳ–676102.	ಫ್ಲಾಟ್ ನಂ.ಜಿ–503, ಐದನೇ ಮಹಡಿ ಜಿ–ಟವರ್, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡದಲ್ಲಿದೆ, ಈ ಆಸ್ತಿಯು ಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ, ಜೊತೆಗೆ 1225.00 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 897.38 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 455.79 ಚದರ ಅಡಿ ಯುಡಿಎಸ್ ಪ್ರದೇಶ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಫ್ಲಾಟ್ ನಂ.ಜಿ–502, ಪಶ್ಚಿಮಕ್ಕೆ: ಫ್ಲಾಟ್ ನಂ.ಜಿ–504, ಉತ್ತರಕ್ಕೆ: ತೆರೆದ ಜಾಗ, ದಕ್ಷಿಣಕ್ಕೆ: ಫ್ಲಾಟ್ ನಂ.ಜಿ–506. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ. 93,34,430.31 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಸಾಂಕೇತಿಕ ಸ್ವಾಧೀನ	19.01.2026 ರ ನಂತರ
12	**ಶ್ರೀಜಿತ್ ಮನಕುಲಂಗರ** ಶ್ರೀಕೋವಿಲ್ ಎಸ್, ದಕ್ಷಿಣ/ಎಫ್ 1503, ಅಜ್ಮಾಮ್, ರಾಶಿದೇಯ 1, ಅಜ್ಮಾನ್, ಶಾರ್ಜಾ, ಯುನೈಟೆಡ್ ಅರಬ್ ಎಮಿರೇಟ್ಸ್ ದುಬೈ ಅಂಚೆ ಪೆಟ್ಟಿಗೆ 1234. **ಶಾಶ್ವತ ವಿಳಾಸ:** ಗಂಗಾಧರನ್ ಪುತ್ತುಕುಡಿಪೊಯಿಲ್ ಕುರುಮನ್ನಿಲ್, ಮನಕುಲಂಗರ, ಶ್ರೀಕೋವಿಲ್, ವಿಯೂರ್, ಕೊಲ್ಲಂ, ಕೋರಿಖಿಕೋಡ್, ಕೇರಳ–673307. **ರಮ್ಯಾ ಶ್ರೀಜಿತ್,** ಗಂಗಾಧರನ್ ಪುತ್ತುಕುಡಿಪೊಯಿಲ್ ಕುರುಮನ್ನಿಲ್, ಮನಕುಲಂಗರ ಶ್ರೀಕೋವಿಲ್, ವಿಯೂರ್, ಕೊಲ್ಲಂ, ಕೋರಿಖಿಕೋಡ್, ಕೇರಳ–673307.	ಫ್ಲಾಟ್ ನಂ.ಎಫ್–803, 8ನೇ ಮಹಡಿ, ಎಫ್–ಟವರ್, Zuari Garden City-kaveri ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್‌ನಲ್ಲಿದ್ದು, ಸರ್ವೆ ನಂ.111/1ಎ, 107/1, 107/2, 106/1 ಮತ್ತು 106/2, ಹುಲಿಕೆರೆ ಗ್ರಾಮ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ–571606ರಲ್ಲಿದೆ. 2 ಬಿಹೆಚ್‌ಕೆ ಫ್ಲಾಟ್‌ನಲ್ಲಿ 1225.00 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 897.38 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 455.79 ಚದರ ಅಡಿ ಯುಡಿಎಸ್ ಪ್ರದೇಶ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ: ಪೂರ್ವಕ್ಕೆ: ಫ್ಲಾಟ್ ನಂ.ಎಫ್–802, ಪಶ್ಚಿಮಕ್ಕೆ: ಫ್ಲಾಟ್ ನಂ.ಎಫ್–804, ಉತ್ತರಕ್ಕೆ: ತೆರೆದ ಜಾಗ, ದಕ್ಷಿಣಕ್ಕೆ: ಫ್ಲಾಟ್ ನಂ.ಎಫ್–806. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ. 98,33,890.10 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.46,43,730.00 ಬಿ) ರೂ.4,64,973.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
13	**ಶ್ರೀಜಿತ್ ಮನಕುಲಂಗರ** ಶ್ರೀಕೋವಿಲ್ ಎಸ್, ದಕ್ಷಿಣ/ಎಫ್ 1503, ಅಜ್ಮಾಮ್, ರಾಶಿದೇಯ 1, ಅಜ್ಮಾನ್, ಶಾರ್ಜಾ, ಯುನೈಟೆಡ್ ಅರಬ್ ಎಮಿರೇಟ್ಸ್ ದುಬೈ ಅಂಚೆ ಪೆಟ್ಟಿಗೆ 1234. **ಶಾಶ್ವತ ವಿಳಾಸ:** ಗಂಗಾಧರನ್ ಪುತ್ತುಕುಡಿಪೊಯಿಲ್ ಕುರುಮನ್ನಿಲ್, ಮನಕುಲಂಗರ, ಶ್ರೀಕೋವಿಲ್, ವಿಯೂರ್, ಕೊಲ್ಲಂ, ಕೋರಿಖಿಕೋಡ್, ಕೇರಳ–673307. **ರಮ್ಯಾ ಶ್ರೀಜಿತ್,** ಗಂಗಾಧರನ್ ಪುತ್ತುಕುಡಿಪೊಯಿಲ್ ಕುರುಮನ್ನಿಲ್, ಮನಕುಲಂಗರ ಶ್ರೀಕೋವಿಲ್, ವಿಯೂರ್, ಕೊಲ್ಲಂ, ಕೋರಿಖಿಕೋಡ್, ಕೇರಳ–673307.	ಫ್ಲಾಟ್ ನಂ.ಎಫ್–1006, 10ನೇ ಮಹಡಿ, ಎಫ್–ಟವರ್, 2 ಬಿಹೆಚ್‌ಕೆ, Zuari Garden City-kaveri ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್‌ನಲ್ಲಿದ್ದು, ಸರ್ವೆ ನಂ.111/1ಎ, 107/1, 107/2, 106/1 ಮತ್ತು 106/2, ಹುಲಿಕೆರೆ ಗ್ರಾಮ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ–571606ರಲ್ಲಿದೆ. 2 ಬಿಹೆಚ್‌ಕೆ ಫ್ಲಾಟ್‌ನಲ್ಲಿ 1225.00 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 898.35 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 454.82 ಚದರ ಅಡಿ ಯುಡಿಎಸ್ ಪ್ರದೇಶ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಎಫ್–1001, ಪಶ್ಚಿಮಕ್ಕೆ : ಫ್ಲಾಟ್ ನಂ. ಎಫ್–1005, ಉತ್ತರಕ್ಕೆ : ಫ್ಲಾಟ್ ನಂ. ಎಫ್–1003, ದಕ್ಷಿಣಕ್ಕೆ : ತೆರೆದ ಜಾಗ. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ. 98,41,696.95 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.46,43,730.00 ಬಿ) ರೂ.4,64,973.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
14	**ರಾಜೇಶ್ ಕುಂದತ್ತಿಲ್,** ಪ್ರಸ್ತುತ BLD Q6, ಫ್ಲಾಟ್ ನಂ.204, ಇಂಟರ್ನ್ಯಾಷನಲ್ ಸಿಟಿ, ಫ್ರಾನ್ಸ್, ದುಬೈ – ಅಂಚೆ ಪೆಟ್ಟಿಗೆ–61649. **ಶಾಶ್ವತ ವಿಳಾಸ:** ಕುಂಡತ್ತಿಲ್ ಹೌಸ್, ಐವರ್ಕುಲಂ ಹತ್ತಿರ, ಮಾವಿಲಾಯಿ ಪೋಸ್ಟ್ ಬಾಕ್ಸ್, ಮುಂಡಲೂರು, ಕಣ್ಣೂರು, ಕೇರಳ–670622. **ಶ್ರೀಜಾ ಪಿ,** ಕುಂದತ್ತಿಲ್ ವಿಳಾಸ : ಐವರ್ಕುಲಂ ಹತ್ತಿರ, ಮಾವಿಲೈ ಪೋಸ್ಟ್ ಬಾಕ್ಸ್, ಮುಂಡಲೂರು, ಕಣ್ಣೂರು, ಕೇರಳ–670622.	ಫ್ಲಾಟ್ ನಂ.ಎಫ್–602, 6ನೇ ಮಹಡಿ, ಎಫ್–ಟವರ್, 3 ಬಿಹೆಚ್‌ಕೆ, Zuari Garden City-kaveri ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್‌ನಲ್ಲಿದ್ದು, ಸರ್ವೆ ನಂ.111/1ಎ, 107/1, 107/2, 106/1 ಮತ್ತು 106/2, ಹುಲಿಕೆರೆ ಗ್ರಾಮ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ–571606ರಲ್ಲಿದೆ. 3 ಬಿಹೆಚ್‌ಕೆ ಫ್ಲಾಟ್‌ನಲ್ಲಿ 1625.00 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 1218.27 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 603.74 ಚದರ ಅಡಿ ಯುಡಿಎಸ್ ಪ್ರದೇಶ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ತೆರೆದ ಜಾಗ, ಪಶ್ಚಿಮಕ್ಕೆ : ಫ್ಲಾಟ್ ನಂ. ಎಫ್–603 & ಪ್ರವೇಶದ ಡೋರ್, ಉತ್ತರಕ್ಕೆ : ಫ್ಲಾಟ್ ನಂ. ಎಫ್–601, ದಕ್ಷಿಣಕ್ಕೆ : ತೆರೆದ ಜಾಗ. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ. 1,04,68,580.78 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.55,44,045.00 ಬಿ) ರೂ.5,54,404.50 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
15	**ವಿನೋದ್ ಕೆ ವಿ** **ವಿಳಾಸ:** ಫ್ಲಾಟ್ ನಂ–101, ಮುವೈಲೆಹ್ ಕಮರ್ಷಿಯಲ್, ಶಾರ್ಜಾ ಇಂಡಸ್ಟ್ರಿಯಲ್, ಶಾರ್ಜಾ, ಯುಎಇ. ಪರ್ಮನೆಂಟ್ ವಿಳಾಸ : ಅಟ್ಟುವೆಪ್ಪಿಲ್ ಹೌಸ್, ಪಡಿಯೂರ್ ಎಡತಿರಿಂಜಿ ರಸ್ತೆ, ಎಡತಿರಿಂಜಿ, ತ್ರಿಶೂರ್, ಕೇರಳ – 680122. **ಶರಣ್ಯ ಶಸೀಂದ್ರನ್** **ವಿಳಾಸ :** ಅಟ್ಟುವೆಪ್ಪಿಲ್ ಹೌಸ್, ಪಡಿಯೂರ್ ಎಡತಿರಿಂಜಿ ರಸ್ತೆ, ಎಡತಿರಿಂಜಿ, ತ್ರಿಶೂರ್, ಕೇರಳ – 680122.	ಫ್ಲಾಟ್ ನಂ.ಎಫ್–004, ನೆಲ ಮಹಡಿ, Zuari Garden City-kaveri ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್‌ನಲ್ಲಿದ್ದು, ಸರ್ವೆ ನಂ.111/1ಎ, 107/1, 107/2, 106/1 ಮತ್ತು 106/2, ಹುಲಿಕೆರೆ ಗ್ರಾಮ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ–571606ರಲ್ಲಿದೆ. ಸೂಪರ್ ಬಿಲ್ಟ್ ಅಪ್ ಪ್ರದೇಶ 1225 ಚದರ ಅಡಿ, ಕಾರ್ಪೆಟ್ ಪ್ರದೇಶ 899.87 ಚದರ ಅಡಿ ಮತ್ತು ಯುಡಿಎಸ್ 455.79 ಚದರ ಅಡಿ, ಕಾಮನ್ ಪ್ರದೇಶ 122.50 ಚದರ ಅಡಿ, ಮತ್ತು ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಎಫ್–003, ಪಶ್ಚಿಮಕ್ಕೆ : ತೆರೆದ ಜಾಗ, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ಫ್ಲಾಟ್ ನಂ. ಎಫ್–005. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ. 90,45,626.77 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.41,79,600.00 ಬಿ) ರೂ.4,17,960.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
16	**ವಿನೋದ್ ಕೆ ವಿ** **ವಿಳಾಸ:** ಫ್ಲಾಟ್ ನಂ–101, ಮುವೈಲೆಹ್ ಕಮರ್ಷಿಯಲ್, ಶಾರ್ಜಾ ಇಂಡಸ್ಟ್ರಿಯಲ್, ಶಾರ್ಜಾ, ಯುಎಇ. ಪರ್ಮನೆಂಟ್ ವಿಳಾಸ : ಅಟ್ಟುವೆಪ್ಪಿಲ್ ಹೌಸ್, ಪಡಿಯೂರ್ ಎಡತಿರಿಂಜಿ ರಸ್ತೆ, ಎಡತಿರಿಂಜಿ, ತ್ರಿಶೂರ್, ಕೇರಳ – 680122. **ಶರಣ್ಯ ಶಸೀಂದ್ರನ್** **ವಿಳಾಸ :** ಅಟ್ಟುವೆಪ್ಪಿಲ್ ಹೌಸ್, ಪಡಿಯೂರ್ ಎಡತಿರಿಂಜಿ ರಸ್ತೆ, ಎಡತಿರಿಂಜಿ, ತ್ರಿಶೂರ್, ಕೇರಳ – 680122.	ಫ್ಲಾಟ್ ನಂ.ಎಫ್–003, ನೆಲ ಮಹಡಿ, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡ ಸರ್ವೆ ನಂ.111/1ಎ, 107/1, 107/2, 106/1 ಮತ್ತು 106/2, ಈ ಆಸ್ತಿಯು ಹುಲಿಕೆರೆ ಗ್ರಾಮ, ಕೆಇಆರ್‌ಎಸ್ ಸರ್ಕಾರಿ ಕಛೇರಿ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. 1225 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶದ, 897.72 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 455.79 ಚದರ ಅಡಿ ಯುಡಿಎಸ್ ಪ್ರದೇಶ, 122.50 ಚದರ ಅಡಿ ಕಾಮನ್ ಪ್ರದೇಶ ಮತ್ತು ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಎಫ್–002, ಪಶ್ಚಿಮಕ್ಕೆ : ಫ್ಲಾಟ್ ನಂ. ಎಫ್–004, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ಲಾಬಿ ಪ್ರದೇಶ **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ. 91,37,404.61 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.41,79,600.00 ಬಿ) ರೂ.4,17,960.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
17	**ಮೊಹಮ್ಮದ್ ಉಮರ್,** ವಿದೇಶಿಯ ನಿವಾಸಿ, **ಪ್ರಸ್ತುತ ವಿಳಾಸ:** ಈಸಾ ಮೊಹಮ್ಮದ್ ಬಿಲ್ಡಿಂಗ್, ಫ್ಲಾಟ್–102, ನ್ಯಾಷನಲ್ ಪೇಂಟ್ಸ್, ಶಾರ್ಜಾ, ಯುಎಇ. **ಪರ್ಮನೆಂಟ್ ವಿಳಾಸ:** ಸಂಖ್ಯೆ–33 & 33/1, 2ನೇ ಕ್ರಾಸ್, 1ನೇ ಮೇನ್, ಎಸ್‌ಕೆ ಗಾರ್ಡನ್, ಬೆನ್ಸನ್ ಟೌನ್, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ – 560046. **ಫೌಕಿಯಾ ಮೊಹಮ್ಮದ್ ಉಮರ್** ಕೋಂ. ಮೊಹಮ್ಮದ್ ಉಮರ್ **(ಸಹ–ಅರ್ಜಿದಾರರು) ವಿಳಾಸ :** ಸಂಖ್ಯೆ–33 & 33/1, 2ನೇ ಕ್ರಾಸ್, 1ನೇ ಮೇನ್, ಎಸ್‌ಕೆ ಗಾರ್ಡನ್, ಬೆನ್ಸನ್ ಟೌನ್, ಬೆಂಗಳೂರು ಉತ್ತರ, ಬೆಂಗಳೂರು– 560046.	ಫ್ಲಾಟ್ ನಂ.ಇ–101, 3ಬಿಹೆಚ್‌ಕೆ, ಮೊದಲನೇ ಮಹಡಿ, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡದ ಸರ್ವೆ ನಂ.111/1ಎ, 107/1, 107/2, 106/1 ಮತ್ತು 106/2, ಈ ಆಸ್ತಿಯು ಹುಲಿಕೆರೆ ಗ್ರಾಮ, ಕೆಇಆರ್‌ಎಸ್ ಸರ್ಕಾರಿ ಕಛೇರಿ ಹತ್ತಿರ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. 1600 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 1185.86 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 594.81 ಚದರ ಅಡಿ ಯುಡಿಎಸ್ ಪ್ರದೇಶ, 160 ಚದರ ಅಡಿ ಕಾಮನ್ ಪ್ರದೇಶ ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಇ–102, ಪಶ್ಚಿಮಕ್ಕೆ : ತೆರೆದ ಜಾಗ, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ಫ್ಲಾಟ್ ನಂ. ಇ–106. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ.1,07,99,682.64 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.61,60,050.00 ಬಿ) ರೂ.6,16,005.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
18	**ಮೊಹಮ್ಮದ್ ಉಮರ್,** ವಿದೇಶಿಯ ನಿವಾಸಿ, **ಪ್ರಸ್ತುತ ವಿಳಾಸ:** ಈಸಾ ಮೊಹಮ್ಮದ್ ಬಿಲ್ಡಿಂಗ್, ಫ್ಲಾಟ್–102, ನ್ಯಾಷನಲ್ ಪೇಂಟ್ಸ್, ಶಾರ್ಜಾ, ಯುಎಇ. **ಪರ್ಮನೆಂಟ್ ವಿಳಾಸ:** ಸಂಖ್ಯೆ–33 & 33/1, 2ನೇ ಕ್ರಾಸ್, 1ನೇ ಮೇನ್, ಎಸ್‌ಕೆ ಗಾರ್ಡನ್, ಬೆನ್ಸನ್ ಟೌನ್, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ – 560046. **ಫೌಕಿಯಾ ಮೊಹಮ್ಮದ್ ಉಮರ್** ಕೋಂ. ಮೊಹಮ್ಮದ್ ಉಮರ್ **(ಸಹ–ಅರ್ಜಿದಾರರು) ವಿಳಾಸ :** ಸಂಖ್ಯೆ–33 & 33/1, 2ನೇ ಕ್ರಾಸ್, 1ನೇ ಮೇನ್, ಎಸ್‌ಕೆ ಗಾರ್ಡನ್, ಬೆನ್ಸನ್ ಟೌನ್, ಬೆಂಗಳೂರು ಉತ್ತರ, ಬೆಂಗಳೂರು, ಕರ್ನಾಟಕ – 560046.	ಫ್ಲಾಟ್ ನಂ.ಎಫ್–406, ನಾಲ್ಕನೇ ಮಹಡಿ, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡದ ಸರ್ವೆ ನಂ.111/1ಎ,107/1,107/2, 106/1 ಮತ್ತು 106/2, ಈ ಆಸ್ತಿಯು ಹುಲಿಕೆರೆ ಗ್ರಾಮ, ಕೆಇಆರ್‌ಎಸ್ ಸರ್ಕಾರಿಕಛೇರಿ ಹತ್ತಿರ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. 1225 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 898.69 ಚದರ ಅಡಿ ಯುಡಿಎಸ್ ಪ್ರದೇಶ, 122.50 ಚದರ ಅಡಿ ಕಾಮನ್ ಪ್ರದೇಶ ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಎಫ್–401, ಪಶ್ಚಿಮಕ್ಕೆ : ಫ್ಲಾಟ್ ನಂ. ಎಫ್–405 & ಪ್ರವೇಶದ್ವಾರ, ಉತ್ತರಕ್ಕೆ :ಲಾಬಿ ಪ್ರದೇಶ & ಎಫ್–403, ದಕ್ಷಿಣಕ್ಕೆ : ತೆರೆದ ಜಾಗ. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ. 87,76,090.73 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
19	**ಮೊಹಮ್ಮದ್ ಯಾಹ್ಯಾ ಸದಾ,** ವಿದೇಶಿಯ ನಿವಾಸಿ, **ಪ್ರಸ್ತುತ ವಿಳಾಸ:** ಫ್ಲಾಟ್ ನಂ–1102, 32 ಸಿ ಸ್ಟ್ರೀಟ್, ಅಲ್ ಹವಾಯಿ ಬಿಲ್ಡಿಂಗ್, ಅಲ್ ಅಹ್ಮದಿಯಾ ಸ್ಟ್ರೀಟ್, ದುಬೈ, ಯುಎಇ, **ಪರ್ಮನೆಂಟ್ ವಿಳಾಸ :ಯಾಹ್ಯಾ ಮಂಜಿಲ್,** ಮೂಸಾ ನಗರ, 2ನೇ ಕ್ರಾಸ್, ಆಯ್ಷಾ ಮಸೀದಿ ಹತ್ತಿರ, ಭಟ್ಕಳ, ಉತ್ತರ ಕನ್ನಡ, ಕರ್ನಾಟಕ–581320. **ಬೀಬಿ ಸೈಮಾ ರುಕ್ನುದ್ದೀನ್** **ವಿಳಾಸ :** ಯಾಹ್ಯಾ ಮಂಜಿಲ್, ಮೂಸಾ ನಗರ, 2ನೇ ಕ್ರಾಸ್, ಆಯ್ಷಾ ಮಸೀದಿ ಹತ್ತಿರ, ಭಟ್ಕಳ, ಉತ್ತರ ಕನ್ನಡ, ಕರ್ನಾಟಕ–581320.	ಫ್ಲಾಟ್ ನಂ.ಇ–1203, ಹನ್ನೆರಡನೇ ಮಹಡಿ, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡದ ಸರ್ವೆ ನಂ.111/1ಎ,107/1,107/2, 106/1 ಮತ್ತು 106/2, ಈ ಆಸ್ತಿಯು ಹುಲಿಕೆರೆ ಗ್ರಾಮ, ಕೆಇಆರ್‌ಎಸ್ ಸರ್ಕಾರಿಕಛೇರಿ ಹತ್ತಿರ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. 1240 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 910.85 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 460.85 ಚದರ ಅಡಿ ಯುಡಿಎಸ್ ಪ್ರದೇಶ, 124 ಚದರ ಅಡಿ ಕಾಮನ್ ಪ್ರದೇಶ ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಮತ್ತು ಚಕ್ಕುಬಂದಿ : ಪೂರ್ವಕ್ಕೆ : ತೆರೆದ ಜಾಗ, ಪಶ್ಚಿಮಕ್ಕೆ : ಲಾಬಿ ಪ್ರದೇಶ & ಪ್ರವೇಶದ್ವಾರ, ಉತ್ತರಕ್ಕೆ : ಫ್ಲಾಟ್ ನಂ. ಇ–1202, ದಕ್ಷಿಣಕ್ಕೆ : ಫ್ಲಾಟ್ ನಂ. ಇ–1204. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ.83,67,330.29 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
20	**ಮೊಹಮ್ಮದ್ ಯಾಹ್ಯಾ ಸದಾ,** ವಿದೇಶಿಯ ನಿವಾಸಿ, **ಪ್ರಸ್ತುತ ವಿಳಾಸ:** ಫ್ಲಾಟ್ ನಂ–1102, 32 ಸಿ ಸ್ಟ್ರೀಟ್, ಅಲ್ ಹವಾಯಿ ಬಿಲ್ಡಿಂಗ್, ಅಲ್ ಅಹ್ಮದಿಯಾ ಸ್ಟ್ರೀಟ್, ದುಬೈ, ಯುಎಇ., **ಪರ್ಮನೆಂಟ್ ವಿಳಾಸ** :ಯಾಹ್ಯಾ ಮಂಜಿಲ್, ಮೂಸಾ ನಗರ, 2ನೇ ಕ್ರಾಸ್, ಆಯ್ಷಾ ಮಸೀದಿ ಹತ್ತಿರ, ಭಟ್ಕಳ, ಉತ್ತರ ಕನ್ನಡ, ಕರ್ನಾಟಕ–581320. **ಬೀಬಿ ಸೈಮಾ ರುಕ್ನುದ್ದೀನ್** **ವಿಳಾಸ :** ಯಾಹ್ಯಾ ಮಂಜಿಲ್, ಮೂಸಾ ನಗರ, 2ನೇ ಕ್ರಾಸ್, ಆಯ್ಷಾ ಮಸೀದಿ ಹತ್ತಿರ, ಭಟ್ಕಳ, ಉತ್ತರ ಕನ್ನಡ, ಕರ್ನಾಟಕ–581320.	ಫ್ಲಾಟ್ ನಂ.ಇ–803, 8ನೇ ಮಹಡಿ, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡದ ಸರ್ವೆ ನಂ.111/1ಎ,107/1, 107/2, 106/1 ಮತ್ತು 106/2, ಈ ಆಸ್ತಿಯು ಹುಲಿಕೆರೆ ಗ್ರಾಮ, ಕೆಇಆರ್‌ಎಸ್ ಸರ್ಕಾರಿಕಛೇರಿ ಹತ್ತಿರ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. 1240 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 910.85 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 460.85 ಚದರ ಅಡಿ ಯುಡಿಎಸ್ ಪ್ರದೇಶ, 124 ಚದರ ಅಡಿ ಕಾಮನ್ ಪ್ರದೇಶ ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ತೆರೆದ ಜಾಗ, ಪಶ್ಚಿಮಕ್ಕೆ : ಲಾಬಿ ಪ್ರದೇಶ ಮತ್ತು ಪ್ರವೇಶ, ಉತ್ತರಕ್ಕೆ : ಫ್ಲಾಟ್ ನಂ. ಇ–802, ದಕ್ಷಿಣಕ್ಕೆ : ಫ್ಲಾಟ್ ನಂ. 804. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ.83,55,304.27 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ. 46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
21	**ನಸೀರ್,** ವಿದೇಶಿಯ ನಿವಾಸಿ, ಬಿಲ್ಡಿಂಗ್ 1ಬಿ/2, ಫ್ಲಾಟ್ ನಂ.413, 365–ಅಲ್ಗೋಜ್ ಇಂಡಲ್ 2ನೇ ದುಬೈ–ಯುಎಇ.**ಪರ್ಮನೆಂಟ್ ವಿಳಾಸ :** ರಾಯಮ್ಮರಕ್ಕರ್ ವೀಟಿಟಿಲ್ ಹೌಸ್, ತಿರುನೆಲ್ಲೂರು, ಮುಲ್ಲಸ್ಸೆರಿ, ತ್ರಿಶೂರ್, ಕೇರಳ – 680508. **ಶಬಾನಾ ನಸೀರ್** ರಾಯಮ್ಮರಕ್ಕರ್, ವೀಟಿಲ್ ಹೌಸ್, ತ್ರಿನೆಲ್ಲೂರ್, ಮುಲ್ಲಸ್ಸೆರಿ, ತ್ರಿಶೂರ್, ಕೇರಳ–680508.	ಫ್ಲಾಟ್ ನಂ.ಎಫ್–503, 5ನೇ ಮಹಡಿ, ಎಫ್–ಟವರ್, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡದ ಸರ್ವೆ ನಂ.111/1ಎ, 107/1, 107/2, 106/1 ಮತ್ತು 106/2, ಈ ಆಸ್ತಿಯು ಹುಲಿಕೆರೆ ಗ್ರಾಮ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. 1224 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 857 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 454.90 ಚದರ ಅಡಿ ಯುಡಿಎಸ್ ಪ್ರದೇಶ ಮತ್ತು ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಎಫ್–502, ಪಶ್ಚಿಮಕ್ಕೆ : ಫ್ಲಾಟ್ ನಂ. ಎಫ್–504, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ಫ್ಲಾಟ್ ನಂ. ಎಫ್–506. **LOCATION COORDINATES :12.399247,76.580054** **ಋಣಭಾರಗಳು ಯಾವುದು ತಿಳಿದಿರುವುದಿಲ್ಲ**	ಎ. ಸಾರಕ್ಕಿ ಬಿ. ರೂ.97,32,089.96 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ. 46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ

22	**ನಸೀರ್,** ವಿದೇಶಿಯ ನಿವಾಸಿ, ಬಿಲ್ಡಿಂಗ್ 1ಬಿ/2, ಫ್ಲಾಟ್ ನಂ.413, 365- ಅಲ್ಗೋಜ್ ಇಂಡಲ್ 2ನೇ ದುಬೈ-ಯುಎಇ. **ಪರ್ಮನೆಂಟ್ ವಿಳಾಸ :** ರಾಯಮ್ಮರಕ್ಕರ್ ವೀಟಿಟಿಲ್ ಹೌಸ್, ತಿರುನೆಲ್ಲೂರು, ಮುಲ್ಲಸ್ಸೆರಿ, ತ್ರಿಶೂರ್, ಕೇರಳ – 680508. **ಶಬಾನಾ ನಸೀರ್** ರಾಯಮ್ಮರಕ್ಕರ್, ವೀಟಿಲ್ ಹೌಸ್, ತ್ರಿನೆಲ್ಲೂರ್, ಮುಲ್ಲಸ್ಸೆರಿ, ತ್ರಿಶೂರ್, ಕೇರಳ–680508.	ಫ್ಲಾಟ್ ನಂ.ಎಫ್–1003, 10ನೇ ಮಹಡಿ, ಎಫ್–ಟವರ್, ಜುವಾರಿ ಗಾರ್ಡನ್ ಸಿಟಿ ಎಂದು ಕರೆಯಲ್ಪಡುವ ಕಟ್ಟಡದ ಸರ್ವೆ ನಂ.111/1ಎ,107/1, 107/2, 106/1 ಮತ್ತು 106/2, ಈ ಆಸ್ತಿಯು ಹುಲಿಕೆರೆ ಗ್ರಾಮ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. 1224 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, 857 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 454.90 ಚದರ ಅಡಿ ಯುಡಿಎಸ್ ಪ್ರದೇಶ, ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ :ಫ್ಲಾಟ್ ನಂ. ಜಿ–1002, ಪಶ್ಚಿಮಕ್ಕೆ : ಫ್ಲಾಟ್ ನಂ. ಎಫ್–1004, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ಫ್ಲಾಟ್ ನಂ. ಎಫ್–1006. **LOCATION COORDINATES :12.399247,76.580054** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಸಾರಕ್ಕಿ ಬಿ. ರೂ.97,26,542.29 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ. 46,43,730.00 ಬಿ) ರೂ.4,64,373.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
23	**ಉಬೈದ್ ಕುನ್ನನೈಲ್,** ವಿದೇಶಿಯಾ ನಿವಾಸಿ, ಅಹ್ಮದ್ ಉಮ್ರಾನ್ ತಾರಿಯಮ್, ಫ್ಲಾಟ್ ಸಂಖ್ಯೆ 203, ಮೊವೈಲೆಹ್, ಶಾರ್ಜಾ–81264. **ಪರ್ಮನೆಂಟ್ ವಿಳಾಸ:** ವೆಂಬಾಯಿಲ್ ಹೌಸ್, ಪಾಲಪೆಟ್ಟಿ ವೆಲಿಯಂಕೋಡ್, ಪಾಲಪೆಟ್ಟಿ, ಮಲಪುರಂ, ಕೇರಳ–679579. **ನಸೀಬಾ ಮಡತೊಡಿಯಿಲ್,** ವೆಂಬಾಯಿಲ್ ಹೌಸ್, ಪಾಲಪೆಟ್ಟಿ ವೆಲಿಯಂಕೋಡ್, ಪಾಲಪೆಟ್ಟಿ, ಮಲಪುರಂ, ಕೇರಳ–679579.	ಫ್ಲಾಟ್ ನಂ.ಜಿ–302, 3 ಬಿಹೆಚ್‌ಕೆ, 3ನೇ ಮಹಡಿ, ಜಿ–ಟವರ್, ಜುವಾರಿ ಗಾರ್ಡನ್ ಸಿಟಿ ಹುಲಿಕೆರೆ ಗ್ರಾಮ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. ಅನುಮೋದಿತ/ವಾಸ್ತವಿಕ ಯೋಜನೆಯ ಪ್ರಕಾರ 3 ಬಿಹೆಚ್‌ಕೆ ಫ್ಲಾಟ್‌ನ ಸೂಪರ್ ಬಿಲ್ಟ್ ಅಪ್ ವಿಸ್ತೀರ್ಣ 1645 ಚದರ ಅಡಿ ಮತ್ತು ಫ್ಲಾಟ್‌ನ ಕಾರ್ಪೆಟ್ ಪ್ರದೇಶ 1218.27 ಚದರ ಅಡಿ, ಮತ್ತು 603.74 ಚದರ ಅಡಿ ಯುಡಿಎಸ್ ಪ್ರದೇಶ, ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ತೆರೆದ ಜಾಗ, ಪಶ್ಚಿಮಕ್ಕೆ : ಫ್ಲಾಟ್ ನಂ. ಜಿ–303 & ಪ್ರವೇಶದ ಬಾಗಿಲು, ಉತ್ತರಕ್ಕೆ : ತೆರೆದ ಜಾಗ, ದಕ್ಷಿಣಕ್ಕೆ : ಫ್ಲಾಟ್ ನಂ. ಜಿ–301. **LOCATION COORDINATES :12.399247,76.580054** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಸಾರಕ್ಕಿ ಬಿ. ರೂ.1,07,92,155.04 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ. 61,60,050.00 ಬಿ) ರೂ.6,16,005.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
24	**ಉಬೈದ್ ಕುನ್ನನೈಲ್,** ವಿದೇಶಿಯಾ ನಿವಾಸಿ, ಅಹ್ಮದ್ ಉಮ್ರಾನ್ ತಾರಿಯಮ್, ಫ್ಲಾಟ್ ಸಂಖ್ಯೆ 203, ಮೊವೈಲೆಹ್, ಶಾರ್ಜಾ–81264. ಪರ್ಮನೆಂಟ್ ವಿಳಾಸ: ವೆಂಬಾಯಿಲ್ ಹೌಸ್, ಪಾಲಪೆಟ್ಟಿ ವೆಲಿಯಂಕೋಡ್, ಪಾಲಪೆಟ್ಟಿ, ಮಲಪುರಂ, ಕೇರಳ–679579. **ನಸೀಬಾ ಮಡತೊಡಿಯಿಲ್,** ವೆಂಬಾಯಿಲ್ ಹೌಸ್, ಪಾಲಪೆಟ್ಟಿ ವೆಲಿಯಂಕೋಡ್, ಪಾಲಪೆಟ್ಟಿ, ಮಲಪುರಂ, ಕೇರಳ–679579.	ಫ್ಲಾಟ್ ನಂ.ಜಿ–206, 2 ಬಿಹೆಚ್‌ಕೆ, 2ನೇ ಮಹಡಿ, ಜಿ–ಟವರ್, ಜುವಾರಿ ಗಾರ್ಡನ್ ಸಿಟಿ ಹುಲಿಕೆರೆ ಗ್ರಾಮ, ಬೆಳಗೋಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ–571606ರಲ್ಲಿದೆ. ಅನುಮೋದಿತ/ವಾಸ್ತವಿಕ ಯೋಜನೆಯ ಪ್ರಕಾರ 2 ಬಿಹೆಚ್‌ಕೆ ಫ್ಲಾಟ್‌ನ ಸೂಪರ್ ಬಿಲ್ಟ್ ಅಪ್ ವಿಸ್ತೀರ್ಣ 1225 ಚದರ ಅಡಿ, 898.35 ಚದರ ಅಡಿ ಕಾರ್ಪೆಟ್ ಪ್ರದೇಶ ಮತ್ತು 506.15 ಚದರ ಅಡಿ ಯುಡಿಎಸ್ ಪ್ರದೇಶ, ಜೊತೆಗೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಜಿ–201, ಪಶ್ಚಿಮಕ್ಕೆ : ಫ್ಲಾಟ್ ನಂ. ಜಿ–205, ಉತ್ತರಕ್ಕೆ : ಲಾಬಿ ಪ್ರದೇಶ, ದಕ್ಷಿಣಕ್ಕೆ : ತೆರೆದ ಜಾಗ. **LOCATION COORDINATES :12.399247,76.580054** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಸಾರಕ್ಕಿ ಬಿ. ರೂ. 86,66,514.23 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ. .51,59,700.00 ಬಿ) ರೂ.5,15,970.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
25	**ಶ್ರೀ. ಮುತ್ತ ಹರಿನ್** ಸಂಖ್ಯೆ 7 ರಿಂದ 3, 10ನೇ ಕ್ರಾಸ್, ಬಿಸಿಸಿ ಲೇಔಟ್ ಗಂಗೊಂಡನಹಳ್ಳಿ ನಾಯಂಡನಹಳ್ಳಿ, ಬೆಂಗಳೂರು 560039.	"ಈಡೆನ್ ಬ್ಲೂಸಮ್ಸ್" ಎಂದು ಕರೆಯಲ್ಪಡುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ. 422, 4ನೇ ಮಹಡಿ, ಬ್ಲಾಕ್ ಹಿಬಿಸಕಸ್, ಈ ಆಸ್ತಿಯು ಗೊಲ್ಲಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು–560083 ರಲ್ಲಿದೆ. ಎಸ್‌ಬಿಎ 1100 ಚದರ ಅಡಿ, ಯುಡಿಎಸ್ 432.90 ಚದರ ಅಡಿ, ಚಕ್ಕುಬಂದಿ : ಪೂರ್ವಕ್ಕೆ : ತೆರೆದ ಜಾಗ, ಪಶ್ಚಿಮಕ್ಕೆ : ಫ್ಲಾಟ್ ನಂ. 423, ಉತ್ತರಕ್ಕೆ : ಫ್ಲಾಟ್ ನಂ. 421, ದಕ್ಷಿಣಕ್ಕೆ : ತೆರೆದ ಜಾಗ. **LOCATION COORDINATES :12.855416,77.568951** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಬನಶಂಕರಿ ಬಿ. ರೂ. 70,96,946.55 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ. 41,08,000.00 ಬಿ) ರೂ.4,10,800.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
26	**ಶ್ರೀ. ಶಿವಕುಮಾರ್ ಎನ್** ಬಿನ್ ನಾರಾಯಣಸ್ವಾಮಿ ಎಂ 404 ನೆಲಮಹಡಿ, ಶಿವನಿಲಯ 5ನೇ ಮೇನ್, 6ನೇ ಬ್ಲಾಕ್ 2ನೇ ಹಂತ ಬನಶಂಕರಿ 3ನೇ ಹಂತ ಗಿರಿನಗರ ಪೊಲೀಸ್ ಬೆಂಗಳೂರು–560085	"ಗುರು ರೆಸಿಡೆನ್ಸಿ" ಎಂದು ಕರೆಯಲ್ಪಡುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ. 003, ನೆಲಮಹಡಿ, ನಿವೇಶನ ನಂ. 176, ಜೊತೆಗೆ ಎಸ್‌ಬಿಎ 804, ಯುಡಿಎಸ್ 201, ಈ ಆಸ್ತಿಯು ಮೈಲಸಂದ್ರ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು–560060, ಚಕ್ಕುಬಂದಿ : ಪೂರ್ವಕ್ಕೆ : ಕಾರಿಡಾರ್, ಪಶ್ಚಿಮಕ್ಕೆ : ತೆರೆದ ಜಾಗ, ಉತ್ತರಕ್ಕೆ : ಸ್ಟೇರ್‌ಕೇಸ್, ದಕ್ಷಿಣಕ್ಕೆ : ಲಿಫ್ಟ್. **LOCATION COORDINATES :12.913618,77.490820** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಎಂಎಸ್‌ಆರ್‌ಎಸ್ ನಗರ ಬಿ. ರೂ.64,10,792.57 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ. 33,01,200.00 ಬಿ) ರೂ.3,30,120.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
27	**ಶ್ರೀಮತಿ.ಎಂ.ವಿ. ಉಮಾಮಹೇಶ್ವರಿ** ವಿಳಾಸ : ಸಂಖ್ಯೆ 9, 10ನೇ ಅಡ್ಡರಸ್ತೆ, ಎ ಸ್ಟ್ರೀಟ್ ಕೆ.ಪಿ. ಅಗ್ರಹಾರ ಮಾಗಡಿ ರಸ್ತೆ, ಬೆಂಗಳೂರು ಉತ್ತರ–560023.	"ಗುರು ರೆಸಿಡೆನ್ಸಿ" ಎಂದು ಕರೆಯಲ್ಪಡುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ. ಎಸ್–203, 2ನೇ ಮಹಡಿ, ನಿವೇಶನ ನಂ. 176, ಈ ಆಸ್ತಿಯು ಮೈಲಸಂದ್ರ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು–560060, ಜೊತೆಗೆ ಎಸ್‌ಬಿಎ 804 ಚದರ ಅಡಿ, ಕಾರ್ಪೆಟ್ ಪ್ರದೇಶ 562.80 ಚದರ ಅಡಿ ಜೊತೆಗೆ ಚಕ್ಕುಬಂದಿ : ಪೂರ್ವಕ್ಕೆ : ಕಾರಿಡಾರ್, ಪಶ್ಚಿಮಕ್ಕೆ : ತೆರೆದ ಜಾಗ, ಉತ್ತರಕ್ಕೆ : ಸ್ಟೇರ್‌ಕೇಸ್, ದಕ್ಷಿಣಕ್ಕೆ : ಲಿಫ್ಟ್. **LOCATION COORDINATES :12.913618,77.490820** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಎಂಎಸ್‌ಆರ್‌ಎಸ್ ನಗರ ಬಿ. ರೂ.64,82,869.29 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ. 33,01,200.00 ಬಿ) ರೂ.3,30,120.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
28	**ಕಿರಣ್ ಕುಮಾರ್ ಎನ್** **ವಿಳಾಸ :** 47 1, ಸಂತೋಷ್ ನಿಲಯ ಶ್ರೀನಿವಾಸ್ ರೆಡ್ಡಿ ಲೇಔಟ್ ನಂದಿ ಗಾರ್ಡನ್ಸ್ ಎದುರು, ಆವಲಹಳ್ಳಿ ಅಂಜನಾಪುರ, ಬೆಂಗಳೂರು–560062	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಫ್ಲಾಟ್ ನಂ. ಜಿ30, ನೆಲಮಹಡಿ, ಲೋಟಸ್ ಬ್ಲಾಕ್, "ಈಡೆನ್ ಬ್ಲೂಸಮ್ಸ್" ಎಂದು ಕರೆಯಲ್ಪಡುವ ವಾಸಯೋಗ್ಯ ಅಪಾರ್ಟ್‌ಮೆಂಟ್, ಎರಡು ಬೆಡ್ ರೂಂಗಳು, ಅಡುಗೆಮನೆ, ಡೈನಿಂಗ್ ಮತ್ತು ಲಿವಿಂಗ್ ರೂಂ, ಬಾಲ್ಕನಿ, ಮತ್ತು ಯುಟಿಲಿಟಿ ಪ್ರದೇಶವನ್ನೊಳಗೊಂಡಂತೆ ಸ್ವತ್ತಿನ ವಿಸ್ತೀರ್ಣ 1110 ಚದರ ಅಡಿ, ಸೂಪರ್ ಬಿಲ್ಟ್ ಅಪ್ ಪ್ರದೇಶ ಮತ್ತು ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿರುತ್ತದೆ. ಜೊತೆಗೆ ಸ್ಟಿಲ್ಟ್ ಮಹಡಿ, ಹಾಗೂ ಸಾಮಾನ್ಯ ಪ್ರದೇಶವನ್ನು ಹೊಂದಿರುತ್ತದೆ. ಚಕ್ಕುಬಂದಿ : ಪೂರ್ವಕ್ಕೆ : ಲಿಫ್ಟ್ ಮತ್ತು ಸ್ಟೇರ್‌ಕೇಸ್, ಪಶ್ಚಿಮಕ್ಕೆ : ಫ್ಲಾಟ್ ನಂ. ಜಿ24, ಉತ್ತರಕ್ಕೆ : ಪ್ರವೇಶ ಮತ್ತು ಕಾರಿಡಾರ್, ದಕ್ಷಿಣಕ್ಕೆ : ತೆರೆದ ಜಾಗ. **LOCATION COORDINATES :12.855416,77.568951** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಜಯನಗರ ಬಿ. ರೂ.63,08,402.92 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ. 41,47,740.00 ಬಿ) ರೂ.4,14,774.00 ಸಿ) ರೂ.25,000.00 ಡಿ) ಭೌತಿಕ ಸ್ವಾಧೀನ	19.01.2026 ರ ನಂತರ
29	**ರೋಹಿತ್ ಚಿಲುಕುರಿ** ವಿಳಾಸ : ನಂ. 3 165 ಮುಖ್ಯರಸ್ತೆ ಜೆ ಪಂಗುಲು ಜೆ ಪಂಗುಲುರು ಮಂಡಲ ಪ್ರಕಾಶಂ ಆಂಧ್ರ ಪ್ರದೇಶ–523261. **ಚಿಲುಕುರಿ ಗೋಪಿರಾಣಿ** ಕೋಂ ಪ್ರಸಾದ್ ನಾಯ್ಡು ವಿಳಾಸ : 3165 ಮುಖ್ಯರಸ್ತೆ ಜೆ ಪಂಗುಲುರು ಮಂಡಲ್ ಜನಕವರಂ ಪಂಗುಲುರು ಪ್ರಕಾಶಂ ಆಂಧ್ರ ಪ್ರದೇಶ 523261.	ವಂದನಾ ಆಲ್ಪೈನ್ ಎಂದು ಕರೆಯಲ್ಪಡುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ. ಬಿ–004, ನೆಲಮಹಡಿ, ಬ್ಲಾಕ್–ಬಿ, ಈ ಆಸ್ತಿಯು ಯಲಕುಂಟೆ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದ್ದು, ಜೊತೆಗೆ ಎಸ್‌ಬಿಎ 1725.00 ಕಾರ್ಪೆಟ್ ಪ್ರದೇಶ 1207.50 ಚದರ ಅಡಿ, ಯುಡಿಎಸ್ 709.27 ಚದರ ಅಡಿ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಫ್ಲಾಟ್ ನಂ. ಬಿ–003, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಕಾರಿಡಾರ್ ಮತ್ತು ಫ್ಲಾಟ್ ನಂ. ಬಿ–005, ದಕ್ಷಿಣಕ್ಕೆ : ಖಾಸಗಿ ಆಸ್ತಿ. **LOCATION COORDINATES :12.9018842, 77.6445533** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಜಯನಗರ ಬಿ. ರೂ.2,08,20,054.89 ದಿನಾಂಕ: 10.01.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	30.01.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ. 1,22,95,800.00 ಬಿ) ರೂ.12,29,580.00 ಸಿ) ರೂ.1,00,000.00 ಡಿ) ಸಾಂಕೇತಿಕ ಸ್ವಾಧೀನ	19.01.2026 ರ ನಂತರ

ವಿವರವಾದ ನಿಯಮಗಳು ಮತ್ತು ಮಾರಾಟದ ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ ಲಿಂಕ್ https://www.bankofbaroda.bank.in/e-auction ಮತ್ತು ಆನ್‌ಲೈನ್ ಹರಾಜು ಪೋರ್ಟಲ್ Baanknet.com ಅನ್ನು ಉಲ್ಲೇಖಿಸಿ/ಭೇಟಿ ನೀಡಿ ಅಲ್ಲದೆ, ನಿರೀಕ್ಷಿತ ಬಿಡ್‌ದಾರರು ಅಧಿಕೃತ ಅಧಿಕಾರಿಗಳನ್ನು ಸಂಪರ್ಕಿಸಬಹುದು, ದೂರವಾಣಿ ಸಂಖ್ಯೆ. 080–25011710.

ದಿನಾಂಕ : 14.01.2026
ಸ್ಥಳ : ಬೆಂಗಳೂರು

ಸಹಿ/ ಅಧಿಕೃತ ಅಧಿಕಾರಿ,
ಬ್ಯಾಂಕ್ ಆಫ್ ಬರೋಡ

ಮುಡಾ ಪ್ರಕರಣಕ್ಕೆ ಮಹತ್ವದ ತಿರುವು: ಮಾಜಿ ಅಧ್ಯಕ್ಷ ರಾಜೀವ್ ವಿರುದ್ಧ ತನಿಖೆ ನಡೆಸಲು ಸರಕಾರ ಅನುಮತಿ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಸಂಬಂಧಿಸಿದ ಬಹುಚರ್ಚಿತ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ನಡೆಯುತ್ತಿರುವ ಕಾನೂನು ಪ್ರಕ್ರಿಯೆಗಳು ಮತ್ತೊಂದು ಮಹತ್ವದ ತಿರುವು ಪಡೆದುಕೊಂಡಿವೆ. ಈ ಪ್ರಕರಣ ಸಂಬಂಧ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ವಿರುದ್ಧ ತನಿಖೆ ನಡೆಸಲು ರಾಜ್ಯ ಸರಕಾರ ಅನುಮತಿ ನೀಡಿದೆ.

ಲೋಕಾಯುಕ್ತ ಪೊಲೀಸರು ಎಚ್.ವಿ.ರಾಜೀವ್ ವಿರುದ್ಧ ತನಿಖೆ ನಡೆಸಲು ಅಗತ್ಯವಿರುವ ಪ್ರಾಸಿಕ್ಯೂಷನ್ ಅನುಮತಿ ಕೋರಿ ಸಲ್ಲಿಸಿದ್ದ ಮನವಿಯನ್ನು ಸುಮಾರು ಏಳು ತಿಂಗಳ ಬಳಿಕ ನಗರಾಭಿವೃದ್ಧಿ ಇಲಾಖೆ ಪುರಸ್ಕರಿಸಿದೆ. ಈ ಸಂಬಂಧ ಕಾನೂನು ಇಲಾಖೆಯು ವಿಷಯವನ್ನು ರಾಜ್ಯ ಸಚಿವ ಸಂಪುಟದ ಮುಂದೆ ಚರ್ಚೆಗೆ ತಂದಿದ್ದು, ಅಂತಿಮವಾಗಿ ಸರಕಾರ ತನಿಖೆಗೆ ಅಸ್ತು ನೀಡಿದೆ.

ಸರಕಾರದ ಈ ನಿರ್ಧಾರದಿಂದಾಗಿ, ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಎಚ್.ವಿ.ರಾಜೀವ್ ವಿರುದ್ಧ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸುವ ಸಾಧ್ಯತೆ ಹೆಚ್ಚಾಗಿದೆ ಎಂದು ಮೂಲಗಳು ತಿಳಿಸಿವೆ.

ಇದರಿಂದ ಪ್ರಕರಣದ ತನಿಖೆಗೆ ಮತ್ತಷ್ಟು ವೇಗ ಸಿಗುವ ನಿರೀಕ್ಷೆ ವ್ಯಕ್ತವಾಗಿದೆ. ಮುಡಾ ಪ್ರಕರಣವು ಈಗಾಗಲೇ ರಾಜ್ಯ ರಾಜಕೀಯದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಆರೋಪಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ ಇದರ ಮಹತ್ವ ಇನ್ನಷ್ಟು ಹೆಚ್ಚಾಗಿದೆ. ಸರಕಾರ ನೀಡಿರುವ ತನಿಖೆ ಅನುಮತಿ ಮುಂದಿನ ದಿನಗಳಲ್ಲಿ ಪ್ರಕರಣದ ದಿಕ್ಕು ಮತ್ತು ಪರಿಣಾಮಗಳನ್ನು ನಿರ್ಧರಿಸುವ ಪ್ರಮುಖ ಬೆಳವಣಿಗೆಯಾಗಿ ಕಾಣಿಸಿಕೊಂಡಿದೆ.

ಬಿ ರಿಪೋರ್ಟ್‌ಗೆ ಆಕ್ಷೇಪಿಸಿದ ಅರ್ಜಿ ವಿಚಾರಣೆ ಪೂರ್ಣ

ಮುಡಾ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ನಾಲ್ವರು ಆರೋಪಿಗಳ ವಿರುದ್ಧ ಲೋಕಾಯುಕ್ತ ತನಿಖಾಧಿಕಾರಿ ಸಲ್ಲಿಸಿರುವ ಬಿ ರಿಪೋರ್ಟ್‌ಗೆ ಆಕ್ಷೇಪಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಜ.22ಕ್ಕೆ ಆದೇಶ ಕಾಯ್ದಿರಿಸಿದೆ. ಈ ಬಿ ರಿಪೋರ್ಟ್‌ಗೆ ಆಕ್ಷೇಪಿಸಿ ಸಾಮಾಜಿ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಅರ್ಜಿ ಕುರಿತು ನ್ಯಾಯಾಲಯ ಮಂಗಳವಾರ ವಿಚಾರಣೆ ನಡೆಸಿತು. ವಾದ-ಪ್ರತಿವಾದ ಆಲಿಸಿ ಜ.22ಕ್ಕೆ ತೀರ್ಪು ಕಾಯ್ದಿರಿಸಿತು. ಈ ವೇಳೆ ಲೋಕಾಯುಕ್ತ ಪರ ವಿಶೇಷ ಅಭಿಯೋಜಕರು ಪ್ರಕರಣದ ಅಂತಿಮ ವರದಿ ಕುರಿತ ಕೆಲ ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದರು. ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಮುಡಾ ಮಾಜಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರನ್ನು ಜ.17ರಂದು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಇದೇ ವೇಳೆ ಸೂಚಿಸಿತು.

ಏನಿದು ಪ್ರಕರಣ?

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ(ಮುಡಾ) ಅಕ್ರಮವಾಗಿ 14 ಬದಲಿ ನಿವೇಶನ ಪಡೆದ ಆರೋಪದಡಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ.ಪಾರ್ವತಿ, ಬಾವಮೈದುನ ಮಲ್ಲಿಕಾರ್ಜುನಸ್ವಾಮಿ, ದೇವರಾಜು ಹಾಗೂ ಇತರರ ವಿರುದ್ಧ ಸ್ನೇಹ ಮಯಿ ಕೃಷ್ಣ ಖಾಸಗಿ ದೂರು ಸಲ್ಲಿಸಿದ್ದರು. ನ್ಯಾಯಾಲಯದ ಸೂಚನೆ ಮೇರೆಗೆ ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು, ಈ ನಾಲ್ವರು ಆರೋಪಿಗಳ ವಿರುದ್ಧದ ಆರೋಪ ಸಾಬೀತುಪಡಿಸಲು ಸಾಕ್ಷ್ಯಾಧಾರಗಳ ಕೊರತೆ ಕಾರಣ ನೀಡಿ ಬಿ ರಿಪೋರ್ಟ್ ಸಲ್ಲಿಸಿದ್ದರು. ಈ ಬಿ ರಿಪೋರ್ಟ್‌ಗೆ ಸ್ನೇಹಮಯಿ ಕೃಷ್ಣ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಆಡಳಿತಾರೂಢ ಎಲ್‌ಡಿಎಫ್, ಪ್ರತಿಪಕ್ಷ ಯುಡಿಎಫ್, ತೃತೀಯ ಶಕ್ತಿಯಾಗಿ ಬಿಜೆಪಿ

ಬದಲಾವಣೆ ಪಥದಲ್ಲಿರುವ ಕೇರಳದಲ್ಲಿ ಯಾರಿಗೆಷ್ಟು ಪಾಲು

ಏಪ್ರಿಲ್‌ಗೆ ಬರಲಿರುವ ಚುನಾವಣೆ ಕೇರಳದಲ್ಲಿ ಮತ್ತೆ ಅಪರೂಪದ ವಿದ್ಯಾಮಾನಗಳಿಗೆ ಅವಕಾಶ ಮಾಡಿಕೊಡಲಿದೆಯೇ? ಹೊಸತೇ ಆದ ರಾಜಕೀಯ ಒಕ್ಕೂಟ ರಚನೆಗೇನಾದರೂ ದಾರಿ ಮಾಡಿಕೊಡಲಿದೆಯೇ? ಅಥವಾ ಎಲ್‌ಡಿಎಫ್ ಒಕ್ಕೂಟವೇನಾದರೂ ಐತಿಹಾಸಿಕ 'ಹ್ಯಾಟ್ರಿಕ್ ಗೆಲುವು' ಸಾಧಿಸುತ್ತದೆಯೇ? ಅಥವಾ ಇಡೀ ದೇಶದಲ್ಲಿ 'ಏಕಮೇವ ಎಡಪಕ್ಷ ಸರಕಾರ'ದ ಅಂತ್ಯಕ್ಕೆ ಕಾರಣವಾಗಲಿದೆಯೇ? ಈ ಕುತೂಹಲ ತಣಿಯಲು ಕಾದು ನೋಡಬೇಕಿದೆ.

ಸಿ.ಎಲ್.ಮನೋಜ್

ಕೇರಳದಲ್ಲಿ ವಿಧಾನಸಭೆ ಚುನಾವಣೆ ಏಪ್ರಿಲ್‌ನಲ್ಲಿ ನಡೆಯುವ ಸಾಧ್ಯತೆ ಇದೆ. ಸದ್ಯ ಆಡಳಿತಾರೂಢ ಸಿಪಿಐ–ಎಂ ನೇತೃತ್ವದ 'ಲೆಫ್ಟ್ ಡೆಮಾಕ್ರೆಟಿಕ್ ಫ್ರಂಟ್'(ಎಲ್‌ಡಿಎಫ್) ಮತ್ತು ಪ್ರತಿಪಕ್ಷವಾಗಿರುವ ಕಾಂಗ್ರೆಸ್ ನೇತೃತ್ವದ 'ಯುನೈಟೆಡ್ ಡೆಮಾಕ್ರೆಟಿಕ್ ಫ್ರಂಟ್'(ಯುಡಿಎಫ್) ಹಾಗೂ ಅಧಿಕಾರಕ್ಕೇರುವ ಆಶಯ ಹೊಂದಿರುವ 'ಬಿಜೆಪಿ' ಸದ್ಯದಲ್ಲೇ ಎದುರಾಗಲಿರುವ ಚುನಾವಣೆಗೆ ಸಜ್ಜಾಗುತ್ತಿವೆ.

ಈ ಚುನಾವಣೆಯ ಫಲಿತಾಂಶ ಎಡಪಕ್ಷಗಳ ಭವಿಷ್ಯ ಹಾಗೂ ಕಾಂಗ್ರೆಸ್‌ನ ಸ್ಥಿರತೆ ಹಾಗೂ ಬಿಜೆಪಿಯ ಆಶಾವಾದದ ಮೇಲೆ ಪರಿಣಾಮ ಬೀರುವುದು ನಿಶ್ಚಿತ. ಅಲ್ಲದೇ, ರಾಜ್ಯದಲ್ಲಿ ದಶಕಗಳಿಂದ ಮುಂದುವರಿದುಕೊಂಡು ಬಂದಿರುವ ಕೆಲವು ಪಕ್ಷಗಳ ಭಿನ್ನ 'ಒಕ್ಕೂಟ' ವ್ಯವಸ್ಥೆಯ ಮೇಲೂ ಪ್ರಭಾವ ಬೀರುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ 'ಎಲ್‌ಡಿಎಫ್' ಒಕ್ಕೂಟ 2021ರ ಚುನಾವಣೆಯಲ್ಲಿ 2ನೇ ಅವಧಿಗೂ ಗೆಲುವು ಸಾಧಿಸುವ ಮೂಲಕ ರಾಜ್ಯ ರಾಜಕೀಯದಲ್ಲಿ ಹೊಸ ಇತಿಹಾಸ ಬರೆದಿದೆ. ಕೇರಳ ಚುನಾವಣಾ ಇತಿಹಾಸದಲ್ಲಿ ಆಡಳಿತ ವಿರೋಧಿ ಅಲೆಯನ್ನೂ ಮೀರಿ ಪಕ್ಷ/ಒಕ್ಕೂಟವೊಂದು ಸತತ 2ನೇ ಅವಧಿಗೆ ಗೆಲುವು ಕಂಡಿರುವುದು ಇದೇ ಮೊದಲು.

'ಎಲ್‌ಡಿಎಫ್' ಒಕ್ಕೂಟದ ಸತತ 10 ವರ್ಷಗಳ ಆಡಳಿತದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ನಾಯಕತ್ವ ಈಗ ಪಕ್ಷಕ್ಕಿಂತ, ಒಕ್ಕೂಟಕ್ಕಿಂತಲೂ ದೊಡ್ಡದಾಗಿ ಬೆಳೆದುಬಿಟ್ಟಿದೆ. ಅದರ ಪರಿಣಾಮವೇನೋ ಎನ್ನುವಂತೆ ಅವರ ಸರಕಾರದ ಆಡಳಿತ ವೈಖರಿಯಲ್ಲಿ, ಆರ್ಥಿಕ ನೀತಿಯಲ್ಲಿ, ರಾಜಕೀಯ ಮಾರ್ಗದಲ್ಲಿ ಸಾಂಪ್ರದಾಯಿಕ 'ಕೆಂಪು ಹಾದಿ'ಯಿಂದ ಆಚೆ ಸರಿದಂತಾಗಿದೆ ಎಂಬ ಮಾತುಗಳಿವೆ. ಇದರಿಂದಾಗಿ ಪಕ್ಷದೊಳಗೆ, ಸರಕಾರದ ಸಚಿವ ಸಹೋದ್ಯೋಗಿಗಳ ಮಧ್ಯೆ ಹೊಂದಾಣಿಕೆ ಇಲ್ಲವಾಗಿದೆ. ಅಪ್ಪಟ ಕಮ್ಯುನಿಸ್ಟ್ ಸಿದ್ಧಾಂತದವರೂ ಅಸಮಾಧಾನಗೊಂಡಿದ್ದಾರೆ. ಇದು ಪ್ರತಿಪಕ್ಷ 'ಯುಡಿಎಫ್'ಗೆ ರಾಜಕೀಯ ಟೀಕೆ, ವಾಗ್ದಾಳಿಗೆ ಅವಕಾಶ ಮಾಡಿಕೊಟ್ಟಿದೆ.

ಇಷ್ಟೆಲ್ಲದರ ಮಧ್ಯೆ, ಸದ್ಯ 80ನೇ ವರ್ಷದಲ್ಲಿರುವ ಪಿಣರಾಯಿ, ಸಿಪಿಐ–ಎಂ ಪಕ್ಷ ಮತ್ತು ಎಲ್‌ಡಿಎಫ್ ಒಕ್ಕೂಟದ ಪರಮೋಚ್ಚ ನಾಯಕರಾಗಿದ್ದಾರೆ. ಆದರೆ, ಅವರು ಈ ವಯಸ್ಸಿನಲ್ಲಿ 2026ರ ವಿಧಾನಸಭೆ ಚುನಾವಣೆಯಲ್ಲಿ ಒಕ್ಕೂಟವನ್ನು ಹೇಗೆ ಮುನ್ನಡೆಸಲಿದ್ದಾರೆ ಎಂಬ ಕುತೂಹಲವೂ ಇದೆ.

ಕಳೆದ ಡಿಸೆಂಬರ್‌ನಲ್ಲಿ ರಾಜ್ಯದಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ 'ಎಲ್‌ಡಿಎಫ್'ಗೆ ಹಿನ್ನಡೆಯಾಗಿದೆ. ವಿಧಾನಸಭೆ ಅಥವಾ ಲೋಕಸಭೆ ಚುನಾವಣೆ ಮೇಲೆ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶವೇನೂ ಪರಿಣಾಮ ಬೀರುವುದಿಲ್ಲ. ಅಲ್ಲದೇ ಈ ಅಳತೆಗೋಲಿನಿಂದಲೇ ಉಳಿದ ಚುನಾವಣೆ ಮೇಲಾಗುವ ಪ್ರಭಾವವನ್ನು ಅಳೆಯಲಾಗುವುದಿಲ್ಲ ಎಂಬುದೇನೋ ಈವರೆಗಿನ ಚುನಾವಣೆಗಳಿಂದ ದೃಢಪಟ್ಟಿದೆ.

ಇದೇ ವೇಳೆ, ಶಬರಿಮಲೆ ದೇಗುಲದಲ್ಲಿ ನಡೆದಿರುವ ಚಿನ್ನ ಕಳವು ಪ್ರಕರಣ ಸಾಮಾಜಿಕವಾಗಿ ಎಡಪಕ್ಷ ಸರಕಾರದ ಪರಿಣಾಮ ಬೀರಿದೆ. ಜನರ ಮನದಲ್ಲಿ ದೇಗುಲ ಆಡಳಿತ, ಸರಕಾರದ ಬಗ್ಗೆ ಅಸಮಾಧಾನ, ಆಕ್ರೋಶ ಉಂಟಾಗಿದೆ. ಇದರಿಂದಾಗಿಯೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಎಲ್‌ಡಿಎಫ್‌ಗೆ ಹಿನ್ನಡೆಯಾಗಿದೆ ಎಂದೇ ಅರ್ಥೈಸಲಾಗಿದೆ.

ಅಲ್ಲದೇ, ಹಿಂದೂಗಳ ನಂಬಿಕೆಯ ಕ್ಷೇತ್ರವಾಗಿರುವ ಶಬರಿಮಲೆ ದೇಗುಲಕ್ಕೆ ಯುವತಿಯೊಬ್ಬರ ಪ್ರವೇಶಕ್ಕೆ ರಾಜ್ಯ ಸರಕಾರ ಬೆಂಬಲ ನೀಡಿದ್ದರಿಂದಲೇ 2019ರ ಲೋಕಸಭೆ ಚುನಾವಣೆಯಲ್ಲಿ ಎಡಪಕ್ಷಗಳಿಗೆ ಹಿನ್ನಡೆಯಾಗಿದೆ ಎಂದೇ ವಿಶ್ಲೇಷಣೆ ಮಾಡಲಾಗುತ್ತಿದೆ.

ಇದೆಲ್ಲದರ ಪರಿಣಾಮವೇನೋ ಎನ್ನುವಂತೆ, ಪ್ರಬಲ ನಿರೀಶ್ವರವಾದಿಯಾದ 'ಎಲ್‌ಡಿಎಫ್' ಸರಕಾರ, ಇತ್ತೀಚೆಗೆ 'ಜಾಗತಿಕ ಅಯ್ಯಪ್ಪ ಸಂಗಮಂ' ಸಮಾರಂಭವನ್ನು ಆಯೋಜಿಸಿದ್ದು ಅಚ್ಚರಿಗೆ ಕಾರಣವಾಗಿದೆ. ಆ ಮೂಲಕ ಎಲ್ಲಾ ಪಕ್ಷಗಳಲ್ಲಿರುವ ಅಯ್ಯಪ್ಪ ಸ್ವಾಮಿ ಭಕ್ತರನ್ನು ಸಮಾಧಾನಪಡಿಸುವ ಪ್ರಯತ್ನವಾಗಿದೆ. ಹಿಂದಿನ ಕಹಿ ಘಟನೆಗಳನ್ನು ಮರೆಸುವ ಯತ್ನವೇನೋ ಆಗಿತ್ತು. ಆದರೆ, ಪ್ರಯತ್ನದ ಫಲವನ್ನು ಅಯ್ಯಪ್ಪ ದೇಗುಲದಲ್ಲಿನ ಚಿನ್ನ ಕಳವು ಪ್ರಕರಣ ನುಂಗಿ ಹಾಕಿದೆ. ಸದ್ಯ ನ್ಯಾಯಾಲಯದ ನಿಗಾದಲ್ಲಿ ನಡೆದಿರುವ ಈ ದೇಗುಲ ಚಿನ್ನ ಕಳವು ಪ್ರಕರಣದ ತನಿಖೆಯು ಎಲ್‌ಡಿಎಫ್ ಒಕ್ಕೂಟ ಕಳೆದುಕೊಂಡಿರುವ ಜನರ ವಿಶ್ವಾಸವನ್ನು ಮರಳಿ ತಂದುಕೊಡಲಿದೆ, ಉಂಟಾಗಿರುವ ನಷ್ಟವನ್ನು ತುಂಬಿಕೊಡಲಿದೆ ಎಂದು ಹೇಳಲಾಗದು.

ರಾಜ್ಯಸರಕಾರ ಚುನಾವಣೆ ಪೂರ್ವ ಜನಪ್ರಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದೋ ಎಂಬ ಬಗ್ಗೆ ಎಲ್‌ಡಿಎಫ್ ಒಕ್ಕೂಟದೊಳಗೇ ಹಾಗೂ ಪ್ರತಿಪಕ್ಷದೊಳಗೂ ಕುತೂಹಲವಿದೆ. ಪಿಣರಾಯಿ ವಿಜಯನ್ ಇಡೀ ದೇಶದಲ್ಲಿ ಒಂದೇ ರಾಜ್ಯದಲ್ಲಿ ಉಳಿದುಕೊಂಡಿರುವ ಎಡಪಕ್ಷ ಸರಕಾರವನ್ನು ಹೇಗೆ ಮರಳಿ ಅಧಿಕಾರಕ್ಕೆ ತರಲಿದ್ದಾರೆ ಎಂಬ ಪ್ರಶ್ನೆಯೂ ಇದೆ.

ಯುಡಿಎಫ್‌ಗೆ ಅಳಿವು-ಉಳಿವಿನ ಹೋರಾಟ

ಯುನೈಟೆಡ್ ಡೆಮಾಕ್ರೆಟಿಕ್ ಫ್ರಂಟ್ ಒಕ್ಕೂಟಕ್ಕೆ ಈ ಬಾರಿಯ ಚುನಾವಣೆ ಅಕ್ಷರಶಃ ಅಳಿವು–ಉಳಿವಿನ ಹೋರಾಟವಾಗಿದೆ. 2021ರ ಚುನಾವಣೆಯ ಸೋಲಿನ



ಆಘಾತದಿಂದ ಕಳೆದ ಐದು ವರ್ಷಗಳಲ್ಲಿ ಅದೆಷ್ಟರ ಮಟ್ಟಿಗೆ ಚೇತರಿಸಿಕೊಂಡಿದೆ, ಶಕ್ತಿ ಕೂಡಿಸಿಕೊಂಡಿದೆ ಎಂಬುದು ಏಪ್ರಿಲ್ ಚುನಾವಣೆಯಿಂದ ಗೊತ್ತಾಗಲಿದೆ.

ಕಾಂಗ್ರೆಸ್ ಪಕ್ಷದ ಕೇರಳ ಘಟಕ, ಇತರೆ ರಾಜ್ಯಗಳಲ್ಲಿನ ಕಾಂಗ್ರೆಸ್ ಘಟಕಗಳಿಗೆ ಹೋಲಿಸಿದರೆ ಕಳೆದ 3 ಲೋಕಸಭಾ ಚುನಾವಣೆಯಲ್ಲಿ ಅತ್ಯುತ್ತಮ ಫಲಿತಾಂಶ ಕೊಟ್ಟಿದೆ, ಪಕ್ಷಕ್ಕೆ ಹೆಚ್ಚಿನ ಬಲ ತಂದುಕೊಟ್ಟಿದೆ. ಅಲ್ಲದೇ, ಕಾಂಗ್ರೆಸ್‌ನ ವರಿಷ್ಠರಾದ ರಾಹುಲ್ ಗಾಂಧಿ ಮತ್ತು ಸೋದರಿ ಪ್ರಿಯಾಂಕಾ ವಾದ್ರಾ, ಅವರಿಗೂ ರಾಜಕೀಯ ಆಶ್ರಯ ಕಲ್ಪಿಸಿಕೊಟ್ಟಿದೆ. ಇಷ್ಟೆಲ್ಲಾ ಸಕಾರಾತ್ಮಕ ಅಂಶಗಳಿದ್ದೂ ಕೂಡಾ ಕಾಂಗ್ರೆಸ್ ಪಕ್ಷ ಕಳೆದೊಂದು ದಶಕದಿಂದಲೂ ಅಧಿಕಾರ ರಾಜಕಾರಣ ವಿಚಾರದಲ್ಲಿ ರಸ್ತೆಯ ತಿರುವಿನ ಕೊನೆಯಲ್ಲೇ ನಿಲ್ಲುವಂತಾಗಿದೆ.

ಮರಳಿ ಅಧಿಕಾರ ಪಡೆಯುವ ಈ ಪ್ರಯತ್ನದಲ್ಲಿ ಕಾಂಗ್ರೆಸ್‌ನ ಬಹುಕಾಲದ ನಂಬಿಕೆಯ ಮತ ಬ್ಯಾಂಕ್ ಕೂಡಾ ಪಕ್ಷವನ್ನು ಪರೀಕ್ಷೆಗೊಡ್ಡಿದೆ. ಏಕೆಂದರೆ, ದಶಕಗಳಿಂದ ಕಾಂಗ್ರೆಸ್‌ನ ಪರವಾಗಿಯೇ ಇದ್ದ ಹಿಂದೂ ಸಮಾಜ ಮತ್ತು ಕ್ರಿಶ್ಚಿಯನ್ ಸಮುದಾಯದ ಕೆಲವು ಭಾಗ ಈಗ ಬಿಜೆಪಿಯತ್ತ ವಾಲುತ್ತಿದೆ. ಇನ್ನೊಂದೆಡೆ, ಯುಡಿಎಫ್ ಜತೆಗೇ ಈವರೆಗೂ ಇದ್ದ, ಸಾಂಪ್ರದಾಯಿಕ ಮಿತ್ರ ಪಕ್ಷವಾಗಿದ್ದ ಕೇರಳ ಕಾಂಗ್ರೆಸ್(ಮಣಿ) ಕೇರಳದ ಕೇಂದ್ರ ಭಾಗದಲ್ಲಿನ ಕ್ರೈಸ್ತ ಸಮುದಾಯದ ಮೇಲೆ ಪ್ರಭಾವ ಹೊಂದಿದೆ. ಆ ಪಕ್ಷವೀಗ 'ಎಲ್‌ಡಿಎಫ್'ಗೆ ಬದಲಾಗಿದೆ.

ಇನ್ನೊಂದೆಡೆ ಯುಡಿಎಫ್‌ನಲ್ಲಿ ಸಂಘಟನಾ ಕೌಶಲದ ಕೊರತೆ, ಆಂತರಿಕ ಕಲಹ, ನಾಯಕತ್ವ ವಿವಾದ ಒಕ್ಕೂಟವನ್ನು ಶಕ್ತಿಹೀನವಾಗಿಸುತ್ತಿದೆ. ಅದರಲ್ಲೂ ಕಾಂಗ್ರೆಸ್‌ನ ಕೇರಳ ಘಟಕದೊಳಗಿನ ಅಸಹನೆ ಎಲ್‌ಡಿಎಫ್ ಒಕ್ಕೂಟವನ್ನು ಮರಳಿ ಅಧಿಕಾರದ ಗದ್ದುಗೆ ಏರುವಂತೆ ಮಾಡುವುದಕ್ಕೆ ತೊಡರುಗಾಲಾಗಿದೆ. ಏನೇ ಆದರೂ ಈ ಬಾರಿ ದಶಕದ ಅಧಿಕಾರ ದುರ್ಲಬತೆಯನ್ನು ಕೊನೆಗಾಣಿಸ ಬೇಕಿದೆ ಹಾಗೂ 'ಯುಡಿಎಫ್' ಅನ್ನು ಮೊದಲಿನಂತೆಯೇ 'ಒಕ್ಕೂಟ'ವಾಗಿ ಕಾಪಾಡಿಕೊಳ್ಳಬೇಕಾದ ಸವಾಲೂ ಎದುರಾಗಿದೆ.



ಡಿಸೆಂಬರ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ 'ಯುಡಿಎಫ್'ಗೆ ಸಿಕ್ಕ ಬಲವಾದ ಗೆಲುವು, ಜತೆಗೆ ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಉಪ ಚುನಾವಣೆಗಳಲ್ಲಿನ ಗೆಲುವು 'ಯುಡಿಎಫ್'ಗೆ ಏಪ್ರಿಲ್ ಚುನಾವಣೆಗೂ ಮುಂಚಿನ ಟಾನಿಕ್ ರೀತಿ ಕೆಲಸ ಮಾಡಿ ಉತ್ಸಾಹ ತುಂಬಿದೆ. ಜತೆಗೆ 'ಎಲ್‌ಡಿಎಫ್' ವಿರುದ್ಧ 10 ವರ್ಷಗಳ ಆಡಳಿತದಿಂದ ಸೃಷ್ಟಿಯಾಗಿರುವ ಆಡಳಿತ ವಿರೋಧಿ ಅಲೆಯ ಬಲವನ್ನೂ ಪಡೆದುಕೊಂಡು ಮರಳಿ ಅಧಿಕಾರಕ್ಕೇರುವ ಅವಕಾಶ ಯುಡಿಎಫ್‌ಗಿದೆ. ಈ ಅಂಶವೇ ಯುಡಿಎಫ್ ನಾಯಕರಿಗೆ ಆಶಾವಾದ ಹುಟ್ಟುಹಾಕಿದೆ.

ಆದರೆ, ಪ್ರಸ್ತುತ ಯುಡಿಎಫ್‌ನ ಸಮಸ್ಯೆ ಏನೆಂದರೆ, ಕಾಂಗ್ರೆಸ್ ಘಟಕದಲ್ಲಿ ಸಮರ್ಥ ನಾಯಕತ್ವದ ಕೊರತೆ ಹಾಗೂ ಹಿರಿತನ, ಅನುಭವ ರಾಹಿತ್ಯ ಅಂಶಗಳೇ ತೊಡಕಾಗಿವೆ. ಇದು ಯುಡಿಎಫ್ ಒಕ್ಕೂಟವನ್ನು ಸಮರ್ಥವಾಗಿ ಮುನ್ನಡೆಸುವುದಕ್ಕೆ ಹಾಗೂ ಪಿಣರಾಯಿ ಅವರಿಗೆ ಪ್ರಬಲ ಎದುರಾಳಿಯಾಗಿ ಮುನ್ನುಗ್ಗುವುದಕ್ಕೆ ಅಡ್ಡಿಯಾಗಿವೆ. ಈ ಅಂಶಗಳೇ ರಾಜ್ಯ ಕಾಂಗ್ರೆಸ್ ಘಟಕ ಮತ್ತು ಯುಡಿಎಫ್‌ಗೆ ಒಟ್ಟಾಗಿ ಕೆಲಸ ಮಾಡುವುದಕ್ಕೆ, ಒಗ್ಗಟ್ಟು ಕಾಯ್ದುಕೊಳ್ಳುವುದಕ್ಕೆ ತೊಡರುಗಾಲಾಗಿವೆ.

ಈ ಮಧ್ಯೆ, ವಿಧಾನಸಭೆಯಲ್ಲಿನ ಪ್ರತಿಪಕ್ಷ ನಾಯಕ ವಿ.ಡಿ.ಸತೀಶನ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ರಮೇಶ್ ಚೆನ್ನಿತ್ತಾಲ ಮತ್ತು ಶಶಿ ತರೂರ್ ಸಂಭಾವ್ಯ ಮುಖ್ಯಮಂತ್ರಿ ಅಭ್ಯರ್ಥಿಗಳಾಗಿದ್ದಾರೆ. ಈ ಆಕಾಂಕ್ಷಿಗಳಲ್ಲಿ ಸಹಮತ ಮೂಡಿಸುವುದು ಹಾಗೂ ಚುನಾವಣೆ ಪೂರ್ವದಲ್ಲಿ ಪಕ್ಷ ಮತ್ತು ಒಕ್ಕೂಟದಲ್ಲಿ ಆಂತರಿಕ ಸೌಹಾರ್ದತೆ ಕಾಯ್ದುಕೊಳ್ಳುವುದು ಸವಾಲಿನ ಕೆಲಸವಾಗಿದೆ. ಹಾಗಾಗಿ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಚುನಾವಣೆಗೂ ಮುನ್ನವೇ ಘೋಷಿಸದೇ, ಸಾಮೂಹಿಕ ನಾಯಕತದಲ್ಲಿ ಚುನಾವಣೆ ಎದುರಿಸಬೇಕಾಗಿದೆ.

ಇತ್ತೀಚೆಗೆ ವಯನಾಡಿನಲ್ಲಿ ರಾಜ್ಯ ಕಾಂಗ್ರೆಸ್ ನಾಯಕರ 2 ದಿನಗಳ ಚುನಾವಣಾ ಪೂರ್ವ ಶಿಬಿರ ನಡೆದಿದ್ದು, ರಾಜ್ಯಾದ್ಯಂತ ಯುಡಿಎಫ್ 'ಜಾಥಾ' ಹಮ್ಮಿಕೊಳ್ಳಲಾಗುತ್ತಿದೆ. ಜತೆಗೆ 'ಎಲ್‌ಡಿಎಫ್'ನಲ್ಲಿರುವ ಕೆಲವು ಹಳೆಯ ಮಿತ್ರಪಕ್ಷಗಳನ್ನು ಸೆಳೆದುಕೊಳ್ಳುವ ಪ್ರಯತ್ನವೂ ನಡೆದಿದೆ. ಆ ಮೂಲಕ ಚುನಾವಣೆಗೆ ಅಗತ್ಯವಾದ ಶಕ್ತಿ ಒಗ್ಗೂಡಿಸುವ ಪ್ರಯತ್ನವನ್ನೂ ಯುಡಿಎಫ್ ಮಾಡುತ್ತಿದೆ.

ತೃತೀಯ ಶಕ್ತಿಯಾಗಿ ಬಿಜೆಪಿ

ಕೇರಳದಲ್ಲಿ ಬಿಜೆಪಿಗೆ ಚುನಾವಣಾ ರಂಗಭೂಮಿ ಎನ್ನುವುದೇ ಈವರೆಗೂ ಇರಲಿಲ್ಲ. ಹೊಸದಾಗಿ ರೂಪಿಸಿಕೊಳ್ಳಬೇಕಿದೆ. 2014ರಲ್ಲಿ ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದಲ್ಲಿ ಎನ್‌ಡಿಎ ಸರಕಾರ ರಚನೆ ಆದನಂತರ ಕೇರಳದಲ್ಲಿನ ರಾಜಕೀಯ ಪರಿಸ್ಥಿತಿಯಲ್ಲಿ ಬದಲಾವಣೆ ಕಾಣಲಾರಂಭಿಸಿದೆ. ಮೋದಿ ಆಡಳಿತದ ಸತತ 3 ಅವಧಿಯಲ್ಲಿ ಬಿಜೆಪಿ ವಿದ್ಯಪರ್ವತದಾಚೆಗೂ ಪಸರಿಸಲಾರಂಭಿಸಿದೆ. ಕೇರಳದಲ್ಲಿಯೂ ಅದರ ಬೇರುಗಳು ನೆಲೆಯೂರಲಾರಂಭಿಸಿವೆ. ಅದರ ಫಲ 2024ರ ಲೋಕಸಭಾ ಚುನಾವಣೆಯಲ್ಲಿ ಕಾಣಿಸಿದೆ. ಬಿಜೆಪಿಗೆ ಮೊದಲ ಗೆಲುವು ಸಿಕ್ಕಿದೆ. ಅದಲ್ಲದೇ, ಡಿಸೆಂಬರ್‌ನಲ್ಲಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ತಿರುವನಂತಪುರಂ ಮಹಾ ನಗರ ಪಾಲಿಕೆಯಲ್ಲಿ ಅಧಿಕಾರವನ್ನೂ ಗಳಿಸಿದೆ. ಇದು ಬಿಜೆಪಿ ಪಾಲಿಗೆ ಕೇರಳದಲ್ಲಿನ ರಾಜಕೀಯದಲ್ಲಿ ಹೊಸ ಮೈಲುಗಲ್ಲು ಎನಿಸಿದೆ. ಈ ಎರಡು ಗೆಲುವುಗಳೇ ಬಿಜೆಪಿಯನ್ನು ಕೇರಳದ ಚುನಾವಣಾ ರಾಜಕೀಯದಲ್ಲಿ ತೃತೀಯ ಶಕ್ತಿಯಾಗಿಸುವ ಸಾಧ್ಯತೆಯನ್ನು ತೋರಿಸಿಕೊಟ್ಟಿವೆ.

2024ರ ಲೋಕಸಭಾ ಚುನಾವಣೆಯಲ್ಲಿ ಕಿರಿಯ ಮಿತ್ರಪಕ್ಷವಾದ 'ಬಿಡಿಜೆಎಸ್' ಜತೆಗೂಡಿ ತ್ರಿಶೂರು ಲೋಕಸಭಾ ಕ್ಷೇತ್ರವನ್ನು ಬಿಜೆಪಿ ಗೆದ್ದುಕೊಂಡಿತು. ಅಷ್ಟೇ ಅಲ್ಲದೇ, ಆ ಚುನಾವಣೆಯಲ್ಲಿ ಚಲಾವಣೆ ಆದ ಮತಗಳಲ್ಲಿ ಶೇ.20ರಷ್ಟು ಮತಗಳನ್ನೂ ಗಳಿಸಿತು. ಅಲ್ಲದೇ, ಅದೇ ಚುನಾವಣೆಯಲ್ಲಿ 11 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಗೆ ಬಹುಮತ ಸಿಕ್ಕಿದ್ದರೆ, ಉಳಿದ 9 ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿ 2ನೇ ಸ್ಥಾನದಲ್ಲಿದ್ದರು. ಇದು ರಾಜ್ಯದಲ್ಲಿ ಬಿಜೆಪಿಯ ಬೆಳವಣಿಗೆಗೆ ದೊಡ್ಡ ಸಾಕ್ಷಿಯಾಗಿದೆ. ರಾಜ್ಯದಲ್ಲಿನ ಬಿಜೆಪಿಯ ಈ ಪ್ರಗತಿ ಎಲ್‌ಡಿಎಫ್ ಮತ್ತು ಯುಡಿಎಫ್ ಒಕ್ಕೂಟಗಳನ್ನು ಜಾಗೃತಗೊಳಿಸಿದೆ.

ಎಲ್‌ಡಿಎಫ್ ಸದ್ಯದ ಪರಿಸ್ಥಿತಿ ಕಠಿಣವಾಗಿದೆ. ಒಂದೆಡೆ ಇಸ್ಲಾಮಿಕ್ ಕಠಿಣ ಮೂಲಭೂತವಾದದ ಎದುರು ತಳೆಯಬೇಕಾದ ನಿಲುವು, ಇನ್ನೊಂದೆಡೆ ಜಮಾತ್ ಎ ಇಸ್ಲಾಮಿ ಮತ್ತು ಕಾಂಗ್ರೆಸ್ ಪಕ್ಷದ ಮೈತ್ರಿ ಹಾಗೂ ಹಿಂದೂ ಸಂಘಟನೆಗಳಾದ ಎಸ್‌ಎನ್‌ಡಿಪಿ ಮತ್ತು ಎನ್‌ಎಸ್‌ಎಸ್ ಮೂಲಕ ಎಡಪಕ್ಷಗಳ ಪರವಾದ ಹಿಂದೂ ಮತಗಳು ಬಿಜೆಪಿಯತ್ತ ಹೋಗುವುದನ್ನು ತಡೆಯುವುದು ಎಲ್ಲವೂ ದೊಡ್ಡ ಸವಾಲಾಗಿದೆ. ಇದೇ ಬಗೆಯಲ್ಲಿ ಕಾಂಗ್ರೆಸ್ ಕೂಡಾ ಸವಾಲು ಎದುರಿಸುತ್ತಿದೆ. ಹಿಂದೂ ಮತ್ತು ಕ್ರೈಸ್ತ ಸಮುದಾಯದ ಮತಗಳು ಬಿಜೆಪಿಗೆ ವರ್ಗಾವಣೆ ಆಗುವುದನ್ನು ತಡೆಯಬೇಕಾದ ಕಠಿಣ ಸವಾಲು ಕಾಂಗ್ರೆಸ್ ಪಕ್ಷದ್ದಾಗಿದೆ.

ಬಿಜೆಪಿಯ ಕೇಂದ್ರದಲ್ಲಿನ ನಾಯಕತ್ವ ಕೇಂದ್ರದ ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ಮೂಲಕ ಕೇರಳ ಬಿಜೆಪಿ ಘಟಕದಲ್ಲಿ ಹೊಸ ನಾಯಕತ್ವವನ್ನು ಹುಟ್ಟುಹಾಕುತ್ತಿದೆ. ಆ ಮೂಲಕ ಹಳೆಯ ಬಿಜೆಪಿ ಘಟಕದಲ್ಲಿ ಹುಳುಕುಗಳನ್ನು ನಿವಾರಿಸಿಕೊಳ್ಳಲೆತ್ನಿಸುತ್ತಿದೆ. ಆದರೆ, ಇತ್ತೀಚಿನ ತಿಂಗಳುಗಳಲ್ಲಿ ಕ್ರೈಸ್ತರ ಆಚರಣೆಗಳ ಮೇಲೆ ಕೆಲವು ಹಿಂದೂ ಸಂಘಟನೆಗಳು ದಾಳಿ ನಡೆಸಿರುವುದು ಬಿಜೆಪಿಗೆ ಸಹಾಯಕವಾಗಿಯೇನೂ ಇಲ್ಲ. ಆದಷ್ಟೂ ಬೇಗ ಇಂಥ ಕುಕೃತ್ಯಗಳಿಗೆ ಬಿಜೆಪಿ ರಾಜ್ಯ ಘಟಕದ ನಾಯಕತ್ವ ತಡೆ ಹಾಕಿ ಪಕ್ಷದ ಮತಬ್ಯಾಂಕ್‌ಗೆ ನಷ್ಟ ಹೆಚ್ಚುವುದನ್ನು ತಪ್ಪಿಸಬೇಕಿದೆ.

ಏಪ್ರಿಲ್‌ನ ಚುನಾವಣೆ ವೇಳೆಗೆ ಬಿಜೆಪಿ ಗರಿಷ್ಠ ಪ್ರಮಾಣದಲ್ಲಿ ಚುನಾವಣಾ ತಂತ್ರಗಳನ್ನು ರೂಪಿಸಿಕೊಳ್ಳಲಿದೆ ಎಂಬ ನಿರೀಕ್ಷೆ ಇದೆ. ರಾಜೀವ್ ಚಂದ್ರಶೇಖರ್ ಸೇರಿದಂತೆ ಹಲವು ದೊಡ್ಡ ನಾಯಕರೇ ಚುನಾವಣಾ ಕಣಕ್ಕಿಳಿಯಲಿದ್ದಾರೆ.

ಸಮಾಚಾರ ಸಣ್ಣದಲ್ಲ

ರವಿಶಂಕರ್ ಪ್ರಸಾದ್ ಮನೆ ಅಗ್ನಿ ಅವಘಡ

ದೆಹಲಿ: ಬಿಜೆಪಿಯ ಹಿರಿಯ ನಾಯಕ, ಸಂಸದ ಮತ್ತು ಕೇಂದ್ರದ ಮಾಜಿ ಸಚಿವ ರವಿಶಂಕರ್ ಪ್ರಸಾದ್ ಅವರ ದೆಹಲಿ ನಿವಾಸದಲ್ಲಿ ಬುಧವಾರ ಮುಂಜಾನೆ 8 ಗಂಟೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ದೆಹಲಿಯ ಮದರ್ ಥೆರೆಸಾ ಕ್ರೆಸೆಂಟ್ ಮಾರ್ಗದಲ್ಲಿನ ನಿವಾಸದಲ್ಲಿನ ಒಂದು ಕೊಠಡಿಯಲ್ಲಿದ್ದ ಹಾಸಿಗೆ ಮತ್ತು ಪೀಠೋಪಕರಣಗಳಿಗೆ ಬೆಂಕಿ ತಾಗಿತ್ತು. ಸುದ್ದಿ ತಿಳಿಯುತ್ತಲೇ ಅಗ್ನಿಶಾಮಕ ದಳದ 3 ವಾಹನಗಳಲ್ಲಿ ಸ್ಥಳಕ್ಕೆ ತೆರಳಿದ ಸಿಬ್ಬಂದಿ 8.30ರ ವೇಳೆಗೆಲ್ಲಾ ಬೆಂಕಿ ನಂದಿಸಿದ್ದಾರೆ. ಬೆಂಕಿ ಬೇರೆಡೆಗೆ ಹರಡುವುದನ್ನು ತಡೆದಿದ್ದಾರೆ. ಯಾವುದೇ ಜೀವಹಾನಿಯಾಗಿಲ್ಲ. ಬೆಂಕಿ ಅವಘಡಕ್ಕೆ ಕಾರಣ ತಿಳಿದು ಬಂದಿಲ್ಲ. ಬೆಂಕಿ ಅವಘಡವಾದಾಗ ರವಿಶಂಕರ್ ಅವರು ಮನೆಯಲ್ಲಿದ್ದರೆ ಎಂಬ ಬಗ್ಗೆ ಮಾಹಿತಿ ಇಲ್ಲ.

500 ಬೀದಿನಾಯಿ ಮಾರಣಹೋಮ

ಹೈದರಾಬಾದ್: ತೆಲಂಗಾಣದ ರಾಜ್ಯದಲ್ಲಿ ಹೊಸ ವರ್ಷದ ಮೊದಲಿಗೇ(ಜ.6-8ರ ನಡುವೆ) ಸಾಮೂಹಿಕ ನಾಯಿ ಹತ್ಯೆ ನಡೆದಿದೆ. ಎರಡು ಜಿಲ್ಲೆಗಳಲ್ಲಿ 500ಕ್ಕೂ ಅಧಿಕ ಬೀದಿನಾಯಿಗಳ ಮಾರಣ ಹೋಮವಾಗಿದೆ.

ಪ್ರತಿನಾಯಿಗೂ ವಿಷದ ಇಂಜೆಕ್ಷನ್ ಚುಚ್ಚಿ ಕೊಲ್ಲಲಾಗಿದೆ ಎಂಬ ಆರೋಪ ಕೇಳಿ ಬಂದಿದೆ. ರಸ್ತೆ ಪಕ್ಕ ನಡೆದುಹೋಗುತ್ತಿರುವ ಬೀದಿನಾಯಿ ಮಗ್ಗಲಲ್ಲೇ ವ್ಯಕ್ತಿಯೊಬ್ಬ ಸಿರಿಂಜ್ ಹಿಡಿದುಕೊಂಡಿರುವ ಚಿತ್ರವೂ ಸುದ್ದಿ ಸಮೇತ ಜಾಲತಾಣದಲ್ಲಿ ವೈರಲ್ ಆಗಿದೆ. ತೆಲಂಗಾಣದ ಹನಮಕೊಂಡ ಮತ್ತು ಕಾಮರೆಡ್ಡಿ ಜಿಲ್ಲೆಗಳಲ್ಲಿನ ಒಟ್ಟು 7 ಗ್ರಾಮಗಳಲ್ಲಿ ಒಟ್ಟು 500ಕ್ಕೂ ಅಧಿಕ ಬೀದಿ ನಾಯಿಗಳಿಗೆ ವಿಷದ ಇಂಜೆಕ್ಷನ್ ಚುಚ್ಚಲಾಗಿದೆ. ಹನುಮಕೊಂಡ ಜಿಲ್ಲೆಯ ಶಯಂಪೇಟೆ ಮತ್ತು ಅರೆಪಲ್ಲಿ ಗ್ರಾಮ ಪಂಚಾಯತ್ ಸೇರಿದಂತೆ ಜಿಲ್ಲೆಯಲ್ಲಿ 300ಕ್ಕೂ ಅಧಿಕ ನಾಯಿಗಳನ್ನು ಕೊಲ್ಲಲಾಗಿದೆ. ಇತ್ತೀಚಿನ ಗ್ರಾಪಂ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದವರು ಬೀದಿ ನಾಯಿ ಮುಕ್ತ ಗ್ರಾಮದ ಭರವಸೆ ನೀಡಿದ್ದರು. ಅದನ್ನು ಈಡೇರಿಸಲು ಸಾಮೂಹಿಕ ಹತ್ಯೆ ನಡೆಸಲಾಗಿದೆ ಎಂಬ ಮಾತು ಕೇಳಿಬಂದಿವೆ. ಎನ್‌ಜಿಒ ಶಯಂಪೇಟೆ ಪೊಲೀಸರಿಗೆ ದೂರು ನೀಡಿದೆ.

ಮನಾಲಿ 9 ಹಳ್ಳಿಗಳು 42 ದಿನ ಕಾಲ ನಿಶ್ಯಬ್ಧ

ಮನಾಲಿ: ಹಿಮಾಚಲ ಪ್ರದೇಶ ರಾಜ್ಯದ ಮನಾಲಿ ಭಾಗದಲ್ಲಿನ 9 ಹಳ್ಳಿಗಳಲ್ಲಿ 42 ದಿನ ಪೂರ್ಣ ಮೌನ ವ್ರತ ಪಾಲಿಸುತ್ತಿವೆ. ಈ ಅವಧಿಯಲ್ಲಿ ಯಾವುದೇ ಮನೆಯಲ್ಲೂ ಟಿವಿ, ಮೊಬೈಲ್ ಫೋನ್ ಸೇರಿದಂತೆ ಶಬ್ದ ಹೊರಡಿಸುವ ಎಲ್ಲಾ ಬಗೆಯ ಎಲೆಕ್ಟ್ರಾನಿಕ್ ಸಾಧನಗಳ ಬಳಕೆ ಸ್ಥಗಿತ. ಈ ಅವಧಿಯ ಮೊದಲ 9 ದಿನ ಜನ ಟಿವಿ ನೋಡಲ್ಲ, ದೇವಾಲಯದಲ್ಲೂ ಪ್ರಾರ್ಥನೆ, ಗಂಟೆ ಸದ್ದಿಲ್ಲ. ಮೊಬೈಲ್ ಫೋನ್ ರಿಂಗ್‌ಟೋನ್ ಕೂಡಾ ಕೇಳಿಸುವುದಿಲ್ಲ. ಕೃಷಿ ಕೆಲಸಗಳನ್ನು ಸಹ ತಾತ್ಕಾಲಿಕ ಸ್ಥಗಿತ. ಸ್ಥಳೀಯ ದೇವತೆಗಳ ಆದೇಶ ಮತ್ತು ಪ್ರಾಚೀನ ಪರಂಪರೆ ಮುಂದುವರಿಕೆ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ಸುಕ್ಮಾ ಜಿಲ್ಲೆಯಲ್ಲಿ 29 ನಕ್ಸಲರು ಶರಣು

ಸುಕ್ಮಾ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ 29 ನಕ್ಸಲರು ಸುಕ್ಮಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾನ್ ಅವರೆದುರು ಶರಣಾಗಿ ಸಮಾಜದ ಮುಖ್ಯವಾಹಿನಿ ಮರಳಿ ಸೇರಿಕೊಂಡಿದ್ದಾರೆ. ಗೊಗುಂಡಾ ಪ್ರದೇಶದ ದಂಡಕಾರಣ್ಯ ಆದಿವಾಸಿ ಕಿಸಾನ್ ಮಜದೂರ್ ಸಂಘಟನೆಯ ನಾಯಕ ಪೊಡಿಯಂ ಬುದ್ರಾ ಶರಣಾದವರಲ್ಲಿ ಪ್ರಮುಖ ನಕ್ಸಲ್ ಆಗಿದ್ದಾನೆ. ಈತನ ಬಂಧನಕ್ಕೆ ನೆರವಾದವರಿಗೆ 2 ಲಕ್ಷ ರು. ಬಹುಮಾನ ಘೋಷಿಸಲಾಗಿತ್ತು. ಡಿಎಕೆಎಂಎಸ್ ಸದಸ್ಯರು, ಮಿಲಿಷಿಯಾ ಸಿಬ್ಬಂದಿ ಹಾಗೂ 'ಜನತಾನಾ ಸರ್ಕಾರ್'ನ ಸದಸ್ಯರು ಶರಣಾದವರಲ್ಲಿ ಸೇರಿದ್ದಾರೆ. ರಾಜ್ಯ ಸರಕಾರ ಘೋಷಿಸಿದ್ದ 'ಪೂನಾ ಮಾರ್ಗೆಂ ಯೋಜನೆ' ಪ್ರಯೋಜನ ಇವರಿಗೆ ದೊರೆಯಲಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.ಮಾವೋವಾದಿಗಳ ಬೆಂಬಲ ವ್ಯವಸ್ಥೆ ಈ ಭಾಗದಲ್ಲಿ ದುರ್ಬಲಗೊಂಡಿದೆ. ಹಾಗಾಗಿ ದೊಡ್ಡ ಸಂಖ್ಯೆಯಲ್ಲಿ ನಕ್ಸಲರು ಶರಣಾಗಿದ್ದಾರೆ ಎಂದು ಎಸ್‌ಪಿ ಕಿರಣ್ ಚವ್ಹಾಣ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

{ ಸುವೇಂದು ಅಧಿಕಾರಿ } ಪ.ಬಂ. ಬಿಜೆಪಿ ನಾಯಕ

ಕಲ್ಲಿದ್ದಲು ಹಗರಣದಲ್ಲಿ ಸುವೇಂದು ಭಾಗಿಯಾಗಿದ್ದಾರೆಂದು ನನ್ನ ಬಗ್ಗೆ ಸಿಎಂ ಮಮತಾ ಬ್ಯಾನರ್ಜಿ ಸುಳ್ಳು ಆರೋಪ ಮಾಡಿದ್ದರು. ಮಾನಹಾನಿ ಮಾಡಿದ್ದಕ್ಕಾಗಿ ಲೀಗಲ್ ನೋಟಿಸ್ ನೀಡಿದ್ದೆ. ಅದಕ್ಕವರು ಪ್ರತಿಕ್ರಿಯಿಸಿಲ್ಲ. ಗಡುವು ಮುಗಿದಿದೆ. ಸಿಎಂ ವಿರುದ್ಧ ಕಾನೂನು ಕ್ರಮ ಅನಿವಾರ್ಯ. ಇನ್ನೇನಿದ್ದರೂ ಅವರನ್ನು ಕೋಲ್ಕತ್ತ ನ್ಯಾಯಾಲಯದಲ್ಲೇ ಭೇಟಿ ಆಗುವೆ.

ಕೇಂದ್ರ ಸಚಿವ ಮುರುಗನ್ ನಿವಾಸದಲ್ಲಿ ಪೊಂಗಲ್ ಹಬ್ಬಕ್ಕೆ ಮೋದಿಗೆ ಆಹ್ವಾನ | ಧಾನ್ಯರಾಶಿ ಪೂಜೆ, ಗೋಮಾತೆ ಗೌರವ, ಸಿಹಿ ಪೊಂಗಲ್ ತಯಾರಿಕೆಯಲ್ಲಿ ಭಾಗಿ

ದೆಹಲಿಯಲ್ಲೇ ದಕ್ಷಿಣ ಭಾರತ ಶೈಲಿ ಮಕರ ಸಂಕ್ರಾಂತಿ ಆಚರಿಸಿದ ಮೋದಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಬುಧವಾರ ಬೆಳಗ್ಗೆ ದೆಹಲಿಯಲ್ಲಿಯೇ ದಕ್ಷಿಣ ಭಾರತ ಶೈಲಿಯಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸಿ ಖುಷಿಪಟ್ಟರು.

ದೆಹಲಿಯಲ್ಲಿರುವ ಕೇಂದ್ರ ಸಚಿವ ಎಲ್.ಮುರುಗನ್ ಅವರ ನಿವಾಸಕ್ಕೆ ಆಹ್ವಾನಿತರಾಗಿದ್ದ ಪ್ರಧಾನಿ ಮೋದಿ ತಮಿಳುನಾಡು ಶೈಲಿಯಲ್ಲಿ 'ಪೊಂಗಲ್' ಹಬ್ಬ ಆಚರಿಸಿದರು. ಸುಗ್ಗಿ ಹಬ್ಬದ ಸಂಪ್ರದಾಯದಂತೆ 'ದವಸ-ಧಾನ್ಯಗಳ ರಾಶಿ'ಗೆ ಮೊದಲು ಪೂಜೆ ಸಲ್ಲಿಸಿದ ಪ್ರಧಾನಿ ಮೋದಿ, 'ಸಿಹಿ ಪೊಂಗಲ್ ತಯಾರಿಸುತ್ತಿದ್ದಲ್ಲಿಗೆ ತೆರಳಿ ಮಡಕೆಯಲ್ಲಿ ಬೇಯುತ್ತಿದ್ದ ಪೊಂಗಲ್‌ಗೆ ಹಸುವಿನ ತುಪ್ಪ ಹಾಕಿದರು. ಬಳಿಕ ಗೋಮಾತೆ ಮತ್ತು ಕರುವಿಗೆ ಶಾಲು ಹೊದಿಸಿ-ಹೂ ಹಾರ ಹಾಕಿ ಗೌರವಿಸಿ, ಅರಿಶಿನ ಕುಂಕುಮವಿಟ್ಟು ಪೂಜೆ ಮಾಡಿ ಆರತಿ ಬೆಳಗಿದರು. ಬಳಿಕ ಗೋಮಾತೆ ಮತ್ತು ಕರುವಿಗೆ ಎಳ್ಳು-ಬೆಲ್ಲ, ಹಣ್ಣುಗಳನ್ನು ತಿನ್ನಿಸಿ ನಮಿಸಿದರು.

ಬಳಿಕ ನೆರೆದಿದ್ದವರನ್ನು ಉದ್ದೇಶಿಸಿ ಮಾತನಾಡಿದ ಮೋದಿ, ಪ್ರಕೃತಿಯ ಬಗೆಗಿನ ನಮ್ಮ ಕೃತಜ್ಞತೆಯನ್ನು ಕೇವಲ ಪದಗಳಿಗೆ ಸೀಮಿತಗೊಳಿಸಬಾರದು. ಅದನ್ನು ನಮ್ಮ ನಿತ್ಯ ಜೀವನದ ಭಾಗವಾಗಿಸಿಕೊಳ್ಳಬೇಕು ಎಂಬುದನ್ನು ಮಕರ ಸಂಕ್ರಾಂತಿ ಹಬ್ಬ(ಪೊಂಗಲ್) ನಮಗೆಲ್ಲಾ ತಿಳಿಸಿಕೊಡುತ್ತದೆ ಎಂದು ಹೇಳಿದರು.

ಭೂಮಿ ತಾಯಿ ನಮಗೆ ಆಹಾರ ಧಾನ್ಯ ಸೇರಿದಂತೆ ಅಪಾರ ಕೊಡುಗೆಗಳನ್ನು ನೀಡಿರುವಾಗ ಅದನ್ನು ಸಮರ್ಪಕ ರೀತಿಯಲ್ಲಿ ಬಳಸಿಕೊಂಡು ಮುಂದಿನ ಪೀಳಿಗೆಗೂ ಕಾಪಿಡುವುದು ನಮ್ಮೆಲ್ಲರ ಜವಾಬ್ದಾರಿ. ಮಣ್ಣನ್ನು ಆರೋಗ್ಯಕರವಾಗಿ ಕಾಯ್ದುಕೊಳ್ಳಬೇಕು, ನೀರನ್ನು ಮಲಿನಗೊಳಿಸದೇ ಶುದ್ಧವಾಗಿರಿಸಬೇಕು. ಪ್ರಕೃತಿಯ ಸಂಪನ್ಮೂಲಗಳೆಲ್ಲವನ್ನೂ ವಿವೇಚನೆಯಿಂದ ಬಳಸಿ ಮುಂದಿನ ಪೀಳಿಗೆಗೂ ಉಳಿಸಬೇಕಾಗಿರುವುದು ಅತ್ಯಂತ ಮುಖ್ಯ ಎಂದು ಪ್ರಧಾನಿ ಮೋದಿ ಕಿವಿಮಾತು ಹೇಳಿದರು.

ಪ್ರಕೃತಿಯೊಂದಿಗಿನ ಮನುಷ್ಯನ ಸಾಮರಸ್ಯದ ಸಂದೇಶವನ್ನು ಪೊಂಗಲ್ ಹಬ್ಬ ಸಾರುತ್ತದೆ. ವಿಶ್ವಾದ್ಯಂತ ತಮಿಳರು ಈ ಹಬ್ಬವನ್ನು ಸಡಗರದಿಂದ ಆಚರಿಸುತ್ತಾರೆ. ಈ ಆಚರಣೆಯ ಭಾಗವಾಗಿರುವುದಕ್ಕೆ ನನಗೆ ಹೆಮ್ಮೆಯಾಗುತ್ತಿದೆ ಎಂದು ಮೋದಿ ಹೇಳಿದರು. ಪೊಂಗಲ್ ಹಬ್ಬ ರೈತರ ಕಠಿಣ ಪರಿಶ್ರಮವನ್ನು ಗೌರವಿಸುತ್ತದೆ. ಭೂಮಿ-ಸೂರ್ಯನಿಗೆ ಕೃತಜ್ಞತೆ ಸಲ್ಲಿಸಲು ನೆನಪಿಸುತ್ತದೆ. 'ಮಿಷನ್ ಲೈಫ್', 'ಏಕ್ ಪೇಡ್ ಮಾ ಕೆ ನಾಮ್ ಪೆ'(ಅಮ್ಮನ ಹೆಸರಲ್ಲೊಂದು ಮರ) ಮತ್ತು 'ಅಮೃತ್ ಸರೋವರ್' ಮೊದಲಾದ ಸರಕಾರದ ಉಪಕ್ರಮಗಳು ಪ್ರಕೃತಿ-ಮನುಷ್ಯನ ಸ್ನೇಹ ಸಂಬಂಧವನ್ನು ನೆನಪಿಸುತ್ತದೆ ಎಂದು ಹೇಳಿದರು. ದೇಶ-ವಿದೇಶದಲ್ಲಿನ ಭಾರತೀಯರಿಗೆ ಪೊಂಗಲ್ ಹಬ್ಬದ ಶುಭಾಶಯ ಕೋರಿದರು.

ಪ್ರಧಾನಿ ಮೋದಿ ಗೋಮಾತೆಗೆ ಶಾಲು ಹೊದಿಸಿ ಹಾರಹಾಕಿ, ಎಳ್ಳು-ಬೆಲ್ಲ-ಹಣ್ಣುಗಳನ್ನು ನೀಡಿದರು.

ಪೊಂಗಲ್ ಆಚರಣೆ ಭಾಗವಾಗಿದ್ದಕ್ಕೆ ಹೆಮ್ಮೆ

ಪ್ರಕೃತಿಯೊಂದಿಗಿನ ಮನುಷ್ಯನ ಸಾಮರಸ್ಯದ ಸಂದೇಶವನ್ನು ಪೊಂಗಲ್ ಹಬ್ಬ ಸಾರುತ್ತದೆ. ವಿಶ್ವಾದ್ಯಂತ ತಮಿಳರು ಸೇರಿದಂತೆ ಭಾರತೀಯರ ಹಲವು ಬಗೆಗಳಲ್ಲಿ ಈ ಪ್ರಕೃತಿಗೆ ಕೃತಜ್ಞತೆ ಸಲ್ಲಿಸುವ ಹಬ್ಬವನ್ನು ಸಡಗರದಿಂದ ಆಚರಿಸುತ್ತಾರೆ. ಈ ಆಚರಣೆಯ ಭಾಗವಾಗಿರುವುದಕ್ಕೆ ನನಗೆ ಹೆಮ್ಮೆಯಾಗುತ್ತಿದೆ ಎಂದು ಮೋದಿ ಹೇಳಿದರು. ಪೊಂಗಲ್ ಹಬ್ಬ ರೈತರ ಕಠಿಣ ಪರಿಶ್ರಮವನ್ನು ಗೌರವಿಸುತ್ತದೆ. ಭೂಮಿ-ಸೂರ್ಯನಿಗೆ ಕೃತಜ್ಞತೆ ಸಲ್ಲಿಸಲು ನೆನಪಿಸುತ್ತದೆ. 'ಮಿಷನ್ ಲೈಫ್', 'ಏಕ್ ಪೇಡ್ ಮಾ ಕೆ ನಾಮ್ ಪೆ'(ಅಮ್ಮನ ಹೆಸರಲ್ಲೊಂದು ಮರ) ಮತ್ತು 'ಅಮೃತ್ ಸರೋವರ್' ಮೊದಲಾದ ಸರಕಾರದ ಉಪಕ್ರಮಗಳು ಪ್ರಕೃತಿ-ಮನುಷ್ಯನ ಸ್ನೇಹ ಸಂಬಂಧವನ್ನು ನೆನಪಿಸುತ್ತದೆ ಎಂದು ಹೇಳಿದರು. ದೇಶ-ವಿದೇಶದಲ್ಲಿನ ಭಾರತೀಯರಿಗೆ ಪೊಂಗಲ್ ಹಬ್ಬದ ಶುಭಾಶಯ ಕೋರಿದರು.

ಪ್ರಧಾನಿ ಮೋದಿ ದೆಹಲಿಯಲ್ಲಿ ಸಚಿವ ಮುರುಗನ್ ನಿವಾಸದಲ್ಲಿ 'ಮಕರ ಸಂಕ್ರಾಂತಿ' ಹಬ್ಬದಲ್ಲಿ ಪಾಲ್ಗೊಂಡು ಮಡಕೆಯಲ್ಲಿ ಬೇಯುತ್ತಿದ್ದ ಪೊಂಗಲ್‌ಗೆ ತುಪ್ಪ ಹಾಕಿದರು.

'ಪೊಂಗಲ್' ಆಚರಣೆ ಸಂದರ್ಭ ಕೇಂದ್ರ ಸಚಿವರಾದ ಜಿ.ಕಿಶನ್ ರೆಡ್ಡಿ, ಕೆ.ರಾಮಮೋಹನ್ ನಾಯ್ಡು ಮತ್ತು ಎಲ್.ಮುರುಗನ್ ಪ್ರಧಾನಿ ಮೋದಿ ಅವರನ್ನು ಸನ್ಮಾನಿಸಿದರು.

ಬಿಜೆಪಿ, ಆರ್‌ಎಸ್‌ಎಸ್ ಕಚೇರಿಗೆ ಚೀನಾ ಆಡಳಿತ ಪಕ್ಷ ಸಿಪಿಸಿ ಭೇಟಿ | ಸುನ್ ಹೈಯಾನ್ ನೇತೃತ್ವ

ಕೇಸರಿ ಭೇಟಿಗೆ ಕೆಂಪು ಧ್ವಜ!

ದೆಹಲಿ: ನೆರೆಯ ಕಮ್ಯುನಿಸ್ಟ್ ದೇಶ ಚೀನಾದಲ್ಲಿನ ಆಡಳಿತ ಪಕ್ಷವಾದ 'ಕಮ್ಯುನಿಸ್ಟ್ ಪಾರ್ಟಿ ಆಫ್ ಚೀನಾ'(ಸಿಪಿಸಿ)ದ ಸುನ್ ಹೈಯಾನ್ ಅವರ ನೇತೃತ್ವದ ನಿಯೋಗ ಭಾರತಕ್ಕೆ ಭೇಟಿ ನೀಡಿ ಬಿಜೆಪಿ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್)ದ ದೆಹಲಿ ಪ್ರಧಾನ ಕಚೇರಿಗೆ ಭೇಟಿ ನೀಡಿರುವುದು ಅಚ್ಚರಿ ಮೂಡಿಸಿದ್ದು, ದೇಶಾದ್ಯಂತದ ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೂ ಕಾರಣವಾಗಿದೆ.

ದೆಹಲಿಯಲ್ಲಿನ ಬಿಜೆಪಿ ಪ್ರಧಾನ ಕಚೇರಿಗೆ ಸೋಮವಾರ ಆಗಮಿಸಿದ ಚೀನಾದ 'ಸಿಪಿಸಿ' ಪಕ್ಷದ ನಿಯೋಗವನ್ನು ಪಕ್ಷದ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರು ಬರಮಾಡಿಕೊಂಡು ಮಾತುಕತೆ ನಡೆಸಿದರು. ವಿಶ್ವದಲ್ಲೇ ಅತ್ಯಂತ ದೊಡ್ಡ ರಾಜಕೀಯ ಪಕ್ಷ ಎನಿಸಿಕೊಂಡಿರುವ ಭಾರತೀಯ ಜನತಾ ಪಕ್ಷ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬ ಬಗ್ಗೆ ಮಾಹಿತಿ ಪಡೆದುಕೊಂಡರು ಎಂದು ತಿಳಿದು ಬಂದಿದೆ. ದೆಹಲಿಯಲ್ಲಿರುವ ಆರ್‌ಎಸ್‌ಎಸ್ ಪ್ರಧಾನ ಕಚೇರಿ 'ಕೇಶವ ಕುಂಜ'ಕ್ಕೂ ಮರುದಿನ(ಮಂಗಳವಾರ) ತೆರಳಿದ ಸುನ್ ಹೈಯಾನ್ ಅವರ ನೇತೃತ್ವದ ನಿಯೋಗವು ಸಂಘದ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರನ್ನು ಭೇಟಿ ಮಾಡಿತು. ಒಂದು ಗಂಟೆಗೂ ಹೆಚ್ಚು ಕಾಲ ಹೊಸಬಾಳೆ ಅವರ ಜತೆ ಸಂವಾದ ನಡೆಸಿದ ನಿಯೋಗ, ಮುಖ್ಯವಾಗಿ ಆರ್‌ಎಸ್‌ಎಸ್ ಪದಾಧಿಕಾರಿಗಳು, ದೇಶಾದ್ಯಂತ ಇರುವ ಘಟಕಗಳು, ಕಾರ್ಯಕರ್ತರು, ಅವರ ಜತೆಗಿನ ಪ್ರಧಾನ ಕಚೇರಿಯ ಸಂಪರ್ಕ ಸಾಧಿಸುವ ಬಗೆ, ಸಂಘದ ವಿಭಾಗಗಳು, ಅವುಗಳ ಕಾರ್ಯವೈಖರಿ ಮೊದಲಾದ ಅಂಶಗಳನ್ನು ಕೇಳಿ ತಿಳಿದುಕೊಂಡಿತು ಎಂದು ತಿಳಿದುಬಂದಿದೆ.

ಆದರೆ, ಸಿಪಿಸಿ ನಿಯೋಗ ಕೇಶವ ಕುಂಜಕ್ಕೆ ಭೇಟಿ ನೀಡಿದ್ದಾಗ ಸಂಘದ ಮುಖ್ಯಸ್ಥರಾದ ಡಾ. ಮೋಹನ್ ಭಾಗವತ್ ಅವರ ಭೇಟಿ ಸಾಧ್ಯವಾಗಲಿಲ್ಲ. ಏಕೆಂದರೆ ಭಾಗವತ್ ಅವರು ಪ್ರವಾಸದಲ್ಲಿ ಇದ್ದರು ಎಂದು ಆರ್‌ಎಸ್‌ಎಸ್ ಪದಾಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಹಿಂದೆಯೂ 2 ಬಾರಿ ಬಿಜೆಪಿ-ಸಿಪಿಸಿ ಭೇಟಿ

ಬಿಜೆಪಿ ಮತ್ತು ಸಿಪಿಸಿ ನಿಯೋಗಗಳು ಈ ಹಿಂದೆಯೂ 2 ಬಾರಿ ಭೇಟಿಯಾಗಿದ್ದವು. 2011ರಲ್ಲಿ ನಿತಿನ್ ಗಡ್ಕರಿ ಅವರು ಬಿಜೆಪಿ ಅಧ್ಯಕ್ಷರಾಗಿದ್ದಾಗ ಪಕ್ಷದ ನಿಯೋಗವು ಚೀನಾಕ್ಕೆ ತೆರಳಿ 'ಸಿಪಿಸಿ' ಪಕ್ಷದ ಕಚೇರಿಗೂ ಭೇಟಿ ನೀಡಿ ಸಂವಾದ ನಡೆಸಿತ್ತು. 2019ರಲ್ಲಿ ಅರುಣ್ ಸಿಂಗ್ ಅವರ ನೇತೃತ್ವದ ನಿಯೋಗವು ಚೀನಾಕ್ಕೆ ತೆರಳಿ ಸಿಪಿಸಿ ಪಕ್ಷದ ಪದಾಧಿಕಾರಿಗಳನ್ನು ಸಂದಿಸಿ ಚರ್ಚೆ ನಡೆಸಿತ್ತು. ಆರ್‌ಎಸ್‌ಎಸ್ ಸಂಪರ್ಕವಾಗಲೀ, ಅದರ ಪ್ರಧಾನ ಕಚೇರಿಗೆ ಸಿಪಿಸಿ ನಿಯೋಗದ ಭೇಟಿಯಾಗಲಿ ಇದೇ ಮೊದಲು. 'ಸಿಪಿಸಿ' ನಿಯೋಗದ ಕೋರಿಕೆ ಮೇರೆಗಷ್ಟೇ ಆರ್‌ಎಸ್‌ಎಸ್ ಕಚೇರಿಗೆ ಅವರನ್ನು ಬರಮಾಡಿಕೊಂಡು ಸಂವಾದ ನಡೆಸಲಾಗಿದೆ ಎಂದು ತಿಳಿದುಬಂದಿದೆ.

ದೆಹಲಿಯಲ್ಲಿನ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರು ಚೀನಾದ 'ಸಿಪಿಸಿ' ಪಕ್ಷದ ನಿಯೋಗದ ನೇತೃತ್ವ ವಹಿಸಿದ್ದ ಸುನ್ ಹೈಯಾನ್ ಅವರಿಗೆ ನೆನಪಿನ ಕಾಣಿಕೆ ನೀಡಿದರು. ಸಿಪಿಸಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಉ.ಭಾರತ ಸ್ತ್ರೀಗೆ ಮಕ್ಕಳ ಹೆರುವುದಕ್ಕಷ್ಟೇ ಉತ್ತೇಜನ

ಚೆನ್ನೈ: ತಮಿಳುನಾಡಿನಲ್ಲಿ ಮಹಿಳೆಗೆ ಅಧ್ಯಯನಕ್ಕೆ ಪ್ರೋತ್ಸಾಹ ದೊರೆತರೆ, ಉತ್ತರ ಭಾರತದ ಮಹಿಳೆಗೆ ಅಡುಗೆ ಮನೆ ಕೆಲಸ

ಮಾಡಲು ಮತ್ತು ಮಕ್ಕಳನ್ನು ಹೆರಲಷ್ಟೇ ಪ್ರೋತ್ಸಾಹಿಸಲಾಗುತ್ತದೆ ಎಂದು ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷದ ಸಂಸದ ದಯಾನಿಧಿ ಮಾರನ್ ಹೇಳಿರುವುದು ವಿವಾದಕ್ಕೆ ಕಾರಣವಾಗಿದೆ.

'ಕ್ವಾಯ್ದ್-ಎ-ಮಿಲ್ಲತ್' ಸರಕಾರಿ ಮಹಿಳಾ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಬುಧವಾರ ಮಾತನಾಡಿದ ಮಾರನ್, ನಮ್ಮ ಹುಡುಗಿಯರು ಲ್ಯಾಪ್‌ಟಾಪ್ ಜತೆ ಆತ್ಮವಿಶ್ವಾಸ ಮತ್ತು ಹೆಮ್ಮೆಯಿಂದ ಮುಂದೆ ಸಾಗುತ್ತಾರೆ. ವ್ಯಾಸಂಗ, ಉದ್ಯೋಗಕ್ಕೆ ಪ್ರೋತ್ಸಾಹ ಸಿಗುತ್ತದೆ. ಆ ವಿಶ್ವಾಸ-ಪ್ರೋತ್ಸಾಹ ತಮಿಳುನಾಡಿನಲ್ಲಿದೆ. ಆದರೆ, ಉತ್ತರ ಭಾರತದಲ್ಲಿ ಹುಡುಗಿಯರಿಗೆ ನೌಕರಿಗೆ ಹೋಗಬೇಡ, ಮನೆಯಲ್ಲೇ ಇರು, ಅಡುಗೆ ಕೆಲಸ ಮಾಡು, ಮದುವೆಯಾಗಿ ಮಗು ಹೆರು, ಇದೇ ನಿನ್ನ ಕೆಲಸ ಎಂದು ಹೇಳಲಾಗುತ್ತದೆ ಎಂದು ಹೇಳಿದ್ದಾರೆ.

ಇದು ತಮಿಳುನಾಡು, ದ್ರಾವಿಡ ರಾಜ್ಯ, ಇಲ್ಲಿ ನಿಮ್ಮ ಪ್ರಗತಿ ತಮಿಳುನಾಡು ರಾಜ್ಯದ ಪ್ರಗತಿಯಾಗಿದೆ. ಹಾಗಾಗಿಯೇ ಜಾಗತಿಕ ಕಂಪನಿಗಳು ಚೆನ್ನೈಗೆ ಬರುತ್ತವೆ. ಏಕೆಂದರೆ ಇಲ್ಲಿನವರು ತಮಿಳಿನಲ್ಲಷ್ಟೇ ಅಲ್ಲ, ಇಂಗ್ಲಿಷ್‌ನಲ್ಲೂ ಶಿಕ್ಷಣ ಪಡೆಯುತ್ತಾರೆ ಎಂದರು.

ಬಿಜೆಪಿ ಟೀಕೆ: ಮಾರನ್ ಹೇಳಿಕೆಗೆ ಬಿಜೆಪಿ ತೀವ್ರ ಟೀಕೆ ಮಾಡಿದೆ. ದಯಾನಿಧಿ ಮಾರನ್ ಮತ್ತೆ ಮತ್ತೆ ಉತ್ತರ ಭಾರತೀಯರನ್ನು ನಿಂದಿಸುತ್ತಿದ್ದಾರೆ. ಮಾರನ್ ಅವರಿಗೆ ಸಾಮಾನ್ಯ ಜ್ಞಾನವಿಲ್ಲ ಎಂದೇ ನಾನು ಭಾವಿಸಿದ್ದೇನೆ ಎಂದು ತಮಿಳುನಾಡಿನ ಬಿಜೆಪಿ ವಕ್ತಾರ ನಾರಾಯಣನ್ ತಿರುಪತಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕರೂರ್ ಕಾಲ್ತುಳಿತ: 19ಕ್ಕೆ ಮತ್ತೆ ವಿಜಯ್‌ಗೆ ಸಮನ್ಸ್

ದೆಹಲಿ: ದೆಹಲಿಯಲ್ಲಿರುವ ಕೇಂದ್ರ ತನಿಖಾ ದಳ (ಸಿಬಿಐ)ದ ಕೇಂದ್ರ ಕಚೇರಿಯಲ್ಲಿ ಸೋಮವಾರ 6 ಗಂಟೆಗಳಿಗೂ ಹೆಚ್ಚು ಕಾಲ

ವಿಚಾರಣೆಗೆ ಒಳಗಾದ ತಮಿಳು ಚಿತ್ರನಟ, ತಮಿಳಿಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ನಾಯಕ ವಿಜಯ್‌ಗೆ ಮತ್ತೆ ಜ.19ರಂದು ವಿಚಾರಣೆ ಬರುವಂತೆ ಸೂಚನೆ ನೀಡಲಾಗಿದೆ.

ಸೋಮವಾರ ವಿಚಾರಣೆ ಕೊನೆಗೊಳ್ಳದ ಕಾರಣ ಮಂಗಳವಾರ ಮತ್ತೆ ಬರಲು ಸೂಚಿಸಿದಾಗ, ಪೊಂಗಲ್ ಹಬ್ಬ ಇರುವುದನ್ನು ಉಲ್ಲೇಖಿಸಿದ ವಿಜಯ್, ಮತ್ತೊಂದು ದಿನಾಂಕಕ್ಕೆ ಮನವಿ ಮಾಡಿದರು. ಆಗ ಸಿಬಿಐ ತನಿಖಾಧಿಕಾರಿ, ಜ.19ಕ್ಕೆ ದಿನ ನಿಗದಿಪಡಿಸಿದರು ಎಂದು ಮೂಲಗಳಿಂದ ತಿಳಿದು ಬಂದಿದೆ. ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ತಮಿಳುನಾಡು ಪೊಲೀಸರ 'ಎಸ್‌ಐಟಿ'ಯಿಂದ ಪ್ರಕರಣವನ್ನು ತನ್ನ ಕೈಗೆ ತೆಗೆದುಕೊಂಡಿರುವ ಸಿಬಿಐ, ಇದೇ ಪ್ರಕರಣದಲ್ಲಿ ತಮಿಳುನಾಡು ಮಾಜಿ ಎಡಿಜಿಪಿ(ಕಾನೂನು ಮತ್ತು ಸುವ್ಯವಸ್ಥೆ) ಎಸ್.ಡೇವಿಡ್ಸನ್ ದೇವಾಶೀರ್ವಾದಂ ಅವರನ್ನೂ ಸಿಬಿಐ ಸೋಮವಾರ ವಿಚಾರಣೆಗೆ ಒಳಪಡಿಸಿದೆ. ಈವರೆಗೆ ಇದೇ ಪ್ರಕರಣದಲ್ಲಿ ಟಿವಿಕೆ ಪಕ್ಷದ ಪದಾಧಿಕಾರಿಗಳು, ವಿಜಯ್ ಚಾಲಕ ಮತ್ತು ಕೆಲ ಪೊಲೀಸ್ ಅಧಿಕಾರಿಗಳನ್ನೂ ತನಿಖೆಗೆ ಒಳಪಡಿಸಿದೆ. ಅಲ್ಲದೇ, ಸಿಬಿಐ ತನಿಖೆಯ ಮೇಲ್ವಿಚಾರಣೆಗಾಗಿ ನಿವೃತ್ತ ನ್ಯಾಯಮೂರ್ತಿ ಅಜಯ್ ರಸ್ತೋಗಿ ನೇತೃತ್ವದಲ್ಲಿ ಮೂವರು ಸದಸ್ಯರ ಮೇಲ್ವಿಚಾರಣಾ ಸಮಿತಿಯನ್ನೂ ಪೀಠ ರಚಿಸಿದೆ.

ತಮಿಳುನಾಡಿನ ಕರೂರ್‌ನಲ್ಲಿ 2025ರ ಸೆ.27ರಂದು ನಟ ವಿಜಯ್ ರ‍್ಯಾಲಿ ವೇಳೆ ಕಾಲ್ತುಳಿತವಾಗಿ 41 ಜನರು ಸಾವನ್ನಪ್ಪಿ, 60ಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು. ಈ ದುರಂತ ದೇಶಾದ್ಯಂತ ಜನರ ಮನಸ್ಸಿನಲ್ಲಿ ಆತಂಕಕ್ಕೆ ಕಾರಣವಾಗಿತ್ತು ಎಂದು ನ್ಯಾ.ಜೆ.ಕೆ.ಮಹೇಶ್ವರಿ ಮತ್ತು ನ್ಯಾ.ಎನ್.ವಿ.ಅಂಜಾರಿಯಾ ಅವರ ಪೀಠ ಹೇಳಿದೆ.

ಎಂ-ನರೇಗಾ ಭ್ರಷ್ಟಾಚಾರ ಸಾಗರ: ಸಚಿವ ಚೌಹಾಣ್

ಅಹಮದಾಬಾದ್: 'ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ(ಎಂನರೇಗಾ) ಯೋಜನೆಯ ಅನುಷ್ಠಾನ ವಿಧಾನ ಭ್ರಷ್ಟಾಚಾರದ ಸಾಗರವಾಗಿತ್ತು ಎಂದು ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಟೀಕಿಸಿದ್ದಾರೆ.

ಗುಜರಾತ್‌ನ ಅಹಮದಾಬಾದ್‌ಗೆ ಬುಧವಾರ ಭೇಟಿ ನೀಡಿದ ಸಂದರ್ಭ ಕೃಷಿ ಸಚಿವರು ಮನರೇಗಾ ಅನುಷ್ಠಾನದಲ್ಲಿ ಭಾರೀ ಅಕ್ರಮ ಗಳಾಗಿವೆ. ಹಾಗಾಗಿಯೇ ನರೇಗಾವನ್ನು ಬದಲಿಸಲಾಗಿದೆ. ಹೊಸದಾಗಿ 'ರೋಜ್ಗಾರ್ ಮತ್ತು ಅಜೀವಿಕಾ ಮಿಷನ್(ಗ್ರಾಮೀಣ) (ವಿಬಿಜಿ-ರಾಮ್ ಜಿ) ಕಾಯಿದೆಯಾಗಿ ಬದಲಿಸಲಾಗಿದೆ ಎಂದಿದ್ದಾರೆ. ನರೇಗಾದಲ್ಲಿ ಕಾರ್ಮಿಕರಿಗೆ ಕೆಲಸ ಕೊಡುವುದಕ್ಕೆ ಬದಲಾಗಿ ಜೆಸಿಬಿ ಯಂತ್ರಗಳನ್ನು ಬಳಸಿಯೇ ಗುತ್ತಿಗೆದಾರರು ಕೆಲಸ ಮಾಡಿಸುತ್ತಿದ್ದರು. ಯೋಜನೆಯ ಮೂಲ ಉದ್ದೇಶವೇ ಈಡೇರದೇ ಇಡೀ ಯೋಜನೆಯೇ ಹಳಿ ತಪ್ಪಿತ್ತು. ಹಾಗಾಗಿಯೇ ನರೇಗಾವನ್ನು ಕೊನೆಗೊಳಿಸಲಾಯಿತು ಎಂದು ತಮ್ಮ ಸರಕಾರದ ಕ್ರಮವನ್ನು ಸಮರ್ಥಿಸಿಕೊಂಡರು. ಕಾಂಗ್ರೆಸ್ ಆಡಳಿತದಲ್ಲಿ ನರೇಗಾದಲ್ಲಿ ಗ್ರಾಮೀಣ ಕೂಲ ಕಾರ್ಮಿಕರ ಹಿತಾಸಕ್ತಿ ರಕ್ಷಣೆಯಾಗಲಿಲ್ಲ, ಬದಲಾಗಿ ಪಕ್ಷದ ಬೆಂಬಲಿಗ ಗುತ್ತಿಗೆದಾರರಿಗೆ ಲಾಭವಾಗಿದೆ. ನರೇಗಾವನ್ನು ಮತ್ತೆ ಜಾರಿಗೆ ತರುವ ಸಾಧ್ಯತೆಯೇ ಇಲ್ಲ. ಕಾಂಗ್ರೆಸ್ ಮಾತನ್ನು ಜನರೂ ಕೇಳುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು. 2014ರ ನಂತರ ನರೇಂದ್ರ ಮೋದಿ ಸರಕಾರ ನರೇಗಾ ಯೋಜನೆಗೆ 8.48 ಲಕ್ಷ ಕೋಟಿ ರು. ಅನುದಾನ ಒದಗಿಸಿದೆ. ಆದರೆ ಯುಪಿಎ ಅವಧಿಯಲ್ಲಿ ಕೇವಲ ₹2 ಲಕ್ಷ ಕೋಟಿ ಹಂಚಿಕೆ ಮಾಡಲಾಗಿದೆ. ಆದರೆ ಆ ಹಣದಲ್ಲೂ ಭ್ರಷ್ಟಾಚಾರವಾಗಿದೆ ಎಂದರು.





ಸ್ಪೇನ್-ಫ್ರಾನ್ಸ್ ಕಂಪನಿಗಳು ಜಂಟಿಯಾಗಿ ಅಭಿವೃದ್ಧಿಪಡಿಸಿದ 'ಕೆಐಡಿ'

ಭೂಕೇಂದ್ರಕ್ಕೆ ಸತತ 3 ನಿಮಿಷಗಳ ಕಾಲ ದತ್ತಾಂಶ ರವಾನಿಸಿದ 'ಕಿಡ್'

ಪಿಎಸ್‌ಎಲ್‌ವಿ-ಸಿ62 ಉಡಾವಣೆ ವಿಫಲವಾದರೂ ಕಿಡ್ ಸಕ್ರಿಯ

ಶ್ರೀಹರಿಕೋಟ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೊ) ಜ.12ರ ಬೆಳಗ್ಗೆ ಉಡಾಯಿಸಿದ 'ಪಿಎಸ್‌ಎಲ್‌ವಿ-ಸಿ62' ಗಗನನೌಕೆ ಆರಂಭದಲ್ಲಿ ಯಶಸ್ವಿಯಾಗಿ ಗಗನಕ್ಕೆ ನೆಗೆದಿದ್ದರೂ 3ನೇ ಹಂತದಲ್ಲಿ ವಿಘಟನೆ ವೇಳೆ ಯೋಜನೆಯಂತೆ ನಡೆಯದೇ ಮಾರ್ಗ ಬದಲಿಸಿದ್ದರಿಂದ ಯೋಜನೆಯೇ ವಿಫಲವಾಯಿತು ಎಂದುಕೊಂಡಿರುವಾಗಲೇ ಅಚ್ಚರಿ ನಡೆದಿದೆ.

ಒಡಲಲ್ಲಿ ದೇಶ-ವಿದೇಶದ 16 ಉಪಗ್ರಹಗಳನ್ನು ಇಟ್ಟುಕೊಂಡು ಸಾಗಿದ್ದ 'ಪಿಎಸ್‌ಎಲ್‌ವಿ-ಸಿ62' ಗಗನನೌಕೆ, ಎಲ್ಲಾ ಉಪಗ್ರಹಗಳನ್ನೂ ಕಕ್ಷೆಗೆ ಸೇರಿಸುವಲ್ಲಿ ವಿಫಲವಾಗಿದೆ. ಆದರೆ, ಒಂದು 'ಕಿಡ್' ಮಾತ್ರ ಉಳಿದುಕೊಂಡಿರುವುದು ಬುಧವಾರ ತಿಳಿದುಬಂದಿದೆ. ಒಟ್ಟು 16 ಉಪಗ್ರಹಗಳಲ್ಲಿ ಸ್ಪೇನ್ ದೇಶದ ಒಂದು ಪುಟ್ಟ ಉಪಗ್ರಹ 'ಕೆಐಡಿ'(ಕಿಡ್) ಮಾತ್ರ ಬಾಹ್ಯಾಕಾಶದಲ್ಲಿ ಕಳೆದಹೋಗದೇ ಉಳಿದುಕೊಂಡಿದ್ದು, ಸಕ್ರಿಯವಾಗಿದೆ. ಜತೆಗೆ ಭೂಕೇಂದ್ರಕ್ಕೆ ಸಂದೇಶವನ್ನೂ ರವಾನಿಸಿ 'ನಾನೂ ಅಪಾಯದಿಂದ ಪಾರಾಗಿದ್ದೇನೆ, ಸದ್ಯ ಕ್ಷೇಮವಾಗಿದ್ದೇನೆ' ಎಂಬುದನ್ನು ದೃಢಪಡಿಸಿದೆ. ಒಟ್ಟು ಫುಟ್ಬಾಲ್ ಗಾತ್ರವಷ್ಟೇ ಇರುವ, ಸಂಕ್ರಾತಿ ಹಬ್ಬದ 'ಮಡಕೆ' ಆಕಾರದಲ್ಲಿರುವ, 25 ಕಿಲೋ ತೂಕವಷ್ಟೇ ಇರುವ ಸ್ಪೇನ್‌ನ ಪುಟಾಣಿ 'ಕೆಐಡಿ' ಕ್ಯಾಪ್ಸೂಲ್ ಉಪಗ್ರಹ ಯಾವುದೇ ರೀತಿ ಹಾನಿಗೆ ಒಳಗಾಗದೇ ಸಕ್ರಿಯವಾಗಿರುವುದೇ ಅದ್ಭುತ ಎನ್ನುವಂತಾಗಿದೆ. 'ಕಿಡ್' ಉಪಗ್ರಹವನ್ನು ಫ್ರಾನ್ಸ್‌ನ ಕಂಪನಿ 'ರೈಡ್' ಸಹಯೋಗದಲ್ಲಿ ಸ್ಪೇನ್‌ನ ನವೋದ್ಯಮ ಸಂಸ್ಥೆ ಅಭಿವೃದ್ಧಿಪಡಿಸಿದೆ.

3ನೇ ಹಂತದಲ್ಲಿ ಹಾದಿ ತಪ್ಪಿದ ಗಗನನೌಕೆಯಲ್ಲಿ ಉಂಟಾಗಿರಬಹುದಾದ ತೀವ್ರ ಒತ್ತಡ, ಅತಿಯಾದ ಶಾಖವನ್ನೂ ತಡೆದುಕೊಂಡು 'ಕಿಡ್' ಜೀವಂತವಿರುವುದೇ ಒಂದು ಅಚ್ಚರಿಯಾಗಿದೆ. ಅದಷ್ಟೇ ಅಲ್ಲದೇ, ಸ್ವಯಂ ಸಕ್ರಿಯಗೊಂಡು ಭೂಮಿಗೆ ಟೆಲಿಮೆಟ್ರಿ ಡೇಟಾ ಕಳುಹಿಸಿರುವುದು ರೋಚಕವಾಗಿದೆ. ತೀವ್ರವಾದ ಶಾಖದ ನಡುವೆಯೂ 3 ನಿಮಿಷಗಳ ಕಾಲ ನಿರಂತರವಾಗಿ ಭೂಕೇಂದ್ರಕ್ಕೆ ಸಂಕೇತಗಳನ್ನು ಕಳುಹಿಸಿದೆ. ಈಗ ಇಸ್ರೊ ಮತ್ತು ಸ್ಪೇನ್ ಬಾಹ್ಯಾಕಾಶ ಸಂಶೋಧನಾ ತಜ್ಞರು ಈಗ ಕ್ಯಾಪ್ಸೂಲ್ ಉಪಗ್ರಹ 'ಕಿಡ್'ನ ಇರುವಿಕೆ ಎಲ್ಲಿ ಕಂಡು ಕೊಂಡು, ಅದರ ಕಕ್ಷೆಯ ಮಾರ್ಗವನ್ನು ಪುನರ್ನಿರ್ಮಿಸಲು ಯತ್ನಿಸುತ್ತಾರೆ. ಕಿಡ್ ಕಳುಹಿಸಿದ ಸಂದೇಶವನ್ನು ಡಿಕೋಡ್ ಮಾಡಿ ವಿವರ ತಿಳಿಯಲು ಯತ್ನಿಸುತ್ತಿದ್ದಾರೆ.

3 ಹಂತದಲ್ಲಿ ವಿಘಟನೆಗೊಳ್ಳದ ಪಿಎಸ್‌ಎಲ್‌ವಿ-ಸಿ62 ಗಗನನೌಕೆಯ ಉಡಾವಣಾ ಯೋಜನೆಯನ್ನು 'ಸಂಪೂರ್ಣ ವೈಫಲ್ಯ' ಎಂದು ಇಸ್ರೊ ಈವರೆಗೂ ಅಧಿಕೃತವಾಗಿ ಘೋಷಿಸದೇ ಇದ್ದರೂ, ಪ್ರಾಥಮಿಕವಾಗಿ 15 ಉಪಗ್ರಹಗಳ ನಷ್ಟವನ್ನು ದೃಢಪಡಿಸಲಾಗಿದೆ.

15 ಉಪಗ್ರಹಗಳು ಏನಾದವು?

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೊ)ಯ ಮಹತ್ವಾಕಾಂಕ್ಷೆಯ ಈ ಉಡ್ಡಯನದ ವೈಫಲ್ಯ ಇಸ್ರೋಗಷ್ಟೇ ಅಲ್ಲದೇ, ಇಡೀ ದೇಶ-ವಿದೇಶದ ಜನರಿಗೆ ಬೇಸರ ಉಂಟು ಮಾಡಿತ್ತು. ಈಗ 'ಕಿಡ್' ಜೀವಂತ ಇರುವುದರಿಂದ ಇಡೀ ಯೋಜನೆಯೇ ವಿಫಲವಾಯಿತು ಎಂದು ಹೇಳುವುದು ತಪ್ಪಿದಂತಾಗಿದ್ದು, ಅಲ್ಪ ಸಮಾಧಾನಕ್ಕೆ ಕಾರಣವಾಗಿದೆ. ಸ್ಪೇನ್ ದೇಶದ ಸ್ಟಾರ್ಟ್‌ಅಪ್(ನವೋದ್ಯಮ) ಕಂಪನಿ 'ಆರ್ಬಿಟಲ್ ಪ್ಯಾರಡೈಮ್'ನ ತಯಾರಿಕೆಯಾದ ಪುಟ್ಟ ಕಿಡ್ ಮಾತ್ರವೇ ಉಳಿದಿದೆಯೇ? ಉಳಿದ 15 ಉಪಗ್ರಹಗಳ ಕಥೆ ಏನಾಯಿತು ಎಂಬುದು ಇನ್ನಷ್ಟೇ ತಿಳಿದುಬರಬೇಕಿದೆ.

ಬೆಂಕಿ ಅವಘಡ ವೇಳೆ ದೆಹಲಿ ನಿವಾಸದಲ್ಲಿ ಹಣವೇ ಇರಲಿಲ್ಲ

ದೆಹಲಿ: ದೆಹಲಿಯ ನಿವಾಸದಲ್ಲಿ 2025ರ ಮಾರ್ಚ್‌ನಲ್ಲಿ ಅಗ್ನಿ ಅವಘಡವಾದಾಗ ನಾನು ಮನೆಯಲ್ಲಿಯೇ ಇರಲಿಲ್ಲ. ಅಲ್ಲದೇ ನನ್ನ ಮನೆಯಲ್ಲಿ ಆಗ ಯಾವುದೇ ಹಣವೂ ಪತ್ತೆ ಆಗಿಲ್ಲ ಎಂದು

ಅಲಹಾಬಾದ್ ಹೈಕೋರ್ಟ್ ನ್ಯಾ.ಯಶವಂತ್ ವರ್ಮಾ, ಸಂಸತ್ತಿನಿಂದ ರಚನೆ ಆಗಿರುವ ಮೂವರು ಸದಸ್ಯರ ಸಮಿತಿಗೆ ಹೇಳಿಕೆ ನೀಡಿದ್ದಾರೆ.

ನ್ಯಾ. ಯಶವಂತ್ ವರ್ಮಾ ಅವರು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಆಗಿದ್ದಾಗ ಅವರಿಗೆ ನೀಡಲಾಗಿದ್ದ ಅಧಿಕೃತ ನಿವಾಸದ ಅಂಗಳದಲ್ಲೇ ಇರುವ ಗೋದಾಮು ರೀತಿಯ ಕೊಠಡಿಯಲ್ಲಿ 2025ರ ಮಾರ್ಚ್‌ನಲ್ಲಿ ಬೆಂಕಿ ಹೊತ್ತಿಕೊಂಡಿತ್ತು. ಆಗ ಅಗ್ನಿಶಾಮಕ ದಳದವರು ಧಾವಿಸಿ ಬಂದು ಬೆಂಕಿ ನಂದಿಸಿದ್ದರು. ಆಗ ಒಂದೆಡೆ ಅರೆಬರೆ ಸುಟ್ಟುಹೋದ 500 ರು. ನೋಟುಗಳು ಕಾಣಬಂದಿದ್ದವು ಎಂದು ಆರೋಪಿಸಲಾಗಿತ್ತು. ಇದು ಭಾರೀ ವಿವಾದಕ್ಕೆ ಕಾರಣವಾಗಿತ್ತು. ಬಳಿಕ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಿ ನ್ಯಾಯಾಲಯ ಕಲಾಪದಿಂದ ದೂರವಿಡಲಾಗಿತ್ತು. ನ್ಯಾ.ವರ್ಮಾ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಆಗ ಮುಖ್ಯ ನ್ಯಾಯಮೂರ್ತಿಯಾಗಿದ್ದ ಸಂಜೀವ್ ಖನ್ನಾ ಅವರು ಮೂವರು ನ್ಯಾಯಮೂರ್ತಿಗಳ ಸಮಿತಿ ರಚಿಸಿ ತನಿಖೆಗೆ ಆದೇಶಿಸಿದ್ದರು. ಸಮಿತಿ ಕೊನೆಗೆ ನ್ಯಾ.ವರ್ಮಾ ವಿರುದ್ಧವೇ ವರದಿ ಸಲ್ಲಿಸಿತ್ತು. ನಂತರ ನ್ಯಾ.ವರ್ಮಾ ರಾಜೀನಾಮೆ ನೀಡದ ಕಾರಣ ಸಂಸತ್ತಿನಲ್ಲಿ ಮಹಾಭಿಯೋಗ ಸಂಬಂಧಿಸಿದ ನಿರ್ಣಯಕ್ಕೆ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು 2025ರ ಆ.12ರಂದು ಅನುಮೋದನೆ ನೀಡಿದ್ದರು. ಈಗ ಸಂಸತ್ತು ರಚಿಸಿರುವ ಮೂವರು ಸದಸ್ಯರ ತನಿಖಾ ಸಮಿತಿ ಪ್ರಕರಣದ ತನಿಖೆ ನಡೆಸುತ್ತಿದೆ.

ಚಿತ್ತವಿಹಾರ

ಬದುಕು ಕಲಿಸುವ ಪಾಠ

ಬದುಕು ಅನುಭವಗಳ ಗೂಡು. ಜೀವನದಲ್ಲಿ ಸುಖ-ದುಃಖ, ಸಂತೋಷ-ಸಹನೆ, ಸ್ನೇಹಗಳಂತಹ ನಾನಾ ಪಾಠಗಳನ್ನು ಜ್ಞಾನದ ದಾರಿ ತೋರುವ ಕಲಿಕೆಯೇ ಅನುಭವ.

ಬದುಕು ಕಲಿಸಿದ ಪಾಠಗಳಿಂದ ಪ್ರಬುದ್ಧನಾದವನು ಬದುಕಿಗೆ ಕೃತಜ್ಞತೆ ತೋರುತ್ತಾ, ಬದುಕಿನ ಬುತ್ತಿಯಿಂದ ಮುಂದಿನ ಪೀಳಿಗೆಗೆ ಅನುಭವಗಳ ತುತ್ತುಗಳನ್ನು ಉಣ ಬಡಿಸುತ್ತಾನೆ. ಕೆಲವೊಮ್ಮೆ ಅನುಭವಗಳ ಒಂದೊಂದು ತುತ್ತು ಅರಗಿಸಲಾಗದ ಕುತ್ತಾಗುತ್ತದೆ. ಜಗತ್ತು ಎಷ್ಟೇ ಮುಂದುವರೆದರೂ ನಮ್ಮ ಪೂರ್ವಜರ ಕೊಡುಗೆ ಅತ್ಯಮೂಲ್ಯ. ಮನೆಗಳಲ್ಲಿ ಹಿರಿಜೀವಗಳ ಜೊತೆ ಸಮಯ ಕಳೆಯುತ್ತಿವಲ್ಲ ಅದೇ ಸಂಪತ್ತು, ಸಾರ್ಥಕತೆ. ಕೆಲವೊಮ್ಮೆ ಅವರ ಆಲೋಚನೆಗಳು ಹಿಂದಿನ ಕಾಲದವರದ್ದು ಎಂದು ನಿರ್ಲಕ್ಷ್ಯಿಸಬಹುದು, ಅವರ ಮಾತು ಕಿರಿಕಿರಿ ಎನಿಸಬಹುದು, ಅವರ ಮಾರ್ಗದರ್ಶನ ನಮಗೆ ಮುಳ್ಳಾದಂತೆ ಭಾಸವಾಗಬಹುದು. ಕಾಲ ಬದಲಾದಂತೆ ನಮ್ಮನ್ನು ನಾವು ಬದಲಾಯಿಸಿಕೊಂಡ ರೀತಿ ಇದಾಗಿದೆ. ಹಿರಿಯರ ಕುರಿತು ಗೌರವವಿಲ್ಲ, ಕಿರಿಯರ ಬಗ್ಗೆ ಪ್ರೀತಿ ಇಲ್ಲ. ಬದುಕಿನಲ್ಲಿ ನಾವು ಅವರಿವರ ತಪ್ಪುಗಳು ಹುಡುಕುವಲ್ಲಿ ಹಿಂದುಳಿದು ಬಿಡುತ್ತೇವೆ. ಈಗ ಈ ಜಗತ್ತಲ್ಲಿ ಹೆಚ್ಚಿನವರು ಯಾವ ಮಟ್ಟಿಗೆ ಬಂದು ನಿಂತಿದ್ದಾರೆ ಎಂದರೆ ಇಲ್ಲಿ ತಪ್ಪನ್ನು ತಪ್ಪು ಎನ್ನುವುದೇ ತಪ್ಪಾಗಿದೆ. ಸರಿಯನ್ನು ಸರಿ ಎನ್ನುವುದು ಸರಿ, ಆದರೆ ತಪ್ಪನ್ನು ತಪ್ಪು ಎನ್ನುವುದು ತಪ್ಪು. ಹಗಲು ಸತ್ತು ಹೋದ ಊರಲ್ಲಿ ಕತ್ತಲು ಅಮರವಾಗುವಂತೆ ಸತ್ಯಕ್ಕೆ ತಾತ್ಸಾರವಿದ್ದಲ್ಲಿ ಸುಳ್ಳು ಬಿಗುತ್ತಿರುತ್ತದೆ. ಕತ್ತಲಲ್ಲಿ ಬದುಕನ್ನು ಕಂಡುಕೊಂಡವನಿಗೆ ಬೆಳಕೆಂದರೆ ಭಯ, ಮನರಂಜನೆ ಗಾಗಿಯೇ ಬದುಕು ಮುಡಿಪಾಗಿಟ್ಟವರಿಗೆ ಗಾಂಭೀರ್ಯತೆಯ ಗತ್ತು ಎಲ್ಲಿಂದ ಬರಬೇಕು..?

ಇಟ್ಟಿಗೆಯ ಏಟಿಗೆ ಕಲ್ಲಿಂದ ಹೊಡಿಯುತ್ತೇವೆ, ಅವರ ತಪ್ಪಿಗೆ ಅವರಿಗಿಂತ ದೊಡ್ಡ ತಪ್ಪು ಮಾಡುತ್ತೇವೆ. ತಪ್ಪನ್ನು ತಪ್ಪಿಂದ ತಿದ್ದಲಾಗುವುದಿಲ್ಲ. ತಪ್ಪನ್ನು ತಪ್ಪು ಎಂದು ಹೇಳುವುದು ತಪ್ಪಲ್ಲ, ಅದು ಮುಖ್ಯವಾಗಿ ಸಮಾಜದ ಸ್ಥಿರತೆ ಮತ್ತು ನೀತಿಶಾಸ್ತ್ರದ ದೃಷ್ಟಿಯಿಂದ ಅವಶ್ಯಕ, ಆದರೆ ಅದನ್ನು ಹೇಗೆ ಹೇಳಲಾಗುತ್ತದೆ ಮತ್ತು ಪರಿಸ್ಥಿತಿಯ ಮೇಲೆ ಅವಲಂಬಿತವಾಗುತ್ತದೆ.

ಕೆಲವೊಮ್ಮೆ ತಪ್ಪನ್ನು ತಪ್ಪು ಎಂದು ಹೇಳಿ ತಪ್ಪಾಗಿ ಅರ್ಥೈಸಿಕೊಳ್ಳಬಹುದು ಅಥವಾ ಹೇಳುವ ವಿಧಾನದಿಂದ ವಿವಾದಗಳು ಉಂಟಾಗಬಹುದು. ಆದರೆ ಮೂಲಭೂತವಾಗಿ ಸತ್ಯವನ್ನು ಹೇಳುವುದು ಮುಖ್ಯ ಮತ್ತು ಬುದ್ಧಿವಂತರು ತಪ್ಪುಗಳನ್ನು ತಮ್ಮಲ್ಲಿಟ್ಟುಕೊಳ್ಳದೆ, ಸರಿ ಮತ್ತು ತಪ್ಪುಗಳ ನಡುವೆ ವ್ಯತ್ಯಾಸ ಮಾಡುತ್ತಾರೆ. ಬದುಕು ಅನುಭವಗಳ ಗೂಡು. ಹದಿಹರೆಯದ ಮನವೇ ಹಾದಿ ತಪ್ಪದಿರು ಎಂಬಿತ್ಯಾದಿ ಹಿರಿಯರ ಅನುಭವದ ಮಾತುಗಳು ಜೀವನದ ಸತ್ಯಗಳನ್ನು ತಿಳಿಸುತ್ತವೆ. ಕೆಲಸದ ಮಹತ್ವ, ಕುಟುಂಬ ಒಗ್ಗಟ್ಟು, ಶಿಸ್ತು, ವಸ್ತ್ರವಿನ್ಯಾಸ ಹಾಗೂ ಜೀವನದ ಮೌಲ್ಯಗಳ ಬಗ್ಗೆ ಮಾರ್ಗದರ್ಶನ ನೀಡುತ್ತವೆ. ಅವರ ಮಾತುಗಳಿಗೆ ಮೂಗು ಮೂರಿಯುವುದಕ್ಕಿಂತ ಆಲಿಸುವುದು ಕಲಿಯೋಣ, ಏಕೆಂದರೆ ಕೇಳಿಸಿಕೊಂಡರಾಗುವ ನಷ್ಟಗಳೇನಿಲ್ಲ

ಎಲ್ಲರೊಳಗೊಂದಾಗುವ ಮಾತು ಕಲಿಯೋಣ, ಮಾತಿನ ಮರ್ಮವನ್ನೂ ಅರಿಯೋಣ..!

ಸಂಕ್ರಾಂತಿ ನಾಡಿನೆಲ್ಲೆಡೆ ಸುಗ್ಗಿ ಸಂಭ್ರಮ

ದೇಶಾದ್ಯಂತ ಆಚರಿಸಲಾಗುವ ಅಪರೂಪದ ಭಾರತೀಯ ಹಬ್ಬಗಳಲ್ಲಿ ಮಕರ ಸಂಕ್ರಾಂತಿ ಹಬ್ಬವೂ ಒಂದಾಗಿದೆ. ರಾಜ್ಯದಿಂದ ರಾಜ್ಯಕ್ಕೆ ಸಂಪೂರ್ಣವಾಗಿ ಇದು ವಿಭಿನ್ನವಾಗಿ ಕಾಣುತ್ತದೆ. ಮೂಲ ಕಲ್ಪನೆ ಒಂದೇ ಆಗಿದ್ದರೂ, ಸೂರ್ಯನ ಉತ್ತರಾಭಿಮುಖ ಪ್ರಯಾಣ ಮತ್ತು ಸುಗ್ಗಿ ಆಚರಣೆ, ಪ್ರಾದೇಶಿಕ ಪದ್ಧತಿಗಳು, ಆಹಾರಗಳು ಮತ್ತು ಆಚರಣೆಗಳು ಹಬ್ಬಕ್ಕೆ ಅದರ ಶ್ರೀಮಂತಿಕೆಯ ವೈವಿಧ್ಯತೆಯನ್ನು ನೀಡುತ್ತವೆ. ಇಂದು ಸಂಕ್ರಾಂತಿ ಹಬ್ಬದ ಸಂಭ್ರಮ-ಸಡಗರ, ಆ ಹಿನ್ನೆಲೆಯಲ್ಲಿ ಈ ವಿಶೇಷ ಲೇಖನ.

● ಸುರೇಂದ್ರ ಪೈ, ಭಟ್ಕಳ

ಭಾರತದಲ್ಲಿ ಸುಗ್ಗಿ ಕಾಲದ ಆರಂಭವನ್ನು ಹೊಸ ವರ್ಷದ ಸಂಭ್ರಮವನ್ನಾಗಿ ಆಚರಿಸಲಾಗುತ್ತದೆ. ಹಿಂದೂ ಧರ್ಮೀಯರು ಆಚರಿಸುವ ಪ್ರಮುಖ ಹಬ್ಬಗಳಲ್ಲಿ ಮಕರ ಸಂಕ್ರಾಂತಿಯೂ ಒಂದು. ಇದು ಕ್ಯಾಲೆಂಡರ್ ಹೊಸ ವರ್ಷದ ಮೊದಲ ಹಬ್ಬವಾಗಿ ಆಚರಿಸಲಾಗುತ್ತದೆ. ಮಕರ ಸಂಕ್ರಾಂತಿಯು ಕೇವಲ ಆಚರಣೆಯಲ್ಲ, ಅದಕ್ಕೆ ಖಗೋಳಶಾಸ್ತ್ರದ ಮಹತ್ವವೂ ಇದೆ. ಸೌರಮಾನ ಪದ್ಧತಿಯನ್ನು ಆಧರಿಸಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಇದು ಸೂರ್ಯನು ದಕ್ಷಿಣಾಯನದಿಂದ ಉತ್ತರಾಯಣಕ್ಕೆ (ಉತ್ತರ ದಿಕ್ಕಿಗೆ) ಚಲಿಸಲು ಪ್ರಾರಂಭಿಸುವ ಪುಣ್ಯಕಾಲವಾಗಿದೆ. ಹಿಂದೂ ಪಂಚಾಂಗದ ಪ್ರಕಾರ, ಸೂರ್ಯನು ಮಕರ ರಾಶಿಗೆ ಪ್ರವೇಶಿಸುವ ಈ ದಿನವನ್ನು ಅತ್ಯಂತ ಶುಭದಿನವೆಂದು ಪರಿಗಣಿಸಲಾಗುತ್ತದೆ.ಈ ಶುಭ ಸಂದರ್ಭವನ್ನೇ 'ಮಕರ ಸಂಕ್ರಾಂತಿ' ಎಂದು ಕರೆಯಲಾಗುತ್ತದೆ. ಮಕರ ಸಂಕ್ರಾಂತಿಯಂದು ಎಳ್ಳು-ಬೆಲ್ಲ ಬೀರುವುದಕ್ಕೆ, ಪವಿತ್ರ ಸ್ನಾನಕ್ಕೆ, ಸೂರ್ಯ ಪೂಜೆಗೆ, ದಾನ ಮಾಡುವುದಕ್ಕೆ ವಿಶೇಷ ಮಹತ್ವವನ್ನು ನೀಡಲಾಗಿದೆ.

ಸಂಕ್ರಾಂತಿ ವಿಶೇಷತೆ

ಕರ್ನಾಟಕದಲ್ಲಿ ಸಂಕ್ರಾಂತಿಯಂದು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವಾಗ 'ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡಿ' ಎಂದು ಹೇಳುವುದು ರೂಢಿ. ಕಡಲೆಕಾಯಿ ಬೀಜ, ಹುರಿಗಡಲೆ, ಕೊಬ್ಬರಿ ಮತ್ತು ಬೆಲ್ಲದ ಮಿಶ್ರಣವಾದ ಈ ಎಳ್ಳು-ಬೆಲ್ಲ ಆರೋಗ್ಯಕರವೂ ಹೌದು.

ಮಂಡ್ಯ ಮತ್ತು ಮೈಸೂರು ಭಾಗಗಳಲ್ಲಿ ಕಿಚ್ಚು ಹಾಯಿಸುವುದು ಎಂಬ ರೋಮಾಂಚಕ ಆಚರಣೆ ನಡೆಯುತ್ತದೆ. ರೈತರು ತಮ್ಮ ಜಾನುವಾರುಗಳನ್ನು ಬಣ್ಣದ ಬಟ್ಟೆ ಮತ್ತು ಆಭರಣಗಳಿಂದ ಅಲಂಕರಿಸಿ, ಮೆರವಣಿಗೆಯ ಮೂಲಕ ಕರೆತಂದು ಬೆಂಕಿಯ ಮೇಲೆ ಹಾಯಿಸುತ್ತಾರೆ. ಇದು ಗ್ರಾಮಕ್ಕೆ ಮತ್ತು ಜನರಿಗೆ ಒಳಿತನ್ನು ತರುತ್ತದೆ ಎಂಬ ನಂಬಿಕೆಯಿದೆ. ಈ ದೃಶ್ಯವನ್ನು ನೋಡಲು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸುತ್ತಾರೆ.

ವೈವಿಧ್ಯಮಯ ಸಂಕ್ರಾಂತಿ

ದೇಶಾದ್ಯಂತ ಆಚರಿಸಲಾಗುವ ಅಪರೂಪದ ಭಾರತೀಯ ಹಬ್ಬಗ ಳಲ್ಲಿ ಮಕರ ಸಂಕ್ರಾಂತಿ ಹಬ್ಬವೂ ಒಂದಾಗಿದೆ. ಆದರೂ ರಾಜ್ಯದಿಂದ ರಾಜ್ಯಕ್ಕೆ ಸಂಪೂರ್ಣವಾಗಿ ಇದು ವಿಭಿನ್ನವಾಗಿ ಕಾಣುತ್ತದೆ. ಮೂಲ ಕಲ್ಪನೆ ಒಂದೇ ಆಗಿದ್ದರೂ, ಸೂರ್ಯನ ಉತ್ತರಾಭಿಮುಖ ಪ್ರಯಾಣ ಮತ್ತು ಸುಗ್ಗಿಯನ್ನು ಆಚರಿಸುವುದು, ಪ್ರಾದೇಶಿಕ ಪದ್ಧತಿಗಳು, ಆಹಾರಗಳು ಮತ್ತು ಆಚರಣೆಗಳು ಹಬ್ಬಕ್ಕೆ ಅದರ ಶ್ರೀಮಂತ ವೈವಿಧ್ಯತೆಯನ್ನು ನೀಡುತ್ತವೆ.

ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ 'ಸಂಕ್ರಾಂತಿ ಹಬ್ಬ', ಗುಜರಾತ್‌ನಲ್ಲಿ 'ಉತ್ತರಾಯಣ', ತಮಿಳುನಾಡಿನಲ್ಲಿ 'ಪೊಂಗಲ್', ಪಂಜಾಬ್ ಮತ್ತು ಉತ್ತರ ಭಾರತದಲ್ಲಿ 'ಲೋಹ್ರಿ', ಅಸ್ಸಾಂನಲ್ಲಿ 'ಮಾಘ ಬಿಹು' , ಪಶ್ಚಿಮ ಬಂಗಾಳನ 'ಪೌಷ್ ಪರ್ಬನ್', ಜಾರ್ಖಂಡ್ ಮತ್ತು ಬಿಹಾರನ 'ಖಿಚಡಿ ಪರ್ವ್' ಎಂಬ ಹೆಸರಿನಲ್ಲಿ ಸಂಭ್ರಮ, ಸಡಗರದಿಂದ ಆಚರಿಸುತ್ತಾರೆ. ಮಕರ ಸಂಕ್ರಾಂತಿಯ ಮುಂದಿನ ದಿನವನ್ನು ಕರಿದಿನ ಅಥವಾ ಕಿಂಕ್ರಾಂತ ಎಂದು ಕರೆಯಲಾಗುತ್ತದೆ. ಸಂಕ್ರಾಂತಿ ದೇವತೆಯನ್ನು ಹೊರತುಪಡಿಸಿ, ಮಕರ ಸಂಕ್ರಾಂತಿಯನ್ನು ಭಾರತದ ಎರಡು ಮಹಾಕಾವ್ಯ ಗ್ರಂಥಗಳಾದ ಪುರಾಣಗಳು ಮತ್ತು ಮಹಾಭಾರತದಲ್ಲಿ ಉಲ್ಲೇಖಿಸಲಾಗಿದೆ. ಕೆಲವು ನಂಬಿಕೆಗಳ ಪ್ರಕಾರ, ವೈದಿಕ ಋಷಿ ವಿಶ್ವಾಮಿತ್ರನು ಈ ಹಬ್ಬವನ್ನು ಆಚರಿಸಲು ಪ್ರಾರಂಭಿಸಿದನು ಮತ್ತು ಮಹಾಭಾರತದಲ್ಲಿ ಪಾಂಡವರು ತಮ್ಮ ವನವಾಸದ ಸಮಯದಲ್ಲಿ ಈ ಹಬ್ಬವನ್ನು ಆಚರಿಸಿದರು ಎನ್ನುವ ನಂಬಿಕೆಯೂ ಇದೆ.

ಸಂಕ್ರಾಂತಿ: ಪುರಾಣ ಹಿನ್ನೆಲೆ

ಪುರಾಣಗಳ ಪ್ರಕಾರ ಸಂಕ್ರಾಂತಿ ಹಬ್ಬದ ಹಿಂದೆ ಒಂದು ಸುಂದರವಾದ ಕಥೆಯಿದೆ. ಸೂರ್ಯದೇವ ಮತ್ತು ಆತನ ಮಗನಾದ ಶನಿದೇವನ (ಮಕರ ರಾಶಿಯ ಅಧಿಪತಿ) ನಡುವೆ ಮನಸ್ತಾಪವಿತ್ತು. ಇದರಿಂದಾಗಿ ಸೂರ್ಯನು ದಕ್ಷಿಣ ಪಥದಲ್ಲಿದ್ದಾಗ ಭೂಮಿಯ ಮೇಲೆ ಬರಗಾಲ ಮತ್ತು ಕತ್ತಲೆ ಆವರಿಸಿತ್ತು. ಆಗ ಬ್ರಹ್ಮಾಂಡದ ರಕ್ಷಕ ದೇವತೆಗಳು ಸೂರ್ಯನನ್ನು ಪ್ರಾರ್ಥಿಸಿ, ಶನಿಯ ಕ್ಷೇತ್ರವಾದ ಮಕರ ರಾಶಿಯನ್ನು ಪ್ರವೇಶಿಸುವಂತೆ ವಿನಂತಿಸಿದರು. ಸಂಕರಾಸುರನಂತಹ ರಾಕ್ಷಸರು ಈ ಪಥವನ್ನು ತಡೆದಾಗ, ವಿಷ್ಣುವಿನ ತೇಜಸ್ಸಿನಿಂದ ಜನಿಸಿದ ದೇವತೆಯು ಆ ರಾಕ್ಷಸರನ್ನು ಸಂಹರಿಸಿ ದಾರಿಯನ್ನು ಸುಗಮಗೊಳಿಸಿದಳು. ಸೂರ್ಯನು ತನ್ನ ಮಗನಾದ ಶನಿಯ ಮನೆಗೆ (ಮಕರ ರಾಶಿ) ಭೇಟಿ ನೀಡಿದ ಈ ದಿನವೇ ಮಕರ ಸಂಕ್ರಾಂತಿ. ಈ ತಂದೆ-ಮಗನ ಮಿಲನವು ಭೂಮಿಯ ಮೇಲೆ ಶಾಂತಿ ಮತ್ತು ಸಮೃದ್ಧಿಯನ್ನು ತಂದಿತು. ಇದೇ ದಿನ ಭಗೀರಥನ ತಪಸ್ಸಿಗೆ ಮೆಚ್ಚಿ ಗಂಗೆಯು ಭೂಮಿಗೆ ಇಳಿದು ಬಂದಳು ಎಂಬ ಪ್ರತೀತಿ ಇದೆ.

ಜ್ಞಾನ ನಮ್ಮನ್ನು ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುತ್ತದೆ. ಜ್ಞಾನವಿದ್ದರೆ ಸರಿಯಾದ ರೀತಿಯಲ್ಲಿ ಹಣ ಸಂಪಾದನೆ ಮಾಡಬಹುದು, ಸರಿಯಾದ ರೀತಿಯಲ್ಲಿ ಜೀವನ ಮಾಡಬಹುದು, ಉಳಿಸಬಹುದು, ಆಸ್ತಿ ಮಾಡಬಹುದು.

ಜ್ಞಾನಾಧಾರಿತ ಜೀವನ ಕ್ರಮ

● ಬೇಲೂರು ರಾಮಮೂರ್ತಿ

ಉದ್ಯೋಗಂ ಪುರುಷ ಲಕ್ಷಣಂ ಎನ್ನುವ ಮಾತಿದೆ. ಆದರೆ ಯಾವುದೇ ಒಬ್ಬ ವ್ಯಕ್ತಿಯ ಜೀವನದಲ್ಲಿ ಮೊದಲಿಂದ ಕೊನೆಯವರೆಗೂ ಒಂದೇ ರೀತಿಯ ಉದ್ಯೋಗದಲ್ಲಿ ಇರುವವರು ಬಹಳ ಕಡಿಮೆ. ಹೀಗಾಗಿ ಆಗಾಗ ಬದಲಾಗುವ ಉದ್ಯೋಗದ ರೀತಿ ನೀತಿಗಳಿಗೆ ಹೊಂದಿಕೊಳ್ಳುವುದು ಅವಶ್ಯಕ. ತಿಂಗಳ ಸಂಬಳದ ಉದ್ಯೋಗ ಮಾಡುತ್ತಿರುವವರು ಕೆಲಸ ಬಿಟ್ಟು ಸ್ವಂತ ಉದ್ಯೋಗ ಮಾಡುತ್ತಾರೆ. ಆಗ ಅವರ ಕೆಲಸದ ಅವಧಿಯೂ, ಜವಾಬ್ದಾರಿಯೂ ಹೆಚ್ಚಿದ್ದರೂ ನಿರೀಕ್ಷಿಸಿದ ಆದಾಯ ಬರುವುದಿಲ್ಲ, ಅದಕ್ಕೆ ಹೊಂದಿಕೊಳ್ಳಬೇಕು. ವ್ಯಾಪಾರಸ್ಥರೂ ಸಹ ಒಂದೇ ರೀತಿಯ ವ್ಯಾಪಾರಕ್ಕೆ ಅಂಟಿಕೊಳ್ಳದೇ, ಆಗಾಗ ವ್ಯಾಪಾರದ ವಸ್ತುಗಳನ್ನು ಬದಲಾಯಿಸುತ್ತಾ ಇರುತ್ತಾರೆ. ಇಂತಹ ಸಂದರ್ಭಗಳಲ್ಲಿ ಅಂತಹವರ ಬದುಕು ಏರಿಳಿತಕ್ಕೆ ಸಿಕ್ಕಿಕೊಳ್ಳುತ್ತದೆ. ಏನೇ ಆಗಲಿ ಮನುಷ್ಯ ಒಂದಲ್ಲ ಒಂದು ಕರ್ತವ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವುದು ಅವಶ್ಯಕ, ಇಲ್ಲದಿದ್ದರೆ ಏನು ಎನ್ನುವುದನ್ನು ಸರ್ವಜ್ಞ ತನ್ನ ವಚನದಲ್ಲಿ ಬಹಳ ಸೊಗಸಾಗಿ ಹೇಳಿದ್ದಾನೆ.

ಕಾಯಕವು ಉಳ್ಳವಕ ನಾಯಕನು ಎನಿಸಪ್ಪ
ಕಾಯಕವು ತೀರ್ಧ ಮರುದಿನವೇ ಸುಡುಗಾಡ
ನಾಯಕನು ಎನಿಪ್ಪ ಸರ್ವಜ್ಞ

ಅಂದರೆ ಪುರುಷ ಎಂದ ಮೇಲೆ ಒಂದಲ್ಲ ಒಂದು ಉದ್ಯೋಗದಲ್ಲಿ ತೊಡಗಿಕೊಂಡಿರುವುದು ಒಳ್ಳೆಯದು. ಹಾಗೆಯೇ ಯಾವುದಾದರೊಂದು ಉದ್ಯೋಗದಲ್ಲಿ ತೊಡಗಿಕೊಂಡಿರುವವನನ್ನು ನಾಯಕ ಎನ್ನುತ್ತಾರೆ, ಆದರೆ ಕಾಯಕವನ್ನು ಬಿಟ್ಟು ಅಥವಾ ಅವನಿಗೆ ಉದ್ಯೋಗದ ಋಣ ತೀರಿದ ಮರುಕ್ಷಣವೇ ಅವನನ್ನು ಸುಡುಗಾಡಿಗೆ ನಾಯಕ ಎನ್ನುತ್ತಾರೆ ಎಂದು ಸರ್ವಜ್ಞ ಹೇಳುತ್ತಾನೆ.

ಇನ್ನೊಂದು ವಚನದಲ್ಲಿ ನಮಗೆ ಯಾವ ಯಾವ ಸಮಯಕ್ಕೆ ಯಾವ ಯಾವ ರೀತಿಯ ಜ್ಞಾನ ಇರಬೇಕೋ ಅದು ಇರಬೇಕು. ಸಾಫ್ಟ್‌ವೇರ್ ಇಂಜಿನಿಯರ್ ಎಂದುಕೊಂಡವನು ಎಮ್ಮೆ ಮೇಯಿಸೋಕೆ ಹೋಗಬಾರದು. ಎಮ್ಮೆ ಮೇಯಿಸುವವನು ಅಡುಗೆ ಕೆಲಸಕ್ಕೆ ಹೋಗಬಾರದು. ಯಾವ ಕೆಲಸವೋ ಅದಕ್ಕೆ ತಕ್ಕ ಜ್ಞಾನ, ಯಾವ ಜ್ಞಾನವೋ ಅದಕ್ಕೆ ತಕ್ಕ ಕೆಲಸ ಎನ್ನುವುದನ್ನು ಈ ವಚನದಲ್ಲಿ ಬಹು ಸೊಗಸಾಗಿ ಹೇಳಿದ್ದಾನೆ.

ಜ್ಞಾನದಿಂದಲಿ ಇಹವು, ಜ್ಞಾನದಿಂದಲಿ ಪರವು
ಜ್ಞಾನವಿಲ್ಲದೆಲೆ ಸಕಲವೂ ತನಗಿದ್ದು
ಹಾನಿ ಕಾಣಯ್ಯ ಸರ್ವಜ್ಞ

ಮನುಷ್ಯನ ಉನ್ನತಿಗೆ ಹಣ, ಆಸ್ತಿ, ಅಂತಸ್ತು ಇವುಗಳಿಗಿಂತ ಜ್ಞಾನವೇ ಬಹಳ ಮುಖ್ಯ ಅಲ್ಲವೇ? ಜ್ಞಾನವಿದ್ದರೆ ಸರಿಯಾದ ರೀತಿಯಲ್ಲಿ ಹಣ ಸಂಪಾದನೆ ಮಾಡಬಹುದು, ಸರಿಯಾದ ರೀತಿಯಲ್ಲಿ ಜೀವನ ಮಾಡಬಹುದು, ಉಳಿಸಬಹುದು, ಆಸ್ತಿ ಮಾಡಬಹುದು. ಎಲ್ಲವೂ ಜ್ಞಾನದಿಂದ. ಹೀಗೆ ಜ್ಞಾನ ನಮ್ಮನ್ನು ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುತ್ತದೆ. ಜ್ಞಾನ ತೋರಿಸುವ ಬೆಳಕಿನಿಂದ ನಾವು ಎಲ್ಲಿ ಉದ್ಯೋಗ ಮಾಡಬೇಕೋ, ಇಲ್ಲ ಸ್ವಂತ ಉದ್ಯೋಗ ಮಾಡಬೇಕೋ, ಇರುವ ಹಣವನ್ನು ಬಳಸಿ ಅದನ್ನು ಬೆಳೆಸುವುದು ಹೇಗೆ, ಎಲ್ಲೆಲ್ಲಿ ಹೂಡಿಕೆ ಮಾಡಬಹುದು ಇವೆಲ್ಲದಕ್ಕೂ ಮೂಲ ಜ್ಞಾನ. ಇಂತಹ ಜ್ಞಾನ ನಮ್ಮಲ್ಲಿ ಬೆಳೆಯಲಿ ಎನ್ನುವುದೇ ಆಶಯ.

ಆಹಾರ ಸೇವನೆ ಎಂಬ ಧ್ಯಾನ

● ವಿದ್ಯಾಶಂಕರ ಶರ್ಮ

ದೇಹ ಪೋಷಣೆಗಾಗಿ ಆಹಾರದ ಅವಶ್ಯಕತೆ ಇರುವುದು ಈ ಸೃಷ್ಟಿಯ ರಹಸ್ಯವಾಗಿದೆ. ಹಸಿವು ನಮ್ಮ ಎಲ್ಲ ಹೋರಾಟಗಳ ಬೇರಾಗಿದೆ. ಶ್ರಮದಿಂದ ಸಂಪಾದಿಸಿದ ಆಹಾರಕ್ಕೆ ನಮ್ಮ ಗೌರವ ಸಲ್ಲಲೇಬೇಕು. ನಮ್ಮ ಎಲ್ಲ ಕೆಲಸದಂತೆ ನಮ್ಮ ಆಹಾರ ಸೇವನೆ ಎಂಬುದು ಒಂದು ಧ್ಯಾನದಂತಿರಬೇಕು ಎಂದು ಬಲ್ಲವರು ಹೇಳುತ್ತಾರೆ. ಊಟ, ಉಪಹಾರಗಳನ್ನು ಮಾಡುವಾಗ ನಾವು ಅನೇಕ ವಿಷಯಗಳ ಕಡೆ ಗಮನಹರಿಸಬೇಕು. ನಮ್ಮ ಮನಸ್ಸು ಪ್ರಶಾಂತವಾಗಿರಬೇಕು.

ಭಾವೋದ್ರೇಕ, ದುಃಖ,ಅಸಮಾಧಾನ ಇರುವಂತಹ ಮನಸ್ಥಿತಿಯಲ್ಲಿ ನಾವು ಆಹಾರ ಸೇವನೆ ಮಾಡಬಾರದು. ಭಾವಾವೇಶಗಳು ಇರುವಾಗ ನಮ್ಮ ದೈಹಿಕ ಸ್ಥಿತಿಯು ಆಹಾರವನ್ನು ಸ್ವೀಕರಿಸಲು ಯೋಗ್ಯವಾಗಿರುವುದಿಲ್ಲ. ಹಾಗಾಗಿ ಶಾಂತ ಚಿತ್ತ ಬಹು ಅವಶ್ಯಕ. ದಿನವೂ ಆಹಾರದ ತಟ್ಟೆಯ ಮುಂದೆ ಕುಳಿತಾಗ, ಅಂದಿನ ಆಹಾರಕ್ಕಾಗಿ ಸೃಷ್ಟಿಕರ್ತನನ್ನು, ಪ್ರಕೃತಿಯನ್ನು ನಮಸ್ಕರಿಸಿ ಊಟ ಉಪಹಾರಗಳನ್ನು ಪ್ರಾರಂಭ ಮಾಡುವ

ಸಂಸ್ಕೃತಿ ನಮ್ಮದಾಗಿದೆ. ನಮ್ಮ ಭೋಜನ ವಿಧಿಗಳಲ್ಲಿ, ದೇವತೆಗಳಿಗೆ ಅನ್ನವನ್ನು ಸಮರ್ಪಿಸುವ ಪದ್ಧತಿ ಇದೆ. ಎರಡು ಹೊತ್ತಿನ ಆಹಾರವನ್ನು ಪಡೆಯಲು ಶಕ್ಯವಾಗದ ಬಹಳಷ್ಟು ಜನರು ಇಂದು ಜಗತ್ತಿನಲ್ಲಿದ್ದಾರೆ. ಹಾಗಾಗಿ ನಮಗೆ ದೊರೆತ ಆಹಾರದ ಬೆಲೆ ನಮಗೆ ಗೊತ್ತಿರಬೇಕು, ಅದರೆಡೆಗೆ ಕೃತಜ್ಞತಾ ಭಾವ ಇರಲೇ ಬೇಕು. ಆಹಾರ ಸೇವನೆಯ ಸಮಯದಲ್ಲಿ ಮೌನವಾಗಿ, ಮಿತ ಭಾಷಿಯಾಗಿ, ಬೇರೆ ಯಾವ ಕೆಲಸವನ್ನೂ ಮಾಡದೆ ಇರುವಂತಹ ಮೇಲ್ಪಂಕ್ತಿಯನ್ನು ನಮ್ಮ ಹಿರಿಯರು ಹಾಕಿಕೊಟ್ಟಿದ್ದಾರೆ. ಇದು ಆಹಾರದೆಡೆಗೆ ಗೌರವ ಸೂಚಿಸುವ ಪರಿಯಾಗಿದೆ.

ನಮ್ಮ ಜೀವನ ಶೈಲಿ ಬದಲಾಗಿದೆ, ಆದರೆ ಕೆಲವು ಮೂಲಭೂತವಾದ ರೀತಿ ನೀತಿಗಳನ್ನು ಬದಲಾವಣೆಯ ಹೆಸರಿನಲ್ಲಿ ಗಾಳಿಗೆ ತೂರುವುದು ನಮಗೆ ಶ್ರೇಯಸ್ಸು ತಾರದು. ಆಹಾರ ಸೇವನೆಯಲ್ಲಿ ನಾವು ಗಮನಿಸಬೇಕಾದ ಶಿಸ್ತು ಬಹು ಮುಖ್ಯ. ಅನಿಯಮಿತವಾದ ಆಹಾರ ಕ್ರಮ ಬಹುವಾದ ಆರೋಗ್ಯ ಸಮಸ್ಯೆಗಳನ್ನು ತಂದೊಡ್ಡಿದೆ ಎಂಬುದನ್ನು ಆಹಾರ ತಜ್ಞರು, ವೈದ್ಯರು ಹೇಳುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ಕೆಲಸ ಕಾರ್ಯಗಳು ಪ್ರಾಧಾನ್ಯತೆ ಪಡೆದಿರಬಹುದು, ಆದರೆ ನಾವು ಒಂದು ವಿಷಯವನ್ನು ಇಲ್ಲಿ ಮರೆಯುತ್ತಿದ್ದೇವೆ, ನಮ್ಮ ಆರೋಗ್ಯ ಸುಸ್ಥಿತಿಯಲ್ಲಿದ್ದರೆ ಮಾತ್ರ ನಾವು ನಮ್ಮ ಕರ್ತವ್ಯಗಳನ್ನು ದಕ್ಷವಾಗಿ ಪೂರ್ಣಗೊಳಿಸಲು ಸಾಧ್ಯ. ಹಾಗಾಗಿ ಸಮಯಕ್ಕೆ ಸರಿಯಾಗಿ ಹಿತಮಿತವಾದ ಆಹಾರ ಸೇವನೆ, ಆಹಾರ ಸೇವನೆಯ ಸಮಯದಲ್ಲಿ ಶಾಂತಿ, ಸಮಾಧಾನ, ತಿನ್ನುವುದರ ಮೇಲೆಯೇ ಏಕಾಗ್ರತೆ, ಜಂಗಮವಾಣಿ, ದೂರದರ್ಶನಗಳಿಂದ, ಗಣಕಯಂತ್ರಗಳಂತಹ ಪರಿಕರ ಗಳಿಂದ ಹೊರತಾದ ಪರಿಸರದಲ್ಲಿ ಕುಳಿತುಕೊಳ್ಳುವುದು ಮುಂತಾದವುಗಳನ್ನು ಸಾಧ್ಯವಾದ ಮಟ್ಟಿಗೆ ಮಾಡಲೇ ಬೇಕಾಗಿದೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಟೆ



ಎಡದಿಂದ ಬಲಕ್ಕೆ

1. ಭೂಮಿಗೆ ಮತ್ತೊಂದು ಹೆಸರಿದು (3)
3. ಸಾಬೂನು ತರುವಾಗ ಹೇಳಿದ ನೆಪವೇ? (3)
5. ಸಲಾಮು ಹೊಡೆದರೂ ಹಾಕಲೇಬೇಕಾದ ಕಡಿವಾಣ (3)
7. ಪಾವತಿ ಅಥವಾ ಸಲ್ಲಿಸುವುದು (3)
9. ಕ್ಯಾಲೆಂಡರಿನಲ್ಲಿ ನೋಡಿದ ತಾರೀಖು (3)
12. ಅವನು ತೋರಿದ ಸಂದೇಹ (4)
13. ಆತನ ಕುಲ (4)
15. ಗುಮಾನಿಯಿಂದ ನೋಡಿದ ಹೆಂಗಸು (3)
18. ಎಷ್ಟಿದೆಯೆಂದು ಮಾಡುವ ಎಣಿಕೆ (3)
19. ತಂಗವೇಲು ನೋಡಿದ ಆನೆ (3)
20. ಶಿವನ ಕೈಯಲ್ಲಿರುವ ಚರ್ಮದ ಒಂದು ವಾದ್ಯ (3)
21. ನಡೆಯುವಾಗಲೂ ಕಂಡಿತು ಆತನ ವರ್ತನೆ (3)

ಮೇಲಿಂದ ಕೆಳಕ್ಕೆ

2. ಲಯವಾಗದಂತೆ ಕಾಪಾಡಿದ ಮನೆ (3)
3. ಕಡಲು ಅಥವಾ ಸಾಗರ (3)
4. ಆದಿಕಾಲದಿಂದಲೂ ಹಾಕಿರುವ ಅಡಿಪಾಯ (3)
6. ಕೊಕ್ಕರೆ ಜಾತಿಗೆ ಸೇರಿದ ಪಕ್ಷಿಯೊಂದರ ಕಪಟಧ್ಯಾನ (4)
8. ದವಸ-ಧಾನ್ಯಗಳ ಶೇಖರಣೆ (3)
10. ನಯವಾಗಿಯೇ ಬಂದಿರುವ ಮಗ (3)
11. ಮನೆ ಅಥವಾ ಕಾರ್ಖಾನೆಗಳ ಹೊಗೆ ಕೊಳವೆ (3)
12. ಅವಮಾನ ಮಾಡಿದ ಒತ್ತೆ (4)
14. ಋಣ ತೀರಿಸಲು ಬಂದೇ ಬರುವ ಯುವಕ (3)
16. ದಟ್ಟವಾದ ಎಂದರ್ಥ (3)
17. ಬಾಡು ಎನ್ನುವುದು ಹಸುವಿನ ಮರಿಯ ನಡುವೆ ಇದೆ (3)
18. ಆಗ ಕಂಡಿತು ಆಕಾಶ (3)

ಸರಿಯುತ್ತರಗಳು

[illegible]

ಕಾಲಕ್ಕಿಂತ ಮುಂದಿದ್ದ ದೂರದರ್ಶಿ ನಿಕೋಲಾ ಟೆಸ್ಲಾ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಜನವರಿ 7, 1943. ಮ್ಯಾನ್‌ಹ್ಯಾಟನ್‌ನ ಹೋಟೆಲ್ ನ್ಯೂಯಾರ್ಕರ್‌ನ 3327ನೇ ಸಂಖ್ಯೆಯ ಕೋಣೆ ನಿಶಬ್ದವಾಗಿತ್ತು. ಆಧುನಿಕ ಜಗತ್ತಿನ ರೂವಾರಿ, ಶ್ರೇಷ್ಠ ವಿಜ್ಞಾನಿ ನಿಕೋಲಾ ಟೆಸ್ಲಾ ಅಲ್ಲಿ ಒಂಟಿಯಾಗಿ ಕೊನೆಯುಸಿರೆಳೆದಿದ್ದರು. 86 ವರ್ಷದ ಆ ವೃದ್ಧ ವಿಜ್ಞಾನಿಯ ಜೇಬಿನಲ್ಲಿ ಅಂದು ಉಳಿದಿದ್ದು ಕೇವಲ 33 ಸೆಂಟ್ಸ್! ಜಗತ್ತನ್ನೇ ವಿದ್ಯುತ್ ಶಕ್ತಿಯಿಂದ ಬೆಳಗಿದ ವ್ಯಕ್ತಿ, ಸಾಲದ ಹೊರೆಯಿಂದಾಗಿ ಹೋಟೆಲ್ ಕೋಣೆಯಲ್ಲಿ ಪಾರಿವಾಳಗಳನ್ನೇ ತನ್ನ ಒಡನಾಡಿಗಳನ್ನಾಗಿ ಮಾಡಿಕೊಂಡು ಕೊನೆಯ ದಿನಗಳನ್ನು ಅವರು ಕಳೆದಿದ್ದರು.

1884ರಲ್ಲಿ ಅಮೆರಿಕಕ್ಕೆ ಬಂದ ಟೆಸ್ಲಾ ಬರಿಗೈಲಿ ಬಂದಿರಲಿಲ್ಲ, ಬದಲಿಗೆ ಕನಸುಗಳ ಭಂಡಾರವನ್ನೇ ಹೊತ್ತು ತಂದಿದ್ದರು. ಥಾಮಸ್ ಎಡಿಸನ್‌ನ 'ಡೈರೆಕ್ಟ್ ಕರೆಂಟ್' (ಡಿ.ಸಿ) ಮಿತಿಯನ್ನು ಮೀರಿ, ಅವರು 'ಆಲ್ಟರ್ನೇಟಿಂಗ್ ಕರೆಂಟ್' (ಎ.ಸಿ) ಎಂಬ ಅದ್ಭುತ ಶಕ್ತಿಯನ್ನು ಪರಿಚಯಿಸಿದವರು. ಇಂದು ನಮ್ಮ ಮನೆಗಳಲ್ಲಿ ಬೆಳಗುವ ಪ್ರತಿಯೊಂದು ದೀಪವೂ ಟೆಸ್ಲಾರ ಈ ಯಶಸ್ವಿಗೆ ತಕ್ಕ ಸಾಕ್ಷಿ. ನಯಾಗರ ಜಲಪಾತಕ್ಕೆ ಅಣೆಕಟ್ಟು ಕಟ್ಟಿ ವಿದ್ಯುತ್ ಉತ್ಪಾದಿಸಿದ ಅವರು, ಅಂದು ಇಡೀ ಜಗತ್ತಿಗೇ ಬೆರಗು ಮೂಡಿಸಿದ್ದರು.

ಆದರೆ ಟೆಸ್ಲಾ ಸಂಶೋಧನೆ ಕೇವಲ ವಿದ್ಯುತ್ ಉತ್ಪಾದನೆಗೆ ಸೀಮಿತವಾಗಿರಲಿಲ್ಲ. ಅವರ ಕನಸುಗಳು ವಿಚಿತ್ರವೂ, ವಿಸ್ಮಯಕಾರಿಯೂ ಆಗಿದ್ದವು. ಅದರಲ್ಲಿ ಪ್ರಮುಖವಾದುದು ವಾರ್ಡನ್‌ಕ್ಲಿಫ್ ಟವರ್ ನ್ಯೂಯಾರ್ಕ್‌ನಲ್ಲಿ ಅವರು ನಿರ್ಮಿಸಿದ ಈ ಬೃಹತ್ ಗೋಪುರದ ಉದ್ದೇಶ ಇಡೀ ಜಗತ್ತಿಗೆ ತಂತಿ ಇಲ್ಲದೆಯೇ (ವೈರ್‌ಲೆಸ್) ಉಚಿತವಾಗಿ ವಿದ್ಯುತ್ ನೀಡುವುದಾಗಿತ್ತು. ಭೂಮಿಯ ವಾತಾವರಣವನ್ನೇ ಬಳಸಿ ಶಕ್ತಿಯನ್ನು ರವಾನಿಸುವ ಅವರ ಈ ಕಲ್ಪನೆ ಇಂದಿನ ವೈ-ಫೈ ಮತ್ತು ಬ್ಲೂಟೂತ್ ತಂತ್ರಜ್ಞಾನಕ್ಕೆ ಅಡಿಪಾಯವಾಯಿತು. ಆದರೆ ಇದರಲ್ಲಿ ಲಾಭ ಕಾಣದ ಹೂಡಿಕೆದಾರ ಜೆ.ಪಿ. ಮಾರ್ಗನ್ ಹಣಕಾಸಿನ ನೆರವು ನಿಲ್ಲಿಸಿದರು. ಟೆಸ್ಲಾ ಸೋಲಲಿಲ್ಲ, ಆದರೆ ಜಗತ್ತು ಅವರ ಉನ್ನತ ಚಿಂತನೆಗೆ ಇನ್ನೂ ಸಿದ್ಧವಾಗಿರಲಿಲ್ಲ.

ಟೆಸ್ಲಾರ ಮತ್ತೊಂದು ನಿಗೂಢ ಸಂಶೋಧನೆಯೆಂದರೆ 'ಟೆಲಿಫೋರ್ಸ್' ಅಥವಾ 'ಡೆತ್ ರೇ'. ಕಣಗಳ ಕಿರಣದ ಮೂಲಕ ನೂರಾರು ಮೈಲಿ ದೂರದ ಶತ್ರುಗಳನ್ನು ನಾಶಮಾಡುವ ಈ ಆಯುಧವನ್ನು ಅವರು ರಕ್ಷಣೆಗಾಗಿ ರೂಪಿಸಿದ್ದರು. ಯುದ್ಧಗಳನ್ನು ಶಾಶ್ವತವಾಗಿ ನಿಲ್ಲಿಸುವುದು ಅವರ ಉದ್ದೇಶವಾಗಿತ್ತು. ಈ ಸಂಶೋಧನೆಯ ಗಂಭೀರತೆಯನ್ನು ಅರಿತ ಎಫ್‌ಬಿಐ , ಟೆಸ್ಲಾ ಮರಣದ ತಕ್ಷಣವೇ ಅವರ ಎಲ್ಲಾ ಪತ್ರಗಳನ್ನು ಮತ್ತು ಸಂಶೋಧನಾ ದಾಖಲೆಗಳನ್ನು ವಶಪಡಿಸಿಕೊಂಡಿತು.

ಅವರ ಅಂತ್ಯಕ್ರಿಯೆಯಲ್ಲಿ 2,000ಕ್ಕೂ ಹೆಚ್ಚು ಗಣ್ಯರು ಭಾಗವಹಿಸಿದ್ದರು. ವಿಜ್ಞಾನಿಗಳು, ನೋಬೆಲ್ ಪುರಸ್ಕೃತರು ಮತ್ತು ಸಾಮಾನ್ಯ ಜನರೆಲ್ಲರೂ ಸೇರಿ ಆ ಮಹಾನ್ ಚೇತನಕ್ಕೆ ವಿದಾಯ ಹೇಳಿದರು. ಟೆಸ್ಲಾ ಬಡವರಾಗಿ ಸತ್ತಿರಬಹುದು, ಆದರೆ ಅವರು ನೀಡಿದ ಪ್ರತೀ ಕಲ್ಪನೆಯೂ ಇಂದು ನಮ್ಮ ಜೀವನದ ಭಾಗವಾಗಿದೆ. ವೈರ್‌ಲೆಸ್ ಸಂವಹನ, ರೇಡಿಯೋ, ರಿಮೋಟ್ ಕಂಟ್ರೋಲ್-ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಇತಿಹಾಸವು ಒಂದು ಪಾಠವನ್ನು ಪದೇ ಪದೇ ಕಲಿಸುತ್ತದೆ, ಪ್ರತಿಭೆಯನ್ನು ಜೀವಂತವಿದ್ದಾಗ ನಿರ್ಲಕ್ಷಿಸಬಹುದು, ಆದರೆ ಅದರ ಪ್ರಭಾವವನ್ನು ಎಂದಿಗೂ ಅಳಿಸಲಾಗದು. ಟೆಸ್ಲಾ ಹರಿಸಿದ ಜ್ಞಾನದ ಪ್ರವಾಹ ಇಂದಿಗೂ ಇಡೀ ಜಗತ್ತಿನ ನಾಡಿಮಿಡಿತದಲ್ಲಿದೆ. ನಿಕೋಲಾ ಟೆಸ್ಲಾ ಎಂಬ ಹೆಸರು ಅಳಿಯದ ವಿದ್ಯುತ್ಕಾಂತೀಯ ಶಕ್ತಿಯಾಗಿ ಎಂದೆಂದಿಗೂ ಉಳಿಯುತ್ತದೆ.

ದೇಹಕ್ಕೆ ಅಳಿವಿದೆ, ಆದರೆ ವ್ಯಕ್ತಿತ್ವಕ್ಕೆ ಇಲ್ಲ. ಪ್ರಪಂಚದಲ್ಲಿ ನಿತ್ಯ ಅಸಂಖ್ಯ ಹುಟ್ಟು-ಸಾವುಗಳು ದಾಖಲಾಗುತ್ತಲೇ ಇರುತ್ತವೆ, ಆದರೆ ಅವುಗಳಲ್ಲಿ ಹಲವರ ಜೀವನ ಮಾತ್ರ ನಮಗೆ ಪ್ರೇರಣೆಯಾಗಿ ಉಳಿದುಬಿಡುತ್ತದೆ.

ಇದು ಅವರ ಆಸಿ-ಪಾಸಿ, ಅಧಿಕಾರ ಶಕ್ತಿಗಾಗಿ ಅಲ್ಲ. ಆದರೆ ಅವರ ವ್ಯಕ್ತಿತ್ವ, ಬದುಕಿದ ರೀತಿ ಮಾಡಿದ ತ್ಯಾಗಗಳಿಂದಾಗಿ ಅನುಕರಣೆಯವಾಗುತ್ತದೆ. ಹೀಗಾಗಿಯೇ ಅದಾವುದೋ ಜಗತ್ತಿನ ಮೂಲೆಯಲ್ಲಿ ಹುಟ್ಟಿ, ತಮ್ಮ ಪಾಡಿಗೆ ತಾವು ಸಂಶೋಧನೆಗಳಲ್ಲಿ ಮುಳುಗಿ ಕೊನೆಗೆ ಜೇಬಿನಲ್ಲಿ 33 ಸೆಂಟ್ಸ್ ಉಳಿಸಿಕೊಂಡು ಕಣ್ಮುಚ್ಚಿದ ನಿಕೋಲಾ ಟೆಸ್ಲಾ ಅವರನ್ನು ಇಂದಿಗೂ ಸ್ಮರಿಸುತ್ತಿದ್ದೇವೆ.

ಕಾಲದ ತಿರುವು ಹೃದಯ ಬೆಸೆಯಲಿ

● ಸಿದ್ದಣ್ಣ ಸಿ ವಾಡೇದ

ಮನಸು ಮನಸು ಬೆಸೆಯುವ ಪ್ರೀತಿ ಹಂಚುವ ಸೌಹಾರ್ದತೆಯ ಹಬ್ಬವೇ ಸಂಕ್ರಾಂತಿ. ಸ್ನೇಹಿತರು, ಕುಟುಂಬಸ್ಥರು ಎಳ್ಳು ಬೆಲ್ಲ ತಿಂದು, ಪರಸ್ಪರ ಪ್ರೀತಿ ಹಂಚುವ ಮೂಲಕ ಆತ್ಮೀಯ ಸಂಬಂಧ ಗಟ್ಟಿಗೊಳಿಸುವ ಶುಭ ಸುಗ್ಗಿಕಾಲ. ನಮಗೆ ಅನ್ನ ನೀಡಿ ಪೋಷಿಸುವ ಅನ್ನದಾತೆ ಭೂತಾಯಿಗೆ ಕೃತಜ್ಞತೆ ಸಲ್ಲಿಸುವ ಹಬ್ಬ. ಸಮೃದ್ಧವಾಗಿ ಬೆಳೆ ಬೆಳೆಯಲು ಕಾರಣವಾದ ಸೂರ್ಯ ದೇವನಿಗೆ ಪೂಜೆ ಸಲ್ಲಿಸಿ ಸುಗ್ಗಿಯ ಮೊದಲ ಫಸಲನ್ನು ದೇವರಿಗೆ ನೈವೇದ್ಯವಾಗಿ ಅರ್ಪಿಸಲಾಗುವುದು. ಸುಗ್ಗಿಯ ಹಬ್ಬ ರೈತರ ಪಾಲಿನ ಸಂತಸದ ದಿನ.

ಇದು ಸುಗ್ಗಿಯ ಸಮಯವಾದ ಕಾರಣ ಎಲ್ಲಾ ಬೆಳೆಗಳು ನಮಗೆ ಲಭ್ಯ. ಕಬ್ಬು, ಕಡಲೆ, ಎಳ್ಳು, ಬೆಲ್ಲ, ಗೆಣಸು, ಗಜರಿ, ಬಾರಿಕಾಯಿ, ಜೇನು ಸೇವಿಸುವ ಒಂದು ವಿಶಿಷ್ಟ ಅವಕಾಶ ನಮ್ಮದು. ಎಳ್ಳು ಮತ್ತು ಬೆಲ್ಲ ಸಂಕ್ರಾಂತಿಯ ವಿಶೇಷ ಖಾದ್ಯ, ಇದು ಚಳಿಗಾಲದಲ್ಲಿ ದೇಹಕ್ಕೆ ಉಷ್ಣತೆ ನೀಡುತ್ತದೆ. ಅಕ್ಕಿ ಮತ್ತು ಬೇಳೆಯಿಂದ ತಯಾರಿಸಿದ ಹುಗ್ಗಿ ತುಪ್ಪದೊಂದಿಗೆ ಸವಿಯುತ್ತೇವೆ. ಎಳ್ಳು ಮತ್ತು ಕಿಚಡಿಯನ್ನು ದಾನ ಮಾಡುವುದು ಶ್ರೇಷ್ಠವೆಂದು ನಂಬಲಾಗಿದೆ. ಎಳ್ಳಿನ ಉಂಡೆ, ಸೇಂಗಾ ಹೋಳಿಗೆ, ಎಳ್ಳು ಹಚ್ಚಿದ ಸಜ್ಜೆ ರೊಟ್ಟಿ, ಪುಳಿಯೋಗರೆ ಮತ್ತು ಪಾಯಸ ಈ ಹಬ್ಬದ ವಿಶೇಷ ತಿನಿಸುಗಳಾಗಿವೆ.

ಪ್ರೀತಿ ಸೌಹಾರ್ದತೆ: ನಾಡಿನ ತುಂಬೆಲ್ಲ ಸಂಕ್ರಮಣ ಹಬ್ಬದ ಕಾಲದಲ್ಲಿ ಸುಗ್ಗಿಯು ರೈತನ ಬದುಕಿಗೆ ಆಸರೆ, ಬಾಂಧವ್ಯ. ಸಂಬಂಧಗಳು ಗಟ್ಟಿಯಾಗಿ ಉಳಿಸಿಕೊಂಡು ಹೋಗುವ ಅವಶ್ಯಕತೆ ತುಂಬಾ ಇದೆ. ಪ್ರೀತಿ ಹಂಚುವ ಸಮಯು. ಸಂಬಂಧಗಳ ಬೆಲೆ ಅರಿಯುವ ಸಮಯ. ಬಾಯಿ ಸಿಹಿ ಮಾಡಿ ಸಂಬಂಧ ಬೆಸೆಯಿರಿ. ಸಮಾಜದಲ್ಲಿ ಮೌಲ್ಯಗಳು ಇಂತಹ ಹಬ್ಬ ಹರಿದಿನಗಳಿಂದ ದೃಢವಾಗಿ ನಿಂತಿವೆ. ಅವುಗಳ ಮೌಲ್ಯ ಅರಿತು ನಡೆಯೋಣ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಕಿವೀಸ್ ವಿರುದ್ಧ ಭಾರತಕ್ಕೆ ಸೋಲು

ರಾಜ್‌ಕೋಟ್: ಡೆರಿಲ್ ಮಿಚೆಲ್ ಅಮೋಘ ಶತಕ (131 ಅಜೇಯ) ಹಾಗೂ ವಿಲ್ ಯಂಗ್ (87) ಅರ್ಧಶತಕದ ನೆರವಿನಿಂದ ಅತಿಥೇಯ ಭಾರತ ವಿರುದ್ಧ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ನ್ಯೂಜಿಲೆಂಡ್ ಏಳು ವಿಕೆಟ್ ಅಂತರದ ಜಯ ದಾಖಲಿಸಿದೆ. ಆ ಮೂಲಕ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ 1-1ರ ಅಂತರದ ಸಮಬಲ ಸಾಧಿಸಿದೆ. ಕನ್ನಡಿಗ ಕೆ.ಎಲ್. ರಾಹುಲ್ (112) ಅವರ ಶತಕ ಬುಧವಾರ ವ್ಯರ್ಥವಾಯಿತಲ್ಲದೆ, ನ್ಯೂಜಿಲೆಂಡ್ ವಿರುದ್ಧದ ಭಾರತದ ಗೆಲುವಿನ ಓಟಕ್ಕೆ ತೆರೆ ಬಿದ್ದಿದೆ. ಭಾರತ ಒಡ್ಡಿದ 285 ರನ್‌ಗಳ ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ 47.3 ಓವರ್‌ಗಳಲ್ಲಿ ಮೂರು ವಿಕೆಟ್ ನಷ್ಟಕ್ಕೆ ಗುರಿ ತಲುಪಿತು.

ನ್ಯೂಜಿಲೆಂಡ್ ಆರಂಭಿಕ ಆಘಾತ ಅನುಭವಿಸಿದರೂ ಮೂರನೇ ವಿಕೆಟ್‌ಗೆ 162 ರನ್‌ಗಳ ಜತೆಯಾಟದ ಮೂಲಕ ಡೆರಿಲ್ ಮಿಚೆಲ್ ಹಾಗೂ ವಿಲ್ ಯಂಗ್ ತಂಡವನ್ನು ಗೆಲುವಿನ ದಡ ಸೇರಿಸಿದರು.

ಆಕ್ರಮಣಕಾರಿ ಆಟ ಪ್ರದರ್ಶಿಸಿದ ಮಿಚೆಲ್ ಅಮೋಘ ಶತಕ ಸಾಧನೆ ಮಾಡಿದರು. 117 ಎಸೆತಗಳಲ್ಲಿ 131 ರನ್ ಗಳಿಸಿ (11) ಔಟಾಗದೆ ಉಳಿದರು. ಅವರಿಗೆ ತಕ್ಕ ಸಾಥ್ ನೀಡಿದ ವಿಲ್ ಯಂಗ್ 87 ರನ್ ಗಳಿಸಿ ಔಟ್ ಆದರು. 98 ಎಸೆತಗಳನ್ನು ಎದುರಿಸಿದ ಯಂಗ್ ಇನ್ನಿಂಗ್ಸ್‌ನಲ್ಲಿ ಏಳು ಬೌಂಡರಿಗಳು ಸೇರಿದ್ದವು. ಕೊನೆಯಲ್ಲಿ ಗ್ಲೆನ್ ಫಿಲಿಫ್ ಅಜೇಯ 32 ರನ್‌ಗಳ ಉಪಯುಕ್ತ ಕಾಣಿಕೆ ನೀಡಿದರು.

ಭಾರತದ ಪರ ಹರ್ಷಿತ್ ರಾಣಾ, ಪ್ರಸಿದ್ಧ್ ಕೃಷ್ಣ ಹಾಗೂ ಕುಲದೀಪ್ ಯಾದವ್ ತಲಾ ಒಂದು ವಿಕೆಟ್ ಗಳಿಸಿದರು.

ಪಂದ್ಯದಲ್ಲಿ ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು, ಮೊದಲು ಫೀಲ್ಡಿಂಗ್ ಆಯ್ದುಕೊಂಡಿತು, ಭಾರತದ ಪರ ಅನುಭವಿ ಆರಂಭಿಕ ಆಟಗಾರ ರೋಹಿತ್ ಶರ್ಮಾ 24 ರನ್ (38 ಎಸೆತ) ಮತ್ತೆ ನಿರಾಸೆ ಅನುಭವಿಸಿದರು. ಅತ್ಯುತ್ತಮ ಲಯದಲ್ಲಿದ್ದ ವಿರಾಟ್ ಕೊಹ್ಲಿ (23 ರನ್, 9 ಎಸೆತ) ಕೂಡ ಬೇಗನೇ ವಿಕೆಟ್ ಒಪ್ಪಿಸಿದರು. ನಾಯಕ ಶುಭಮನ್ ಗಿಲ್ (56 ರನ್, 53 ಎಸೆತ) ಅರ್ಧಶತಕ ಸಿಡಿಸಿ ಕೈಲ್ ಜೇಮಿಸನ್‌ಗೆ ವಿಕೆಟ್ ಒಪ್ಪಿಸಿದರು. ಶ್ರೇಯಸ್ ಐಯ್ಯರ್ ಕೇವಲ 8 ರನ್ ಗಳಿಸುವ ಮೂಲಕ ನಿರಾಸೆ ಮೂಡಿಸಿದರು.

5ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ವಿಕೆಟ್ ಕೀಪರ್-ಬ್ಯಾಟರ್ ಕೆ.ಎಲ್. ರಾಹುಲ್ ಅವರು ಶತಕ ಸಿಡಿಸುವ ಮೂಲಕ ತಂಡದ ಮೊತ್ತವನ್ನು ಹೆಚ್ಚಿಸಿದರು. 92 ಎಸೆತದಿಂದ ಅಜೇಯ 112 ರನ್ ಬಾರಿಸಿದರು. ಕೆಳ ಕ್ರಮಾಂಕದಲ್ಲಿ ಬ್ಯಾಟಿಂಗ್ ಬಂದ ರವೀಂದ್ರ ಜಡೇಜಾ (27 ರನ್) ಹಾಗೂ ನಿತೀಶ್ ಕುಮಾರ್ ರೆಡ್ಡಿ (29 ರನ್) ರಾಹುಲ್‌ಗೆ ಸಾಥ್ ನೀಡಿದರು.

ಸಮಾಚಾರ ಸಣ್ಣದಲ್ಲ

ಇಂಡಿಯಾ ಓಪನ್ ಟೂರ್ನಿ ಹಿಂದೆ ಸರಿದ ಆ್ಯಂಡರ್ಸ್

ದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ವಾಯು ಮಾಲಿನ್ಯ ತೀವ್ರಗೊಂಡಿರುವುದರಿಂದ ಪ್ರಸ್ತುತ ನಡೆಯುತ್ತಿರುವ ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಿಂದ ಹಿಂದೆ ಸರಿಯುವುದಾಗಿ ವಿಶ್ವ ನಂ.3 ಆಟಗಾರ ಡೆನ್ಮಾರ್ಕ್ ಆ್ಯಂಡರ್ಸ್ ಅಂಟೊನ್ಸನ್ ಹೇಳಿದ್ದಾರೆ. 'ಸತತ ಮೂರನೇ ಸಲವೂ ಇಂಡಿಯಾ ಓಪನ್‌ನಿಂದ ನಾನು ಏಕೆ ಹಿಂದೆ ಸರಿದಿದ್ದೇನೆ ಎಂದು ತಿಳಿದುಕೊಳ್ಳಲು ಹಲವಾರು ಮಂದಿಗೆ ಕುತೂಹಲ ಇದೆ. ದೆಹಲಿಯಲ್ಲಿ ವಾಯು ಮಾಲಿನ್ಯ ತೀವ್ರವಾಗಿದ್ದು, ಬ್ಯಾಡ್ಮಿಂಟನ್ ಟೂರ್ನಿ ಆಯೋಜಿಸಲು ಸೂಕ್ತ ಪ್ರದೇಶವೆಂದು ನಾನು ಭಾವಿಸುವುದಿಲ್ಲ' ಎಂದು ಅಂಟೊನ್ಸನ್ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಬರೆದಿದ್ದಾರೆ. ನಾಲ್ಕು ಸಲ ವಿಶ್ವ ಚಾಂಪಿಯನ್ ಆಗಿರುವ ಅಂಡರ್ಸ್ ತಮ್ಮ ಈ ನಿರ್ಧಾರಕ್ಕಾಗಿ 5.000 ಅಮೆರಿಕನ್ ಡಾಲರ್ ದಂಡ ತೆರಬೇಕಾಗಿದೆ ಎಂದು ತಿಳಿದು ಬಂದಿದೆ. 5,000 ಅಮೆರಿಕನ್ ಡಾಲರ್ ಪ್ರಶಸ್ತಿ ಮೊತ್ತ ಹೊಂದಿರುವ ಬಿಡಬ್ಲ್ಯುಎಫ್ ಟೂರ್ನಿಯಲ್ಲಿ ಆಡುವ ಪರಿಸ್ಥಿತಿ ಬಗ್ಗೆ ಮಿಯಾ ಬ್ಲಿಚ್‌ಫಲ್ಸ್ ಕೂಡಾ ಟೀಕೆ ಮಾಡಿದ್ದರು. ದೆಹಲಿ ವಾಯು ಗುಣಮಟ್ಟ ಸೂಚ್ಯಂಕದ ಚಿತ್ರವನ್ನು ಡೆನ್ಮಾರ್ಕ್‌ನ ಆಟಗಾರ ಹಂಚಿಕೊಂಡಿದ್ದಾರೆ.

ಒಮಾನ್‌ನ ಮಸ್ಕತ್‌ನಲ್ಲಿ ನಡೆದ ಕಾರ್ಯಕ್ರಮ

ವಿಶ್ವಬ್ರಾಹ್ಮಣ ಒಕ್ಕೂಟದ ವಾರ್ಷಿಕ ಕ್ರೀಡಾಕೂಟ

ಮಸ್ಕತ್: ಇಲ್ಲಿನ ವಿಶ್ವಬ್ರಾಹ್ಮಣ ಒಕ್ಕೂಟವು (ವಿಬಿಎಂ) ಆಯೋಜಿಸಿರುವ ವಾರ್ಷಿಕ ಕ್ರೀಡಾಕೂಟವು ಇತ್ತೀಚೆಗೆ ಒಮಾನ್‌ನ ಮಸ್ಕತ್‌ನಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ. ಶ್ರೀಹರ್ಷ ವಿಶ್ವಬ್ರಾಹ್ಮಣ, ರುದ್ರಾಚಾರ್ ಹಾಗೂ ಅತಿಥಿಗಳಾಗಿದ್ದ ಬಿ. ಎಂ.ಆಚಾರ್ಯ ಕಾವೂರು, ವೀಣಾ ಆಚಾ ರ್ಯ ಮತ್ತು ಸಂಸ್ಥೆಯ ಅಧ್ಯಕ್ಷರು ಮತ್ತು ಇತರ ಗಣ್ಯರೆಲ್ಲರೂ ಕಾರ್ಯಕ್ರಮ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶ್ರೀಹರ್ಷ ಮತ್ತು ಬಿ. ಎಮ್.ಆಚಾರ್ಯ ಅವರು ವಿಶ್ವಕರ್ಮ ಸಮಾಜ ಬಾಂಧವರ ಕ್ರೀಡಾ ಉತ್ಸಾಹವನ್ನು ಕಂಡು ಸಂತೋಷ ವ್ಯಕ್ತಪಡಿಸಿ, ಒಕ್ಕೂಟವು ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಭಾವಹಿಸಿ ಅಧ್ಯಕ್ಷ ಭಾಷಣ ಮಾಡಿದ ರವೀಂದ್ರ ಆಚಾರ್ಯ, ನಾವೆಲ್ಲರೂ ಕ್ರೀಡೆಯಲ್ಲಿ ಭಾಗವಹಿಸಿ ಸ್ನೇ ಹ, ಆತ್ಮೀಯತೆಯ ನೆನಪುಗಳನ್ನು ಹುಟ್ಟು ಹಾಕುವ ಆಶಯವನ್ನು ವ್ಯಕ್ತಪಡಿಸಿದರು.

ಒಕ್ಕೂಟದ ಪಧಾಧಿಕಾರಿಗಳಾದ ಮಹೇಶ್ ಪುರೋಹಿತ್ ಹುಬ್ಬಳ್ಳಿ, ಪ್ರಸಾದ್ ಆಚಾರ್ಯ ಮಂಗಳೂರು, ಅಮೃತ್ ಆಚಾರ್ಯ ಮಣಿಪುರ, ಸುದೇಶ್ ಆಚಾರ್ಯ ಕಿನ್ನಿಗೋಳಿ, ಪ್ರೀತಿ ರಾಮಚಂದ್ರ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಒಕ್ಕೂಟದ ಕ್ರೀಡಾಕಾರ್ಯದರ್ಶಿ ಗಳಾದ ರತ್ನಾಕರ್ ಆಚಾರ್ಯ ಮೂಡು ಬೆಳ್ಳೆ, ಸಂತೋಷ್ ಆಚಾರ್ಯ ಬೆಳಪು ಹಾಗೂ ಯುವನಾಯಕರಾದ ರವೀಂದ್ರ ಆಚಾರ್ಯ ಬೆಳ್ಮಣ್ಣುರವರ ನೇತೃತ್ವದಲ್ಲಿ ವೈವಿಧ್ಯಮಯ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕ್ರೀಡಾಕೂಟದ ಸಮಾರೋಪ ಸಂದ ರ್ಭದಲ್ಲಿ ಸ್ಪರ್ಧಾ ವಿಜೇತರಿಗೆ ಬಹುಮಾನ ವನ್ನು ನೀಡಿ ಪುರಸ್ಕರಿಸಲಾಯಿತು. ಸುಧಾಕರ್ ಪಾಂಚಾಲ್ ಕಾರ್ಯಕ್ರಮ ನಿರೂಪಿಸಿದರು.

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಯುಜಿ ಸಿಇಟಿ - 2026

ಪ್ರಿಯ ವಿದ್ಯಾರ್ಥಿಗಳೇ ಮತ್ತು ಪೋಷಕರೇ

ಇಂಜಿನಿಯರಿಂಗ್, ಕೃಷಿವಿಜ್ಞಾನ, ಪಶುಸಂಗೋಪನೆ, ಫಾರ್ಮಸಿ, ಬಿಎಸ್‌ಸಿ (ನರ್ಸಿಂಗ್) ಮುಂತಾದ ವೃತ್ತಿಪರ ಕೋರ್ಸಗಳ ಪ್ರವೇಶಕ್ಕೆ ಪ್ರಾಧಿಕಾರವು ನಡೆಸುವ ಸಿಇಟಿ-2026ಕ್ಕೆ ಅಭ್ಯರ್ಥಿಯು ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕಾಗುತ್ತದೆ. ಸಿಇಟಿ-2026ರ ಅರ್ಜಿಯು "APPLICATION-CUM-VERIFICATION" MODULE ಆಗಿರು ವುದರಿಂದ ಅಭ್ಯರ್ಥಿಗಳ SATS ಮತ್ತು RD ಸಂಖ್ಯೆಯನ್ನು ಆಧರಿಸಿ ವ್ಯಾಸಂಗ ಮತ್ತು ಜಾತಿ ಮೀಸಲಾತಿ ವಿವರಗಳನ್ನು ವೆಬ್‌ಸರ್ವೀಸ್ ಮೂಲಕ ಪಡೆಯಲಾಗುವುದು.

ಆದ ಕಾರಣ ಅರ್ಜಿ ಸಲ್ಲಿಸುವ ವಿಧಾನ, ಅರ್ಹತಾ ಕಂಡಿಕೆ ಷರತ್ತುಗಳು, ವಿವಿಧ ಪ್ರಮಾಣ ಪತ್ರಗಳ ಮಾದರಿಗಳು, ಇತ್ಯಾದಿಗಳ ಸಂಕ್ಷಿಪ್ತ ಮಾಹಿತಿಗಳನ್ನೊಳಗೊಂಡ "ಸಿಇಟಿ ದಿಕ್ಸೂಚಿ" ಮಾಹಿತಿ ಪುಸ್ತಕವನ್ನು ಅಭ್ಯರ್ಥಿಗಳಿಗೆ ಆಯಾ ಕಾಲೇಜಿನಲ್ಲಿಯೇ ಒದಗಿಸಲಾಗುವುದು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ಕೆಇಎ ಅಧ್ಯಕ್ಷರಾದ ಡಾ.ಎಂ.ಸಿ.ಸುಧಾಕರ ಮತ್ತು ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಹಾಗೂ ಕೆಇಎ ಸಹ ಅಧ್ಯಕ್ಷರಾದ ಡಾ.ಶರಣ ಪ್ರಕಾಶ ಪಾಟೀಲ ಅವರು 2026ನೇ ಸಾಲಿನ ಸಾಲಿನ ಸಿಇಟಿ ದಿಕ್ಸೂಚಿ ಬಿಡುಗಡೆ ಮಾಡಿದರು.

ಅರ್ಜಿ ಸಲ್ಲಿಸಲು ಏನೇನು ದಾಖಲೆ ಬೇಕಾಗಬಹುದು?

ಕಡ್ಡಾಯ ದಾಖಲೆಗಳು ಎಲ್ಲಾ ಅಭ್ಯರ್ಥಿಗಳಿಗೆ
- ಎಸ್‌ಎಸ್‌ಎಲ್ ಸಿ / 10ನೇ ತರಗತಿ ಅಂಕಪಟ್ಟಿ
- ಆಧಾರ್ ಕಾರ್ಡ್ ಮತ್ತು ಪ್ರಮಾಣ ಪತ್ರಗಳು
- ಜೆಪಿಜಿ ಫಾರ್ಮಾಟ್ ನಲ್ಲಿ ವಿದ್ಯಾರ್ಥಿಯ ಫೋಟೋ < 50 ಕೆಬಿ.
- ಜೆಪಿಜಿ ಫಾರ್ಮಾಟ್ ನಲ್ಲಿ ವಿದ್ಯಾರ್ಥಿಯ ಸಹಿ < 50 ಕೆಬಿ
- ವಿದ್ಯಾರ್ಥಿಯ ಮೊಬೈಲ್ ಸಂಖ್ಯೆ (ವಾಟ್ಸಪ್ ಇರುವ) & ಇ-ಮೇಲ್ ನೋಂದಣಿ

ವಿಶೇಷ ಸೂಚನೆ: ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಆಧಾರ್ ಕಾರ್ಡ್ ಹಾಗೂ RD ಪ್ರಮಾಣ ಪತ್ರಗಳಲ್ಲಿ ಇರುವ ಹೆಸರು ಒಂದೇ ರೀತಿಯಲ್ಲಿ ಇರಬೇಕು. ಒಂದು ವೇಳೆ ವ್ಯತ್ಯಾಸ ಇದ್ದರೆ ಕೂಡಲೇ ಎಸ್ ಎಸ್ ಎಲ್ ಸಿ ಅಂಕಪಟ್ಟಿಯಲ್ಲಿ ಇರುವ ಹಾಗೆ ಆಧಾರ್ ಕಾರ್ಡ್ ಮತ್ತು RD ಪ್ರಮಾಣ ಪತ್ರಗಳನ್ನು ಸರಿಪಡಿಸಿಕೊಳ್ಳಿ.

ಅನ್ವಯಿಸುವುದಾದರೆ ಈ ಕೆಳಗಿನ ದಾಖಲೆಗಳು ಬೇಕು
(ಪ್ರಮಾಣಪತ್ರಗಳು ಅಭ್ಯರ್ಥಿಯ ಹೆಸರಿನಲ್ಲಿ ಮಾತ್ರ ಇರಬೇಕು)

ಪರಿಶಿಷ್ಟ ಜಾತಿ ಅಭ್ಯರ್ಥಿಗಳು, RD ಸಂಖ್ಯೆ ಇರುವ ಒಳ ಮೀಸಲಾತಿ ವಿವರಗಳನ್ನು ಒಳಗೊಂಡ (ಪ್ರವರ್ಗ-ಎ / ಪ್ರವರ್ಗ-ಬಿ / ಪ್ರವರ್ಗ-ಸಿ) ಜಾತಿ ಪ್ರಮಾಣ ಪತ್ರ.	1ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿರುವ ವ್ಯಾಸಂಗ ಪ್ರಮಾಣ ಪತ್ರ
RD ಸಂಖ್ಯೆ ಇರುವ ಜಾತಿ ಪ್ರಮಾಣ ಪತ್ರ ST ಹಾಗೂ ಪ್ರವರ್ಗ-1ರ ವಿದ್ಯಾರ್ಥಿ ಗಳಿಗೆ.	1ರಿಂದ 10ನೇ ತರಗತಿವರೆಗೆ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಓದಿರುವ ವ್ಯಾಸಂಗ ಪ್ರಮಾಣ ಪತ್ರ
ಎಸ್‌ಸಿ, ಎಸ್‌ಟಿ, ಪ್ರವರ್ಗ-1 ಅಭ್ಯರ್ಥಿಗಳು ಆರ್‌ಡಿ ಸಂಖ್ಯೆಯೊಂದಿಗೆ ಆದಾಯ ಪ್ರಮಾಣಪತ್ರವನ್ನು ಪ್ರತ್ಯೇಕವಾಗಿ ಪಡೆಯಬೇಕಾಗುತ್ತದೆ. 1.ಎಸ್‌ಸಿ / ಎಸ್‌ಟಿ ಅಭ್ಯರ್ಥಿಗಳು - ವಾರ್ಷಿಕ ಆದಾಯ ರೂ.10.00 ಲಕ್ಷದವರೆಗೆ ಇದ್ದರೆ ಶುಲ್ಕ ವಿನಾಯಿತಿ. 2.ಪ್ರವರ್ಗ-1 ಅಭ್ಯರ್ಥಿಗಳು - ವಾರ್ಷಿಕ ಆದಾಯ ರೂ.2.5 ಲಕ್ಷದವರೆಗೆ ಇದ್ದರೆ ಭಾಗಶಃ ಶುಲ್ಕ ವಿನಾಯಿತಿ.	RD ಸಂಖ್ಯೆ ಇರುವ NCLC ಪ್ರಮಾಣ ಪತ್ರ (ಗ್ರಾಮೀಣ ಪ್ರದೇಶದ ವ್ಯಾಸಂಗ ಮೀಸಲು ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ) **ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳಿಗೆ** ಭಾಷಾ ಅಲ್ಪಸಂಖ್ಯಾತರ ವ್ಯಾಸಂಗ ಪ್ರಮಾಣ ಪತ್ರ (ತುಳು, ತಮಿಳು, ತೆಲುಗು, ಕೊಡವ ಮಾತೃಭಾಷೆ). 1ರಿಂದ 12ನೇ ತರಗತಿವರೆಗೆ ಒಟ್ಟು 10 ವರ್ಷ ಕರ್ನಾಟಕದಲ್ಲಿ ಓದಿರಬೇಕು. (10 ಅಥವಾ 12ನೇ ತರಗತಿಯನ್ನು ಕರ್ನಾಟಕದಲ್ಲಿ ಕಡ್ಡಾಯ ಓದಿರಬೇಕು)
ಜಾತಿ / ಜಾತಿ ಆದಾಯ ಪ್ರಮಾಣಪತ್ರ (ಆದಾಯ ಮತ್ತು ಜಾತಿ ಪ್ರಮಾಣಪತ್ರ) - ಆರ್‌ಡಿ ಸಂಖ್ಯೆಯೊಂದಿಗೆ (2A, 2B, 3A, 3B ವಿದ್ಯಾರ್ಥಿಗಳಿಗೆ)	ಧಾರ್ಮಿಕ ಅಲ್ಪಸಂಖ್ಯಾತ ಪ್ರಮಾಣ ಪತ್ರ (ಮುಸ್ಲಿಂ, ಕ್ರಿಶ್ಚಿಯನ್ ಧಾರ್ಮಿಕ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ)
RD ಸಂಖ್ಯೆ ಇರುವ 371(ಜೆ) ಕಲ್ಯಾಣ ಕರ್ನಾಟಕ ಪ್ರಮಾಣ ಪತ್ರ	

ಹೆಚ್.ಪ್ರಸನ್ನ, ಐಎಎಸ್
ಕಾರ್ಯನಿರ್ವಾಹಕ ನಿರ್ದೇಶಕರು, ಕೆಇಎ.

@KEA_KARNATAKA KEA Vikasana keaugcet25@gmail.com https://cetonline.karnataka.gov.in/kea/ 080-23 460 460 (10 Lines - From 8.00 am to 8.00 pm)

ಸಂಕ್ರಾಂತಿಗೆ ಸೂರ್ಯ

ಲವ್ ಸ್ಟೋರಿ ಜತೆಗೆ ಆ್ಯಕ್ಷನ್ ಕೂಡ ಬೆರೆತಿರುವ ಸೂರ್ಯ ಸಂಕ್ರಾಂತಿ ಹಬ್ಬದಂದು ತೆರೆಗೆ ಬರಲಿದೆ. ಸ್ಲಂನಲ್ಲಿ ಬೆಳೆದ ಯುವಕ ಸೂರ್ಯ, ತನ್ನ ಪ್ರೀತಿಯನ್ನು ಪಡೆದುಕೊಳ್ಳಲು ಹೇಗೆಲ್ಲಾ ಹೋರಾಟ, ಸಾಹಸ ಮಾಡುತ್ತಾನೆ. ಆತನಿಗೆ ಯಾರೆಲ್ಲ ಸಹಾಯ ಮಾಡುತ್ತಾರೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಲಾಗುತ್ತಿದೆ. ಸಾಗರ್ ದಾಸ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಸದ್ಯ ಈ ಚಿತ್ರದ ಪ್ರೇಮಗೀತೆ ರಿಲೀಸ್ ಆಗಿದ್ದು ಸಿನಿಪ್ರಿಯರ ಮನಗೆಲ್ಲುತ್ತಿದೆ. ನಿರ್ದೇಶಕ ಸಾಗರ್ ದಾಸ್ ಸಾಹಿತ್ಯದ ಈ ಗೀತೆಗೆ ಹೇಮಂತ್ ಕುಮಾರ್, ಪೃಥ್ವಿಭಟ್ ದನಿಯಾಗಿದ್ದಾರೆ. ಬಾರೆ ಬಾರೆ.. ಅತ್ತೆಯ ಮಗಳೇ.. ಎಂಬ ಹಾಡು ಸಂಗೀತ ಪ್ರಿಯರ ಮನಗೆದ್ದಿದೆ. ಪ್ರಶಾಂತ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದು, ಹರ್ಷಿತಾ ನಾಯಕಿಯಾಗಿ ಅಭಿನಯಿಸಿದ್ದಾರೆ. ಪ್ರಮೋದ್ ಶೆಟ್ಟಿ, ಶೃತಿ, ರವಿಶಂಕರ್, ಟಿಎಸ್ .ನಾಗಾಭರಣ, ಭಜರಂಗಿ ಪ್ರಸನ್ನ, ಕುಂಕುಮ್ ಹರಿಹರ, ದೀಪಿಕಾ, ಕಡ್ಡಿಪುಡಿ ಚಂದ್ರು ಮುಂತಾದವರು ತಾರಾಗಣದಲ್ಲಿದ್ದಾರೆ.

ಪ್ರೀತಿಸೋದು ಮುಖ್ಯವಲ್ಲ ಆ ಪ್ರೀತಿಯನ್ನು ಉಳಿಸಿಕೊಳ್ಳಬೇಕು ಎಂಬುದನ್ನು ಸಿನಿಮಾದಲ್ಲಿ ಹೇಳಿದ್ದೇವೆ. ಮೂವತ್ತು ವರ್ಷದ ಹಿಂದಿನ ಸ್ಟೋರಿ ಇದಾಗಿದ್ದು, ಅದನ್ನು ಇಂದಿನ ಕಾಲಘಟ್ಟಕ್ಕೂ ಹೊಂದುವಂತೆ ತೆರೆಯಲ್ಲಿ ಕಟ್ಟಿಕೊಟ್ಟಿದ್ದೇವೆ. ಉತ್ತರ ಕರ್ನಾಟಕದ ಸೊಗಡಿನಲ್ಲಿ ಸಂಭಾಷಣೆ ಇರುವುದು ವಿಶೇಷ ಎನ್ನುತ್ತಾರೆ ನಿರ್ದೇಶಕ ಸಾಗರ್ ದಾಸ್.

ಕಾಲೇಜ್ ಕುಮಾರ್ ಸಿನಿಮಾದ ನಂತರ ಈ ಚಿತ್ರದಲ್ಲಿ ಶ್ರುತಿ ಅವರ ಜತೆಗೆ ನಟಿಸಿದ್ದೇನೆ. ಇಡೀ ಚಿತ್ರ ಎಮೋಷನ್‌ನಲ್ಲಿ ಸಾಗುತ್ತದೆ. ನಿರ್ದೇಶಕರು ಅದನ್ನು ಎಲ್ಲರಿಗೂ ಹಿಡಿಸುವಂತೆ ಕಟ್ಟಿಕೊಟ್ಟಿದ್ದಾರೆ ಎಂದು ನಟ ರವಿಶಂಕರ್ ಸಂತಸದಿಂದ ನುಡಿದರು.

ಈ ಚಿತ್ರದಲ್ಲಿ ನಾನು ಸ್ಲಂನಲ್ಲಿ ಬೆಳೆದ ಹುಡುಗನಾಗಿ ಕಾಣಿಸಿಕೊಂಡಿದ್ದೇನೆ. ಆತನ ಬಾಳಲ್ಲಿ ಹುಡುಗಿಯ ಪ್ರವೇಶವಾದಾಗ ಆತನ ಬದುಕು ಹೇಗೆ ಬದಲಾಗುತ್ತದೆ. ತನ್ನ ಪ್ರೀತಿಯನ್ನು ಆತ ಹೇಗೆ ಉಳಿಸಿಕೊಳ್ಳುತ್ತಾನೆ ಎಂಬುದನ್ನು ಸೆಂಟಿಮೆಂಟ್ ಜತೆಗೆ ಆ್ಯಕ್ಷನ್ ಬೆರೆಸಿ ಕಟ್ಟಿಕೊಡಲಾಗಿದೆ ಎನ್ನುತ್ತಾರೆ ಪ್ರಶಾಂತ್. ನಾಯಕಿ ಹರ್ಷಿತಾ ಕಾಲೇಜು ಹುಡುಗಿಯ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ಚಿತ್ರದಲ್ಲಿ ಐದು ಹಾಡುಗಳಿದ್ದು, ಶ್ರೀಶಾಸ್ತ ಸಂಗೀತ ಸಂಯೋಜಿಸಿದ್ದಾರೆ. ಮನುರಾಜ್ ಛಾಯಾಗ್ರಹಣ, ನರಸಿಂಹ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಉತ್ತರ ಕರ್ನಾಟಕ, ಬೆಂಗಳೂರು ಸುತ್ತಮುತ್ತ ಹಾಗೂ ಪೂನಾದಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಬಸವರಾಜ ಬೆಣ್ಣೆ ಹಾಗೂ ರವಿ ಬೆಣ್ಣೆ ಸಹೋದರರು ನಂದಿ ಸಿನಿಮಾಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣ ಮಾಡಿದ್ದಾರೆ.

ವಿಟಾಕೀಸ್

ಕಾಮಿಡಿ ಕಥೆಯ ಹೌದೋ ಹುಲಿಯ



ಹಾದೋ ಹುಲಿಯಾ.. ಈ ಡೈಲಾಗ್ ಉತ್ತರ ಕರ್ನಾಟಕದಲ್ಲಿ ಜನಪ್ರಿಯ ಮತ್ತು ಜನಜನಿತ. ಈಗ ಇದೇ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದೆ. ಸದ್ದಿಲ್ಲದೆ ಶೂಟಿಂಗ್ ಮುಗಿಸಿರುವ ಈ ಚಿತ್ರ ತೆರೆಗೂ ಸಿದ್ಧವಾಗಿದೆ. ಉತ್ತರ ಸೊಗಡಿನ ಈ ಸಿನಿಮಾದಲ್ಲಿ ಕರಾವಳಿಯ ತಂಡವೇ ಕಾರ್ಯನಿರ್ವಹಿಸಿರುವುದು ವಿಶೇಷ. ಹೌದೋ ಹುಲಿಯ ಚಿತ್ರದ ಕುರಿತಂತೆ ನಿರ್ದೇಶಕ ಅನೀಶ್ ವಿ. ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿ : ಏನಿದು ಹೌದೋ ಹುಲಿಯ?

ಅನೀಶ್ : ಇದು ಉತ್ತರ ಕರ್ನಾಟಕ ಭಾಗದಲ್ಲಿ ನಡೆಯುವ ಕಾಮಿಡಿ ಕಥನಾ. ಇಂದು ಸಂಬಂಧಗಳಿಗಿಂತ ಹಣವೇ ಮುಖ್ಯವಾಗಿದೆ. ಹಣ ಮತ್ತು ಆಸ್ತಿಗಾಗಿ ಸಂಬಂಧಗಳನ್ನೇ ಮರೆಯುವ ಕಾಲವಿದು. ಅದೇ ವಿಚಾರವನ್ನು ಆಯ್ದುಕೊಂಡು ಅದನ್ನು ಹಾಸ್ಯಮಯವಾಗಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ. ಇದು ಒಂಥರ ಹಾವು ಏಣಿ ಆಟ ಎನ್ನಬಹುದು. ಒಂದೇ ದಿನದಲ್ಲಿ ನಡೆಯುವ ಸ್ಟೋರಿ ಇದಾಗಿದ್ದು, ಇಡೀ ಚಿತ್ರದ ಸಂಭಾಷಣೆ ಜವಾರಿ ಶೈಲಿಯಲ್ಲಿಯೇ ಇದೆ.

ವಿ.ಸಿ: ಉತ್ತರ ಕರ್ನಾಟಕದ ಕಥೆ ಆಯ್ದುಕೊಳ್ಳಲು ಕಾರಣ ?

ಅನೀಶ್ : ಈ ಹಿಂದೆ ನಾನು ಮಾಯೆ ಕಿರುಚತ್ರ, ದಸ್ಕತ್ ಸೇರಿದಂತೆ ಹಲವು ಸಿನಿಮಾಗಳನ್ನು ನಿರ್ದೇಶಿಸಿದ್ದೆ. ಅವೆಲ್ಲವೂ ಕರಾವಳಿಯ ಸಂಭಾಷಣೆಯನ್ನು ಒಳಗೊಂಡಿದ್ದವು. ಅಂತೆಯೇ ಈಗ ಜವಾರಿ ಶೈಲಿಯ ಸಂಭಾಷಣೆಯನ್ನು ಪ್ರೇಕ್ಷಕರಿಗೆ ಉಣಬಡಿಸುವ ನಿಟ್ಟಿನಲ್ಲಿ ಈ ಸಿನಿಮಾವನ್ನು ನಿರ್ದೇಶಿಸಿದೆ. ನಟ ಗೋವಿಂದೇ ಗೌಡ ಈ ಕಥೆ ಹೆಣೆದಿದ್ದು, ನಾನು ನಿರ್ದೇಶನ ಮಾಡಿದ್ದೇನೆ. ಹಾಸ್ಯ ಪ್ರಿಯರಿಗಂತೂ ಈ ಚಿತ್ರ ಹೇಳಿ ಮಾಡಿಸಿದಂತಿದೆ.

ವಿ.ಸಿ : ಚಿತ್ರದಲ್ಲಿ ಬಿರಾದಾರ್ ಅವರ ಪಾತ್ರ?

ಅನೀಶ್ : ಬಿರಾದಾರ್ ಅವರು ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಅವರೇ ಸಿನಿಮಾದ ಕೇಂದ್ರಬಿಂದು ಅವರ ಸುತ್ತಲೇ ಉಳಿದ ಪಾತ್ರಗಳು ಸುತ್ತುತ್ತವೆ. ಇಡೀ ಚಿತ್ರದುದ್ದಕ್ಕೂ ಬಿರಾದಾರ್ ಕಾಮಿಡಿ ಕಚಗುಳಿ ಇಡುತ್ತಾರೆ. ಅವರದು ಈ ಹಿಂದಿನ ಎಲ್ಲಾ ಸಿನಿಮಾಗಳಿಂತ ವಿಭಿನ್ನವಾದ ಪಾತ್ರ ಎನ್ನಬಹುದು.

ಜವಾರಿ ಶೈಲಿಯಲ್ಲಿ ಮೂಡಿಬಂದಿರುವ ಹೌದೋ ಹುಲಿಯಾ.. ಇದೇ 30 ರಂದು ತೆರೆಗೆ ಬರಲಿದೆ. ನೇರವಾಗಿ ಒಟಿಟಿಯಲ್ಲಿ ಬಿಡುಗಡೆಯಾಗಲಿದೆ.

ಗೋವಿಂದೇ ಗೌಡ, ಮಲ್ಯ ಬಾಗಲಕೋಟೆ ಸೇರಿದಂತೆ ಹಲವು ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ. ಉತ್ತರ ಕರ್ನಾಟಕದ ಭಾಗದಲ್ಲಿಯೇ ಸಂಪೂರ್ಣ ಚಿತ್ರೀಕರಣ ನಡೆಸಲಾಗಿದೆ.

ಸಂಕ್ರಮಣ ಸಂಭ್ರಮದಲ್ಲಿ ಬಲರಾಮ

ಆ ದಿನಗಳು ಚಿತ್ರವನ್ನು ನಿರ್ದೇಶಿಸಿ ಭರ್ಜರಿ ಯಶಸ್ಸ ಪಡೆದ ನಿರ್ದೇಶಕ ಕೆ.ಎಂ.ಚೈತನ್ಯ, ಈಗ ಬಲರಾಮನ ದಿನಗಳು ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಬಲರಾಮನ ದಿನಗಳು ಕೂಡ ಭೂಗತ ಲೋಕದ ಕಥೆಯನ್ನು ಒಳಗೊಂಡಿದ್ದು, ವಿನೋದ್ ಪ್ರಭಾಕರ್ ನಾಯಕನಾಗಿ ಅಭಿನಯಿಸಿದ್ದಾರೆ. ಪ್ರಿಯಾ ಆನಂದ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಅವಿನಾಶ್, ಅತುಲ್ ಕುಲಕರ್ಣಿ, ಆಶಿಶ್ ವಿದ್ಯಾರ್ಥಿ, ವಿನಯ್ ಗೌಡ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ.

ಬಲರಾಮ ನನ್ನ ವೃತ್ತಿ ಬದುಕಿಗೆ ತಿರುವು ನೀಡುವ ಸಿನಿಮಾವಾಗಲಿದೆ. ಮಾದೇವ ಚಿತ್ರದ ಬಳಿಕ ನಂತರ ನನ್ನ ಜೀವನವೇ ಬದಲಾಗಿದ್ದು ಬಲರಾಮನಿಂದ. ನಾನು ಬಲರಾಮನಾಗಿ ಪ್ರತಿಕ್ಷಣ ಜೀವಿಸಿದ್ದೀನಿ. ಈ ಚಿತ್ರಕ್ಕಾಗಿ ಸಾಕಷ್ಟು ಶ್ರಮವಹಿಸಿದ್ದೀನಿ ಎಂದು ವಿನೋದ್ ಪ್ರಭಾಕರ್ ಹೇಳಿದರು. ಬಲರಾಮ ಚಿತ್ರದ ಮೂಲಕ ಮತ್ತೆ ಕನ್ನಡ ಚಿತ್ರರಂಗಕ್ಕೆ ಬಂದಿದ್ದೇನೆ. ಬಲರಾಮ ಅದ್ಭುತ ಕಥೆಯನ್ನು ಒಳಗೊಂಡಿದೆ. ನನ್ನ ಪಾತ್ರಕ್ಕೂ ಸಾಕಷ್ಟು ಮಹತ್ವವಿದೆ ಎಂದು ಪ್ರಿಯಾ ಆನಂದ್ ಸಂತಸ ವ್ಯಕ್ತಪಡಿಸಿದರು.

ನಮ್ಮ ಸಿನಿಮಾ ಸಿಂಪಲ್ ಆಗಿ ಪ್ರಾರಂಭವಾಗಿ ಸೂಪರ್ ಆಗಿ ಮೂಡಿಬಂದಿದೆ. ಪ್ರೇಕ್ಷಕರಿಗೆ ಅಗತ್ಯವಾದ ಎಲ್ಲಾ ಅಂಶಗಳು ಸಿನಿಮಾದಲ್ಲಿವೇ ಚಿತ್ರ ಭರ್ಜರಿ ಯಶಸ್ಸು ಪಡೆಯಲಿದೆ ಎಂಬ ನಂಬಿಕೆ ನನಗಿದೆ ಎಂದು ನಿರ್ಮಾಪಕ ಶ್ರೇಯಸ್ ಹೇಳಿದರು. ಬಲರಾಮ ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು, ಪದ್ಮಾವತಿ ಪ್ರೊಡಕ್ಷನ್ ಹೌಸ್‌ನಲ್ಲಿ ನಿರ್ಮಾಣವಾಗಿದೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಬಲರಾಮನ ದಿನಗಳು ಶೀಘ್ರದಲ್ಲಿ ತೆರೆಗೆ ಬರಲಿದೆ.

ತುಳು, ಜವಾರಿ ಭಾಷೆಯಲ್ಲಿ ಹಾಲಿವುಡ್ ವೈಭವ

ಪ್ರತಿವಾರ ವಿವಿಧ ಭಾಷೆಗಳ ಹಲವು ಸಿನಿಮಾಗಳು ತೆರೆಗೆ ಬರುತ್ತವೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ರಿಲೀಸ್ ಆಗುವ ಚಿತ್ರಗಳು, ಚಿತ್ರಮಂದಿರಗಳಲ್ಲಿ ಯಶಸ್ವಿ ಪ್ರದರ್ಶನ ಕಾಣದಿದ್ದರೂ ಒಟಿಟಿಯಲ್ಲಿ ಗೆದ್ದಿವೆ. ಹಾಗಾಗಿಯೇ ಇಂದು ಹಲವು ಒಟಿಟಿಗೆ ಪ್ಲಾಟ್ ಫಾರ್ಮ್‌ಗಳು ಪ್ರೇಕ್ಷಕರಿಗೆ ಲಭ್ಯವಿವೆ. ಈಗ ಡಿಜಿಟಲ್ ಮನರಂಜನೆಯ ಸಾಲಿಗೆ ಟಾಕೀಸ್ ಆಪ್ ಸೇರ್ಪಡೆಯಾಗಿದೆ. ವಿಶೇಷ ಎಂದರೆ ಈಆಪ್‌ನಲ್ಲಿ

ಹಾಲಿವುಡ್ ಸಿನಿಮಾಗಳು ತುಳು ಭಾಷೆಯಲ್ಲಿ ಡಬ್ ಆಗಿ ಪ್ರೇಕ್ಷಕರಿಗೆ ವೀಕ್ಷಣೆಗೆ ಲಭ್ಯವಾಗಲಿವೆ. ಅಷ್ಟು ಮಾತ್ರವಲ್ಲ, ಉತ್ತರ ಕರ್ನಾಟಕದ ಜವಾರಿ ಭಾಷೆಯಲ್ಲೂ ಹಾಲಿವುಡ್ ಚಿತ್ರಗಳನ್ನು ಪ್ರಸಾರ ಮಾಡುವ ಪ್ರಯತ್ನ ನಡೆಯುತ್ತಿದೆ. ಆ ಮೂಲಕ ಪ್ರಾದೇಶಿಕ ಭಾಷೆಯಲ್ಲಿ ಸಿನಿಮಾ ನೋಡಿ ಆನಂದಿಸಬೇಕೆನ್ನುವ ವೀಕ್ಷಕರಿಗೆ ಇದು ಸಿಹಿ ಸುದ್ದಿಯಾಗಿದೆ.

ಇದು ಭಾರತದಲ್ಲಿ ಆಮೇಜಾನ್ ಪ್ರೈಮ್,

ನೆಟ್ ಫ್ಲಿಕ್ಸ್, ಜ್ಹಿಯೋ ಹಾಟ್ ಸ್ಟಾರ್‌ನಂತಹ ಒಟಿಟಿಯಾಗಿ ಹಾಲಿವುಡ್ ಚಿತ್ರಗಳನ್ನು ಸ್ಥಳೀಯ ಭಾಷೆಯಲ್ಲಿ ಪ್ರದರ್ಶಿಸುವ ವೇದಿಕೆಯಾಗಿದೆ. ಈ ಪ್ರಯತ್ನಕ್ಕೆ ತುಳುವಿನಲ್ಲಿ ಅಸ್ತ್ರ ಪ್ರೊಡಕ್ಷನ್ ಹಾಗೂ ಸಿಟಡೆಲ್ ಡೆವಲಪರ್ಸ್ ಪ್ರಾಯೋಜಕರಾಗಿವೆ. ಸ್ಪೈಡರ್ ಮ್ಯಾನ್, ಗಾಡ್ಜಿಲ್ಲ, ಕರಾಟೆ ಕಿಡ್, ಅನಕೊಂಡ, ಮೆನ್ ಇನ್ ಬ್ಲಾಕ್ ಸೇರಿದಂತೆ ಹಲವು ಸಿನಿಮಾಗಳು ತುಳು ಹಾಗೂ ಜವಾರಿ ಭಾಷೆಯಲ್ಲಿ ವೀಕ್ಷಣೆಗೆ ಲಭ್ಯವಾಗಲಿವೆ.

ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಟಾಕೀಸ್ ಆಪ್ ಅನ್ನು ಅನಾವರಣ ಮಾಡಿ, ಶುಭಕೋರಿದ್ದಾರೆ. ಇದು ಕರಾವಳಿಯ, ಕನ್ನಡದ ಮತ್ತು ಇತರೆ ಪ್ರಾದೇಶಿಕ ಕಲಾವಿದರಿಗೊಂದು ದೊಡ್ಡ ಡಿಜಿಟಲ್ ವೇದಿಕೆಯಾಗಿ ಅವಕಾಶ ಕಲ್ಪಿಸಿದೆ. ಸಿನಿಮಾಗಳು, ವೆಬ್ ಸೀರಿಸ್, ಕಿರುಚಿತ್ರಗಳು, ಕಾರ್ಟೂನ್ ಶೋಗಳು, ಕಾಮಿಡಿ, ಡ್ರಾಮಾ ರಿಯಾಲಿಟಿ ಶೋಗಳು ಮತ್ತು ಟಾಕೀಸ್ ಕಿಚನ್ ಮುಂತಾದ ವಿಭಿನ್ನ ಕಾರ್ಯಕ್ರಮಗಳ ಜತೆಗೆ ಈಗ ವಿಶ್ವ ಸಿನಿಮಾವನ್ನು ಸ್ವಂತ ಭಾಷೆಯಲ್ಲಿ ನೋಡಬಹುದಾದ ವೇದಿಕೆ ಒದಗಿಸಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ. ಪ್ರಾದೇಶಿಕ ಭಾಷೆಗಳ ವೈಭವವನ್ನು ಜಾಗತಿಕ ತಾಣಕ್ಕೆ ತಲುಪಿಸುವಲ್ಲಿ ಇದು ಕೇವಲ ತಂತ್ರಜ್ಞಾನ ಪ್ರಗತಿ ಅಲ್ಲ, ಸಂಸ್ಕೃತಿ ಸಂರಕ್ಷಣೆಯ ಮೌಲ್ಯಯುತ ಹೆಜ್ಜೆಯಾಗಿದೆ.

SBI
The banker to every Indian

ಎಸ್‌ಬಿಐ ಕಾರು ಸಾಲಗಳು

ನಿಮ್ಮ ಕನಸಿನ ಕಾರನ್ನು ಉಲ್ಲಾಸದಿಂದ ಚಾಲನೆ ಮಾಡಿ

ಆಚರಣೆಗಳು ಅಪರಿಮಿತ

- ಕಡಿಮೆ ಬಡ್ಡಿದರಗಳು
- ಶೂನ್ಯ ಪೂರ್ವಪಾವತಿ ಶುಲ್ಕಗಳು
- 2 ವರ್ಷಗಳ ನಂತರ ಯಾವುದೇ ಫೋರ್‌ಕ್ಲೋಸರ್ ಶುಲ್ಕಗಳಿಲ್ಲ
- 100% ವರೆಗೆ ಆನ್-ರೋಡ್ ಹಣಕಾಸು

ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ

ಸಹಾಯಕ್ಕಾಗಿ, ಕರೆ ಮಾಡಿ 1800 1234 | 2100

ನಮ್ಮನ್ನು ಅನುಸರಿಸಿ

ಸಮಾಜ ಕಲ್ಯಾಣ ಇಲಾಖೆ

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಬೆಂಗಳೂರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಮಕರ ಸಂಕ್ರಾಂತಿ ಹಬ್ಬದ
ಹಾಗೂ ವಿಶ್ವವಾಣಿ ಪತ್ರಿಕೆಯ
11ನೇ ವಾರ್ಷಿಕೋತ್ಸವದ
ಹಾರ್ದಿಕ ಶುಭಾಶಯಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ನಿಗಮದ ಧ್ಯೇಯೋದ್ದೇಶ: ಮೂಲ ಗ್ರಾಮಗಳಿಂದ ದೂರದಲ್ಲಿ ನಿರ್ಮಾಣಗೊಂಡಿರುವ ತಾಂಡಾಗಳಲ್ಲಿ ವಾಸವಾಗಿರುವ ಬಂಜಾರ/ಲಂಬಾಣಿ ಸಮುದಾಯಕ್ಕೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ, ಸರ್ವತೋಮುಖ ಅಭಿವೃದ್ಧಿ ಪಡಿಸಿ ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕರ್ನಾಟಕ ಸರ್ಕಾರದಿಂದ ಕಂಪನಿ ಕಾಯ್ದೆ, 1956ರ ಅಡಿಯಲ್ಲಿ ದಿನಾಂಕ:23.02.2009 ರಂದು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದೆ. ನಿಗಮವು ಬಂಜಾರ ಸಮುದಾಯದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಭಿವೃದ್ಧಿಗಾಗಿ ಕಾರ್ಯಯೋಜನೆ ಯನ್ನು ಅನುಷ್ಠಾನಗೊಳಿಸುತ್ತಿದೆ.

1.ಸ್ವಯಂ ಉದ್ಯೋಗ (ನೇರಸಾಲ) ಯೋಜನೆ:
1. ಲಾಭದಾಯಕ ಆರ್ಥಿಕ ಕಿರುಚಟುವಟಿಕೆಗಳಿಗಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು
2. ಘಟಕ ವೆಚ್ಚ ರೂ.1.00ಲಕ್ಷಗಳು, ರೂ.50,000/- ಸಹಾಯಧನ ಹಾಗೂ ರೂ.50,000/- ಸಾಲ

2. ಕುರಿ/ಮೇಕೆ ಸಾಕಾಣಿಕೆ ಯೋಜನೆ:-
1. ಕುರಿ/ಮೇಕೆ ಸಾಕಾಣಿಕೆಗಾಗಿ ಘಟಕ ವೆಚ್ಚ ರೂ.1.00ಲಕ್ಷಗಳು, ರೂ.50,000/- ಸಹಾಯಧನ ಹಾಗೂ ರೂ.50,000/- ಸಾಲ

3. ಹೈನುಗಾರಿಕೆ ಯೋಜನೆ:-
- ಹಸು/ಎಮ್ಮೆ ಸಾಕಾಣಿಕೆ ಮಾಡಲು ಮತ್ತು ಅದರಿಂದ ಆದಾಯ ಗಳಿಸಲು ಘಟಕ ವೆಚ್ಚದ ಶೇ.50ರಷ್ಟು ಅಥವಾ ಗರಿಷ್ಠ ರೂ.1.25ಲಕ್ಷಗಳವರೆಗೆ ಸಹಾಯಧನವನ್ನು ಉಳಿದ ಮೊತ್ತ ಬ್ಯಾಂಕ್ ಸಾಲ ಆಗಿರುತ್ತದೆ. ಈ ಯೋಜನೆಯನ್ನು ಬ್ಯಾಂಕ್ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುವುದು.

4.ಉದ್ಯಮಶೀಲತಾ ಯೋಜನೆ(ಬ್ಯಾಂಕುಗಳ ಸಹಯೋಗದಲ್ಲಿ):-
1. ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಯಡಿ:- ವಿವಿಧ ಸ್ವಯಂ ಉದ್ಯೋಗದ ಉದ್ದೇಶಗಳಿಗೆ ಯೋಜನಾ ವೆಚ್ಚದ ಶೇ.70ರಷ್ಟು ಅಥವಾ ಗರಿಷ್ಟ ರೂ.2.00ಲಕ್ಷಗಳವರೆಗೆ ಸಹಾಯಧನವನ್ನು ಮಂಜೂರು ಮಾಡಲಾಗುವುದು. ಉಳಿದ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ.
2. ಸ್ವಾವಲಂಬಿ ಸಾರಥಿ ಯೋಜನೆಯಡಿ:- ಸರಕು ಸಾಗಾಣಿಕೆ/ಟ್ಯಾಕ್ಸಿ (ಹಳದಿ ಬೋರ್ಡ್) ವಾಹನಗಳಿಗೆ ಯೋಜನಾ ವೆಚ್ಚದ ಶೇ.75ರಷ್ಟು ಅಥವಾ ಗರಿಷ್ಟ ರೂ.4.00 ಲಕ್ಷಗಳವರೆಗೆ ಸಹಾಯಧನವನ್ನು ಮಂಜೂರು ಮಾಡಲಾಗುವುದು. ಉಳಿದ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ.
3. ಫಾಸ್ಟ್ ಫುಡ್ ಟ್ರಕ್ ಟ್ರೈಲರ್/ಮೊಬೈಲ್ ಕಿಚನ್ ಫುಡ್ ಕಿಯೋಸ್ಕ್ ಯೋಜನೆಯಡಿ:- ಪರಿಶಿಷ್ಟ ಜಾತಿ ಬಂಜಾರ ಸಮುದಾಯದ ನಿರುದ್ಯೋಗಿ ಯುವಕ/ಯುವತಿಯರಿಗೆ ಘಟಕ ವೆಚ್ಚಕ್ಕೆ ಸಹಾಯಧನ ಶೇ.75ರಷ್ಟು ಅಥವಾ ಗರಿಷ್ಟ ರೂ.4.00 ಲಕ್ಷಗಳು, ಉಳಿದ ಮೊತ್ತ ಬ್ಯಾಂಕ್ ಸಾಲದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

5. ಭೂ ಒಡೆತನ ಯೋಜನೆ:-
1. ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಯೋಜನೆಯಡಿ ಸೌಲಭ್ಯವನ್ನು ನೀಡಲಾಗುವುದು.
2. 26 ಜಿಲ್ಲೆಗಳಿಗೆ ಘಟಕ ವೆಚ್ಚ ರೂ.20.00ಲಕ್ಷ ಮತ್ತು ಉಳಿದ 04 ಜಿಲ್ಲೆಗಳಿಗೆ (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ) ಘಟಕ ವೆಚ್ಚ ರೂ.25.00ಲಕ್ಷ.
3. ಘಟಕ ವೆಚ್ಚದ ಶೇ.50 ರಷ್ಟು ಸಹಾಯಧನ ಹಾಗೂ ಶೇ.50 ರಷ್ಟು ಸಾಲವಾಗಿರುತ್ತದೆ.
4. ಫಲಾನುಭವಿಯು ವಾಸಸ್ಥಳದ ಸುತ್ತ 10 ಕಿ.ಮೀಟರ್ ವ್ಯಾಪ್ತಿಯೊಳಗೆ ಕೃಷಿ ಜಮೀನನ್ನು ಖರೀದಿಸಬಹುದು.

6 ಗಂಗಾ ಕಲ್ಯಾಣ ಯೋಜನೆ- ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ :-
1. ಸಣ್ಣ ಮತ್ತು ಅತಿ ಸಣ್ಣ ರೈತರು ಹೊಂದಿರುವ 1.20 ಎಕರೆಯಿಂದ 5.00 ಎಕರೆ ವಿಸ್ತೀರ್ಣದ ಖುಷ್ಕಿ ಜಮೀನಿನಲ್ಲಿ ಕೊಳವೆ ಬಾವಿ ಕೊರೆದ ಪಂಪುಮೋಟಾರ್ ಅಳವಡಿಸಿ ವಿದ್ಯುದ್ದೀಕರಣಗೊಳಿಸಿ ಸೌಲಭ್ಯ ಒದಗಿಸಲಾಗುವುದು.
2. ಮಲೆನಾಡು & ಕರಾವಳಿ ಜಿಲ್ಲೆಗಳಲ್ಲಿ ಕನಿಷ್ಠ 1.00 ಎಕರೆ ಜಮೀನು ಹೊಂದಿರಬೇಕು.
3. 25 ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ.3.75 ಲಕ್ಷ (ಗರಿಷ್ಟ ರೂ. 3.25 ಲಕ್ಷ ಸಹಾಯಧನ, ಉಳಿದ ರೂ.50,000/- ಸಾಲವಾಗಿರುತ್ತದೆ.
4. 06 ಜಿಲ್ಲೆಗಳಿಗೆ ಘಟಕ ವೆಚ್ಚ ರೂ.4.75ಲಕ್ಷವಿದ್ದು, ಗರಿಷ್ಠ ರೂ.4.25ಲಕ್ಷ ಸಹಾಯಧನ ಉಳಿದ ರೂ.0.50ಲಕ್ಷಗಳು ಸಾಲವಾಗಿರುತ್ತದೆ. (ಬೆಂಗಳೂರು(ನಗರ), ಬೆಂಗಳೂರು(ಗ್ರಾ), ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಮತ್ತು ರಾಮನಗರ ಜಿಲ್ಲೆ)
5. ರೂ.75,000/-ಗಳನ್ನು ಎಸ್ಕಾಂಗಳಿಗೆ ವಿದ್ಯುದ್ದೀಕರಣಗಳಿಗೆ ಬಿಡುಗಡೆ ಮಾಡಲಾಗುವುದು.

7. ಮೈಕ್ರೊ ಕ್ರೆಡಿಟ್ (ಪ್ರೇರಣಾ) ಯೋಜನೆ:-
1. ಬಂಜಾರ ಸಮುದಾಯದ 10 ಮಹಿಳಾ ಸದಸ್ಯರಿರುವ ಸ್ವಸಹಾಯ ಗುಂಪು ಆಗಿರಬೇಕು.
2. ಘಟಕ ವೆಚ್ಚ ರೂ.5.00ಲಕ್ಷಗಳಿದ್ದು, ಸಹಾಯಧನ ರೂ.2.50 ಲಕ್ಷ ಮತ್ತು ಸಾಲ ರೂ.2.50 ಲಕ್ಷ ಆಗಿರುತ್ತದೆ.
3. ಮಹಿಳೆಯರಿಗೆ ಗುಂಪು ಚಟುವಟಿಕೆಗಳ ಮೂಲಕ ಉತ್ಪಾದನಾ ಚಟುವಟಿಕೆಗಳನ್ನು ಆರಂಭಿಸಿ ಸ್ವಯಂ ಉದ್ಯೋಗ ಪ್ರಾರಂಭಿಸಬೇಕು.
4. ಮಹಿಳಾ ಸ್ವಸಹಾಯ ಸಂಘವು ನೊಂದಣಿಯಾಗಿರಬೇಕು.

ನಿಗಮದ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆಯಲು ಇರಬೇಕಾದ ಸಾಮಾನ್ಯ ಅರ್ಹತೆಗಳು
1. ಅರ್ಜಿದಾರರು ಪರಿಶಿಷ್ಟ ಜಾತಿ ಬಂಜಾರ ಸಮುದಾಯಕ್ಕೆ ಸೇ-ರಿದವರಾಗಿರಬೇಕು ಹಾಗೂ ಕಳೆದ 15 ವರ್ಷದಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
2. ಅರ್ಜಿದಾರರು ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಯಡಿ ಸೌಲಭ್ಯ ಪಡೆಯಬೇಕಾದರೆ ಕನಿಷ್ಠ 21 ವರ್ಷದಿಂದ ಗರಿಷ್ಠ 56 ವರ್ಷದ ವಯೋಮಾನದವರಾಗಿರಬೇಕು.
3. ನಿಗಮದಿಂದ ನೇರವಾಗಿ ಅನುಷ್ಠಾನಗೊಳಿಸುವ ಯೋಜನೆಗಳಿಗೆ ಹಾಗೂ ಕೃಷಿ ಮತ್ತು ಕೃಷಿ ಆಧಾರಿತ ಚಟುವಟಿಕೆಗಳಿಗೆ ಕನಿಷ್ಠ 21 ವರ್ಷ ಗರಿಷ್ಠ 60 ವರ್ಷಗಳ ವಯೋಮಿತಿಯಲ್ಲಿರಬೇಕು.
4. ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ/ಅರೆ ಸರ್ಕಾರಿ/ಇತರೆ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು.
5. 5. ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು.
6. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ರೂ.1,50,000/- ಗ್ರಾಮೀಣ ಹಾಗೂ ರೂ.2,00,000/- ನಗರ ಪ್ರದೇಶದವರಿಗೆ ಮಿತಿಯೊಳಗಿರಬೇಕು.
7. ವಿಕಲಚೇತನರಾಗಿದ್ದಲ್ಲಿ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಪ್ರಮಾಣ ಪತ್ರವನ್ನು ಸಲ್ಲಿಸುವುದು.
8. ಭೂ ಒಡೆತನ ಯೋಜನೆಯಡಿ ಸೌಲಭ್ಯ ಪಡೆಯಲು ಫಲಾಪೇಕ್ಷಿಯು ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಾಗಿರಬೇಕು ಮತ್ತು ಅವರ ಪತಿ ಅಥವಾ ಕುಟುಂಬದ ಸದಸ್ಯರ ಹೆಸರಿನಲ್ಲಿ ಕೃಷಿ ಜಮೀನಿರಬಾರದು. ಜಮೀನು ಮಾರಾಟ ಮಾಡುವ ಭೂ ಮಾಲೀಕರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇ-ರಿರಬಾರದು.
9. ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಪಡೆಯಲು ಫಲಾಪೇಕ್ಷಿಯು ಸಣ್ಣ ಮತ್ತು ಅತಿಸಣ್ಣ ರೈತರಾಗಿರಬೇಕು.
10. ವಾಹನ ಸೌಲಭ್ಯ ಪಡೆಯಲು ವಾಹನ ಚಾಲನಾ ಪರವಾನಗೆ ಹೊಂದಿರಬೇಕು.
11. ಅರ್ಜಿಯನ್ನು ಅನ್ಲೈನ್‌ನಲ್ಲಿ ಸಲ್ಲಿಸಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಡಾ|| ಹೆಚ್ ಸಿ ಮಾದೇವಪ್ಪ ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಡಾ||ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡುತ್ತಿರುವುದು

ಆಯುಕ್ತರು
ಶ್ರೀ. ಯು. ಚಂದ್ರನಾಯ್ಕ

ಅಧ್ಯಕ್ಷರು
ಶ್ರೀ. ಎನ್. ಜಯದೇವ ನಾಯ್ಕ

With Best Compliments From

RAMANASHREE
WE BUILD THE FUTURE

ರಮಣಶ್ರೀ ಸಮೂಹ ಸಂಸ್ಥೆಗಳು

ಹೋಟೆಲ್ಸ್ ಮತ್ತು ರೆಸಾರ್ಟ್ಸ್, ವಿದ್ಯಾ ಸಂಸ್ಥೆಗಳು ಹಾಗೂ
ರಿಯಲ್ ಎಸ್ಟೇಟ್ ಅಭಿವೃದ್ಧಿ

ಕಾರ್ಪೊರೇಟ್ ಕಛೇರಿ :
ರಮಣಶ್ರೀ ಹೌಸ್

ನಂ. 16, ರಾಜಾ ರಾಮ್ ಮೋಹನ್ ರಾಯ್ ರಸ್ತೆ.
ಬೆಂಗಳೂರು – 560025.
ದೂರವಾಣಿ : 080 – 4135 0050

Ramanashree Group

Hotels & Resort, Educational Institutions
& Real Estate Development

Corporate Office:
Ramanashree House

No. 16, Raja Rammohan Roy Road,
Bangalore - 560 025
Ph: 080 - 41350050

Email : shadakshari@ramanashree.com **/ask@ramanashree.com**
Visit us at Website : **www.ramanashree.com**

ಮಕರ ಸಂಕ್ರಾಂತಿ ಹಬ್ಬದ ಹಾಗೂ ವಿಶ್ವವಾಣಿ ಪತ್ರಿಕೆಯ 11ನೇ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು

ಉಡುಪಿ ಶ್ರೀ ಮಂದಾರ್ತಿ ವೈಭವ

#18, 5th Cross, Ramurthy Nagar Main Road, Dodda Banaswadi, Bengaluru - 560 043.

Contact: 9700862222 | 9845948794 | 8861860265

We use Refined Oil and Purified Water for Cooking | No Added Colours No Artificial Flavours No Preservatives | GOOGLE MAPS | Google

Vidyavardhaka Sangha(R), Mysuru

VIDYAVARDHAKA COLLEGE OF ENGINEERING

Autonomous Institute

Affiliated to Visvesvaraya Technological University, Belagavi, Karnataka, India

Gokulam-3rd Stage, Mysuru-570002

ADMISSIONS OPEN FOR 2026 - 2027

All India Ranking

Institute Rankings ISO 9001:2015 Validity: 2024-27

INSTITUTE OF HAPPINESS AWARDED BY QS I-GAUGE

Times of India 154th Ranking | THE WEEK 143rd Rank | Outlook 74th Rank

CAREERS 360 The Education Hub AAA+ | OBE Ranking Diamond R.World Ranking

75+ University Ranks | 610+ Placement Offers in 2024-25 | 27 LPA Highest Placement Offer | 131+ PhD Holders | 295+ Qualified & Passionate Faculty | 18:1 Student-Faculty Ratio

PROGRAMMES OFFERED

BACHELOR OF ENGINEERING (BE)
- Computer Science & Engineering
- Mechanical Engineering
- Civil Engineering
- Electronics & Communication Engineering
- CSE (AI&ML)
- Electrical & Electronics Engineering

MASTER OF TECHNOLOGY (MTech)
- Computer Science & Engineering
- Civil Engineering
- Electronics & Communication Engineering

MASTER OF COMPUTER APPLICATIONS (MCA)
2 Years Full Time Programme

MASTER OF BUSINESS ADMINISTRATION (MBA)
- Finance • Marketing • Human Resource
- Banking & Insurance • Business Analytics
- Project Management

PhD
- Mathematics • Physics • Chemistry
- MBA • Computer Science & Engineering
- Civil Engineering • Electrical & Electronics Engineering • Electronics & Communication Engineering • Mechanical Engineering

WHY STUDY @ VVCE?
Excellent Training & Placement | Inspiring ambience | Committed & Passionate Faculty | Industry Supported labs | Technology Enabled Campus | Indoor Sports Complex | State-of-the-art Library | Smart Classroom | In-Campus Hostel

COLLEGE CODE
BE CET - E071 | COMED - K - E147
M TECH PGCET - T886
MBA PGCET - B315
MCA PGCET - C613

ACADEMIC PARTNERS
wipro Infosys Logycent coursera upGrad HARAPPA Incture enventure TESSOLVE LARSEN & TOUBRO VIVARTAN

Schedule A Virtual Meeting
admissions@vvce.ac.in | ao@vvce.ac.in
0821-4276200/01/03/07

www.vvce.ac.in admissions@vvce.ac.in | ao@vvce.ac.in
0821 4276200 @vvceofficial

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ

Seshadripuram Educational Trust SINCE 1930 INSTITUTIONS

ಬೆಂಗಳೂರು • ಮೈಸೂರು • ತುಮಕೂರು • ಮಂಡ್ಯ

080-22955350 & 22955352

E-mail: info@set.edu.in/set.edu.in@gmail.com

www.set.edu.in

ಶಾಲೆಗಳು
- ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆ, ಶೇಷಾದ್ರಿಪುರಂ
- ಶೇಷಾದ್ರಿಪುರಂ ಪ್ರೌಢಶಾಲೆ, ಶೇಷಾದ್ರಿಪುರಂ
- ಶೇಷಾದ್ರಿಪುರಂ ಇಂಗ್ಲೀಷ್ ಪ್ರೌಢಶಾಲೆ, ಕುಮಾರ ಪಾರ್ಕ್
- ಶೇಷಾದ್ರಿಪುರಂ ಪ್ರೌಢಶಾಲೆ, ಯಲಹಂಕ
- ಶೇಷಾದ್ರಿಪುರಂ ಪಬ್ಲಿಕ್ ಸ್ಕೂಲ್, ಯಲಹಂಕ
- ಶೇಷಾದ್ರಿಪುರಂ ಶಾಲೆ (ICSE), ತುಮಕೂರು
- ಶೇಷಾದ್ರಿಪುರಂ ಇಂಗ್ಲೀಷ್ ಶಾಲೆ (CBSE), ತುಮಕೂರು

ಪದವಿ-ಪೂರ್ವ ಕಾಲೇಜುಗಳು
- ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ಶೇಷಾದ್ರಿಪುರಂ
- ಶೇಷಾದ್ರಿಪುರಂ ಸಂಜೆ ಪದವಿಪೂರ್ವ ಕಾಲೇಜು, ಶೇಷಾದ್ರಿಪುರಂ
- ಶೇಷಾದ್ರಿಪುರಂ ಸಂಯುಕ್ತ ಪದವಿಪೂರ್ವ ಕಾಲೇಜು, ಶೇಷಾದ್ರಿಪುರಂ
- ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ಕೆಂಗೇರಿ
- ಶೇಷಾದ್ರಿಪುರಂ ಸಂಯುಕ್ತ ಪದವಿಪೂರ್ವ ಕಾಲೇಜು, ಯಲಹಂಕ
- ಶೇಷಾದ್ರಿಪುರಂ ಬೇಸ್ ಪದವಿಪೂರ್ವ ಕಾಲೇಜು, ಮಾಗಡಿ ರಸ್ತೆ,
- ಶೇಷಾದ್ರಿಪುರಂ ಬೇಸ್ ಪದವಿಪೂರ್ವ ಕಾಲೇಜು, ಯಲಹಂಕ,
- ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ಮೈಸೂರು
- ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು, ತುಮಕೂರು

ಪದವಿ ಕಾಲೇಜುಗಳು
- ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರಂ
- ಶೇಷಾದ್ರಿಪುರಂ ಸಂಜೆ ಕಾಲೇಜು, ಶೇಷಾದ್ರಿಪುರಂ
- ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್, ಶೇಷಾದ್ರಿಪುರಂ
- ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ
- ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್, ಕೆಂಗೇರಿ
- ಶೇಷಾದ್ರಿಪುರಂ ಪದವಿ ಕಾಲೇಜು, ಮೈಸೂರು
- ಶೇಷಾದ್ರಿಪುರಂ ಕಾಲೇಜು, ತುಮಕೂರು

ಸ್ನಾತಕೋತ್ತರ ಅಧ್ಯಯನಗಳು
- ಶೇಷಾದ್ರಿಪುರಂ ಕಾಲೇಜು ಸ್ನಾತಕೋತ್ತರ ಕೇಂದ್ರ, ಶೇಷಾದ್ರಿಪುರಂ
- ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಸ್ನಾತಕೋತ್ತರ ಕೇಂದ್ರ, ಯಲಹಂಕ
- ಶೇಷಾದ್ರಿಪುರಂ ಪದವಿ ಕಾಲೇಜು, ಕಾಲೇಜು ಸ್ನಾತಕೋತ್ತರ ಕೇಂದ್ರ, ಮೈಸೂರು
- ಶೇಷಾದ್ರಿಪುರಂ ಕಾಲೇಜು ಸ್ನಾತಕೋತ್ತರ ಕೇಂದ್ರ, ತುಮಕೂರು

ಸಂಶೋಧನೆ
- ಶೇಷಾದ್ರಿಪುರಂ ಸಂಶೋಧನಾ ಪ್ರತಿಷ್ಠಾನ, ಯಲಹಂಕ
- ಶೇಷಾದ್ರಿಪುರಂ ಕಾಲೇಜು ಸಂಶೋಧನಾ ಕೇಂದ್ರ, ಶೇಷಾದ್ರಿಪುರಂ
- ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಸಂಶೋಧನಾ ಕೇಂದ್ರ, ಯಲಹಂಕ

ಕಾನೂನು
- ಶೇಷಾದ್ರಿಪುರಂ ಕಾನೂನು ಕಾಲೇಜು, ಶೇಷಾದ್ರಿಪುರಂ

ಇಂಜಿನಿಯರಿಂಗ್
- ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕಡಕೋಳ, ಮೈಸೂರು

ಜಾಗತಿಕ ಪಾಲುದಾರಿಕೆಗಳು
- ಶೇಷಾದ್ರಿಪುರಂ ಅಕಾಡೆಮಿ ಫಾರ್ ಗ್ಲೋಬಲ್ ಎಕ್ಸಲೆನ್ಸ್, ಯಲಹಂಕ

ವಿದ್ಯಾರ್ಥಿ ನಿಲಯ
- ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಮಹಿಳಾ ಹಾಸ್ಟೆಲ್, ಯಲಹಂಕ

ಎನ್. ಆರ್. ಪಂಡಿತಾರಾಧ್ಯ
ಅಧ್ಯಕ್ಷರು

ನಾಡೋಜ ಡಾ|| ವೂಡೇ ಪಿ. ಕೃಷ್ಣ
ಗೌ|| ಪ್ರಧಾನ ಕಾರ್ಯದರ್ಶಿಗಳು

ವಿಶ್ವವಾಣಿ 11ನೇ ವಾರ್ಷಿಕೋತ್ಸವದ ಶುಭಾಶಯಗಳು

ಮಕರ ಸಂಕ್ರಾಂತಿ ಹಬ್ಬದ ಹಾಗೂ ವಿಶ್ವವಾಣಿ ಪತ್ರಿಕೆಯ 11ನೇ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು

ಶ್ರೀಯುತ ಹೂಡಿ ವಿಜಯಕುಮಾರ್
ಸ್ವಾಭಿಮಾನಿ ಜನತಾ ಪಕ್ಷದ ಸ್ಥಾಪಕರು
ಮಾಲೂರು ವಿಧಾನ ಸಭಾಕ್ಷೇತ್ರ

ಶ್ರೀಮತಿ ಶ್ವೇತಾ ವಿಜಯ್ ಕುಮಾರ್
ಬಿಬಿಎಂಪಿ ಮಾಜಿ ಸದಸ್ಯರು



ನಾಡಿನ ಸಮಸ್ತ ಜನತೆಗೆ ಮಕರ ಸಂಕ್ರಾಂತಿಯ ಶುಭಾಶಯಗಳು
ವಿಶ್ವವಾಣಿ 11ನೇ ವಾರ್ಷಿಕೋತ್ಸವದ ಶುಭಾಶಯಗಳು

C.I.T CHANNABASAVESHWARA INSTITUTE OF TECHNOLOGY

Partnering in Academic Excellence

CET CODE : E101
COMED-K CODE : E035

ISO:9001-2015 Certified, NAAC Accredited, Affiliated to VTU, Belagavi, Approved By AICTE, New Delhi.

VTU AFFILIATED | ISO CERTIFIED | NAAC ACCREDITED

- 90+ Reputed companies visit campus every year
- 80%+ Overall placement for eligible students from Past 6Years
- Highest CTC : Z-Scaler 2023-24 –15.00 LPA
  IDFC First Bank 2024-25 -14.00 LPA

Awarded with Excellent performance for BE Students in rural India

- 2016 – Excellent Engineering Institution in Rural India. Award during National Education Summit and Awards
- 2018 – Most Promising Engineering Institution. Award during Leaders Conclave
- 2019 – Outstanding & Positive Accomplishment of the Institution. Awarded by the Academic Insights
- 2022 – Best Engineering College for Building Global Technocrats for Rural Talents. 4th Asia Pasific education & Technology
- 2024 – Outstanding Contribution to Rural Engineering Education by the federation for World Academics, New Delhi
- 2025 – Best Brand in Recognition of academic performance by IIRF New Delhi

UG COURSES

- B.E - ARTIFICIAL INTELLIGENCE & DATA SCIENCE
- B.E - COMPUTER SCIENCE & ENGINEERING
- B.E - CIVIL ENGINEERING
- B.E - ELECTRONICS & COMMUNICATION ENGG.
- B.E - ELECTRICAL & ELECTRONICS ENGINEERING
- B.E - INFORMATION SCIENCE & ENGINEERING
- B.E - MECHANICAL ENGINEERING

PG COURSES

- M.Tech - Computer Science & Engineering
- M.Tech - Electronics
- M.B.A. - Master of Business Administration
- M.C.A. - Master of Computer Applications

Research Centres - Ph.D Programs

- Computer Science & Engineering
- Electronics & Communication Engineering
- Mechanical Engineering
- Electrical & Electronics Engineering
- Mathematics, Chemistry.

ಬೆಳ್ಳಿಹಬ್ಬ ಸಂಭ್ರಮ-ಡೀಮ್ಡ್ ವಿವಿ ಹಾದಿಯಲ್ಲಿ ಶ್ರೀ ಚನ್ನಬಸವೇಶ್ವರ ಸ್ವಾಮಿ ರೂರಲ್ ಎಜುಕೇಷನ್ ಸೊಸೈಟಿಯಡಿ ಸ್ಥಾಪಿತವಾದ ಕಾಲೇಜು. ಗ್ರಾಮೀಣ ವಿದ್ಯಾರ್ಥಿಗಳನ್ನು ಎಂಜಿನಿಯರ್‌ಗಳಾಗಿ ರೂಪಿಸುತ್ತಿರುವ

ಕಲ್ಪತರು ನಾಡಿನ ಹೆಮ್ಮೆಯ ಕಾಲೇಜು "ಸಿಐಟಿ"

ಅದು 2000ನೇ ಇಸವಿ. ಕರ್ನಾಟಕದ ರಾಜಧಾನಿ ಬೆಂಗಳೂರು ಈ ಸಮಯದಲ್ಲಿ ಐ.ಟಿ ಉದ್ಯೋಗ ಸೃಷ್ಟಿ ಮಾಡುವ ವಿಶ್ವದ ಅತಿ ದೊಡ್ಡ ನಗರವಾಗಿ ಬೆಳೆಯುತ್ತಿದ್ದ ಕಾಲವದು. ಕಲ್ಪತರು ನಾಡು ಶೈಕ್ಷಣಿಕ ಬೀಡು ತುಮಕೂರು ಜಿಲ್ಲೆಯ ಮಧ್ಯಮ ವರ್ಗದವರು ಹಾಗೂ ಬಡ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳು ತಾಂತ್ರಿಕ ಪದವಿಯ ಶಿಕ್ಷಣವನ್ನು ಪಡೆದು ತಮ್ಮ ಭವಿಷ್ಯವನ್ನು ಉನ್ನತಗೊಳಿಸಿಕೊಳ್ಳಲು ನಿರೀಕ್ಷೆಯಿಂದ ಕಾಯುತ್ತಿದ್ದರು. ಈ ನಿರೀಕ್ಷೆಯ ಕನಸನ್ನು ಸಾಕಾರಗೊಳಿಸುವಂತೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ಪ್ರಮುಖವಾಗಿ ಕೇಂದ್ರೀಕರಿಸಿ 25 ವರ್ಷದ ಹಿಂದೆ ಸ್ಥಾಪಿತವಾಗಿದ್ದೇ ಶ್ರೀಚೆನ್ನಬಸವೇಶ್ವರ ರೂರಲ್ ಎಜುಕೇಷನ್ ಸೊಸೈಟಿ (ರಿ.). ಮಾಜಿ ಸಂಸದರು ಶಿಕ್ಷಣ ಪ್ರೇಮಿ ಜಿ.ಎಸ್.ಬಸವರಾಜ್ ಅವರ ದೂರದೃಷ್ಟಿ ಚಿಂತನೆಯ ಪ್ರತೀಕವಾದ ಈ ಶಿಕ್ಷಣ ಸಂಸ್ಥೆಯಡಿ ಗುಬ್ಬಿ ತಾಲ್ಲೂಕಿನ ಹೇರೂರಿನಲ್ಲಿ ಸಿಐಟಿ ತಾಂತ್ರಿಕ ಕಾಲೇಜು ಮೊದಲಿಗೆ ತಲೆ ಎತ್ತಿ ಕಳೆದ ಎರಡೂವರೆ ದಶಕದಂತೆ ಆಲದ ಮರದಂತೆ ವಿಸ್ತರಿಸುತ್ತಾ ಬಂದಿದೆ. ಇಂದು ಸಿಐಟಿ ಕ್ಯಾಂಪಸ್‌ನಲ್ಲಿ ಬರೀ ಎಂಜಿನಿಯರ್ ಕಾಲೇಜು ಮಾತ್ರ ತೆರೆದಿಲ್ಲ. ನರ್ಸರಿ ಶಾಲೆಯಿಂದ ಪ್ರಾಥಮಿಕ ಶಾಲೆ, ಪ್ರೌಢಶಾಲೆ (ಸಿ.ಬಿ.ಎಸ್.ಸಿ), ಪಿ.ಯು ಕಾಲೇಜು, ಪದವಿ ಕಾಲೇಜು, ಸ್ನಾತಕ ಪದವಿ ಕಾಲೇಜು, ಡಿಪ್ಲಮೋ, ಇಂಜಿನಿಯರಿಂಗ್ (ಬಿ.ಇ, ಎಂ.ಟೆಕ್, ಎಂ.ಬಿ.ಎ), ನರ್ಸಿಂಗ್ ಕಾಲೇಜುಗಳು ಸ್ಥಾಪನೆಗೊಂಡು ಪ್ರತೀ ವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ಅಕ್ಷರದ ಅರಿವು ಮೂಡಿಸಿ ಜೀವನಕ್ಕೆ ದಾರಿದೀಪವಾಗಿದೆ. ವಿಶೇಷವಾಗಿ ಕಲ್ಪತರು ಜಿಲ್ಲೆಯ ಹೆಣ್ಣುಮಕ್ಕಳು ಅಧಿಕ ಸಂಖ್ಯೆಯಲ್ಲಿ ಎಂಜಿನಿಯರಿಂಗ್ ಪದವೀಧರ ರಾಗುವಲ್ಲಿ ಸಿಐಟಿ ಕೊಡುಗೆ ಅಪಾರವಾಗಿದೆ.

9,450 ಎಂಜಿನಿಯರ್‌ಗಳ ಕೊಡುಗೆ: ತುಮಕೂರು ಜಿಲ್ಲೆಯ ಗ್ರಾಮೀಣ ಭಾಗದ ಬಹುಪಾಲು ಇಂಜಿನಿಯರ್ ಪದವೀಧರರು ಸಿ.ಐ.ಟಿ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳಾ-ಗಿರುವುದು ಕಾಲೇಜಿನ ಗರಿಮೆಯೆನಿಸಿದೆ. ಈವರೆಗೆ 9,450 ಎಂಜಿನಿಯರಿಂಗ್ ಪದವೀಧರರು ಕಾಲೇಜಿನಿಂದ ತೇರ್ಗಡೆಯಾಗಿ ನಾಡಿಗೆ ಕೊಡುಗೆ ಯಾಗಿದ್ದಾರೆ. ಬೆಳ್ಳಿವರ್ಷದೆಡೆಗೆ ಕಾಲೇಜು, ಶಿಕ್ಷಣ ಸಂಸ್ಥೆ ಪಾದಾರ್ಪಣೆ ಮಾಡುವಲ್ಲಿ ನೆರವಾದ ಪ್ರತಿಯೊಬ್ಬರು ಈ ಸಂದರ್ಭದಲ್ಲಿ ಸ್ತುತ್ಯಾರ್ಹರು ಎಂದುತ ಸಿಐಟಿ ಶಿಕ್ಷಣ ಸಮೂಹದ ಕಾರ್ಯದರ್ಶಿಗಳಾದ ಶಾಸಕ ಜಿ.ಬಿ.ಜ್ಯೋತಿಗಣೇಶ್ ಅಭಿನಂದಿಸಿದ್ದಾರೆ.

ದೇಶದ ಅತ್ಯುತ್ತಮ ಗ್ರಾಮಾಂತರ ಎಂಜಿನಿಯರ್ ಕಾಲೇಜು ಹೆಗ್ಗಳಿಕೆ: ಸಿ.ಐ.ಟಿ ತಾಂತ್ರಿಕ ಮಹಾವಿದ್ಯಾಲಯ ಭಾರತದಲ್ಲೆ ಅತ್ಯುತ್ತಮ ಗ್ರಾಮೀಣ ಭಾಗದ ಎಂಜಿನಿಯರ್ ಕಾಲೇಜೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ನ್ಯಾಕ್‌ನಿಂದ(ರಾಷ್ಟ್ರೀಯ ಮೌಲ್ಯಮಾಪನ ಹಾಗೂ ಮಾನ್ಯತಾ ಮಂಡಳಿ) 2 ಬಾರಿ ಮಾನ್ಯತೆ ಪಡೆದಿದ್ದು, ರಾಷ್ಟ್ರೀಯ ಮಾನ್ಯತಾ ಮಂಡಳಿ(ಎನ್‌ಬಿಎ) ಇಂದ 1 ಬಾರಿ ಮಾನ್ಯತೆಗಳಿಸಿದೆ. 2004ರಲ್ಲೆ ಐಎಸ್‌ಓ ಮಾನ್ಯತೆ ಪಡೆದ ಮೊದಲ ಎಂಜಿನಿಯರಿಂಗ್ ಕಾಲೇಜು ಎಂಬ ಗರಿಮೆ ನಮ್ಮ ಸಿಐಟಿಯದ್ದಾಗಿದೆ ಎಂದು ಸಿಐಟಿ ಸಮೂಹದ ನಿರ್ದೇಶಕ ಡಾ.ಡಿ.ಎಸ್.ಸುರೇಶ್ ಎಂದು ಹೆಮ್ಮೆಯಿಂದ ನುಡಿಯುತ್ತಾರೆ.

ಡೀಮ್ಡ್ ವಿವಿ ಆಗುವತ್ತಾ ಯಶಸ್ವಿ ಹೆಜ್ಜೆ: ಇಂದು ಶ್ರೀಚೆನ್ನಬಸವೇಶ್ವರ ರೂರಲ್ ಎಜುಕೇಷನ್ ಸೊಸೈಟಿ (ರಿ.) ಬೆಳ್ಳಿ ಹಬ್ಬದ ಹೊಸ್ತಿಲಿಗೆ ಬಂದು ಡೀಮ್ಡ್ ವಿವಿ ಸ್ಥಾನಗಳಿಸುವ ಹಂತಕ್ಕೆ ತಲುಪಿದೆಯೆಂದರೆ, ಸಂಸ್ಥಾಪಕರಾದ ಜಿ.ಎಸ್.ಬಿ. ಮಾರ್ಗದರ್ಶನದಲ್ಲಿ ಸಿಐಟಿ ಶಿಕ್ಷಣ ಸಮೂಹದ ಕಾರ್ಯದರ್ಶಿ ಶಾಸಕ ಜಿ.ಬಿ.ಜ್ಯೋತಿಗಣೇಶ್, ಡಾ. ಡಿ.ಎಸ್.ಸುರೇಶ್ ಹಾಗೂ ಅವರ ತಂಡದ ಶ್ರಮ ಅಪಾರವಾಗಿದೆ. ವಿಶೇಷವಾಗಿ ಬೋಧಕ-ಬೋಧಕೇತರ ವರ್ಗದವರು, ವಿದ್ಯಾರ್ಥಿಗಳು ಹಾಗೂ ಅವರ ಪೋಷಕರ ಇದೆ ಎಂದು ಸಿಐಟಿ ಉಪಪ್ರಾಂಶುಪಾಲೆ ಡಾ. ಸಿ.ಪಿ. ಶಾಂತಲಾ ಸುರೇಶ್ ಕೃತಜ್ಞತೆಯಿಂದ ನೆನೆಯುತ್ತಾರೆ. ಸಿಐಟಿ ಶಿಕ್ಷಣ ಸಮೂಹದ ಬೆಳ್ಳಿ ಹಬ್ಬದ ಪಯಣಕ್ಕೆ ಈವರೆಗೆ ಸಾಥ್ ನೀಡಿ, ಮುಂದಿನ ದಿನಗಳಲ್ಲೂ ಅಭಿವೃದ್ಧಿಪಥದಲ್ಲಿ ಮುನ್ನೆಡೆಸಲು ಸಂಕಲ್ಪಿಸಿರುವ ಕಾಲೇಜಿನ ಆಡಳಿತ ಮಂಡಳಿ ಟ್ರಸ್ಟಿಗಳು, ಬೋಧಕ-ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು, ಪೋಷಕರಿಗೆ ಪ್ರೀತಿಯ ಧನ್ಯವಾದಗಳನ್ನು ಸಿಐಟಿ ಆಡಳಿತ ಮಂಡಳಿ ಅರ್ಪಿಸಿದೆ. ವಿಶೇಷವಾಗಿ ಶಾಲಾ ಶಿಕ್ಷಣ, ಉನ್ನತ ಶಿಕ್ಷಣ ಇಲಾಖೆ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಜನಪ್ರತಿನಿಧಿಗಳ ಸಹಕಾರವನ್ನು ಈ ಸಂದರ್ಭದಲ್ಲಿ ಸ್ಮರಿಸಲಾಗಿದೆ.

HIGHLIGHTS

- State of the Art Computing Facilities with ICT Enabled Class Rooms.
- Robust R & D Oriented Environment.
- Internship in Cutting Edge Technologies and Project based learning.
- Center for Creativity in Engineering along with Start-up incubation facilities with Data Center and a Private Cloud.
- 4 star Rating by The Institution's Innovation Council (IIC) of MHRD for the academic Year 2024-25
- IOS-MCN R&D Center in collaboration with Bharat 6G Labs
- Aero-vision Drone Lab – A Center of Excellence (CoE) sponsored by AICTE.
- Brain-Computer Interface (BCI) R&D Lab. IoT and Embedded Systems R&D Lab.
- Credit of filling 21 Patents and Rs. 2 Crore Research Grants.
- Consistence in securing VTU Rank every year.
- Active Institution -Industry Cell.

CONTACT FOR ADMISSION : +91 8867354168, +91 9342123255, +91 9886115105

ಸಮಸ್ತ ಜನತೆಗೆ ಮಕರ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು ಹಾಗೂ ವಿಶ್ವವಾಣಿ ದಿನಪತ್ರಿಕೆಯ 11ನೇ ವಾರ್ಷಿಕೋತ್ಸವಕ್ಕೆ ಶುಭಾಶಯಗಳು

ಶುಭಕೋರುವವರು

Tele-Fax:0816-2243570

ಜಿಲ್ಲಾ ಪಂಚಾಯತ್, ತುಮಕೂರು

ತುಮಕೂರು ನಿರ್ಮಿತಿ ಕೇಂದ್ರ
TUMKUR NIRMITHI KENDRA

Registered Society Sponsored by GOI, HUDCO & Government of Karnataka

Costo Effective Building Material Production & Training Centre

Singanahalli Colony, Hirehalli. Indl. Area, Tumkur - 572168
EMail : tumkurnk123@gmail.com

ಸಮಾಚಾರ ಸಣ್ಣದಲ್ಲ

ಹೃದಯಾಘಾತದಿಂದ ಬಿಎಸ್‌ಎಫ್ ಯೋಧ ಸಾವು

ಮಂಡ್ಯ: ಮಹಾರಾಷ್ಟ್ರದ ಚಾಕೋರು ಜಿಲ್ಲೆಯ ಲಾತೂರ್‌ನ ಬಿಎಸ್‌ಎಫ್ ತರಬೇತಿ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಂಡ್ಯ ಮೂಲದ ಬಿಎಸ್‌ಎಫ್ ಯೋಧ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

ಮಂಡ್ಯ ನಗರದ ತಾವರೆಗೆರೆ ಬಡಾವಣೆ ನಿವಾಸಿ ಎಂ.ಬಿ ಮಾದೇಗೌಡ (44) ಮೃತ ಯೋಧ. ಕರ್ತವ್ಯದ ಸಮಯದಲ್ಲಿ ಹೃದಯಾಘಾತದಿಂದ ಯೋಧ ಮೃತಪಟ್ಟಿದ್ದಾರೆ. ಮಾದೇಗೌಡ 2000ರಲ್ಲಿ ಮೈಸೂರಿನಲ್ಲಿ ನಡೆದ ಬಿಎಸ್‌ಎಫ್ ಸೇನಾ ನೇಮಕಾತಿಯಲ್ಲಿ ಆಯ್ಕೆಯಾಗಿದ್ದು, ಕಳೆದ 25 ವರ್ಷಗಳಲ್ಲಿ ದೇಶದ ಹಲವೆಡೆ ಸೇವೆ ಸಲ್ಲಿಸಿದ್ದರು. ಮಂಡ್ಯ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಮೈದಾನದಲ್ಲಿ ಸರಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಯಿತು.

ಕಾಮಗಾರಿ ಚರಂಡಿಗೆ ಬಿದ್ದು ವೃದ್ಧೆ ಸಾವು

ರಾಯಚೂರು: ಅರೆಬರೆ ಕಾಮಗಾರಿ ಮಾಡಿದ್ದ ಚರಂಡಿಯಲ್ಲಿ ಬಿದ್ದು ವೃದ್ಧೆ ಸಾವನ್ನಪ್ಪಿದ ಘಟನೆ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕುರ್ಡಿ ಗ್ರಾಮದಲ್ಲಿ ನಡೆದಿದೆ. ಗ್ರಾಮ ಪಂಚಾಯತಿ ಮತ್ತು ಗುತ್ತಿಗೆದಾರರ ನಿರ್ಲಕ್ಷ್ಯವೇ ವೃದ್ಧೆ ಸಾವಿಗೆ ಕಾರಣ ಅಂತ ಗ್ರಾಮಸ್ಥರು ಆರೋಪಿಸಿದ್ದಾರೆ.

ಮೃತರನ್ನು 60 ವರ್ಷದ ಗಂಗಮ್ಮ ಆರೋಲಿ ಎಂದು ಗುರುತಿಸಲಾಗಿದ್ದು, ಗ್ರಾಮದ ಚರ್ಚ್ ಮುಂಭಾಗದಲ್ಲಿರುವ ಚರಂಡಿಯಲ್ಲಿ ಬಿದ್ದು ಸಾವನ್ನಪ್ಪಿದ್ದಾರೆ. ಚರಂಡಿಯ ಕೆಲವು ಕಡೆ ಗುಂಡಿ ಗಳನ್ನು ಮುಚ್ಚದೇ ಹಾಗೆಯೇ ತೆರೆದಿಟ್ಟಿದ್ದರು. ಮೂರು ತಿಂಗಳು ಕಳೆದರೂ ಕಾಲುವೆ ಕಾಮಗಾರಿ ಅರೆಬರೆ ಮಾಡಿಬಿಟ್ಟಿದ್ದರು. ಹಲವು ಬಾರಿ ಗುತ್ತಿಗೆದಾರರಿಗೆ ಕಾಮಗಾರಿ ಮುಗಿಸಲು ತಿಳಿಸಿದರೂ ಕೂಡ ಯಾವುದೇ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದಾರೆ ಅಂತ ಗ್ರಾಮಸ್ಥರು ಆರೋಪಿಸಿದ್ದಾರೆ. ಕುರ್ಡಿ ಗ್ರಾ.ಪಂ ಪಿಡಿಒ, ಗುತ್ತಿಗೆದಾರರ ವಿರುದ್ಧ ಗ್ರಾಮಸ್ಥರು ಅಸಮಧಾನ ವ್ಯಕ್ತಪಡಿಸಿದ್ದಾರೆ.

30ರಿಂದ ಕಸಾಪ ಪರೀಕ್ಷೆ ಆರಂಭ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ 2025-26ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆಗಳು ಜ.30 ರಿಂದ ಫೆ. 1ವರೆಗೆ ಬೆಂಗಳೂರು, ಕಲಬುರಗಿ, ಚಾಮರಾಜನಗರ, ಚಿಕ್ಕಮಗಳೂರು, ದೋಣಿಮಲೈ, ಧಾರವಾಡ, ಬಂಗಾರಪೇಟೆ, ಬಾಗಲಕೋಟೆ, ಬೀದರ್, ಮೂಡುಬಿದರೆ, ಮೈಸೂರು, ಶಿವಮೊಗ್ಗ, ಹಾಸನ ಸೇರಿ ಒಟ್ಟು 13 ಕೇಂದ್ರಗಳಲ್ಲಿ ಆಯೋಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಅಂಚೆ ಮೂಲಕ ಕಳುಹಿಸಲಾಗುವುದು. ಜ. 22ರ ನಂತರವೂ ಪ್ರವೇಶ ಪತ್ರ ತಲುಪದಿದ್ದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-18 ಸಂಪರ್ಕಿಸಬಹುದು. ಪ್ರವೇಶ ಪತ್ರ ಹಾಗೂ ಪರೀಕ್ಷಾ ಕೇಂದ್ರಗಳ ವಿವರಗಳನ್ನು www.kasapa.in ಮೂಲಕ ಪಡೆಯಬಹುದು. ಹೆಚ್ಚಿನ ಮಾಹಿತಿಗೆ 8618296186 ಸಂಪರ್ಕಿಸಿ ಎಂದು ಕನ್ನಡ ಸಾಹಿತ್ಯ ಪರಿಷತ್ತು ವ್ಯವಸ್ಥಾಪಕ ಪಾರ್ಶ್ವನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನ ವಿಶೇಷ

15 ಜನವರಿ 2026 ಗುರುವಾರ

- ಸೂರ್ಯೋದಯ: 06-46
- ಸೂರ್ಯಾಸ್ತ: 06-11
- ತಿಥಿ: ದ್ವಾದಶಿ
- ನಕ್ಷತ್ರ: ಜೇಷ್ಠಾ
- ಸಂವತ್ಸರ: ವಿಶ್ವಾವಸು
- ಆಯನ: ಉತ್ತರಾಯಣ
- ಋತು: ಶಿಶಿರ
- ಮಾಸ: ಪುಷ್ಯ
- ಪಕ್ಷ: ಕೃಷ್ಣ ಪಕ್ಷ

ಕುತೂಹಲ ಕೆರಳಿಸಿರುವ ಪ್ರಯತ್ನ ವಿಫಲವಾದರೂ ಪಾರ್ಥನೆ ವಿಫಲವಾಗುವುದಿಲ್ಲ

ಹೇಳಿಕೆ, ರಾಹುಲ್ ಜತೆ ಚರ್ಚಿಸಿರುವ ವಿಷಯ ಬಹಿರಂಗಪಡಿಸುವ ಅಗತ್ಯವಿಲ್ಲ: ಡಿಕೆಶಿ

ರಾಹುಲ್ ಗಾಂಧಿ ಭೇಟಿ ಬೆನ್ನಲ್ಲೇ ದೆಹಲಿಯತ್ತ ಡಿ.ಕೆ.ಶಿವಕುಮಾರ್

ಬೆಂಗಳೂರು: 'ಪ್ರಯತ್ನ ವಿಫಲವಾದರೂ, ಪಾರ್ಥನೆ ವಿಫಲವಾಗುವುದಿಲ್ಲ' ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆ ತೀವ್ರ ಚರ್ಚೆಯಾಗುತ್ತಿರುವ ಹೊಸ್ತಿಲಿನಲ್ಲಿಯೇ ಡಿಕೆಶಿ ದೆಹಲಿ ಪ್ರಯಾಣ ನಿಗದಿಯಾಗಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಈ ಹಿಂದೆ 19ಕ್ಕೆ ದೆಹಲಿಗೆ ಡಿಕೆ ತೆರಳಲಿದ್ದಾರೆ ಎನ್ನಲಾಗಿತ್ತು. ಆದರೀಗ ಶುಕ್ರವಾರ ದೆಹಲಿಗೆ ತೆರಳುವುದಾಗಿ ಅಧಿಕೃತವಾಗಿ ಡಿ.ಕೆ.ಶಿವಕುಮಾರ್ ಹೇಳಿದ್ದರೆ, ಆಪ್ತರ ಪ್ರಕಾರ ಗುರುವಾರ ರಾತ್ರಿಯೇ ದೆಹಲಿಗೆ ಪ್ರಯಾಣಿಸಲಿದ್ದಾರೆ. ದೆಹಲಿಯ ಭೇಟಿಯ ಉದ್ದೇಶ ಹೇಳದಿದ್ದರೂ, ಮೈಸೂರಿನಲ್ಲಿ ರಾಹುಲ್ ಗಾಂಧಿ ಅವರ 'ಭರವಸೆ'ಯ ಹಿನ್ನಲೆಯಲ್ಲಿ ಈ ಭೇಟಿ ಕುತೂಹಲಕ್ಕೆ ಕಾರಣವಾಗಿದೆ.

ಅಸ್ಸಾಂ ವಿಧಾನಸಭಾ ಚುನಾವಣಾ ಸಭೆ, ನರೇಗಾ ಸಂಬಂಧ ಸಭೆಯ ಹೊರತಾಗಿಯೂ ಡಿ.ಕೆ.ಶಿವಕುಮಾರ್ ಅವರ ಈ ದೆಹಲಿ ಭೇಟಿ ಹಲವು ರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗುತ್ತಿದೆ. ಅದರಲ್ಲಿಯೂ ರಾಹುಲ್ ಗಾಂಧಿ ಅವರೊಂದಿಗೆ ರನ್‌ವೇ ಪ್ರತ್ಯೇಕ ಸಭೆ ನಡೆಸಿದ ಬಳಿಕ ಡಿಕೆ ಅವರು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದ ಮಾರ್ಮಿಕ ಮಾತು ಹಾಗೂ ದೆಹಲಿಗೆ ಭೇಟಿ ನೀಡುವ ಬಗ್ಗೆ ಡಿ.ಕೆ.ಶಿವಕುಮಾರ್ ಅವರೇ ಹೇಳಿರುವುದು ಗಮನಿಸಿದಾಗ 'ಶುಭ ಸುದ್ದಿ' ಏನಾದರೂ ಸಿಕ್ಕಿದೆಯೇ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಶಿವಕುಮಾರ್ ಆಪ್ತರ ಪ್ರಕಾರ, ರಾಹುಲ್ ಗಾಂಧಿ ಅವರು 'ಚಿಂತಿಸಬೇಡಿ' ಎನ್ನುವ ಭರವಸೆ ನೀಡಿರುವುದು ಡಿ.ಕೆ.ಶಿವಕುಮಾರ್ ಅವರು ಪ್ರಾಥನೆಯ ಪೋಸ್ಟ್ ಹಾಕಲು ಕಾರಣ ಎನ್ನಲಾಗುತ್ತಿದೆ. ಮೂಲಗಳ ಪ್ರಕಾರ, ಡಿ.ಕೆ.ಶಿವಕುಮಾರ್ ನಾಯಕತ್ವಕ್ಕೆ ಸಂಬಂಧಿಸಿದಂತೆ ಬೇಡಿಕೆ ಇಟ್ಟಿದ್ದರೆ, ಸಿದ್ದರಾಮಯ್ಯ ಅವರು ಸಂಪುಟ ಪುನಾರಚನೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ ಎನ್ನಲಾಗುತ್ತಿದೆ. ಈ ಕಾರಣಕ್ಕೆ ಡಿಕೆ ದೆಹಲಿ ಭೇಟಿ ಪ್ರಾಮುಖ್ಯತೆ ಪಡೆದಿದೆ.

ಫೆಬ್ರವರಿಯಲ್ಲಿಯೇ ಬಜೆಟ್ ಅಧಿವೇಶನ?: ಇನ್ನು ಮಾರ್ಚ್ 6ಕ್ಕೆ ಬಜೆಟ್ ನಡೆಸುವುದು ಬಹುತೇಕ ಖಚಿತವಾಗಿದ್ದರೂ, ಬಜೆಟ್ ಪೂರ್ವಭಾವಿ ಸಭೆಗಳ ದಿನಾಂಕ ನಿಗದಿಯಾಗಿಲ್ಲ. ಆರ್ಥಿಕ ಇಲಾಖೆ ಅಧಿಕಾರಿಗಳ ಪ್ರಕಾರ, ಈವರೆಗೆ ಯಾವುದೇ ಸಭೆಗಳು ಅಧಿಕೃತವಾಗಿ ನಿಗದಿಯಾಗಿಲ್ಲ. 27ರ ಬಳಿಕ ಸಭೆ ಆರಂಭವಾಗಲಿದೆ ಎಂದು ಹೇಳಲಾಗಿತ್ತಾದರೂ, ಇದೀಗ ಜನವರಿ ಅಂತ್ಯದವರೆಗೆ ಜಂಟಿ ಅಧಿವೇಶನ ಹಾಗೂ ವಿಶೇಷ ಅಧಿವೇಶನ ನಡೆಯುವುದರಿಂದ ಈ ಅವಧಿಯಲ್ಲಿ ಬಜೆಟ್ ಸಭೆಗಳನ್ನು ನಡೆಸಲು ಸಾಧ್ಯವಿಲ್ಲ. ಫೆ.1ಕ್ಕೆ ಕೇಂದ್ರ ಸರಕಾರ ಬಜೆಟ್ ಇರುವುದರಿಂದ ಕೇಂದ್ರ ಬಜೆಟ್ ಬಳಿಕವೇ ಸಿಎಂ ಸಿದ್ದರಾಮಯ್ಯ ಅವರು ಬಜೆಟ್ ಪೂರ್ವಾಭಾವಿ ಸಭೆ ಆರಂಭಿಸಲಿದ್ದಾರೆ ಎನ್ನುವುದು ಅಧಿಕಾರಿಗಳ ಲೆಕ್ಕಾಚಾರವಾಗಿದೆ.

ಇಂದೇ ದೆಹಲಿಗೆ?

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶುಕ್ರವಾರ ದೆಹಲಿಗೆ ತೆರಳುವುದಾಗಿ ಹೇಳುತ್ತಿದ್ದರೂ, ಕೆಲ ಮೂಲಗಳ ಪ್ರಕಾರ ಗುರುವಾರ ಸಂಜೆಯೇ ದೆಹಲಿಗೆ ತೆರಳಲಿದ್ದಾರೆ ಎನ್ನಲಾಗಿದೆ. ಗುರುವಾರ ಯಾರನ್ನೂ ಭೇಟಿಯಾಗಿದ್ದರೂ, ಶುಕ್ರವಾರ ಪಕ್ಷದ ಹೈಕಮಾಂಡ್ ನಾಯಕರನ್ನು ಭೇಟಿಯಾಗಲಿದ್ದಾರೆ. ಬಳಿಕ ಅಸ್ಸಾಂ ವಿಧಾನಸಭಾ ಚುನಾವಣಾ ಸಭೆಯಲ್ಲಿ ಭಾಗವಹಿಸಿ, ವಾಪಸಾಗಲಿದ್ದಾರೆ. ಈ ವೇಳೆ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಸಾಧ್ಯವಾಗದಿದ್ದರೆ ಮುಂದಿನ 20,21ರಂದು ಚರ್ಚಿಸುವುದು ಬಹುತೇಕ ನಿಶ್ಚಿತ ಎನ್ನಲಾಗುತ್ತಿದೆ.

ನಾನು ಕೆಪಿಸಿಸಿ ಅಧ್ಯಕ್ಷ, ರಾಹುಲ್ ಗಾಂಧಿ ಅವರು ಲೋಕಸಭಾ ಪ್ರತಿಪಕ್ಷ ನಾಯಕ. ಶಿಷ್ಟಾಚಾರದ ಪ್ರಕಾರ ಅವರನ್ನು ಸ್ವಾಗತಿಸಿ, ಭೇಟಿ ಮಾಡಿದ ವಿಚಾರವನ್ನು ಸಾರ್ವಜನಿಕವಾಗಿ ಚರ್ಚೆ ಮಾಡಲು ಸಾಧ್ಯವೇ? ನಾವು ಯಾವ ಸಂದೇಶವನ್ನು ಕೊಟ್ಟಿಲ್ಲ. ನಮಗೂ ಯಾವ ಸಂದೇಶ ಕೊಟ್ಟಿಲ್ಲ. ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ, ಇದನ್ನೇ ಮುಂದುವರಿಸಿಕೊಂಡು ಹೋಗಿ ಎಂದು ನಾಯಕರು ಹೇಳಿದ್ದಾರೆ. ನರೇಗಾ ವಿಚಾರವಾಗಿ ನಾವು ಮಾಡುತ್ತಿರುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿದ್ದೇನೆ. ರಾಜ್ಯ ಬಿಜೆಪಿಯಲ್ಲಿ ಆಗುತ್ತಿರುವ ರಾಜಕಾರಣ ಚರ್ಚೆ ಮಾಡಿದ್ದೇವೆ.

- ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಇಂದಿನಿಂದ ಸುತ್ತೂರು ಮಠದ ಜಾತ್ರೆ ಆರಂಭ

ಮೈಸೂರು: ಭಾಗದ ಪ್ರಮುಖ ಧಾರ್ಮಿಕ ತಾಣ ಸುತ್ತೂರು ಜಾತ್ರೆಗೆ ಗುರುವಾರ ಚಾಲನೆ ದೊರೆಯಲಿದೆ. ಇಂದಿನಿಂದ ಜ.20ರವರೆಗೆ ಹತ್ತಾರು ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಲಕ್ಷಾಂತರ ಜನರನ್ನು ಸೆಳೆಯಲಿದೆ. ಆದಿಜಗದ್ಗುರು ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರೆಗೆ ಸುತ್ತೂರು ಸಕಲ ರೀತಿಯಲ್ಲೂ ಸಜ್ಜಾಗಿದೆ. ಮಕರ ಸಂಕ್ರಾಂತಿಯಂದೇ ಜಾತ್ರೆ ಆರಂಭವಾಗುತ್ತಿದ್ದು, ಮೊದಲ ದಿನವಾದ ಗುರುವಾರ ವಸ್ತುಪ್ರದರ್ಶನ, ಕೃಷಿ ಮೇಳ, ಸಾಂಸ್ಕೃತಿಕ ಮೇಳ, ದೋಣಿ ವಿಹಾರಕ್ಕೆ ಚಾಲನೆ ದೊರೆಯಲಿದೆ. ಪ್ರಾತಃಕಾಲ 4 ಗಂಟೆಗೆ ಕರ್ತೃ ಗದ್ದುಗೆಯಲ್ಲಿ ಅನುಜ್ಞೆ, ಮಹಾಸಂಕಲ್ಪ ಪೂರ್ವಕ ಮಹಾರುದ್ರಾಭಿಷೇಕ ನಡೆಯಲಿದೆ. ಬೆಳಗ್ಗೆ 6.30ಕ್ಕೆ ಮೇಗಳಾಪುರ, ಮಾಧವಗೆರೆಯಲ್ಲಿ ಸ್ನೇಹ ಸೌಹಾರ್ದ ಶಾಂತು ಪ್ರಾರ್ಥನಾ ಪಥಸಂಚಲನ ನಡೆಯಲಿದ್ದು, ಬೆಳಗ್ಗೆ 7.30ಕ್ಕೆ ಮೈಸೂರಿನ ಹೊಸಮಠದ ಕಿರಿಯ ಶ್ರೀ ಸಿದ್ಧಬಸವ ಸ್ವಾಮಿ ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸುವರು. ಮಳವಳ್ಳಿ ತಾಲೂಕಿನ ಕುಂದೂರು ಬೆಟ್ಟ ರಸಸಿದ್ಧೇಶ್ವರ ಮಠದ ರುದ್ರಮಹಾಂತ ಸ್ವಾಮಿ ಧರ್ಮಸಂದೇಶ ನೀಡುವರು. ಬಳಿಕ ಬೆಳಗ್ಗೆ 7.30ಕ್ಕೆ ಗ್ರಾಮದ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನೆರವೇರಲಿದೆ. ಮಧ್ಯಾಹ್ನ 3.15ಕ್ಕೆ ಉತ್ಸವ ಮೂರ್ತಿಯನ್ನು ಶ್ರೀಮಠದಿಂದ ಕರ್ತೃ ಗದ್ದುಗೆಗೆ ಬಿಜಯಂಗೈಯ್ಯಲಾಗುತ್ತದೆ. ಸಂಜೆ 7 ಗಂಟೆಗೆ ಕರ್ತೃಗದ್ದುಗೆಯಲ್ಲಿ ಅಗ್ರೋದಕ ಪುಣ್ಯಾಹ, ನಾಂದಿ, ಕಲಶ ಸ್ಥಾಪನೆ ಮಾಡಲಾಗುತ್ತದೆ.

ಅಯ್ಯಪ್ಪ ಭಕ್ತರಿಗೆ ಅಡ್ಡಿ: ರಾಮಲಿಂಗಾರೆಡ್ಡಿ ಚರ್ಚೆ

ಕೇರಳ ಅಧಿಕಾರಿಗಳೊಂದಿಗೆ ಚರ್ಚೆ | ಕೋರ್ಟ್ ಸೂಚನೆಯಂತೆ ಅವಕಾಶ ನೀಡಲು ಆಗ್ರಹ

ಬೆಂಗಳೂರು: ಕೇರಳಕ್ಕೆ ತೆರಳಿದ ಅಯ್ಯಪ್ಪ ಭಕ್ತರ ವಾಹನಗಳನ್ನು ತಡೆಹಿಡಿದಿರುವ ಸಂಬಂಧ ಕೇರಳ ಸರಕಾರದೊಂದಿಗೆ ರಾಜ್ಯ ಸರಕಾರ ಚರ್ಚಿಸಿದ್ದು, ಸಮಸ್ಯೆಯಾಗದಂತೆ ಕ್ರಮವಹಿಸಲು ಸೂಚನೆ ನೀಡಿದ್ದಾರೆ.



ಈ ಸಂಬಂಧ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಕೇರಳ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ಅಯ್ಯಪ್ಪ ಸ್ವಾಮಿ ದರ್ಶನಕ್ಕೆ ತೆರಳುವ ಭಕ್ತರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದಿದ್ದಾರೆ.

ರಾಜ್ಯದಿಂದ ತೆರಳುವ ಅಯ್ಯಪ್ಪಸ್ವಾಮಿ ಭಕ್ತರ ವಾಹನಗಳನ್ನು ಕೆಲವು ಕಡೆ ತಡೆದಿರುವ ಹಿನ್ನೆಲೆಯಲ್ಲಿ ಕೇರಳದ ಹಿರಿಯ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿರುವ ರಾಮಲಿಂಗಾರೆಡ್ಡಿ ಅವರು ಭಕ್ತಧಿಗಳ ಸುರಕ್ಷತೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಿರ್ದೇಶನ ನೀಡಿದ್ದಾರೆ.

ಇದರೊಂದಿಗೆ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್, ಸಾರಿಗೆ ಇಲಾಖೆ ನಿರ್ದೇಶಕ ರಾಜೇಂದ್ರ ಕಟಾರಿಯ ಸೇರಿದಂತೆ ಮತ್ತಿತರ ಅಧಿಕಾರಿಗಳಿಗೆ ಕೇರಳ ಅಧಿಕಾರಿಗಳ ಜತೆಯೂ ಸಂಪರ್ಕ ಸಾಧಿಸುವಂತೆ ಸೂಚನೆ ಕೊಟ್ಟಿದ್ದಾರೆ.

ಸಚಿವರ ಸೂಚನೆ ಮೇರೆಗೆ ರಾಜ್ಯದ ಅಧಿಕಾರಿಗಳ ತಂಡ ರಾಜ್ಯದಿಂದ ಬರುವ ಭಕ್ತರಿಗೆ ಅಡಚಣೆ ಆಗದಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸೂಚಿಸಿದ್ದಾರೆ.

ಕೇರಳ ಅಧಿಕಾರಿಗಳ ಜತೆ ಅಧಿಕಾರಿಗಳು ಚರ್ಚಿಸಿದ ವೇಳೆ, ಕೇರಳ ಹೈಕೋರ್ಟ್ ನೀಡಿರುವ ನಿರ್ದೇಶನವನ್ನು ಪಾಲನೆ ಮಾಡುತ್ತಿದ್ದೇವೆ. ನ್ಯಾಯಾಲಯ ನೀಡಿರುವ ನಿರ್ದೇಶನದಂತೆ ಆನ್‌ಲೈನ್ ನೊಂದಣಿಯಾಗಿ ಪ್ರತಿದಿನ ಆಗಮಿಸುವ ನಾಲ್ಕು ಸಾವಿರ ವಾಹನಗಳನ್ನು ಮಾತ್ರ ಪ್ರವೇಶಿಸಲು ಅನುಮತಿ ನೀಡಬೇಕೆಂದು ಸೂಚನೆ ನೀಡಿರುವುದರಿಂದ ಅದನ್ನು ಪಾಲನೆ ಮಾಡಲಾಗುತ್ತಿದೆ ಎಂದು ಕೇರಳ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ದೇವಾಲಯದಲ್ಲಿ ಇಂದು ಎಳ್ಳು-ಬೆಲ್ಲ ವಿತರಣೆ

ಮಕರ ಸಂಕ್ರಾಂತಿಯ ಹಿನ್ನಲೆಯಲ್ಲಿ ರಾಜ್ಯ ಸರಕಾರದ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ಎಳ್ಳು-ಬೆಲ್ಲ ಹಂಚಬೇಕೆಂದು ಇಲಾಖೆ ಆದೇಶ ಹೊರಡಿಸಿದೆ.

ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಅವರ ಸೂಚನೆ ಮೇರೆಗೆ ಆದೇಶ ಹೊರಡಿಸಿರುವ ಇಲಾಖೆ ಆಯುಕ್ತರು, ಮಕರ ಸಂಕ್ರಾಂತಿಯ ಸಮಯದಲ್ಲಿ ಮುಜರಾಯಿ ದೇವಾಲಯಗಳ ವತಿಯಿಂದ ಎಳ್ಳು-ಬೆಲ್ಲ ದೇವರಿಗೆ ಸಮರ್ಪಿಸಿ, ಆಗಮಿಸುವ ಭಕ್ತರಿಗೆ ಪ್ರಸಾದ ರೂಪದಲ್ಲಿ ವಿತರಿಸಬೇಕು. ಕಾಗದದ ಲಕೋಟೆಗಳಲ್ಲಿ ಸರಕಾರದ ಲಾಂಛನದೊಂದಿಗೆ ದೇವಾಲಯದ ಹೆಸರನ್ನು ಮುದ್ರಿಸಿ ಲಕೋಟೆಯನ್ನು ತಯಾರಿಸಿಕೊಂಡು ದೇವರ ದರ್ಶನಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಕನಿಷ್ಠ 50 ಗ್ರಾಂ ನಷ್ಟು ಎಳ್ಳು, ಬೆಲ್ಲ, ಕೊಬ್ಬರಿ ಮಿಶ್ರಣ ಪ್ರಸಾದವನ್ನು ನೀಡುವುದು, ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಆಯಾಯಾ ದೇವಾಲಯದ ನಿಧಿಯಿಂದ ನಿಯಮಾನುಸಾರ ಭರಿಸಬೇಕು ಎಂದು ಆದೇಶದಲ್ಲಿ ಸೂಚನೆ ನೀಡಲಾಗಿದೆ.

ಇತ್ತೀಚಿನ ದಿನಗಳಲ್ಲಿ ಇಂತಹ ಹಬ್ಬಗಳ ಆಚರಣೆಗಳನ್ನು ಕೆಲವರು ಆಚರಿಸದೇ ಮರೆಯುತ್ತಿರುವ ಸಂದರ್ಭಗಳು ಕಂಡುಬರುತ್ತಿರುತ್ತವೆ. ಆದ್ದರಿಂದ ಹಿಂದೂ ಧರ್ಮದ ಪ್ರತಿಯೊಬ್ಬರು ಹಬ್ಬ ಹರಿದಿನಗಳನ್ನು ಆಚರಿಸಲು ಹಾಗೂ ಹಿಂದೂ ಸಂಸ್ಕೃತಿಯನ್ನು ಉಳಿಸಿ ಬೆಳೆಸಿ ಮುನ್ನಡೆಸುವ ನಿಟ್ಟಿನಲ್ಲಿ ಪ್ರತಿಯೊಬ್ಬರಿಗೂ ಬಡವ, ಬಲ್ಲಿದರಿಗೂ ಮಕರ ಸಂಕ್ರಾಂತಿಯ ದಿನದಂದು ಎಳ್ಳು, ಬೆಲ್ಲ ಸಿಗಬೇಕು ಎನ್ನುವ ದೃಷ್ಠಿಯಿಂದ ಧಾರ್ಮಿಕ ದತ್ತಿ ಇಲಾಖೆಗೆ ಒಳಪಡುವ ಎಲ್ಲಾ ದೇವಾಲಯಗಳಲ್ಲಿ ಎಳ್ಳುಬೆಲ್ಲ ವಿತರಿಸಬೇಕು ಎಂದು ಸ್ಪಷ್ಟಪಡಿಸಿದೆ.

ಶಿವಲಿಂಗೇಗೌಡರ ವಿರುದ್ಧ ಎಚ್.ಡಿ.ರೇವಣ್ಣ ವಾಗ್ದಾಳಿ

ಹಾಸನ: ಈ ಗಿರಾಕಿ ಎಲ್ಲಿದ್ದ? ಅವನು ಇಷ್ಟು ಮಾತನಾಡುತ್ತಾನಾ, ಇವನಿಗೆ ನಾನು ಹೆದರುತ್ತೀನಾ ಎಂದು ಪ್ರಶ್ನಿಸುವ ಮೂಲಕ ಮಾಜಿ ಸಚಿವ ಎಚ್.ಡಿ. ರೇವಣ್ಣ ಅವರು ಅರಸೀಕೆರೆ ಶಾಸಕ ಶಿವಲಿಂಗೇಗೌಡ ಅವರ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ಅರಸೀಕೆರೆಯಿಂದ ಸ್ಪರ್ಧೆ ಮಾಡುವಂತೆ ಶಿವಲಿಂಗೇಗೌಡ ಪಂಥಾಹ್ವಾನ ನೀಡಿದ ವಿಚಾರಕ್ಕೆ ಸಂಬಂಧಿಸಿದಂತೆ ಆಲೂರು ತಾಲೂಕಿನಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ರೇವಣ್ಣ ಅವನಿಗೆ ತಾಕತ್ ಇದ್ಯಾ? ಆ ಸಮಾಜ ಹೆಸರು ಹೇಳಿಕೊಂಡು 20 ವರ್ಷ ರಾಜಕೀಯ ಮಾಡಿದ್ದಾನೆ. ಅರಸೀಕೆರೆಯಲ್ಲಿ ಏನು ನಡೆಯುತ್ತಿದೆ ನನಗೆ ಗೊತ್ತಿದೆ ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿ ಪಂಥಾಹ್ವಾನ ಸ್ವೀಕರಿಸಿದರು.

ನಾನು ಸವಾಲನ್ನು ಸ್ವೀಕಾರ ಮಾಡುತ್ತೇನೆ. ಆದರೆ ಹೈಕಮಾಂಡ್ ತೀರ್ಮಾನ ಮಾಡಬೇಕು. ಅವನು ಈ ಮಟ್ಟಕ್ಕೆ ಬರಬೇಕಾದರೆ ಏನೇನು ಮಾಡಿದ್ದೇವೆ ಎನ್ನುವುದು ನನಗೆ ಗೊತ್ತಿದೆ. ಹಲವಾರು ಜನರ ಕಷ್ಟಗಳನ್ನು ಪರಿಹಾರ ಮಾಡಿದ ಜೇನುಕಲ್ ಸಿದ್ದೇಶ್ವರ ಸ್ವಾಮಿ ದೇವಸ್ಥಾನ ಅವರ ಕ್ಷೇತ್ರದಲ್ಲಿ ಇದ್ದು ಸತ್ಯ ಹೇಳಬೇಕು. ಅಂದು ನಮ್ಮ ಸಮುದಾಯದವರು ಒಕ್ಕಲಿಗರಿಗೆ ಟಿಕೆಟ್ ನೀಡಿ ಎಂದಿದ್ದರು. ಆದರೂ ಕುರುಬ ಸಮುದಾಯದ ಬಿಳಿ ಚೌಡಯ್ಯ ಅವರನ್ನು ಜಿ.ಪಂ. ಉಪಾಧ್ಯಕ್ಷರನ್ನಾಗಿ ಮಾಡಿದೆ. ಈಗ ವ್ಯಾಪಾರ ನಡೆಯುತ್ತಿದ್ದು ನಾಲ್ಕು ಬಾರಿ ಗೆಲ್ಲಿಸಿದವರು ಯಾರು ಎಂದು ಪ್ರಶ್ನಿಸಿದರು.

ಮೈಲಾರಲಿಂಗನ ಭಕ್ತರು ಭಂಡಾರಮಯ: ಅಸಂಖ್ಯಾತ ಭಕ್ತರ ಸಂಭ್ರಮದ ಮಧ್ಯೆ ಯಾದಗಿರಿ ಜಿಲ್ಲೆಯ ಮೈಲಾಪೂರದಲ್ಲಿ ಮೈಲಾರಲಿಂಗೇಶ್ವರ ಜಾತ್ರೆ ಬುಧವಾರ ವೈಭವದಿಂದ ನಡೆಯಿತು.

ಫೆ.13ರಿಂದ ಮೂರು ದಿನ ಹಂಪಿ ಉತ್ಸವ

ಹೊಸಪೇಟೆ: ವಿಶ್ವವಿಖ್ಯಾತ ಹಂಪಿ ಉತ್ಸವವನ್ನು ಈ ಬಾರಿ ಫೆಬ್ರವರಿ 13, 14 ಮತ್ತು 15ರಂದು ಮೂರು ದಿನಗಳ ಕಾಲ ಅತ್ಯಂತ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಅಲ್ಪಸಂಖ್ಯಾತರ, ವಸತಿ. ವಕ್ಫ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ತಿಳಿಸಿದರು.

ಹೊಸಪೇಟೆ ಅಮರಾವತಿ ಪ್ರವಾಸಿ ಮಂದಿರದಲ್ಲಿ ಹಂಪಿ ಉತ್ಸವ-2026 ರ ಲಾಂಛನ ಬಿಡುಗಡೆ ಮಾಡಿ ಮಾತನಾಡಿ ಹಂಪಿ ಉತ್ಸವದ ಸಿದ್ಧತೆಗಳ ಕುರಿತು ಪ್ರಮುಖ ಮಾಹಿತಿಗಳನ್ನು ಹಂಚಿಕೊಂಡರು. ಫೆಬ್ರವರಿ 13ರ ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಂಪಿ ಉತ್ಸವಕ್ಕೆ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ. ಈ ಹಿಂದೆ ಎಂ.ಪಿ. ಪ್ರಕಾಶ್ ಅವರ ಕಾಲದಲ್ಲಿ ನವೆಂಬರ್‌ನಲ್ಲಿ ಉತ್ಸವ ನಡೆಯುತ್ತಿತ್ತು. ಆದರೆ ಕೋವಿಡ್ ಕಾರಣದಿಂದ ವಿಳಂಬವಾಗಿ ಕಳೆದ ವರ್ಷಗಳಿಂದ ಫೆಬ್ರವರಿಯಲ್ಲಿ ನಡೆಸಲಾಗುತ್ತಿದೆ. ಈ ಬಾರಿಯೂ ಫೆಬ್ರವರಿ 13ರಿಂದಲೇ ಆರಂಭಿಸಲು ತೀರ್ಮಾನಿಸಲಾಗಿದೆ ಎಂದರು. ಉತ್ಸವದ ಯಶಸ್ವಿ ಆಚರಣೆಗಾಗಿ ಈ ಬಾರಿ ₹22 ಕೋಟಿ ಅನುದಾನ ಕೋರಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕಳೆದ ವರ್ಷ 16 ಕೋಟಿ ಅನುದಾನ ನೀಡಲಾಗಿತ್ತು ಎಂದು ಹೇಳಿದರು.

ಪೌರಾಯುಕ್ತೆಗೆ ನಿಂದನೆ: ಕೈ ಮುಖಂಡನ ವಿರುದ್ಧ ದೂರು

ಚಿಕ್ಕಬಳ್ಳಾಪುರ: ಸಚಿವ ಜಮೀರ್ ಅಹ್ಮದ್ ಖಾನ್ ಪುತ್ರ ಝೈದ್ ಖಾನ್ ಅಭಿನಯದ ಕಲ್ಟ್ ಚಿತ್ರದ ಬ್ಯಾನರ್ ತೆರವು ಮಾಡಿದ್ದಕ್ಕೆ ಶಿಡ್ಲಘಟ್ಟನಗರಸಭೆ ಪೌರಾಯುಕ್ತೆ ಅಮೃತಗೌಡಗೆ ಕರೆ ಮಾಡಿ ಅಶ್ಲೀಲವಾಗಿ ನಿಂದಿಸಿ ಪ್ರಾಣ ಬೆದರಿಕೆ ಹಾಕಿದ ಆರೋಪದ ಮೇಲೆ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ವಿರುದ್ಧ ದೂರು ದಾಖಲಾಗಿದೆ.

ಅಶ್ಲೀಲವಾಗಿ ನಿಂದಿಸಿ ಬೆದರಿಕೆ ಹಾಕಿರುವ ರಾಜೀವ್ ಗೌಡ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಿ. ಈ ಘಟನೆಯಿಂದ ನನಗೆ ಮಾನಸಿಕವಾಗಿ ತೀವ್ರ ಆಘಾತವಾಗಿದೆ. ನನ್ನ ಆತ್ಮಸ್ಥೈರ್ಯ ಕುಂದಿದೆ. ನಾನು ಒಬ್ಬಳೇ ವಾಸವಾಗಿದ್ದೇನೆ. ನನಗೆ ಸೂಕ್ತ ರಕ್ಷಣೆ ನೀಡುವಂತೆ ಮನವಿ ಮಾಡಿದ್ದಾರೆ. ರಾಜೀವ್ ಗೌಡ ವಿರುದ್ಧ ಬಿಎನ್‌ಎಸ್ 79, 132, 352,199, 54 ಅಡಿಯಲ್ಲಿ ದೂರು ದಾಖಲಾಗಿದೆ.

ಬ್ಯಾನರ್ ತೆರವುಗೊಳಿಸಿದ್ದಕ್ಕೆ ಪೌರಾಯುಕ್ತೆಗೆ ಅಶ್ಲೀಲವಾಗಿ ನಿಂದನೆ ಮಾಡಿ, ಬೆದರಿಕೆ ಹಾಕಿರುವ ಆಡಿಯೋ ವೈರಲ್ ಕುರಿತಂತೆ ಮಾತನಾಡಿರುವ ರಾಜೀವ್ ಗೌಡ, ನಾನು ಅಧಿಕಾರಿಯ ಜತೆ ಕೆಟ್ಟದಾಗಿ ಮಾತನಾಡಿಲ್ಲ. ಅಧಿಕಾರಿಗೆ ನೋವಾಗಿದ್ದರೆ ಕ್ಷಮೆಯಾಚಿಸುತ್ತೇನೆ. ಉದ್ದೇಶ ಪೂರಕವಾಗಿ ನಾನು ಮಾತನಾಡಿಲ್ಲ. ಆಡಿಯೋದಲ್ಲಿ ಮಾತನಾಡಿರುವುದು ನಾನೇ. ಆದರೆ ಕೆಟ್ಟದಾಗಿ ಮತನಾಡಿಲ್ಲ. ಅಧಿಕಾರಿ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ. ಹಾಗಾಗಿ ಬೇಸರದಿಂದ ಮತನಾಡಿದ್ದೇನೆ. ಆಯುಕ್ತಗೆ ನಾನು ಬೆಂಕಿ ಹಚ್ಚುತ್ತೇನೆ ಎಂದು ಹೇಳಿಲ್ಲ. ಬದಲಿಗೆ ಫ್ಲೆಕ್ಸ್ ಗೆ ಬೆಂಕಿ ಹಚ್ಚುತ್ತೇನೆ ಎಂದು ಹೇಳಿದ್ದೇನೆ ಅಷ್ಟೇ ಎಂದು ಸಮಜಾಯಿಷಿ ನೀಡಿದ್ದಾರೆ.

ಆಗಿದ್ದೇನು?

ಶಿಡ್ಲಘಟ್ಟದ ನೆಹರೂ ಮೈದಾನದಲ್ಲಿ ಕಲ್ಟ್ ಸಿನಿಮಾದ ಪ್ರಚಾರ ಸಭೆ ನಡೆದಿತ್ತು. ಈ ವೇಳೆ, ಕೋಟೆ ವೃತ್ತದಲ್ಲಿ ರಸ್ತೆಗೆ ಅಡ್ಡವಾಗಿ ಸಿನಿಮಾ ಪ್ರಚಾರದ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿತ್ತು. ಇದರಿಂದ ವಾಹನ ಸಂಚಾರಕ್ಕೆ ಅಡಚಣೆ ಆಗಿತ್ತು. ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ನಗರಸಭೆ ಸಿಬ್ಬಂದಿ ಫ್ಲೆಕ್ಸ್ ಗಳನ್ನು ತೆರವುಗೊಳಿಸಿದ್ದರು.

ನಾಗೇಂದ್ರಗೆ ನಿರೀಕ್ಷಣಾ ಜಾಮೀನು ಮಂಜೂರು

ಬೆಂಗಳೂರು: ವಾಲ್ಮೀಕಿ ಹಗರಣದಲ್ಲಿ ಮಾಜಿ ಸಚಿವ ಬಿ.ನಾಗೇಂದ್ರಗೆ ಬಿಗ್ ರಿಲೀಫ್ ಸಿಕ್ಕಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ ಆದೇಶ ಹೊರಡಿಸಿದೆ.

ವಾಲ್ಮೀಕಿ ಹಗರಣ ಪ್ರಕರಣ: ಬಂಧನದ ಭೀತಿಯಿಂದ ಮಾಜಿ ಸಚಿವ ಬಿ.ನಾಗೇಂದ್ರ ಪಾರು

ಮಹರ್ಷಿ ವಾಲ್ಮೀಕಿ ಬಹುಕೋಟಿ ಹಗರಣ ಪ್ರಕರಣದಲ್ಲಿ ಸಿಬಿಐ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದ ಬಳಿಕ ಬಂಧನ ಭೀತಿಯಲ್ಲಿದ್ದ ನಾಗೇಂದ್ರ ನಿರೀಕ್ಷಣಾ ಜಾಮೀನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಮಂಗಳವಾರ (ಜ.13) ವಿಚಾರಣೆ ನಡೆಸಿದ್ದ ಕೋರ್ಟ್ ವಾದ-ಪ್ರತಿವಾದ ಆಲಿಸಿ, ಬುಧವಾರಕ್ಕೆ (ಜ.14) ಆದೇಶ ಕಾಯ್ದಿರಿಸಿತ್ತು. ಅದರಂತೆ ಇದೀಗ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಮಂಗಳವಾರ ವಿಚಾರಣೆ ವೇಳೆ ಪ್ರಕರಣದ ತನಿಖಾಧಿಕಾರಿಯೇ ಕೋರ್ಟ್‌ನಲ್ಲಿ ವಾದಮಂಡನೆ ಮಾಡಿದ್ದರು. ವಾಲ್ಮೀಕಿ ಹಗರಣದಲ್ಲಿ ಹಣ ಪಡೆದವರನ್ನು ಸಿಐಡಿ, ಇಡಿ ತನಿಖೆ ಮಾಡಿದೆ. ಅದಕ್ಕಿಂತ ಮುಂದುವರೆದು ಇದರಿಂದ ಫಲಾನುಭವಿಗಳು ಯಾರು ಎನ್ನುವುದನ್ನು ಪತ್ತೆ ಹಚ್ಚಬೇಕಿದೆ. ಇಲ್ಲಿಯವರೆಗೂ ನಡೆದ ತನಿಖೆಯ ಕೆಲ ಮಾಹಿತಿಗಳನ್ನು ತೆರೆದ ನ್ಯಾಯಾಲಯದಲ್ಲಿ ಹೇಳಲು ಸಾಧ್ಯವಿಲ್ಲ. ಮುಂಬೈನಲ್ಲಿ ಕೂಡ ದಾಳಿ ಮಾಡಿ ಮಾಹಿತಿ ಕಲೆ ಹಾಕಲಾಗಿದೆ. ಹಗರಣದ ಹಣ ಚಿನ್ನ, ಬುಲಿಯನ್ ಆಗಿ ಕನ್ವರ್ಟ್ ಆಗಿದೆ. ಇದರ ಹಿಂದೆ ನಾಗೇಂದ್ರ, ಅವರ ಸಹಚರರು ಭಾಗಿಯಾಗಿದ್ದಾರೆ. ಇದರ ಹಿಂದೆ ಕೆಲ ಬೋಗಸ್ ಕಂಪನಿಗಳು ಭಾಗಿಯಾಗಿವೆ. ಈ ಪ್ರಕರಣದ ಬಗ್ಗೆ ಸಾಕಷ್ಟು ಸಾಕ್ಷ್ಯಗಳನ್ನು ಕಲೆ ಹಾಕಲಾಗಿದೆ ಎಂದು ಹೇಳಿ ಕೋರ್ಟ್‌ಗೆ ತಂದಿದ್ದ ಎರಡು ಸೂಟ್‌ಕೇಸ್ ದಾಖಲೆಗಳನ್ನ ತನಿಖಾಧಿಕಾರಿ ತೋರಿಸಿದರು.

ನಾಗೇಂದ್ರ ಪರ ವಕೀಲರು ವಾದ ಮಂಡನೆ ಮಾಡಿ, ನಾಗೇಂದ್ರ ಮತ್ತು ನೆಕ್ಕಂಟಿ ನಾಗರಾಜ್ ನಡುವಿನ ವ್ಯವಹಾರ ಅವರ ವೈಯಕ್ತಿಕವಾದದ್ದು, ಸಿಬಿಐ ಹೇಳುತ್ತಿರುವುದು ಇರುವ ಟೆಂಡರ್‌ಗೂ ಈ ವ್ಯವಹಾರಗಳಿಗೂ ಯಾವುದೇ ಸಂಬಂಧವಿಲ್ಲ ಎಂದು ವಾದಿಸಿದ್ದರು.

ಬಳ್ಳಾರಿಯಿಂದ ಬೆಂಗಳೂರು ಪಾದಯಾತ್ರೆ

ಒಂದೆರೆಡು ದಿನದಲ್ಲಿ ತೀರ್ಮಾನ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ

ಚಿತ್ರದುರ್ಗ: ಬಳ್ಳಾರಿ ಟೂ ಬೆಂಗಳೂರು ಬಿಜೆಪಿ ಪಾದಯಾತ್ರೆ ಮಾಡಬೇಕು ಎಂಬುವುದು ರಾಜ್ಯದ ಎಲ್ಲಾ ನಾಯಕರ ಅಭಿಪ್ರಾಯವಾಗಿದ್ದು, ವರಿಷ್ಠರ ಜೊತೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಾದಯಾತ್ರೆ ಮಾಡಬೇಕು ಎಂಬುವುದು ಜನಾರ್ದನರೆಡ್ಡಿ, ಶ್ರೀರಾಮುಲು ಅಭಿಪ್ರಾಯ ಮಾತ್ರ ಅಲ್ಲ, ನಮ್ಮೆಲ್ಲರ ಅಭಿಪ್ರಾಯವಾಗಿದೆ. ವರಿಷ್ಠರ ಜತೆ ಈಗಾಗಲೇ ನಾನು ಮಾತನಾಡಿದ್ದೇನೆ. ಒಂದೆರಡು ದಿನದಲ್ಲಿ ಪಾದಯಾತ್ರೆ ಬಗ್ಗೆ ಮಾಹಿತಿ ಸಿಗಲಿದೆ. ರಾಜ್ಯದಲ್ಲಿ ಅರಾಜಕತೆ ವಿರುದ್ಧ ಹೋರಾಟಕ್ಕೆ ಪಕ್ಷ ನಿರ್ಧಾರ ಮಾಡಿದ್ದು, ಮೊದಲ ಹಂತದಲ್ಲಿ ಜ.17ಕ್ಕೆ ಬಳ್ಳಾರಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಿದ್ದೇವೆ ಎಂದರು.

ಡಿಸಿಎಂ ಡಿಕೆಶಿ ಶಿಕಾರಿಪುರಕ್ಕೆ ಪಾದಯಾತ್ರೆ, ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಪಾದಯಾತ್ರೆ ಬೇಡ ಡಿ.ಕೆ.ಶಿವಕುಮಾರ್ ಶಿಕಾರಿಪುರಕ್ಕೆ ಬಂದು ಸ್ಪರ್ಧೆ ಮಾಡಲಿ ಎಂದು ಸವಾಲು ಹಾಕಿ ಮೈಸೂರು ಹೆಲಿಪ್ಯಾಡ್‌ನಲ್ಲಿ ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಚರ್ಚೆ ವಿಚಾರಕ್ಕೆ ಮಾತನಾಡಿ, ಒಬ್ಬರಿಗೆ ಸಿಎಂ ಕುರ್ಚಿ ಉಳಿಸಿಕೊಳ್ಳುವ ಕಾತುರವಿದೆ. ನನ್ನ ತಾಳ್ಮೆ ಕೆಣಕಬೇಡಿ ಎಂದು ಉಳಿದವರು ಸಿದ್ಧರಾಗಿದ್ದಾರೆ. ಅದು ಕಾಂಗ್ರೆಸ್ ಪಕ್ಷದ ಆಂತರಿಕ ಕಚ್ಚಾಟ. ಇರಲಿ ಬಿಡಿ ಪಾಪ ಎಂದು ಲೇವಡಿ ಮಾಡಿದರು.

ಎಚ್.ಡಿ.ದೇವೇಗೌಡರು ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರು ನರೇಂದ್ರ ಮೋದಿ ಅವರ ಕೈ ಬಲ ಪಡಿಸಲು ಎನ್‌ಡಿಎ ಸೇರಿದ್ದಾರೆ. ಅದರಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಬಗ್ಗೆ ವರಿಷ್ಠರೇ ತೀರ್ಮಾನಿಸುತ್ತಾರೆ ಎಂದರು.

ಮನರೇಗಾ ಯೋಜನೆಯಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಗ್ರಾಮೀಣ ಅಭಿವೃದ್ಧಿಗಾಗಿ ಜಿ ರಾಮ್ ಜಿ ಯೋಜನೆ ಮಾಡಲಾಗಿದೆ. ಆದರೆ ಈ ಯೋಜನೆ ಬಗ್ಗೆ ಸಿದ್ದರಾಮಯ್ಯ, ರಾಹುಲ್ ಗಾಂಧಿಯಿಂದ ಅಪಪ್ರಚಾರ ನಡೆಸಲಾಗುತ್ತಿದೆ. ಆದ್ದರಿಂದ ಬಿಜೆಪಿ ರಾಜ್ಯಾದೆಲ್ಲೆಡೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಗುವುದು.

-ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

2047 ಕೋಟಿ ಅನುದಾನ ನೀಡಲು ಆಯೋಗಕ್ಕೆ ಮನವಿ

ಬೆಂಗಳೂರು: 5ನೇ ರಾಜ್ಯ ಹಣಕಾಸು ಆಯೋಗದಿಂದ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆರ್ಥಿಕ ಸ್ಥಿತಿಗತಿಯ ಅವಲೋಕನ ಹಾಗೂ ಒಟ್ಟು 2,047 ಕೋಟಿ ಅನುದಾನಕ್ಕೆ ಆಯೋಗಕ್ಕೆ ಮನವಿ ಮಾಡಲಾಗಿದೆ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಹೇಳಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ಬೆಂಗಳೂರು ನಗರದ ಕೇಂದ್ರಬಿಂದು ಹಾಗೂ ಹೃದಯ ಭಾಗದಲ್ಲಿದ್ದು, ರಾಜ್ಯ ರಾಜಧಾನಿಯ ಪ್ರಮುಖ ಸ್ಥಳವಾಗಿದ್ದು, ಸೆಂಟ್ರಲ್ ಬಿಜಿನೆಸ್ ಡಿಸ್ಟ್ರಿಕ್ಟ್ ಪ್ರದೇಶದ ಮೂಲಭೂತ ಸೌಕರ್ಯ ಅಭಿವೃದ್ಧಿಗೆ (ಸಿ.ಬಿ.ಡಿ.) ಅಭಿವೃದ್ಧಿಗೆ 500 ಕೋಟಿ ರು. ವಿಶೇಷ ಅನುದಾನಕ್ಕೆ ಬೇಡಿಕೆ ನೀಡಲಾಗಿದೆ.

ಐದನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಡಾ.ಸಿ. ನಾರಾಯಣಸ್ವಾಮಿ ಹಾಗೂ ಸದಸ್ಯರು ಮೊಹಮ್ಮದ್ ಸನಾವುಲ್ಲಾ ಹಾಗೂ ಎಸ್.ಆರ್ ಫೋಂಡೆ, ಬೆಂಗಳೂರು ಕೇಂದ್ರ ನಗರ ಪಾಲಿಕೆಗೆ ಭೇಟಿ ನೀಡಿ, ಕೇಂದ್ರ ಪಾಲಿಕೆಯ ಆರ್ಥಿಕ ಸ್ಥಿತಿಗತಿಯ ಅವಲೋಕನ ನಡೆಸಿ, ಅಗತ್ಯತೆಗಳು, ಚಾಲ್ತಿಯಲ್ಲಿರುವ ಅಭಿವೃದ್ಧಿ ಕಾಮಗಾರಿಗಳು ಹಾಗೂ ಆಡಳಿತಾತ್ಮಕ ಸುಧಾರಣೆಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ 5ನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಡಾ.ನಾರಾಯಣಸ್ವಾಮಿ, ಬೆಂಗಳೂರು ಕೇಂದ್ರ ಪ್ರದೇಶಗಳಲ್ಲಿ ಕುಡಿಯುವ ನೀರು, ಘನತ್ಯಾಜ್ಯ ನಿರ್ವಹಣೆ ಮತ್ತು ವಾರ್ಡ್ ಮಟ್ಟದ ಮೇಲ್ವಿಚಾರಣೆಗೆ ಸರಕಾರ ಹೆಚ್ಚಿನ ಆದ್ಯತೆ ನೀಡಲಿದೆ. ವಿಶೇಷ ಅನುದಾನಕ್ಕೆ ನಗರ ಪಾಲಿಕೆಯು ನಿಖರವಾದ ಅಂಕಿ-ಅಂಶಗಳನ್ನು ನೀಡಿದಲ್ಲಿ ರಾಜ್ಯ ಸರಕಾರಕ್ಕೆ ಮುಂದಿನ ಹಣಕಾಸು ವರ್ಷಕ್ಕೆ ಅನುದಾನ ಒದಗಿಸಲು ಸೂಕ್ತ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು.

ಆಯುಕ್ತರಿಂದ ಪಾಲಿಕೆಯ ಸ್ಥಿತಿಗತಿ ವಿವರಣೆ

ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್, ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯ ವಿಷಯವಾರು ವಿವರವಾದ ಮಾಹಿತಿ ನೀಡಿ, ಹಣಕಾಸು ಸ್ಥಿತಿಗತಿ, ಅನುದಾನದ ಬಗ್ಗೆ, ಪ್ರಸ್ತುತ ನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವೃಂದದ ಅಧಿಕಾರಿ/ಸಿಬ್ಬಂದಿ ಹಾಗೂ ಸಿಬ್ಬಂದಿ ಕೊರತೆ ಅವಶ್ಯಕತೆ ಇರುವುದನ್ನು ಆಯೋಗದ ಗಮನಕ್ಕೆ ತಂದರು ಹಾಗೂ ಆಯೋಗಕ್ಕೆ ಸುಮಾರು 2,047 ಕೋಟಿ ರು.ಅನುದಾನಕ್ಕೆ ಆಯೋಗಕ್ಕೆ ಮನವಿ ಮಾಡಿದರು. ಇದರಲ್ಲಿ ಕೊಳಗೇರಿಗಳಲ್ಲಿನ ಅವಶ್ಯಕ ಮೂಲಭೂತ ಸೌಕರ್ಯಗಳಿಗೆ 200 ಕೋಟಿ ರು. ವಿಶೇಷ ಅನುದಾನಕ್ಕೆ ಹಾಗೂ ಬೆಂಗಳೂರು ಕೇಂದ್ರ ನಗರ ಪಾಲಿಕೆ ಬೆಂಗಳೂರು ನಗರದ ಕೇಂದ್ರಬಿಂದು ಹಾಗೂ ಹೃದಯ ಭಾಗದಲ್ಲಿದ್ದು, ರಾಜ್ಯ ರಾಜಧಾನಿಯ ಪ್ರಮುಖ ಸ್ಥಳವಾಗಿದ್ದು, ಸೆಂಟ್ರಲ್ ಬಿಜಿನೆಸ್ ಡಿಸ್ಟ್ರಿಕ್ಟ್ ಪ್ರದೇಶದ ಮೂಲಭೂತ ಸೌಕರ್ಯ ಅಭಿವೃದ್ಧಿಗೆ (ಸಿ.ಬಿ.ಡಿ.) ಅಭಿವೃದ್ಧಿಗೆ 500 ಕೋಟಿ ರು. ವಿಶೇಷ ಅನುದಾನಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ರಾಜ್ಯ ಹಣಕಾಸು ಆಯೋಗದ ಸದಸ್ಯರಾದ ಮೊಹಮ್ಮದ್ ಸನಾವುಲ್ಲಾ, ಆರ್.ಎಸ್. ಫೋಂಡೆ, ಹಣಕಾಸು ಸಲಹೆಗಾರರಾದ ಛಾಯಾ ದೇಗಾಂವಕರ್, ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್, ಜಂಟಿ ಆಯುಕ್ತರಾದ ಕೆ.ರಂಗನಾಥ್,ಹೇಮಂತ್ ಶರಣ್, ಮುಖ್ಯ ಅಭಿಯಂತರರುಗಳಾದ ಸುಗುಣ, ವಿಜಯಕುಮಾರ್ ಹರಿದಾಸ್, ಅಧೀಕ್ಷಕ ಅಭಿಯಂತರುಗಳಾದ ಪುನೀತ್, ಚಂದ್ರಶೇಖರ್, ಉಪನಿಯಂತ್ರಕರಾದ ವಿಜಯಲಕ್ಷ್ಮೀ, ಡಿ.ಜಿಎಂ ಭೀಮೇಶ್ ನಾಯಕ, ತೋಟಗಾರಿಕೆ, ಅರಣ್ಯ ಅಧಿಕಾರಿಗಳು ಇದ್ದರು.